****

Mahabharat Ke Kuch Aadarsh Patra

(Kannad)

****

|| ಶ್ರೀಹರಿಃ ||

ವಿಷಯ – ಸೂಚಿ

1.	ಮಹಾಭರತದಲ್ಲಿ ಶ್ರೀಕೃಷ್ಣ	.....	.....	5
2.	ಮಹಾತ್ಮಾ ಭೀಷ್ಮ	.....	.....	25
3.	ಧರ್ಮರಾಜ ಯುಧಿಷ್ಠಿರ	.....	.....	35
4.	ವೀರವರ ಅರ್ಜುನ	.....	.....	51
5.	ಕುಂತೀದೇವಿ	.....	.....	77
6.	ದೇವಿ ದ್ರೌಪದಿ	.....	.....	87
7.	ಪತಿವ್ರತೆ ಗಾಂಧಾರಿ	.....	.....	101
8.	ಮಹಾತ್ಮಾ ವಿದುರ	.....	.....	109
9.	ಮಂತ್ರಿಶ್ರೇಷ್ಠ ಸಂಜಯ	.....	.....	123
10.	ಭಗವಾನ್ ವೇದವ್ಯಾಸ	.....	.....	132

❑❑❑

ಸ್ವೀಕರಿಸಿದೆ. (ಆದಿಪರ್ವದ ೬೪ನೇ ಅಧ್ಯಾಯವನ್ನು ನೋಡಿರಿ) ಧರ್ಮರಾಜ ಯುಧಿಷ್ಠಿರನ ರಾಜಸೂಯ ಯಜ್ಞದಲ್ಲಿ ದೊಡ್ಡ-ದೊಡ್ಡ ಮಹರ್ಷಿಗಳೊಡನೆ ದೇವರ್ಷಿ ನಾರದರೂ ಯಜ್ಞದ ವೈಭವವನ್ನು ನೋಡುವುದಕ್ಕಾಗಿ ದಯ ಮಾಡಿಸಿದ್ದಾರೆ. ಅನೇಕಾನೇಕ ರಾಜರುಗಳೊಡನೆ ಶ್ರೀಕೃಷ್ಣಪರಮಾತ್ಮನು ಸಭಾಮಂಟಪದಲ್ಲಿ ಉಪಸ್ಥಿತನಾಗಿರುವುದನ್ನು ನೋಡಿ ಅವರಿಗೆ ಭಗವಂತ ನಾರಾಯಣನು ಭೂಮಂಡಲದ ಮೇಲೆ ಅವತರಿಸಿರುವ ಮಾತು ಜ್ಞಾಪಕಕ್ಕೆ ಬರುತ್ತದೆ. (ಸಭಾ-೩೬/೧೨) ಅವರು ಮನಸ್ಸಿನಲ್ಲಿಯೇ ಪುಂಡರೀಕಾಕ್ಷ ಶ್ರೀಹರಿಯ ಚಿಂತನೆ ಮಾಡಲು ಪ್ರಾರಂಭಮಾಡುತ್ತಾರೆ. ಅನಂತರ ಸಭೆಯಲ್ಲಿ ಆಗಂತುಕ ಮಹಾನುಭಾವರುಗಳಲ್ಲಿ ಯಾರಿಗೆ ಅಗ್ರಪೂಜೆ ಸಲ್ಲಬೇಕು? ಎಂಬ ಪ್ರಶ್ನೆ ಉದ್ಭವಿಸಿದಾಗ, ವೃದ್ಧರಾದ ಕುರುಕುಲ ವೀರಶಿರೋಮಣಿ ಮಹಾತ್ಮಾಭೀಷ್ಮರು - 'ನಾನು ಭೂಮಂಡಲದಲ್ಲೆಲ್ಲಾ ಏಕಮಾತ್ರ ಶ್ರೀಕೃಷ್ಣನನ್ನೇ ಅಗ್ರಪೂಜೆಗೆ ಯೋಗ್ಯನೆಂದು ತಿಳಿಯುತ್ತೇನೆ- ಎಂದು ಹೇಳುತ್ತಾ ತುಂಬಿದ ಸಭೆಯಲ್ಲಿ ಆತನ ಮಹಿಮೆಯನ್ನು ವರ್ಣಿಸಲು ತೊಡಗಿದರು. ಅವರು ಹೇಳುತ್ತಾರೆ - 'ವಾಸುದೇವನೇ ಈ ಚರಾಚರ ವಿಶ್ವದ ಉತ್ಪತ್ತಿ ಹಾಗೂ ಪ್ರಳಯ ಸ್ವರೂಪನಾಗಿದ್ದಾನೆ ಮತ್ತು ಈ ಚರಾಚರ ಪ್ರಾಣಿ ಜಗತ್ತಿನ ಅಸ್ತಿತ್ವವು ಆತನದೇ ಆಗಿದೆ. ವಾಸುದೇವನೇ ಅವ್ಯಕ್ತ ಪ್ರಕೃತಿ, ಸನಾತನ ಕರ್ತೃ ಮತ್ತು ಸಮಸ್ತ ಪ್ರಾಣಿಗಳ ಅಧೀಶ್ವರನು, ಆದುದರಿಂದ ಪರಮ ಪೂಜನೀಯನಾಗಿದ್ದಾನೆ.'* ದೇವರ್ಷಿನಾರದರೂ ಸಹ ಈ ಪ್ರಸ್ತಾಪವನ್ನು ಸಮರ್ಥಿಸುತ್ತಾರೆ. (ಸಭಾ-೩೬/೮) ಅಷ್ಟೇ ಅಲ್ಲ, ಈ ಪ್ರಸ್ತಾಪವನ್ನು ಅನುಮೋದಿಸುವ ಸಹದೇವನ ಮೇಲೆ ದೇವತೆಗಳು ಆಕಾಶದಿಂದ ಪುಷ್ಪವೃಷ್ಟಿ ಸುರಿಸುತ್ತಾರೆ ಮತ್ತು

* ಕೃಷ್ಣ ಏವ ಹಿ ಲೋಕಾನಾಮುತ್ಪತ್ತಿರಪಿ ಚಾಪ್ಯಯಃ ।
ಕೃಷ್ಣಸ್ಯ ಹಿ ಕೃತೇ ವಿಶ್ವಮಿದಂ ಭೂತಂ ಚರಾಚರಮ್ ॥
ಏಷ ಪ್ರಕೃತಿರವ್ಯಕ್ತಾ ಕರ್ತಾ ಚೈವ ಸನಾತನಃ ।
ಪರಶ್ಚ ಸರ್ವಭೂತೇಭ್ಯಸ್ತಸ್ಮಾತ್ ಪೂಜ್ಯತಮೋ ಹರಿಃ ॥
(ಸಭಾ - ೩೮/೨೩-೨೪)

ಆಕಾಶವಾಣಿಯೂ ಸಾಧು! ಸಾಧು! 'ಸರಿಯಾಗಿದೆ' ಎಂದು ಹೇಳಿ ಆತನನ್ನು ಪ್ರಶಂಸಿಸುತ್ತದೆ.*

ಶ್ರೀ ಕೃಷ್ಣನ ಬಾಲಚರಿತ್ರೆಗಳ ವರ್ಣನೆಯು ಪ್ರತ್ಯಕ್ಷವಾಗಿ ಮಹಾಭಾರತದಲ್ಲಿ ದೊರೆಯುವುದಿಲ್ಲ. ಅದಕ್ಕೆ ಕಾರಣವಿಷ್ಟೇ - ಆ ಚರಿತ್ರೆಗಳು ಮಹಾಭಾರತದ ಮುಖ್ಯ ಕಥಾನಕದೊಡನೆ ಯಾವ ಸಂಬಂಧವನ್ನೂ ಹೊಂದಿಲ್ಲ. ಹರಿವಂಶ ಪರ್ವದಲ್ಲಿರುವ ಮಹಾಭಾರತದ ಪರಿಶಿಷ್ಟ ಭಾಗದಿಂದ ನಿಜವಾಗಿಯೂ ಈ ಕೊರತೆಯನ್ನು ಪೂರ್ಣಗೊಳಿಸಲಾಗಿದೆ. ಹೀಗಿದ್ದರೂ ಪ್ರಸಂಗವಶಾತ್ ಮಹಾಭಾರತದ ವಿಭಿನ್ನ ಪಾತ್ರಗಳ ಮೂಲಕವೇ ಶ್ರೀಕೃಷ್ಣನ ಬಾಲಲೀಲೆಗಳು ಅಲ್ಲಲ್ಲಿ ಉಲ್ಲೇಖಿತವಾಗಿವೆ. ಭೀಷ್ಮ ಪಿತಾಮಹರ ಮೇಲಿನ ನಿರ್ಣಯವನ್ನು ವಿರೋಧಿಸಿದ ಚೇದಿರಾಜ ಶಿಶುಪಾಲನು ಶ್ರೀಕೃಷ್ಣನ ಜನ್ಮದಿಂದಲೇ ವಿರೋಧಿಯಾಗಿದ್ದನು; ಅವನು ರುಕ್ಮಿಣೀ-ಹರಣದ ನಂತರದಿಂದ ಇನ್ನೂ ಹೆಚ್ಚು ದ್ವೇಷಿಸುತ್ತಿದ್ದನು. ಅವನ ಮಾತಿನಲ್ಲಿ ಕೃಷ್ಣನು ಬಾಲ್ಯದಲ್ಲಿ ಕ್ರಮಶಃ ಪೂತನಿ, ಬಕಾಸುರ, ಕೇಶಿ ವೃಷಾಸುರ ಮತ್ತು ಕಂಸ ಇತ್ಯಾದಿಯವರನ್ನು ಕೊಂದಿರುವುದು, ಶಕಟನನ್ನು ಒದ್ದುದು, ಗೋವರ್ಧನ ಪರ್ವತವನ್ನು ಎತ್ತಿ ಹಿಡಿದುದು ಮುಂತಾದ ಉಲ್ಲೇಖವಿದೆ. (ಸಭಾ - ೪೧, ೭-೧೧) ಈ ಎಲ್ಲಾ ಘಟನೆಗಳ ಉಲ್ಲೇಖವನ್ನು ಶ್ರೀಕೃಷ್ಣನನ್ನು ದೂಷಿಸುವ ತಾತ್ಪರ್ಯದಿಂದ ಮಾಡಲಾಗಿದೆ. ಆದರೂ ಅವನು ಅವುಗಳ ಸತ್ಯತೆಯನ್ನು ಸ್ವೀಕರಿಸಿದ್ದಾನೆ. ಶತ್ರುಗಳಿಂದ ವರ್ಣಿಸಲ್ಪಟ್ಟ ಈ ಅಲೌಕಿಕ ಚರಿತ್ರೆಗಳಿಂದ ಶ್ರೀಕೃಷ್ಣನ ಲೋಕೋತ್ತರತ್ವ ಪ್ರಕಟವಾಗುತ್ತದೆ; ಸರಿ, ಈ ಪ್ರಸಂಗದ ಬಗ್ಗೆ ಶಿಶುಪಾಲನು ಶ್ರೀಕೃಷ್ಣನನ್ನೂ ಮತ್ತು ಆತನ ಪ್ರಶಂಸೆ ಮಾಡುವ ಭೀಷ್ಮಪಿತಾಮಹರನ್ನೂ ಬಹಳವಾಗಿ ದೂಷಿಸಿದನು. ಆದರೆ ಶ್ರೀಕೃಷ್ಣನು ಅವನ ಅಪರಾಧಗಳನ್ನೆಲ್ಲಾ ಸಹಿಸಿಕೊಳ್ಳುತ್ತಿದ್ದನು. ಕೊನೆಗೆ ಬೇರೆ ಬೇರೆ ಸಭಾಸದಸ್ಯರು ತಿಳಿಯಹೇಳಿದ ಮೇಲೆಯೂ ಅವನು ಶಾಂತನಾಗದಿದ್ದಾಗ,

---

* **ತತೋऽಪತತ್ ಪುಷ್ಪವೃಷ್ಟಿಃ ಸಹದೇವಸ್ಯ ಮೂರ್ಧನಿ ।**
ಅದೃಶ್ಯರೂಪಾ ವಾಚಶ್ಚಾಪ್ಯಬ್ರುವನ್ ಸಾಧು ಸಾಧ್ವಿತಿ ॥ (೩೯/೬-೩)

ತನ್ನ ಸುದರ್ಶನ ಚಕ್ರವನ್ನು ಸ್ಮರಿಸಿದನು ಶ್ರೀ ಕೃಷ್ಣನು ಹಾಗೂ (೪೫/೨೧) ಎಲ್ಲರೂ ನೋಡುತ್ತಾ ಇದ್ದ ಹಾಗೆಯೇ ಆ ಚಕ್ರದಿಂದ ಅವನ ತಲೆ ತರಿದನು. ಆಗ ಸಭೆಯಲ್ಲಿದ್ದ ಜನರೆಲ್ಲರೂ ಶಿಶುಪಾಲನ ಶರೀರದಿಂದ ಒಂದು ಭಾರಿ ತೇಜಃ ಪುಂಜ ಹೊರಟುದನ್ನು ನೋಡಿದರು. ಅದು ಜಗದ್ವಂದ್ಯ ಶ್ರೀಕೃಷ್ಣನಿಗೆ ಪ್ರಣಾಮ ಮಾಡಿ ಆತನ ಶರೀರದಲ್ಲಿಯೇ ಪ್ರವೇಶ ಮಾಡಿತು.* ಈ ಅಲೌಕಿಕ ಘಟನೆಯಿಂದ ಶ್ರೀಕೃಷ್ಣನ ದೈವತ್ವ ನಿಶ್ಚಿತವಾಗುತ್ತದೆ. ಜೊತೆಗೆ, ಯಾರೇ ಆಗಲಿ ಎಂತಹ ಪಾಪಿಯೇ ಆಗಿರಲಿ, ಭಗವಂತನ ಕೈಯಿಂದ ಕೊಲ್ಲಲ್ಪಟ್ಟರೆ, ಅವನಿಗೆ ಸಾಯುಜ್ಯ ಮುಕ್ತಿಯುಂಟಾಗುತ್ತದೆ. ಅವನು ಭಗವಂತನ ಸ್ವರೂಪದಲ್ಲಿ ಲೀನವಾಗಿ ಹೋಗುತ್ತಾನೆಂಬುದು ಅಲ್ಲಿದ್ದವರಿಗೆಲ್ಲರಿಗೂ ಪ್ರತ್ಯಕ್ಷ ಪ್ರಮಾಣ ಸಿಕ್ಕಿತು. ಇದೇ ಆತನ ಅನುಪಮ ದಯಾಳುತ್ವ. ಆತನು ಕೊಂದರೂ ಜೀವರನ್ನು ಉದ್ಧಾರಮಾಡಿ ಬಿಡುತ್ತಾನೆ. ಅಲ್ಲದೆ, ಪಾಂಡವರಂತೆ ಯಾರು ಆತನನ್ನು ಪ್ರೇಮದಿಂದ ಕಾಣುತ್ತಾರೆಯೋ, ಅವರ ವಶವರ್ತಿಯಾಗುವುದರಲ್ಲಿ ಆಶ್ಚರ್ಯವೇನು?

(೨)

ದುಷ್ಟ ದುಃಶಾಸನನಿಂದ ಅಪಮಾನಿತಳಾದ ದ್ರೌಪದಿಯು ಅಸಹಾಯಕಳಾಗಿ ಶ್ರೀಕೃಷ್ಣನನ್ನು ಕರೆಯುತ್ತಾಳೆ.+ ಅಂತಹ ಸಮಯದಲ್ಲಿ ಅವಳು ಆತನನ್ನು

* ತತಶ್ಚೇದಿಪತೇರ್ದೇಹಾತ್ತೇಜೋऽಗ್ರ್ಯಂ ದದೃಶುರ್ನೃಪಾಃ ।
ಉತ್ಪತಂತಂ ಮಹಾರಾಜ ಗಗನಾದಿವ ಭಾಸ್ಕರಮ್ ॥
ತತಃ ಕಮಲಪತ್ರಾಕ್ಷಂ ಕೃಷ್ಣಂ ಲೋಕನಮಸ್ಕೃತಮ್ ।
ವವಂದೇ ತತ್ತದಾ ತೇಜೋ ವಿವೇಶ ಚ ನರಾಧಿಪ ॥
ತದದ್ಭುತಮಮನ್ಯಂತ ದೃಷ್ಟ್ವಾ ಸರ್ವೇ ಮಹೀಕ್ಷಿತಃ ।
ಯದ್ ವಿವೇಶ ಮಹಾಬಾಹುಂ ತತ್ತೇಜಃ ಪುರುಷೋತ್ತಮಮ್ ॥
(ಸಭಾ - ೪೫/೨೬-೨೮)

\+ ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ ।
ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ ॥
(ಸಭಾ - ೬೮/೪೧-೪೨)

'ಗೋಪೀಜನ ವಲ್ಲಭ', 'ವಜ್ರನಾಥ' ಮುಂತಾದ ನಾಮಗಳಿಂದ ಸ್ಮರಣೆ ಮಾಡುತ್ತಾಳೆ ದ್ರೌಪದಿಯ ಆ ಕರುಣಾಪೂರ್ಣ ಕರೆಯನ್ನು ಕೇಳಿದ ಕೂಡಲೇ ಕರುಣಾಮಯಿ ಕೇಶವನು ದ್ವಾರಕೆಯಿಂದ ಓಡಿಬರುತ್ತಾನೆ ಹಾಗೂ ವಸ್ತ್ರರೂಪದಿಂದ ದ್ರೌಪದಿಯ ಮಾನವನ್ನು ಕಾಪಾಡುತ್ತಾನೆ. (ಸಭಾ-೬೭/೪೫-೪೯) ಕೌರವರ ಸಭೆಯಲ್ಲಿ ಪರಮಾತ್ಮನ ವಸ್ತ್ರಾವತಾರವಾಯಿತು ಯಾವುದೇ ಮನುಷ್ಯನ ಮೂಲಕ ದೂರದ ತನ್ನ ಭಕ್ತನನ್ನು ಈ ಪ್ರಕಾರ ಅಲೌಕಿಕ ರೀತಿಯಿಂದ ರಕ್ಷಿಸುವ ಸಂಭವವಿದೆಯೇ?

(೩)

ಧರ್ಮಾತ್ಮರಾದ ಪಾಂಡವರು ಜೂಜಿನಲ್ಲಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ವನವಾಸದ ಕಷ್ಟವನ್ನು ಅನುಭವಿಸುತ್ತಿದ್ದರು. ಶ್ರೀಕೃಷ್ಣನೂ ಕೂಡ ವನಕ್ಕೆ ದಯಮಾಡಿಸಿದ್ದನು. ಆಗ ಮಹಾತಪಸ್ವಿ ಚಿರಂಜೀವಿ ಮಾರ್ಕಂಡೇಯ ಮುನಿಯು ಸ್ವತಃ ಪಾಂಡವರ ಬಳಿಗೆ ಬರುತ್ತಾರೆ ಮತ್ತು ಮಾತನಾಡುತ್ತಾ -ಮಾತನಾಡುತ್ತಾ ಅವರಿಗೆ ಶ್ರೀಕೃಷ್ಣನ ಮಹಿಮೆಯನ್ನೂ ತಿಳಿಸುತ್ತಾರೆ. ಪ್ರಳಯಕಾಲದ ತಮ್ಮ ಅನುಭವವನ್ನು ಅವರು ಹೇಳುತ್ತಾರೆ 'ಅನಂತ ಜಲರಾಶಿಯ ಮಧ್ಯೆ ಆಲದೆಲೆಯ ಮೇಲೆ ಮಲಗಿರುವ ಅದ್ಭುತ ಶಿಶುವಿನ ರೂಪದ ಪರಮಾತ್ಮನನ್ನು ನಾನು ದರ್ಶನ ಮಾಡಿದ್ದೆನು. ಆತನೇ ಈ ನಿಮ್ಮ ಸಂಬಂಧೀ ಶ್ರೀಕೃಷ್ಣನು. ಈತನ ವರದಾನದ ಪ್ರಭಾವದಿಂದಲೇ ನಾನು ಅಖಂಡ ಜ್ಞಾಪಕಶಕ್ತಿ ಪಡೆದಿದ್ದೇನೆ ಹಾಗೂ ಸಾವಿರಾರು ವರ್ಷಗಳ ಆಯುಷ್ಯ, ಇಚ್ಛಾ - ಮರಣವನ್ನೂ ಪಡೆದಿರುವೆನು'*

ಒಂದು ಸಲ ಪಾಂಡವರಿಗೆ ಕೇಡು ಬಯಸಿ ದುರ್ಯೋಧನನು ಕಳುಹಿಸಿದ ಸುಲಭಕೋಪಿಯಾದ ಮಹರ್ಷಿ ದುರ್ವಾಸರು ತಮ್ಮ ಹತ್ತು ಸಾವಿರ

* ಯಃ ಸ ದೇವೋ ಮಯಾ ದೃಷ್ಟಃ ಪುರಾ ಪದ್ಮಾಯತೇಕ್ಷಣಃ ।
ಸ ಏಷ ಪುರುಷವ್ಯಾಘ್ರ ಸಂಬಂಧೀ ತೇ ಜನಾರ್ದನಃ ॥
ಅಸ್ಯೈವ ವರದಾನಾದ್ಧಿ ಸ್ಮೃತಿರ್ನ ಪ್ರಜಹಾತಿ ಮಾಮ್ ।
ದೀರ್ಘಮಾಯುಶ್ಚ ಕೌಂತೇಯ ಸ್ವಚ್ಛಂದ ಮರಣಂ ಮಮ ॥
(ವನ-೧೮೯/೫೨-೫೩)

ಶಿಷ್ಯರೊಡನೆ ವನವಾಸೀ ಪಾಂಡವರ ಅತಿಥಿಯಾಗಿ ಬಂದರು. ಯುಧಿಷ್ಠಿರ ಮಹಾರಾಜನಿಗೆ ಸೂರ್ಯದೇವನಿಂದ ಅಕ್ಷಯ ಪಾತ್ರೆ ದೊರಕಿತ್ತು. ದ್ರೌಪದಿಯ ಭೋಜನ ವಾಗುವವರೆಗೂ ಅದರಲ್ಲಿ ಎಷ್ಟು ಮಂದಿ ಅತಿಥಿಗಳಿಗೆ ಬೇಕಾದರೂ ಊಟ ಮಾಡಿಸಬಹುದಾಗಿತ್ತು. ದ್ರೌಪದಿಯ ಭೋಜನವಾದ ಮೇಲೆ ಅಂದಿಗೆ ಅದು ಬರಿದಾಗುತಿತ್ತು. ಇಂತಹ ಚಮತ್ಕಾರದ ಪಾತ್ರೆ ಅದು. ದುರ್ಯೋಧನನ ಕುಯುಕ್ತಿಯಿಂದ ದುರ್ವಾಸರು ದ್ರೌಪದಿಯು ಎಲ್ಲರಿಗೂ ಊಟ ಬಡಿಸಿ ತಾನೂ ಊಟ ಮುಗಿಸಿರುವಂತಹ ಸಮಯದಲ್ಲಿ ಬಂದರು. ಅತಿಥಿ ವತ್ಸಲ ಧರ್ಮಾತ್ಮಾ ಯುಧಿಷ್ಠಿರನು ಮುನಿವೃಂದವನ್ನು ಭೋಜನಕ್ಕೆ ಆಹ್ವಾನಿಸಿದನು. ಅವರೆಲ್ಲರೂ ಸ್ನಾನ ಮತ್ತು ನಿತ್ಯಕರ್ಮಗಳಿಗಾಗಿ ಗಂಗಾನದಿಯ ತೀರಕ್ಕೆ ಹೋದರು. ಅಂತಹ ಕಠಿಣ ಸಂದರ್ಭದಲ್ಲಿ ಸಾವಿರಾರು ಮಂದಿ ಬ್ರಾಹ್ಮಣರಿಗೆ ಭೋಜನ ಮಾಡಿಸುವುದಕ್ಕೆ ಯಾವ ಉಪಾಯವನ್ನೂ ಕಾಣದೆ ದ್ರೌಪದಿಯ ಮನಸ್ಸಿಗೆ ಬಹು ಚಿಂತೆಯುಂಟಾಯಿತು. ಆಕೆಯು ಮನದಲ್ಲಿ ತನ್ನ ಹಿತಕಾರಿ ಮತ್ತು ಆತ್ಮೀಯನಾದ ಶ್ರೀಕೃಷ್ಣನನ್ನು ಸ್ಮರಣೆಮಾಡಿದಳು. ಆತನು ತಕ್ಷಣ ಓಡಿ ಅಲ್ಲಿಗೆ ಬಂದು ಕೂಡಲೇ ಆತ ಹೇಳಿದನು- 'ಸೋದರಿ! ನನಗೆ ಬಹಳ ಹಸಿವು, ಬೇಗೆ ಏನನ್ನಾದರೂ ತಿನ್ನಲು ಕೊಡು.' ದ್ರೌಪದಿಯು ಎಲ್ಲಾ ವಿಚಾರವನ್ನೂ ತಿಳಿಸಿದಳು. ಅವಳು ಹೇಳಿದಳು - ನಾನು ಈಗ ತಾನೇ ಭೋಜನಮಾಡಿ ಎದ್ದಿದ್ದೇನೆ, ಆ ಪಾತ್ರೆಯಲ್ಲಿ ಈಗ ಏನೂ ಉಳಿದಿಲ್ಲ. ಶ್ರೀಕೃಷ್ಣನು ಆಕೆಯ ಮಾತನ್ನು ನಿರಾಕರಿಸುತ್ತಾ ಹೇಳಿದನು- 'ತೆಗೆದುಕೊಂಡು ಬಾ, ಆ ಪಾತ್ರೆ ಎಲ್ಲಿದೆ? ನಾನು ನೋಡುತ್ತೇನೆ.' ದ್ರೌಪದಿಯು ಪಾತ್ರೆಯನ್ನು ತಂದು ಭಗವಂತನ ಮುಂದಿಟ್ಟಳು. ಅದರಲ್ಲೊಂದು ಕಡೆ ಒಂದು ತರಕಾರಿಯ ಎಲೆ ಅಂಟಿಕೊಂಡಿರುವುದು ಶ್ರೀಕೃಷ್ಣನಿಗೆ ಕಂಡಿತು, ಅದನ್ನೇ ಬಾಯಲ್ಲಿ ಹಾಕಿಕೊಂಡು ಆತನು - ಈ ಸೊಪ್ಪಿನ ಎಲೆಯಿಂದ ಯಜ್ಞಭೋಕ್ತಾ ವಿಶ್ವಾತ್ಮಾ ಪರಮಾತ್ಮ ಶ್ರೀಹರಿಯು ತೃಪ್ತನಾಗಿ ಹೋಗಲಿ* ಎಂದು ಹೇಳಿದನು. ಅನಂತರ

* ಉಪಯುಜ್ಯಾಬ್ರವೀದೇನಾಮನೇನ ಹರಿರೀಶ್ವರಃ ।
ವಿಶ್ವಾತ್ಮಾ ಪ್ರೀಯತಾಂ ದೇವಸ್ತುಷ್ಟಶ್ಚಾಸ್ತ್ವಿತಿ ಯಜ್ಞಭುಕ್ ॥
(ವನ-೨೬೩/೨೫)

ಆತನು ಸಹದೇವನಿಗೆ ಹೇಳಿದನು- 'ಹೋಗು, ಮುನಿವೃಂದವನ್ನೆಲ್ಲಾ ಭೋಜನಕ್ಕೆ ಕರೆದುಕೊಂಡು ಬಾ.' ಸಹದೇವನು ಗಂಗಾನದೀ ತೀರಕ್ಕೆ ಹೋಗಿ ನೋಡಿದಾಗ ಅಲ್ಲಿ ಯಾರೂ ಇರಲಿಲ್ಲ. ಏನಾಯಿತೆಂದರೆ - ಭಗವಂತನು ಸೊಪ್ಪಿನ ಎಲೆಯನ್ನು ಬಾಯಲ್ಲಿ ಹಾಕಿಕೊಂಡು ಸಂಕಲ್ಪಿಸಿದಾಗ, ಅವರೆಲ್ಲರಿಗೂ ಹೊಟ್ಟೆಯಿಂದ ಗಂಟಲಿನವರೆಗೂ ಆಹಾರ ತುಂಬಿ ಹೋದಂತ ಅನುಭವವಾಯಿತು. ಆಗ ಅವರೆಲ್ಲರೂ ಬಹಳ ಹೆದರಿ -'ಪಾಂಡವರ ಬಳಿ ಅಡಿಗೆ ಸಿದ್ಧವಾಗಿರಬೇಕು, ಅದು ವ್ಯರ್ಥವಾಗಿ ಹೋಗುವುದು'. ಹೀಗೆ ಯೋಚಿಸಿ ಪಾಂಡವರ ಕ್ರೋಧಾಗ್ನಿಯ ಭಯದಿಂದ ಪಲಾಯನ ಮಾಡಿದರು. ಪಾಂಡವರು ಭಗವದ್ಭಕ್ತರು ಎಂಬುದು ಅವರಿಗೆ ಗೊತ್ತಿತ್ತು. ಅಂಬರೀಶನ ಬಳಿ ಅವರಿಗಾದ ಅನುಭವದ ನಂತರ ಅವರಿಗೆ ಭಗವಂತನ ಭಕ್ತರ ಕುರಿತು ಬಹಳ ಭಯವಾಗುತ್ತಿತ್ತು. ಸಹದೇವನು ಗಂಗಾತೀರದಲ್ಲಿ ಅವರನ್ನು ಕಾಣದೆ ಹಿಂದಿರುಗಿ ಬಂದನು. ಈ ಪ್ರಕಾರ ಶರಣಾಗತವತ್ಸಲ ಶ್ರೀಹರಿಯು ತನ್ನ ಆಶ್ರಿತರನ್ನು ರಕ್ಷಿಸಿದನು. ಈ ರೀತಿಯ ಚರಿತ್ರೆಗಳಿಂದ ಸ್ಪಷ್ಟವಾಗಿಯೇ ಶ್ರೀಕೃಷ್ಣನ ದೈವತ್ವ ಮತ್ತು ಸರ್ವವ್ಯಾಪಕತೆಯು ಸೂಚಿತನಾಗುತ್ತದೆ.

(೪)

ಸಂಜಯನು ಧೃತರಾಷ್ಟ್ರನ ಮಂತ್ರಿ ಮತ್ತು ಕೃಪಾಪಾತ್ರನಾಗಿದ್ದನು. ಅವನು ಕೌರವರ ದೂತನಾಗಿ ಪಾಂಡವರ ಹತ್ತಿರಕ್ಕೆ ಹೋಗುತ್ತಾನೆ ಹಾಗೂ ಅಲ್ಲಿಂದ ಹಿಂದಿರುಗಿ ಬಂದು ಧೃತರಾಷ್ಟ್ರನಿಗೆ ಅವರ ಸಂದೇಶವನ್ನು ತಿಳಿಸುತ್ತಾನೆ. ಆ ಪ್ರಸಂಗದಲ್ಲಿ ಅವನು ಶ್ರೀಕೃಷ್ಣನ ಮಹಿಮೆಯನ್ನು ವರ್ಣಿಸುತ್ತಾ ಹೇಳುತ್ತಾನೆ. -'ಶ್ರೀಕೃಷ್ಣನು ಇಚ್ಛಿಸಿದರೆ ಸಂಕಲ್ಪಮಾತ್ರದಿಂದಲೇ ಈ ಸಂಪೂರ್ಣ ಜಗತ್ತನ್ನು ಸುಟ್ಟು ಭಸ್ಮಮಾಡಿಬಿಡಬಲ್ಲನು; ಆದರೆ ಇಡೀ ಜಗತ್ತು ಸೇರಿದರೂ ಶ್ರೀಕೃಷ್ಣನನ್ನು ಸುಡಲಾರದು.

ಎಲ್ಲಿ ಸತ್ಯ ಉಂಟೋ, ಎಲ್ಲಿ ಧರ್ಮವಿದೆಯೋ, ಎಲ್ಲಿ ನಾಚಿಕೆ

ಸಂಕೋಚವಿದೆಯೋ. ಎಲ್ಲಿ ಸರಳತೆಯಿದೆಯೋ. ಅಲ್ಲಿಯೇ ಶ್ರೀಕೃಷ್ಣ ಇದ್ದಾನೆ ಮತ್ತು ಎಲ್ಲಿ ಶ್ರೀಕೃಷ್ಣನಿದ್ದಾನೆಯೋ. ಅಲ್ಲಿಯೇ ವಿಜಯವಿದೆ. ಶ್ರೀಕೃಷ್ಣ ಪರಮಾತ್ಮನು ತನ್ನ ಯೋಗಶಕ್ತಿಯಿಂದ ಕಾಲಚಕ್ರ ಜಗತ್‌ಚಕ್ರ ಹಾಗೂ ಯುಗಚಕ್ರವನ್ನು ಹಗಲು-ರಾತ್ರಿ ನಡೆಸುತ್ತಿರುತ್ತಾನೆ. ಆತನೇ ಕಾಲಕ್ಕೆ. ಮೃತ್ಯುವಿಗೆ ಮತ್ತು ಚರಾಚರ ಜಗತ್ತಿನ ಸ್ವಾಮಿಯಾಗಿದ್ದಾನೆ.[1] ಮಹಾಭಾರತದ ರಚನಾಕಾರ ಮಹರ್ಷಿ ವೇದವ್ಯಾಸರೂ ಕೂಡ ಆಗ ಅಲ್ಲಿ ಕುಳಿತಿದ್ದರು. ಅವರೂ ಸಹ ಸಂಜಯನ ಮಾತನ್ನು ಸಮರ್ಥಿಸುತ್ತಾ ಧೃತರಾಷ್ಟ್ರನಿಗೆ ಹೇಳುತ್ತಾರೆ- 'ಮಹಾರಾಜ! ಸಂಜಯನು ಖಂಡಿತವಾಗಿ ನಿಜವನ್ನೇ ಹೇಳುತ್ತಾ ಇದ್ದಾನೆ. ಇವನು ಮಾಯೆಯನ್ನು ವಶದಲ್ಲಿಟ್ಟುಕೊಂಡಿದ್ದು. ಪುರಾಣ ಪುರುಷ. ಎಲ್ಲರ ಅಂತರ್ಯಾಮೀ ಶ್ರೀಕೃಷ್ಣನ ಸ್ವರೂಪವನ್ನು ತಿಳಿದುಕೊಂಡಿದ್ದಾನೆ. ನೀನು ಏಕಾಗ್ರ ಮನಸ್ಸಿನಿಂದ ಇವನ ಮಾತನ್ನು ಕೇಳಿಸಿಕೊಂಡರೆ ಈತನು ನಿನ್ನನ್ನು ಸಂಸಾರ ಭಯದಿಂದ ಪಾರುಮಾಡುವನು.'[2]

ಶ್ರೀಕೃಷ್ಣನು ಪಾಂಡವರ ಕಡೆಯಿಂದ ಸಂಧಿಯ ಪ್ರಸ್ತಾವನ್ನು ತೆಗೆದುಕೊಂಡು ಕೌರವರ ಸಭೆಗೆ ಹೋಗುತ್ತಾನೆ. ಆ ಸಮಯದಲ್ಲಿ ಪರಶುರಾಮ. ಕಣ್ವ. ನಾರದ ಮುಂತಾದ ಅನೇಕ ಮಹರ್ಷಿಗಳು. ದೇವರ್ಷಿಗಳು ಆತನ ದಿವ್ಯ ಹಾಗೂ

---

1 ಭಸ್ಮ ಕುರ್ಯಾಜ್ಜಗದಿದಂ ಮನಸೈವ ಜನಾರ್ದನಃ ।
ನ ತು ಕೃತ್ಸ್ನಂ ಜಗಚ್ಛಕ್ತಂ ಭಸ್ಮ ಕರ್ತುಂ ಜನಾರ್ದನಮ್ ॥
ಯತಃ ಸತ್ಯಂ ಯತೋ ಧರ್ಮೋ ಯತೋ ಹ್ರೀರಾರ್ಜವಂ ಯತಃ ।
ತತೋ ಭವತಿ ಗೋವಿಂದೋ ಯತಃ ಕೃಷ್ಣಸ್ತತೋ ಜಯಃ ॥
ಕಾಲಚಕ್ರಂ ಜಗಚ್ಚಕ್ರಂ ಯುಗಚಕ್ರಂ ಚ ಕೇಶವಃ ।
ಆತ್ಮಯೋಗೇನ ಭಗವಾನ್ ಪರಿವರ್ತಯತೇಽನಿಶಮ್ ॥
ಕಾಲಸ್ಯ ಚ ಹಿ ಮೃತ್ಯೋಶ್ಚ ಜಂಗಮಸ್ಥಾವರಸ್ಯ ಚ ।
ಈಶತೇ ಭಗವಾನೇಕಃ ಸತ್ಯಮೇತದ್ ಬ್ರವೀಮಿ ತೇ ॥
(ಉದ್ಯೋಗ ೬೮/೮-೯, ೧೨-೧೩.)

2 ಜಾನಾತ್ಯೇಷ ಹೃಷೀಕೇಶಂ ಪುರಾಣಂ ಯಚ್ಚ ವೈ ಪರಮ್ ।
ಶುಶ್ರೂಷಮಾಣಮೇಕಾಗ್ರಂ ಮೋಕ್ಷ್ಯತೇ ಮಹತೋ ಭಯಾತ್ ॥
(ಉದ್ಯೋಗ - ೬೯/೧೨)

ನೀತಿ ಪೂರ್ಣ ಭಾಷಣವನ್ನು ಕೇಳುವುದಕ್ಕಾಗಿ ಅಲ್ಲಿಗೆ ಬಂದಿರುತ್ತಾರೆ ಹಾಗೂ ಮಂತ್ರಮುಗ್ಧರಂತೆ ಶ್ರೀಕೃಷ್ಣನ ದಿವ್ಯವಾಣಿಯನ್ನು ಕೇಳುತ್ತಾರೆ. ಶ್ರೀಕೃಷ್ಣನು ತನ್ನ ಧರ್ಮಮಯ ಸಂದೇಶವನ್ನು ಹೇಳಿ ಮುಗಿಸಿದಾಗ ಈ ಮಹರ್ಷಿಗಳು ಕ್ರಮಶಃ ಪ್ರಸ್ತಾವವನ್ನು ಅನುಮೋದಿಸುತ್ತಾ ದುರ್ಯೋಧನನಿಗೆ ಬುದ್ಧಿ ಹೇಳುತ್ತಾರೆ. ಜೊತೆಗೆ ಅವನಿಗೆ ಶ್ರೀಕೃಷ್ಣನ ಮಹಿಮೆಯನ್ನೂ ತಿಳಿಸುತ್ತಾರೆ. ಇಡೀ ಜಗತ್ತಿನ ರಚಯಿತಾ, ಸರ್ವೇಶ್ವರ ಮತ್ತು ಎಲ್ಲರ ಶುಭಾಶುಭ ಕರ್ಮಗಳಿಗೆ ಸಾಕ್ಷಿಯಾದ ಭಗವಾನ್ ನಾರಾಯಣನೇ ಶ್ರೀಕೃಷ್ಣನ ರೂಪದಲ್ಲಿ ಪ್ರಕಟವಾಗಿದ್ದಾನೆ ಎಂದು ತಿಳಿಸುತ್ತಾರೆ; ಆದರೆ ದುರ್ಯೋಧನನ ತಲೆಯಮೇಲೆ ಮೃತ್ಯು ಕುಣಿಯುತ್ತಿತ್ತು, ಆದುದರಿಂದ ಅವನು ಈ ಮಹಾತ್ಮರುಗಳ ಹಿತವಚನಗಳ ಕಡೆಗೆ ಗಮನ ಕೊಡಲಿಲ್ಲ, ಬದಲಾಗಿ ಶ್ರೀಕೃಷ್ಣನ ಮೇಲೆ ಸಿಟ್ಟಾಗಿ ಆತನನ್ನು ಬಂಧಿಸುವ ಉಪಾಯವನ್ನು ಯೋಚಿಸುತ್ತಿದ್ದನು. ಶ್ರೀಕೃಷ್ಣನಿಗೆ ಅವನ ಈ ಕಪಟ ಯುಕ್ತಿ ತಿಳಿದುಹೋಯಿತು. ಆತನು ಎಲ್ಲರ ಎದುರಿಗೂ ಅವನನ್ನು ಗದರಿಸುತ್ತಾ 'ಎಲೋ ಮೂರ್ಖಾ! ದುಷ್ಟ! ನಾನೊಬ್ಬನೇ ಇರುವೆನೆಂದು ತಿಳಿದುಕೊಂಡು ನನ್ನನ್ನು ಪರಾಭವಗೊಳಿಸಿ ಬಂಧಿಸಬೇಕೆಂದಿರುವೆಯಾ? ಆದರೆ ಎಲ್ಲಾ ಪಾಂಡವರೂ, ಎಲ್ಲಾ ವೃಷ್ಣೀಯರು ಮತ್ತು ಆದಿತ್ಯ, ರುದ್ರ, ವಸು ಹಾಗೂ ಮಹರ್ಷಿಗಳೆಲ್ಲರೂ ಇಲ್ಲಿಯೇ ಇದ್ದಾರೆಂಬುದು ನಿನಗೆ ಗೊತ್ತಿಲ್ಲ'- ಎಂದು ಹೇಳಿ ಶ್ರೀಕೃಷ್ಣನು ಜೋರಾಗಿ ನಕ್ಕುಬಿಟ್ಟನು. ಆ ಕೂಡಲೇ ಆತನ ಅಂಗಗಳಲ್ಲಿ ವಿದ್ಯುತ್ತಿನಂತಹ ಕಾಂತಿಯುಳ್ಳ ಬ್ರಹ್ಮಾದಿ ದೇವತೆಗಳು ಕಂಡುಬಂದರು. ಅವರೆಲ್ಲರ ಶರೀರವು ಹೆಬ್ಬೆರಳಿನ ಪರಿಮಾಣದಲ್ಲಿದ್ದವು ಮತ್ತು ಅವರ ಅಂಗಗಳಿಂದ ಬೆಂಕಿಯ ಕಿಡಿಗಳು ಹೊರಸೂಸುತ್ತಿತ್ತು. ಶ್ರೀಕೃಷ್ಣನ ಹಣೆಯಲ್ಲಿ ಬ್ರಹ್ಮನೂ, ವಕ್ಷಸ್ಥಳದಲ್ಲಿ ರುದ್ರನೂ ಭುಜಗಳಲ್ಲಿ ಇಂದ್ರಾದಿ ಲೋಕಪಾಲಕರೂ ರಾರಾಜಿಸುತ್ತಿದ್ದರು. ಇಷ್ಟೇ ಅಲ್ಲ- ಅಗ್ನಿ, ಆದಿತ್ಯ, ಸಾಧ್ಯ, ವಸು, ಅಶ್ವಿನೀಕುಮಾರರು, ಮರುದ್ಗಣ, ವಿಶ್ವೇದೇವ ಹಾಗೂ ಯಕ್ಷ, ಕಿನ್ನರ, ಗಂಧರ್ವ ಮುಂತಾದವರೆಲ್ಲರೂ ಅಲ್ಲಿದ್ದರು. ಶ್ರೀಕೃಷ್ಣನ ಬಲ ಭುಜದಿಂದ ಗಾಂಡೀವಧಾರೀ ಅರ್ಜುನ ಮತ್ತು ಎಡಭುಜದಿಂದ ಹಲಾಯುಧರ ಬಲರಾಮನು ಪ್ರಕಟವಾದರು. ಯುಧಿಷ್ಠಿರ, ಭೀಮಸೇನ, ನಕುಲ, ಸಹದೇವ, ಪ್ರದ್ಯುಮ್ನಾದಿಗಳು ಮತ್ತು ವೃಷ್ಣಿವಂಶದ ಯಾದವರು

ಆತನ ಬೆನ್ನಿನಿಂದ ಪ್ರಕಟವಾದರು ಜೊತೆಗೆ ತಮ್ಮ ಅಸ್ತ್ರ-ಶಸ್ತ್ರಾದಿಗಳಿಂದ ಸುಸಜ್ಜಿತರಾಗಿ ಶ್ರೀಕೃಷ್ಣನ ಮುಂದೆ ನಿಂತರು. ಶಂಖ, ಚಕ್ರ, ಗದೆ, ಶಕ್ತಿ, ಶಾರ್ಙ್ಗಧನಸ್ಸು, ಖಡ್ಗ ಮುಂತಾದ ಥಳಥಳಿಸುತ್ತಿರುವ ಆಯುಧಗಳೆಲ್ಲವೂ ಶ್ರೀಕೃಷ್ಣನ ಭುಜಗಳಲ್ಲಿ ಶೋಭಾಯಮಾನವಾದುವು. ಆತನ ಕಣ್ಣುಗಳಿಂದ, ಮೂಗಿನ ರಂಧ್ರಗಳಿಂದ ಕಿವಿಗಳಿಂದ ಭೀಷಣ ಅಗ್ನಿಯ ಜ್ವಾಲೆಗಳು ಹೊರಡಲಾರಂಭಿಸಿದುವು ಹಾಗೂ ರೋಮಕೂಪಗಳಿಂದ ಸೂರ್ಯನ ಕಿರಣಗಳಂತಹ ಕಿರಣಗಳು ಮೂಡಲಾರಂಭಿಸಿದವು.

ಶ್ರೀಕೃಷ್ಣನ ಅಂತಹ ಭಯಂಕರ ರೂಪವನ್ನು ನೋಡಿ ನೆರೆದಿದ್ದ ಎಲ್ಲಾ ರಾಜರೂ ಭಯದಿಂದ ನಡುಗಿದರು. ಅವರೆಲ್ಲರೂ ತಮ್ಮ-ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಕೇವಲ ಆಚಾರ್ಯ ದ್ರೋಣ, ಭೀಷ್ಮ ಪಿತಾಮಹ, ಮಹಾತ್ಮಾ ವಿದುರ, ಸಂಜಯ ಹಾಗೂ ತಪೋಧನ ಋಷಿಗಳು ಇದ್ದ ಹಾಗೆಯೇ ಕುಳಿತಿದ್ದರು. ಅವರಿಗೆ ಭಗವಂತನು ದಿವ್ಯ ದೃಷ್ಟಿಯನ್ನು ಕೊಟ್ಟುಬಿಟ್ಟಿದ್ದನು. ಆ ಸಮಯದಲ್ಲಿ ದೇವತೆಗಳು ದುಂದುಭಿ ನುಡಿಸುವುದರಲ್ಲಿ ಮತ್ತು ಆಕಾಶದಿಂದ ಪುಷ್ಪವೃಷ್ಟಿ ಸುರಿಸುವುದರಲ್ಲಿ ತೊಡಗಿದರು. ಧೃತರಾಷ್ಟ್ರನ ಪ್ರಾರ್ಥನೆಯ ಮೇರೆಗೆ ಭಗವಂತನು ಅವನಿಗೂ ದಿವ್ಯದೃಷ್ಟಿ ಕೊಟ್ಟನು. ಆತನು ಭಗವಂತನ ಆ ಚಮತ್ಕಾರೀ ವಿಗ್ರಹವನ್ನು ನೋಡಿ ಆಶ್ಚರ್ಯದಿಂದ ಗಾಬರಿಪಟ್ಟನು. ಸ್ವಲ್ಪ ಹೊತ್ತಿನಲ್ಲಿಯೇ ಭಗವಂತನು ತನ್ನ ಆ ದಿವ್ಯ ಸ್ವರೂಪವನ್ನು ಉಪಸಂಹಾರ ಮಾಡಿ ಆ ಸಭಾಭವನದಿಂದ ಎದ್ದು ಹೊರಟು ಹೋದನು (ಉದ್ಯೋಗ-೧೩೧/೧-೨೪) ಶ್ರೀಕೃಷ್ಣನ ದೈವತ್ವಕ್ಕೆ ಇದಕ್ಕಿಂತ ಹೆಚ್ಚಿನ ಪ್ರಮಾಣ ಮತ್ತೇನು ಬೇಕಾಗುವುದು?

(೫)

ಭೀಷ್ಮಪರ್ವದಲ್ಲಿ ಶ್ರೀಮದ್ಭಗವದ್ಗೀತೆಯ ತುಂಬಾ ಶ್ರೀಕೃಷ್ಣ ಪರಮಾತ್ಮನ ಮಹಿಮೆಯು ತುಂಬಿ ತುಳುಕುತ್ತಿದೆ. ಅಲ್ಲಿ ಆತನು ಅರ್ಜುನನಿಗೆ ಸ್ಪಷ್ಟವಾದ ಶಬ್ದಗಳಲ್ಲಿ ಶ್ರೀಮುಖದಿಂದ ತಿಳಿಸುತ್ತಾನೆ- 'ನಾನು ಅಜನ್ಮಾ ಅವಿನಾಶೀ

ಈಶ್ವರನಾಗಿದ್ದೇನೆ. ಸಾಧುಗಳ ರಕ್ಷಣೆ, ದುಷ್ಟರ ನಾಶ ಹಾಗೂ ಧರ್ಮದ ಸ್ಥಾಪನೆಗೋಸ್ಕರ ನಾನು ಆಗಾಗ ಅವತಾರ ತಾಳುತ್ತಾ ಇರುತ್ತೇನೆ. (೪/೬-೮)' ಇಷ್ಟೇ ಅಲ್ಲ, ಆತನು ಇದನ್ನೂ ಸಹ ತಿಳಿಸುತ್ತಾನೆ - 'ನನ್ನ ಜನ್ಮ-ಕರ್ಮಗಳ ದಿವ್ಯತೆಯನ್ನು ಯಥಾರ್ಥವಾಗಿ ತಿಳಿದುಕೊಳ್ಳುವವನು ಜನನ ಮರಣಗಳ ಚಕ್ರದಿಂದ ಶಾಶ್ವತವಾಗಿ ಬಿಡುಗಡೆ ಹೊಂದುವನು. (೪/೯) ಇದರಿಂದ ಶ್ರೀಕೃಷ್ಣಪರಮಾತ್ಮನು ನಮ್ಮಂತೆ ಹುಟ್ಟಿ-ಸಾಯುವ ಸಾಧಾರಣ ಮನುಷ್ಯನಲ್ಲ ವೆಂಬುದು ಗೊತ್ತಾಗುತ್ತದೆ. ಸ್ವತಃ ಪದೇ ಪದೇ ಹುಟ್ಟುತ್ತಾ - ಸಾಯುತ್ತಾ ಇರುವವನ ಜನ್ಮದ ರಹಸ್ಯವನ್ನು ತಿಳಿದುಕೊಂಡು ಯಾರಾದರೂ ಹೇಗೆ ಜನನ-ಮರಣದಿಂದ ಬಿಡುಗಡೆಯಾಗಬಲ್ಲರು? ಮುಂದೆ ಆತನು ಹೇಳುವಾಗ -'ಇಡೀ ಜಗತ್ತು ನನ್ನಿಂದಲೇ ಉತ್ಪತ್ತಿಯಾಗುತ್ತದೆ ಮತ್ತು ನನ್ನಲ್ಲಿಯೇ ವಿಲೀನವಾಗಿ ಹೋಗುತ್ತದೆ. ನನ್ನ ಹೊರತು ಮತ್ತೇನೂ ಇಲ್ಲ.' (೭/೬-೭) ಸ್ಪಷ್ಟವಾದ ಮಾತುಗಳಲ್ಲಿ ಆತನು ಅರ್ಜುನನಿಗೆ ತಿಳಿಸುತ್ತಾನೆ. 'ನಾನು ನನ್ನ ಯೋಗ ಮಾಯೆಯಿಂದ ನನ್ನ ದೈವತ್ವವನ್ನು ಮರೆಮಾಡಿಕೊಂಡಿರುತ್ತೇನೆ; ಆದ್ದರಿಂದ ಅಜ್ಞಾನೀ ಜನರು ನನ್ನನ್ನು ಗುರುತಿಸಲಾರರು. ಜನ್ಮರಹಿತ ಮತ್ತು ಅವಿನಾಶಿಯಾದ ನನ್ನನ್ನು ಹುಟ್ಟುವವನು-ಸಾಯುವವನೂ ಎಂದೂ, ಮನುಷ್ಯನೆಂದೂ ಭಾವಿಸಿಕೊಂಡು ಬಿಡುತ್ತಾರೆ (೭/೨೫).' ಶ್ರೀಕೃಷ್ಣನು ತನ್ನ ದಿವ್ಯ ವಿಗ್ರಹದಿಂದ ಈ ಭೂಮಂಡಲದ ಮೇಲೆ ರಾರಾಜಿಸುತ್ತಿದ್ದನು, ಆಗಲೂ ಕೂಡ ಕಂಸ, ಜರಾಸಂಧ, ಶಿಶುಪಾಲ, ದುರ್ಯೋಧನ ಮೊದಲಾದ ಅನೇಕ ವ್ಯಕ್ತಿಗಳು ಆತನನ್ನು ಸಾಧಾರಣ ಮನುಷ್ಯನೆಂದು ತಿಳಿದುಕೊಂಡು ಅವಹೇಳನ ಮಾಡುತ್ತಿದ್ದರು. ಅವನು ಇಲ್ಲದಿರುವ ಇಂದಿನ ಸ್ಥಿತಿಯಲ್ಲಿ ಜನರು ಆತನ ವಿಷಯವಾಗಿ ಅನೇಕ ಪ್ರಕಾರದ ಒಳ್ಳೆಯ-ಕೆಟ್ಟ ಕಲ್ಪನೆಗಳನ್ನು ಅಥವಾ ಕುತರ್ಕಗಳನ್ನು ಮಾಡಿದರೆ ಅದರಲ್ಲಿ ಆಶ್ಚರ್ಯವೇನಿದೆ?

ಇಷ್ಟೇ ಅಲ್ಲ ಅಪಾರ ಮಹಿಮೆಯನ್ನು ಪ್ರತ್ಯಕ್ಷಗೊಳಿಸುವುದಕ್ಕಾಗಿ ಶ್ರೀಕೃಷ್ಣನು ಅರ್ಜುನನಿಗೆ ಕೃಪೆಯಿಂದ ತನ್ನ ವಿಶ್ವರೂಪದ ದರ್ಶನ ಮಾಡಿಸುತ್ತಾನೆ. ಅರ್ಜುನ ನೋಡಿದನು - ಆತನ ಶರೀರದಿಂದ ಸಾವಿರಾರು ಸೂರ್ಯರ

ಪ್ರಕಾಶ ಹೊರಚಲ್ಲುತ್ತಿದೆ (೧೧/೧೨); ಎಲ್ಲಾ ದೇವತೆಗಳು, ಋಷಿಗಳು ಮತ್ತು ಅನೇಕಾನೇಕ ಜೀವ ಸಮುದಾಯಗಳು ಆತನ ಶರೀರದಲ್ಲಿರುವುದು ಕಂಡಿತು (೧೧/೧೫); ಆತನಿಗೆ ಅನೇಕ ಭುಜಗಳು, ಹೊಟ್ಟೆ, ಮುಖ ಮತ್ತು ಕಣ್ಣುಗಳಿವೆ; ಆತನು ಎಲ್ಲಾ ಕಡೆಗಳಿಂದಲೂ ಅನಂತನಾಗಿದ್ದಾನೆ, ಆತನ ಆದಿ, ಮಧ್ಯ, ಅಂತ್ಯ-ಯಾವುದೂ ಸಹ ಕಂಡು ಬರುವುದಿಲ್ಲ (೧೧/೧೬); ಅರ್ಜುನನು ಇದನ್ನೂ ನೋಡುತ್ತಾನೆ. ಭೀಷ್ಮ, ದ್ರೋಣ, ಕರ್ಣ ಮುಂತಾದ ಕೌರವರ ಪಕ್ಷದ ದೊಡ್ಡ-ದೊಡ್ಡ ಯೋಧರು ಆತನ ಭಯಂಕರ ದವಡೆಗಳಲ್ಲಿ ಸಿಕ್ಕಿ ಪುಡಿ-ಪುಡಿಯಾಗುತ್ತಿದ್ದಾರೆ (೧೧/೨೬) ಮತ್ತು ಇಡೀ ಜಗತ್ತೆಲ್ಲಾ ಆತನ ಬಾಯಲ್ಲಿ ಸೇರುತ್ತದೆ (೧೧/೩೦); ಶ್ರೀಕೃಷ್ಣನ ಈ ವಿಕರಾಳ ರೂಪವನ್ನು ನೋಡಿ ಅರ್ಜುನನು ಭಯಭೀತನಾಗಿ ಆತನನ್ನು ಸ್ತುತಿಸ ಲಾರಂಭಿಸುತ್ತಾನೆ ಮತ್ತು ಮಿತ್ರನ ಸಂಬಂಧವಾಗಿ ಈವರೆವಿಗೂ ಆತನ ಸಂಗಡ ಸಮಾನತೆಯಿಂದ ನಡೆದುಕೊಳ್ಳುತ್ತಾ ಬಂದಿದ್ದನು, ಅದಕ್ಕಾಗಿ ಆತನಲ್ಲಿ ಕ್ಷಮೆಯನ್ನು ಬೇಡಿಕೊಳ್ಳುತ್ತಾನೆ (೧೧/೪೧-೪೨, ೪೪). ಅರ್ಜುನನು ಭಯಭೀತನಾಗಿರುವುದನ್ನು ನೋಡಿ ಭಗವಂತನು ತನ್ನ ಆ ಕಾಲರೂಪವನ್ನು ಮರೆಮಾಡಿ ಪುನಃ ಶ್ಯಾಮಸುಂದರ ರೂಪಿನಲ್ಲಿ ಅವನ ಮುಂದೆ ಕಾಣಿಸಿ ಕೊಳ್ಳುತ್ತಾನೆ (೧೧/೫೧). ಈ ಪ್ರಕಾರ ಶ್ರೀಕೃಷ್ಣನು ಅರ್ಜುನನಿಗೆ ಪ್ರತ್ಯಕ್ಷವಾಗಿ ಇದನ್ನು ತೋರಿಸಿದನು. ಯಾರು ಅವನ ಮುಂದೆ ತ್ರಿಭುವನ ಮೋಹನ ಶ್ಯಾಮಸುಂದರನ ರೂಪದಲ್ಲಿ ಸದಾ ಪ್ರಕಟವಾಗಿರುತ್ತಿದ್ದನೋ, ಆತನೇ ಜಗತ್ತನ್ನೂ ರಚಿಸಿದ್ದಾನೆ. ಆತನೇ ಜಗತ್ತಿನಿಂದ ದೂರವಿದ್ದು ಅದನ್ನು ಸೃಷ್ಟಿಸುತ್ತಾ - ನಾಶಮಾಡುತ್ತಾ ಇರುತ್ತಾನೆ. ಆತನನ್ನು ಈ ರೀತಿ ಯಥಾರ್ಥ ರೂಪದಲ್ಲಿ ತಿಳಿಯುವುದು, ನೋಡುವುದು ಮತ್ತು ಪಡೆಯುವುದು ಆತನ ಭಕ್ತಿಯಿಂದಲೇ ಸಂಭವವುಂಟು. (೧೧/೫೪) ಆದುದರಿಂದ ಭಗವಂತನು ಅಂತ್ಯದಲ್ಲಿ ಅರ್ಜುನನಿಗೆ ಇದೇ ಉಪದೇಶವನ್ನು ಕೊಡುತ್ತಾನೆ. 'ನೀನು ನನ್ನ ಚಿಂತನೆಯನ್ನೇ ಮಾಡು, ನನ್ನಲ್ಲಿಯೇ ಪ್ರೇಮವಿಡು. ನನ್ನನ್ನೇ ಭಜಿಸು-ಪೂಜಿಸು ಹಾಗೂ ಎಲ್ಲರ ಭರವಸೆಯನ್ನು ಬಿಟ್ಟು ನನಗೊಬ್ಬನಿಗೆ ಶರಣು ಬಾ. (೧೮/೬೫-೬೬)'.

ಇದೇ ಭಗವದ್ಗೀತೆಯ ಅಂತಿಮ ಉಪದೇಶ. ಶ್ರೀಕೃಷ್ಣನ ವಾಸ್ತವಿಕ

ಸ್ವರೂಪವೇ ಭಗವದ್ಗೀತೆಯಲ್ಲಿ ವ್ಯಕ್ತವಾಗಿದೆ. ಆತನು ಜಗತ್ತಿನಿಂದ ಅತೀತನಾಗಿ, ಗೂಢವಾಗಿರುವ ಆತ್ಮನಿಗಿಂತಲೂ ಶ್ರೇಷ್ಠ, ಪೂರ್ಣತಮ, ಪುರುಷೋತ್ತಮ ನಾಗಿದ್ದಾನೆ (೧೫/೧೮). ಆತನ ಈ ರೂಪವು ಅನನ್ಯಭಾವದಿಂದ ಆತನಿಗೆ ಶರಣಾಗುವುದರಿಂದ ಅರಿವಿಗೆ ಬರುತ್ತದೆ. ಆದುದರಿಂದ ಶ್ರೀಕೃಷ್ಣ ಯಾರು ಎನ್ನುವುದನ್ನು ತಿಳಿದುಕೊಳ್ಳಲು ನಾವು ನಮ್ಮ ಬುದ್ಧಿಯ ಅಭಿಮಾನವನ್ನು ಬಿಟ್ಟು ಆತನಿಗೆ ಶರಣು ಹೋಗಬೇಕಾಗುತ್ತದೆ. ಆತನಿಗೆ ಶರಣಾಗತನಾದ ನಂತರ ಅರ್ಜುನನಂತೆ ಆತನೇ ತನ್ನ ಸ್ವರೂಪವನ್ನು ಸ್ವತಃ ತಿಳಿಸಿಕೊಡುವನು. ಆಗ ಅರ್ಜುನನ ಸ್ವರಕ್ಕೇ ಸ್ವರವನ್ನು ಸೇರಿಸಿ ನಾವು ಹೇಳಿಬಿಡುವೆವು- 'ಪ್ರಭು! ನಿನ್ನ ಕೃಪೆಯಿಂದ ನನ್ನ ಅಜ್ಞಾನ ನಾಶವಾಯಿತು, ನಿನ್ನ ವಾಸ್ತವಿಕ ಸ್ವರೂಪ ನನಗೆ ತಿಳಿಯಿತು. ಈಗ ನಾನು ಸಂದೇಹವಿಲ್ಲದವನಾಗಿ ನೀನು ಹೇಳಿದಂತೆಯೇ ಕಣ್ಣು ಮುಚ್ಚಿಕೊಂಡು ಮಾಡುವೆನು' (೧೮/೭೩). ಇದರ ನಂತರ ನಮ್ಮಿಂದ ನಡೆಯುವ ಪ್ರಯತ್ನಗಳೆಲ್ಲಾ ಆ ಪ್ರಭುವಿನ ಪ್ರೇರಣೆಯಿಂದಲೇ ಆಗುವವು. ನಾವು ಎಲ್ಲವನ್ನೂ ಮಾಡುತ್ತಿದ್ದರೂ ಏನನ್ನೂ ಮಾಡುವುದಿಲ್ಲ. ಇದೇ ಗೀತೆಯ ಪರಮ ನೈಷ್ಕರ್ಮ್ಯ ಸಿದ್ಧಿ. ಅಂತಹ ಜನರಿಗಾಗಿಯೇ ಭಗವಂತನು ಹೇಳಿದ್ದಾನೆ- 'ಅವರು ಇಡೀ ಜಗತ್ತನ್ನು ಸಂಹಾರ ಮಾಡಿದರೂ ಏನೂ ಮಾಡಿಲ್ಲ. (೧೮/೧೭). ಅವರು ಭಗವಂತನ ಕೈ ಯಂತ್ರವಾಗಿ ಹೋಗುತ್ತಾರೆ.

(೬)

ಕುರುವೃದ್ಧ ಪಿತಾಮಹ ಭೀಷ್ಮರೂ ಇಂತಹುದೇ ಭಗವಂತನ ಒಂದು ಯಂತ್ರವಾಗಿದ್ದರು. ಅರ್ಜುನನ ಬಾಣಗಳಿಂದ ಹೃದಯವೇದನೆಗೊಳಗಾದ ಅವರು ಶರ-ಶಯ್ಯೆಯ ಮೇಲೆ ಮಲಗಿ ಇಚ್ಛಾನುಸಾರ ಶರೀರವನ್ನು ಬಿಡುವುದಕ್ಕಾಗಿ ಉತ್ತರಾಯಣದ ಸೂರ್ಯನನ್ನು ನಿರೀಕ್ಷೆ ಮಾಡುತ್ತಿದ್ದರು. ಯುದ್ಧ ಪೂರ್ಣಗೊಂಡನಂತರ ಯುಧಿಷ್ಠಿರನಿಗೆ ರಾಜ್ಯಾಭಿಷೇಕವಾಯಿತು. ಆಗ ಒಂದು ದಿವಸ ಶ್ರೀಕೃಷ್ಣ ಪರಮಾತ್ಮನು ಪಾಂಡವರನ್ನೆಲ್ಲಾ ಜೊತೆಯಲ್ಲಿ ಕರೆದುಕೊಂಡು ಭೀಷ್ಮರ ಮುಖದಿಂದ ಎಲ್ಲರಿಗೂ ಧರ್ಮದ ಉಪದೇಶವನ್ನು ಕೊಡಿಸುವುದಕ್ಕಾಗಿ ಕುರುಕ್ಷೇತ್ರಕ್ಕೆ ಹೋದನು.

ಶ್ರೀಕೃಷ್ಣನು ಬಂದಿರುವುದನ್ನು ನೋಡಿ ಭೀಷ್ಮರು ಸಂತೋಷದಿಂದ ಮತ್ತು ಅತ್ಯಂತ ಪ್ರೇಮದಿಂದ ಗದ್ಗದಿತರಾಗಿ ಆತನನ್ನು ಸ್ತುತಿಸಲು ತೊಡಗಿದರು. ಶ್ರೀಕೃಷ್ಣನೂ ಭೀಷ್ಮರನ್ನು ಬಹುವಾಗಿ ಪ್ರಶಂಸಿಸಿದನು. 'ನಿಮ್ಮ ಶರೀರವನ್ನು ಬಿಟ್ಟು ನೀವು ಈ ಲೋಕದಿಂದ ಹೋಗುವುದರ ಜೊತೆಯಲ್ಲಿಯೇ ಎಲ್ಲಾ ಜ್ಞಾನವೂ ಕೂಡ ಇಲ್ಲಿಂದ ಹೊರಟು ಹೋಗಿ ಬಿಡುವುದು'* ಎಂದು ಹೇಳುತ್ತಾ ಪಾಂಡವರಿಗೆ ಜ್ಞಾನೋಪದೇಶವನ್ನು ಮಾಡಬೇಕೆಂದು ಪ್ರಾರ್ಥಿಸಿದನು.

ಭೀಷ್ಮರು ಹೇಳಿದರು - 'ಪ್ರಭು! ನನ್ನ ಮನಸ್ಸು ಬಾಣಗಳ ವೇದನೆಯಿಂದ ಬಳಲುತ್ತಾ ಇದೆ, ಅಂಗಾಂಗಗಳಲ್ಲಿ ವೇದನೆಯಾಗುತ್ತಿದೆ. ಹಾಗೂ ಪ್ರತಿಭಾಶಕ್ತಿ ಕುಂದಿಹೋಗಿದೆ. ನನ್ನ ಮರ್ಮಸ್ಥಳಗಳಲ್ಲಿ ಬೆಂಕಿ ಹೊತ್ತಿದಂತಾಗಿದೆ, ನನ್ನ ಮಾತು ತಡೆದಂತಾಗುತ್ತದೆ. ಇಂತಹ ಸ್ಥಿತಿಯಲ್ಲಿ ಉಪದೇಶವನ್ನು ನಾನು ಹೇಗೆ ಕೊಡಬಲ್ಲೆನು. ನನಗಾಗಲೇ ದಿಕ್ಕುಗಳ ಜ್ಞಾನವೂ ಸಹ ಇಲ್ಲದಂತಾಗಿ ಹೋಗಿದೆ. ನಾನಾದರೂ ಕೇವಲ ನಿನ್ನ ಶಕ್ತಿಯಿಂದ ಬದುಕುತ್ತಿದ್ದೇನೆ. ಆದುದರಿಂದ ಹೇ ನಾಥ! ನೀನು ನನ್ನನ್ನು ಕ್ಷಮಿಸು ಮತ್ತು ಪಾಂಡವರಿಗೆ ನೀನೇ ಉಪದೇಶ ಕೊಡುವ ಕೃಪೆಮಾಡು; ಏಕೆಂದರೆ ಎಲ್ಲಾ ಶಾಸ್ತ್ರಗಳ ಉಗಮಸ್ಥಾನ ನೀನೇ ಆಗಿರುವೆ. ನಿನ್ನ ಮುಂದೆ ಮಾತನಾಡಲು ಬೃಹಸ್ಪತಿಯೂ ಸಹ ಸಂಕೋಚ ಪಟ್ಟುಕೊಳ್ಳುವಾಗ ಬೇರೆಯವರ ಮಾತಿನ್ನೇನು? ಗುರುಗಳ ಸಮ್ಮುಖದಲ್ಲಿ ಶಿಷ್ಯನು ಉಪದೇಶ ಮಾಡಲಾರನು, ಹಾಗೆಯೇ ನೀನಿರುವಾಗ ನನ್ನಂಥ ಮನುಷ್ಯ ಹೇಗೆ ಉಪದೇಶ ಮಾಡಬಲ್ಲನು? (ಶಾಂತಿ ೩/೧೩)' ಆಗ ಶ್ರೀಕೃಷ್ಣನು ಭೀಷ್ಮರಿಗೆ ವರಕೊಟ್ಟನು- 'ಈಗ ನಿಮಗೆ ದುಃಖವುಂಟಾಗದು, ಮೂರ್ಛೆ ಬರುವುದಿಲ್ಲ, ದಾಹವುಂಟಾಗದು. ನೋವೂ ಆಗುವುದಿಲ್ಲ ಮತ್ತು ಹಸಿವು ಬಾಯಾರಿಕೆಗಳು ತೊಂದರೆಪಡಿಸುವುದಿಲ್ಲ. ನಿಮಗೆ ನನ್ನ ಕೃಪೆಯಿಂದ ಎಲ್ಲಾ ಜ್ಞಾನವೂ ತನ್ನಷ್ಟಕ್ಕೆ ತಾನೇ ಹೊಳೆಯುವುದು ಮತ್ತು ನಿಮ್ಮ ಬುದ್ಧಿಯು

*ಅಮುಂ ಚ ಲೋಕಂ ತ್ವಯಿ ಭೀಷ್ಮ ಯಾತೇ ಜ್ಞಾನಾನಿ ನಂಕ್ಷ್ಯಂತ್ಯಖಿಲಾನಿ ವೀರ ||
(ಶಾಂತಿ - ೫೧/೧೭)

ನಿರಂತರ ಸತ್ತ್ವಗುಣದಲ್ಲಿರುವುದು.' ಆ ಸಮಯದಲ್ಲಿ ವ್ಯಾಸರೇ ಮೊದಲಾದ ಅನೇಕ ಮಹರ್ಷಿಗಳೂ ಕೂಡ ಅಲ್ಲಿದ್ದರು. ಎಲ್ಲರೂ ವೇದಮಂತ್ರ ಮತ್ತು ಸ್ತೋತ್ರಗಳ ಮೂಲಕ ಶ್ರೀಕೃಷ್ಣನ ಪೂಜೆ ಮಾಡಿದರು. ಆಕಾಶದಿಂದ ಪುಷ್ಪವೃಷ್ಟಿಯಾಯಿತು.*

ಮಾರನೇ ದಿವಸ ಭೀಷ್ಮರು ತಮ್ಮ ಉಪದೇಶವನ್ನು ಆರಂಭಿಸಿದರು. ಶ್ರೀಕೃಷ್ಣನ ಕೃಪೆಯಿಂದ ಅವರ ದಾಹ, ಮೋಹ, ಆಯಾಸ, ದುಃಖ ಮತ್ತು ನೋವು ಎಲ್ಲವೂ ಮಾಯವಾಗಿ ಹೋದುವು.** ಅವರ ಮಾತು ಮತ್ತು ಮನಸ್ಸಿಗೆ ಬಲ ಬಂದಿತು. ಅವರು ವರ್ಣಾಶ್ರಮಧರ್ಮ, ರಾಜಧರ್ಮ ಅಪದ್ಧರ್ಮ, ಶ್ರಾದ್ಧಧರ್ಮ, ದಾನಧರ್ಮ, ಸ್ತ್ರೀಧರ್ಮ ಇತ್ಯಾದಿ ಅನೇಕ ಮಹತ್ವಪೂರ್ಣ ವಿಷಯಗಳ ಬಗ್ಗೆ ಒಂದೇಸಮನೆ ಅನೇಕ ದಿವಸಗಳವರೆಗೆ ಉಪದೇಶಕೊಟ್ಟರು. ಕೊನೆಗೆ ಸೂರ್ಯನು ಉತ್ತರಾಯಣಕ್ಕೆ ಪ್ರವೇಶಿಸಿದಾಗ ಮಹಾತ್ಮ ಭೀಷ್ಮರು ಶ್ರೀಕೃಷ್ಣಪರಮಾತ್ಮನ ಎದುರಿಗೆ ಯೋಗಧಾರಣೆಯಿಂದ ಶರೀರವನ್ನು ತ್ಯಜಿಸಿದರು ಮತ್ತು ದಿವ್ಯಲೋಕಕ್ಕೆ ಹೊರಟುಹೋದರು. ಆಗ ದೇವತೆಗಳು ದುಂದುಭಿಗಳನ್ನು ನುಡಿಸಿದರು, ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಪಾಂಡವರು ವಿಧಿವತ್ತಾಗಿ ಅವರ ಅಂತ್ಯಕ್ರಿಯಾದಿ ಸಂಸ್ಕಾರವನ್ನು ನೆರವೇರಿಸಿದರು.

---

* ತತಸ್ತೇ ವ್ಯಾಸಸಹಿತಾಃ ಸರ್ವ ಏವ ಮಹರ್ಷಯಃ ।
ಋಗ್ಯಜುಃಸಾಮಸಹಿತೈರ್ವಚೋಭಿಃ ಕೃಷ್ಣಮಾರ್ಚಯನ್ ॥
ತತಃ ಸರ್ವಾರ್ತವಂ ದಿವ್ಯಂ ಪುಷ್ಪವರ್ಷಂ ನಭಸ್ತಲಾತ್ ।
ಪಪಾತ ಯತ್ರ ವಾರ್ಷ್ಣೇಯಃ ಸಗಾಂಗೇಯಃ ಸಪಾಂಡವಃ ॥
(ಶಾಂತಿ -೫೨/೨೨-೨೩)

** ದಾಹೋ ಮೋಹಃ ಶ್ರಮಶ್ಚೈವ ಕ್ಲಮೋ ಗ್ಲಾನಿಸ್ತಥಾ ರುಜಾ ।
ತವ ಪ್ರಸಾದಾದ್ ವಾರ್ಷ್ಣೇಯ ಸದ್ಯಃ ಪ್ರತಿಗತಾನಿ ಮೇ ॥ (೫೪/೧೭)

(೭)

ಈ ಪ್ರಕಾರ ಧರ್ಮರಾಜನನ್ನು ಹಸ್ತಿನಾಪುರದ ಸಿಂಹಾಸನದಲ್ಲಿ ನೆಲೆಗೊಳಿಸಿ ಶ್ರೀಕೃಷ್ಣಪರಮಾತ್ಮನು ದ್ವಾರಕೆಗೆ ಹಿಂದಿರುಗಿ ಬಂದನು. ದಾರಿಯಲ್ಲಿ ಆತನಿಗೆ ಮಹಾನ್ ತೇಜಸ್ವೀ ಉತ್ತಂಕ ಋಷಿಯ ಭೇಟಿಯಾಯಿತು. ಶ್ರೀಕೃಷ್ಣನ ಮುಖದಿಂದ ಕೌರವರ ವಿನಾಶದ ಮಾತನ್ನು ಕೇಳಿ ಉತ್ತಂಕನಿಗೆ ಬಹಳ ಕೋಪ ಬಂತು. ಅವನು ಹೇಳಿದನು-'ಶ್ರೀಕೃಷ್ಣ! ಕೌರವರು ನಿನ್ನ ಸಂಬಂಧಿಗಳು ಮತ್ತು ಪ್ರಿಯರೂ ಆಗಿದ್ದರು. ಶಕ್ತಿಯಿದ್ದರೂ ನೀನು ಅವರನ್ನು ರಕ್ಷಿಸಲಿಲ್ಲ, ಅವರನ್ನು ಯುದ್ಧಮಾಡದಂತೆ ಬಲಪೂರ್ವಕವಾಗಿ ತಡೆಯಲಿಲ್ಲ, ಆದುದರಿಂದ ನಾನು ನಿನಗೆ ಶಾಪ ಕೊಡುವೆನು.' ಶ್ರೀಕೃಷ್ಣ ಹೇಳಿದನು - 'ಯಾವ ಪುರುಷನೂ ತಪಸ್ಸಿನ ಬಲದಿಂದ ನನ್ನನ್ನು ತಿರಸ್ಕಾರ ಮಾಡಲಾರನು, ಆದ್ದರಿಂದ ನೀವು ನಿಮ್ಮ ಕ್ರೋಧವನ್ನು ತಡೆದುಕೊಳ್ಳಿ. ನೀವು ತಪಸ್ವಿಗಳು ಹಾಗೂ ಗುರುಭಕ್ತರೆಂಬುದು ನನಗೆ ಗೊತ್ತು, ಆದುದರಿಂದ ನಾನು ನಿಮ್ಮ ತಪಸ್ಸನ್ನು ನಾಶಮಾಡಲು ಬಯಸುವುದಿಲ್ಲ.' ತದನಂತರ ಶ್ರೀಕೃಷ್ಣನು ದಯಾಪೂರ್ವಕವಾಗಿ ಅವರಿಗೆ ಹೇಳಿದನು -'ಸಮಸ್ತ ಜೀವರಾಶಿಗಳನ್ನು ರಚಿಸುವವನು ಮತ್ತು ಸಂಹಾರ ಮಾಡುವವನು ನಾನೇ. ಯುಗ-ಪರಿವರ್ತನೆಯಾದಾಗಲೆಲ್ಲಾ ನಾನು ಪ್ರಜೆಗಳ ಹಿತಕ್ಕೋಸ್ಕರವಾಗಿ ಭಿನ್ನ-ಭಿನ್ನ ಯೋನಿಗಳಲ್ಲಿ ಜನ್ಮತಾಳಿ ಧರ್ಮದ ಸ್ಥಾಪನೆ ಮಾಡುತ್ತೇನೆ. ನಾನು ಯಾವಾಗ ಯಾವ ಯೋನಿಯಲ್ಲಿ ಪ್ರಕಟವಾಗುತ್ತೇನೆಯೋ, ಆಗ ನಾನು ಅದೇ ಯೋನಿಗೆ ಅನುಸಾರವಾಗಿ ವ್ಯವಹಾರ ಮಾಡುತ್ತೇನೆ. ಈಗ ನಾನು ಮನುಷ್ಯನಾಗಿರುತ್ತೇನೆ, ಆದುದರಿಂದ ಮನುಷ್ಯರಂತೆಯೇ ವ್ಯವಹಾರ ಮಾಡುತ್ತೇನೆ. ನಾನು ಮನುಷ್ಯರಂತೆಯೇ ದೀನತೆಯಿಂದ ಕೌರವರೊಡನೆ ಸಂಧಿಗಾಗಿ ಪ್ರಾರ್ಥಿಸಿಕೊಂಡೆನು ಹಾಗೂ ಭಯವನ್ನೂ ಸಹ ತೋರಿಸಿದೆನು. ಆದರೆ ಆ ಜನರು ಮೋಹವಶರಾಗಿ ನನ್ನ ಮಾತನ್ನು ಕೇಳಲಿಲ್ಲ. ಆದುದರಿಂದ ಅವರೆಲ್ಲರೂ ಸತ್ತು ಹೋದರು. ಯುದ್ಧದಲ್ಲಿ ಹೋರಾಡಿ ಸತ್ತದ್ದರಿಂದ ಅವರೆಲ್ಲರೂ ಒಳ್ಳೆಯ ಗತಿಯನ್ನೇ

ಪಡೆದುಕೊಂಡರು. (ಅಶ್ವಮೇಧಿಕಪರ್ವ ೫೪/೧೫-೨೨).' ನಂತರ ಉತ್ತಂಕನ ಪ್ರಾರ್ಥನೆಯಂತೆ ಶ್ರೀಕೃಷ್ಣನು ಅವನಿಗೆ ತನ್ನ ವಿಶ್ವರೂಪದ ದರ್ಶನ ಮಾಡಿಸಿದನು ಹಾಗೂ ದ್ವಾರಕೆಗೆ ತೆರಳಿದನು.

(೮)

ಉತ್ತಂಕನಂತೆಯೇ ಶ್ರೀಕೃಷ್ಣನು ಒಮ್ಮೆ ಗಾಂಧಾರಿಯ ಕೋಪಕ್ಕೂ ಸಹ ಒಳಗಾಗಬೇಕಾಯಿತು. ಯುದ್ಧ-ಸಮಾಪ್ತಿಯಾದ ನಂತರ ಮೃತರಾದ ತನ್ನ ಬಾಂಧವರ ಅಗ್ನಿ ಸಂಸ್ಕಾರ ಮಾಡಲು ಹಾಗೂ ಅವರಿಗೆ ಜಲಾಂಜಲಿ ಕೊಡುವುದಕ್ಕಾಗಿ ರಾಜಾ ಧೃತರಾಷ್ಟ್ರನು ಪಾಂಡವರು ಹಾಗೂ ಗಾಂಧಾರಿ, ಕುಂತಿ, ದ್ರೌಪದಿ ಮುಂತಾದ ಸಮಸ್ತ ಕುರುವಂಶದ ಸ್ತ್ರೀಯರನ್ನು ಸಂಗಡ ಕರೆದುಕೊಂಡು ಕುರುಕ್ಷೇತ್ರಕ್ಕೆ ಹೋಗಿದ್ದರು. ಅಲ್ಲಿ ಇವರೆಲ್ಲರೂ ನೋಡಿದ್ದೇನು-ಪುತ್ರ, ಸಹೋದರ, ತಂದೆ, ಪತಿ ಮುಂತಾದವರ ಶವಗಳು ನೆಲದ ಮೇಲೆ ಬಿದ್ದಿವೆ ಮತ್ತು ಮಾಂಸಾಹಾರಿ ಪಶು-ಪಕ್ಷಿ ಅವರ ಮಾಂಸವನ್ನು ಕಿತ್ತು-ಕಿತ್ತು ತಿನ್ನುತ್ತಾ ಇವೆ. ಆ ಭಯಂಕರ ದೃಶ್ಯವನ್ನು ನೋಡಿ ಕುರುವಂಶದ ಸ್ತ್ರೀಯರೆಲ್ಲರೂ ಎಚ್ಚರ ತಪ್ಪಿ ಕುಸಿದು ಹೋದರು, ಆರ್ತನಾದ ಮಾಡಲಾರಂಭಿಸಿದರು. ಪತಿ ಪರಾಯಣೆ ಗಾಂಧಾರಿಯೂ ಸಹ ದುಃಖವನ್ನು ಸಹಿಸಲಾರದೆ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು. ಸ್ವಲ್ಪ ಹೊತ್ತಿನ ನಂತರ ಆಕೆಗೆ ಪ್ರಜ್ಞೆ ಮರಳಿತು. ಆಗ ಆಕೆಯು ಶ್ರೀಕೃಷ್ಣನ ಕಡೆಗೆ ರೋಷ ತುಂಬಿದ ದೃಷ್ಟಿಯಿಂದ ನೋಡುತ್ತಾ ಹೇಳಿದಳು- 'ಶ್ರೀಕೃಷ್ಣಾ! ನೀನು ಮನಸ್ಸು ಮಾಡಿದ್ದರೆ ಈ ಭಯಂಕರ ನರ-ಸಂಹಾರವನ್ನು ತಡೆಯಬಹುದಾಗಿತ್ತು. ಆದರೆ ಆ ಶಕ್ತಿಯಿದ್ದರೂ ನೀನು ಇದನ್ನು ತಡೆಯಲಿಲ್ಲ. ಆದುದರಿಂದ ಪತಿಸೇವೆ ಮಾಡಿ ನಾನು ಸಂಚಯಿಸಿರುವ ತಪಸ್ಸಿನ ಬಲದಿಂದ ನಿನಗೆ ಶಾಪಕೊಡುತ್ತೇನೆ-ಹೇಗೆ ಕೌರವರ ನಾಶವನ್ನು ನೀನು ಉಪೇಕ್ಷೆ ಮಾಡಿದೆಯೋ ಹಾಗೆಯೇ ನೀನು ನಿನ್ನ ಸಂಬಂಧಿಗಳ ನಾಶಕ್ಕೆ ಕಾರಣನಾಗುವೆ. ಇಂದಿಗೆ ಮೂವತ್ತಾರನೇ ವರ್ಷದಲ್ಲಿ ನಿನ್ನ ಸಜಾತೀಯರು ಮಂತ್ರಿ ಮತ್ತು ಪುತ್ರರ ನಾಶವಾಗುವುದು. ನೀನು ಸ್ವತಃ ಕಾಡಿನಲ್ಲಿ ಸಂಚರಿಸುತ್ತಾ

ಸಾಧಾರಣವಾದಂತಹ ಅಪಾಯದಿಂದ ಅನಾಥನಂತೆ ಕೊಲ್ಲಲ್ಪಡುವೆ ಮತ್ತು ಜನರಿಗೆ ಈ ವಿಷಯ ತಿಳಿಯುವುದಿಲ್ಲ.'

ಶ್ರೀಕೃಷ್ಣನು ಮನಸ್ಸು ಮಾಡಿದ್ದರೆ ಗಾಂಧಾರಿಯ ಶಾಪವನ್ನೂ ವ್ಯರ್ಥ ಮಾಡಬಹುದಾಗಿತ್ತು. ಆದರೆ ಯಾದವರ ವಿನಾಶವು ಆತನ ಮನೋರಥವಾಗಿತ್ತು. ಮಹಾಭಾರತದ ಯುದ್ಧದಿಂದ ಆತನ ಅವತಾರದ ಉದ್ದೇಶ್ಯವಾದ ಭೂ-ಭಾರವನ್ನು ಕಳೆದುದು ಅಧಿಕಾಂಶದಲ್ಲಿ ಪೂರ್ತಿಯಾಗಿ ಹೋಗಿತ್ತು. ಯಾದವರ ಸಂಹಾರ ಮಾಡಿಸಿ ಆತನು ಈ ಯಜ್ಞದ ಪೂರ್ಣಾಹುತಿ ಮಾಡಬೇಕಾಗಿತ್ತು. ಆದರೆ ಆತನಿರುವುದರಿಂದ ಯಾದವರ ಕೂದಲನ್ನೂ ಕೊಂಕಿಸಲು ಯಾರಿಗೂ ಸಾಮರ್ಥ್ಯವಿರಲಿಲ್ಲ. ಆದುದರಿಂದ ಗಾಂಧಾರಿಯ ಶಾಪವನ್ನು ನಿಮಿತ್ತ ಮಾಡಿಕೊಂಡು ಆತನು ಪರಸ್ಪರ ಯುದ್ಧದ ಮೂಲಕ ತನ್ನ ಬಾಂಧವರ ನಾಶಮಾಡಿಸುವುದೇ ಸರಿಯೆಂದು ತಿಳಿದುಕೊಂಡನು. ಆದ್ದರಿಂದ ಆತನು ಗಾಂಧಾರಿಯ ಅಸಾಧಾರಣ ಪಾತಿವ್ರತ್ಯದ ಬಲವನ್ನು ಗೌರವಿಸಿ ಆಕೆಯ ಶಾಪವನ್ನು ಸಂತೋಷದಿಂದ ಸ್ವೀಕರಿಸಿದನು. (ಸ್ತ್ರೀ-೨೫/೪೮-೫೦) ಮತ್ತು ಸಮಯ ಒದಗಿದಾಗ ಯಾದವ ಕುಲದವರೆಲ್ಲರನ್ನೂ ಪರಸ್ಪರ ಹೋರಾಡಿಸಿ ಕೊಲ್ಲಿಸಿದನು.

(೯)

ಈ ಪ್ರಕಾರ ತನ್ನ ಅವತಾರದ ಪ್ರಯೋಜನ ಪೂರ್ಣಗೊಂಡ ನಂತರ ಶ್ರೀಕೃಷ್ಣನು ಪರಮಧಾಮಕ್ಕೆ ತೆರಳುವ ನಿಶ್ಚಯಮಾಡಿಕೊಂಡನು ಮತ್ತು ಗಾಂಧಾರಿಯ ಶಾಪವನ್ನು ಚರಿತಾರ್ಥ ಮಾಡುವುದಕ್ಕಾಗಿ ಆತನು ಇಂದ್ರಿಯ, ವಾಣಿ ಮತ್ತು ಮನಸ್ಸನ್ನು ಸಂಪೂರ್ಣವಾಗಿ ತಡೆದು ಸಮಾಧಿಯಲ್ಲಿ ಸ್ಥಿರಗೊಂಡನು.* ಅದೇ ಸಮಯಕ್ಕೆ ಆತನ ಪ್ರೇರಣೆಯಿಂದ ಜರಾ ಎಂಬ

* ಸ ಸಂನಿರುದ್ಧೇಂದ್ರಿಯವಾಙ್ಮನಾಸ್ತು ಶಿಶ್ಯೇ ಮಹಾಯೋಗಮುಪೇತ್ಯ ಕೃಷ್ಣಃ ॥
(ಮೌಸಲ - ೪/೨೧)

ಒಬ್ಬ ಉಗ್ರ ಬೇಡನು ಬೇಟೆಯನ್ನು ಹುಡುಕುತ್ತಾ ಬಂದನು. ಸಮಾಧಿ ಸ್ಥಿತಿಯಲ್ಲಿ ನಿಶ್ಚೇಷ್ಟಿತನಾಗಿ ಬಿದ್ದಿರುವ ಶ್ರೀಕೃಷ್ಣನನ್ನು ಮೃಗವೆಂದು ಮೋಸ ಹೋಗಿ ಆತನ ಒಂದು ಕಾಲಿನ ಅಂಗಾಲಿಗೆ ಬಾಣ ಪ್ರಯೋಗ ಮಾಡಿದನು. ಹತ್ತಿರಕ್ಕೆ ಬಂದಾಗ ಅವನಿಗೆ ತನ್ನ ತಪ್ಪು ಅರಿವಾಯಿತು. ಆಗ ಅವನು ಭಯ-ಭೀತನಾಗಿ ಶ್ರೀಕೃಷ್ಣನ ಎರಡು ಕಾಲುಗಳನ್ನೂ ಹಿಡಿದು ಕೊಂಡನು. ಶ್ರೀಕೃಷ್ಣನು ಅವನಿಗೆ ಭರವಸೆ ಕೊಡುತ್ತಾ ಹಾಗೂ ತನ್ನ ಅತುಲನೀಯ ಪ್ರಭೆಯಿಂದ ಭೂಮಿ-ಆಕಾಶಗಳನ್ನು ಪ್ರಕಾಶಪಡಿಸುತ್ತಾ ತನ್ನ ದಿವ್ಯಧಾಮಕ್ಕೆ ಹೊರಟು ಹೋದನು. ಆಗ ಇಂದ್ರ, ಅಶ್ವಿನೀಕುಮಾರರು, ರುದ್ರ, ಆದಿತ್ಯ, ವಸು, ವಿಶ್ವೇದೇವ, ಮುನಿ, ಸಿದ್ಧ ಮತ್ತು ಅಪ್ಸರೆಯರ ಸಹಿತ ಮುಖ್ಯ-ಮುಖ್ಯ ಗಂಧರ್ವರು-ಇವರೆಲ್ಲರೂ ಆತನನ್ನು ಕರೆದುಕೊಳ್ಳಲು ಬಂದರು (ಮೌಸಲ-೪/೨೨-೨೬) ಈ ಪ್ರಕಾರ ಶ್ರೀಕೃಷ್ಣ ಪರಮಾತ್ಮನು ತನ್ನ ಲೋಕಪಾವನ ಜಗಮಂಗಳ ಚರಿತ್ರೆಗಳಿಂದ ಭಕ್ತರನ್ನು ಆನಂದಪಡಿಸುತ್ತಾ ಹಾಗೂ ದುಷ್ಟರನ್ನು ಸಂಹಾರ ಮಾಡುವ ನೆಪದಲ್ಲಿ ಉದ್ಧಾರ ಮಾಡುತ್ತಾ ತನ್ನ ಅವತಾರ-ಲೀಲೆಯನ್ನು ಸಮಾಪ್ತಿ ಮಾಡಿದನು.

ಈ ಕಡೆ ಪಾಂಡವರು ಯಾದವರ ವಿನಾಶ ಹಾಗೂ ಶ್ರೀಕೃಷ್ಣನ ಪರಮಧಾಮಗಮನದ ಸುದ್ದಿಯನ್ನು ಕೇಳಿದಾಗ ಅವರಿಗೆ ಬಹಳ ದುಃಖ ವಾಯಿತು. ಇವರ ತಮ್ಮ ಮೊಮ್ಮಗ ಅಭಿಮನ್ಯುವಿನ ಕುಮಾರ ಪರೀಕ್ಷಿತನನ್ನು ರಾಜ ಸಿಂಹಾಸನದ ಮೇಲೆ ಕುಳ್ಳಿರಿಸಿ ಹಾಗೂ ಧೃತರಾಷ್ಟ್ರ-ಪುತ್ರ ಯುಯುತ್ಸುವನ್ನು ಅವನ ರಕ್ಷಣೆಗಾಗಿ ನಿಯುಕ್ತಿಗೊಳಿಸಿ ಹಿಮಾಲಯಕ್ಕೆ ಹೊರಟು ಹೋದರು. ಹಿಮಾಲಯವನ್ನು ದಾಟಿ ಅವರು ಮುಂದೆ ಮೇರು-ಪರ್ವತದ ಕಡೆಗೆ ಹೋದರು. ಈ ಮಧ್ಯೆ ಕ್ರಮಶಃ ದ್ರೌಪದಿ, ಸಹದೇವ, ನಕುಲ, ಅರ್ಜುನ ಮತ್ತು ಭೀಮ, ಆಯುಸ್ಸು ಸಮಾಪ್ತಿಯಾದ ಕಾರಣ ದಾರಿಯಲ್ಲಿಯೇ ಬಿದ್ದುಬಿಟ್ಟರು. ಒಂಟಿಯಾಗಿ ಧರ್ಮರಾಜನೊಬ್ಬನೇ ಒಂದು ನಾಯಿಯನ್ನು ಕರೆದುಕೊಂಡು ಮುಂದೆ ಹೊರಟನು ಹಾಗೂ ಸಶರೀರವಾಗಿ ಸ್ವರ್ಗ ಸೇರಿದನು. ಅಲ್ಲಿ ಅವನು ದೇವ-ನದಿ- ಗಂಗೆಯಲ್ಲಿ ಸ್ನಾನ ಮಾಡಿದನು ಮತ್ತು ಅಲ್ಲಿಯೇ ತನ್ನ

ಮನುಷ್ಯ ಶರೀರವನ್ನು ತ್ಯಾಗಮಾಡಿ ದಿವ್ಯ ಶರೀರವನ್ನು ಧಾರಣೆಮಾಡಿದನು. ಅದೇ ದಿವ್ಯ ಶರೀರದಿಂದ ಆತ ಭಗವಂತನ ಪರಮಧಾಮಕ್ಕೆ ಹೋದನು. ಅಲ್ಲಿ ಆತನು ಬ್ರಹ್ಮರೂಪ (ಚಿನ್ಮಯ ಶರೀರ) ಧಾರಿಯಾದ ಶ್ರೀಕೃಷ್ಣನನ್ನು ನೋಡಿದನು. ಚಕ್ರಾದಿ ಆತನ ಆಯುಧಗಳು ದಿವ್ಯ ಪುರುಷ-ವಿಗ್ರಹ ಧಾರಿಯಾಗಿ ಆತನ ಸೇವೆ ಮಾಡುತ್ತಾ ಇದ್ದುವು. ತೇಜಸ್ವೀ ವೀರ ಅರ್ಜುನನೂ ಸಹ ಆತನ ಸೇವೆಯಲ್ಲಿ ನಿರತನಾಗಿದ್ದನು.

ಇದೇ ಶ್ರೀಕೃಷ್ಣನ ಸ್ವರೂಪ ಮತ್ತು ಇದೇ ಆತನಿಗೆ ಶರಣಾಗತನಾಗಿ ಆತನ ಚರಣಗಳಲ್ಲಿ ನಿಶ್ಚಲವಾದ ಪ್ರೀತಿಯಿಟ್ಟುಕೊಂಡುದರ ಸುಮಧುರ ಫಲ. ಶ್ರೀಕೃಷ್ಣನು ಶಾಶ್ವತ. ಆತನು ಈಗಲೂ ತನ್ನ ಭಕ್ತರಿಗೆ ದರ್ಶನ ಕೊಟ್ಟು ಅವರೊಡನೆ ಆಟವಾಡಿ ಅವರಿಗೆ ಆನಂದವನ್ನುಂಟು ಮಾಡುತ್ತಾನೆ. ಬೇಕಾದರೆ ನಾವೂ ಸಹ ಆತನ ಅಭಯ ಚರಣಗಳಿಗೆ ಶರಣಾಗತರಾಗಿ ಎಂದೆಂದಿಗೂ ನಿರ್ಭಯರಾಗಬಹುದು. ಶ್ರೀಕೃಷ್ಣಪರಮಾತ್ಮನಿಗೆ ಜಯವಾಗಲಿ!!

೨. ಮಹಾತ್ಮಾ ಭೀಷ್ಮ

ಮಹಾತ್ಮಾ ಭೀಷ್ಮರು ಪ್ರಸಿದ್ಧ ಕುರುವಂಶದ ಮಹಾರಾಜ ಶಾಂತನುವಿನ ಮಗ. ಇವರು ಗಂಗಾದೇವಿಯಿಂದ ಜನಿಸಿದವರು. ವಸು ಎಂಬ ದೇವತೆಗಳಲ್ಲಿ 'ದ್ಯೌ' ಎಂಬ ಎಂಟನೆಯ ವಸುವೇ ಮಹರ್ಷಿ ವಸಿಷ್ಠರ ಶಾಪದಿಂದ ಭೀಷ್ಮರ ರೂಪದಲ್ಲಿ ಅವತರಿಸಿದ್ದರು. ಇವರು ಬಾಲ್ಯದಲ್ಲಿಯೇ ಸಾಂಗೋಪಾಂಗವಾಗಿ ವೇದಗಳ ಅಧ್ಯಯನ ಹಾಗೂ ಶಸ್ತ್ರಾಭ್ಯಾಸ ಮಾಡಿದ್ದರು. ಅಸ್ತ್ರಗಳ ಅಭ್ಯಾಸ ಮಾಡುತ್ತಾ ಅವರು ಒಂದು ಸಲ ತಮ್ಮ ಬಾಣಗಳ ಪ್ರಭಾವದಿಂದ ಗಂಗಾ-ಧಾರೆಯನ್ನು ತಡೆದುಬಿಟ್ಟಿದ್ದರು. ಇವರನ್ನು ಬಾಲ್ಯದಲ್ಲಿ ಜನರು ದೇವವ್ರತ ಎಂದು ಕರೆಯುತ್ತಿದ್ದರು.

ಒಂದು ದಿನ ರಾಜರ್ಷಿ ಶಾಂತನು ಕಾಡಿನಲ್ಲಿ ಅಡ್ಡಾಡುತ್ತಿದ್ದನು. ಅವನ ದೃಷ್ಟಿ ಒಬ್ಬ ಸುಂದರಿಯಾದ ಅಂಬಿಗರ ಕುಲದ ದಾಶನರಾಜನ ಮಗಳು ಸತ್ಯವತಿಯ ಮೇಲೆ ಬಿತ್ತು ಮತ್ತು ಅವಳಲ್ಲಿ ಆತನು ಆಸ್ತಕನಾದನು. ಆತನು ಆಕೆಯೊಡನೆ ವಿವಾಹ ಮಾಡಿಕೊಳ್ಳಲು ಇಚ್ಛಿಸಿದನು. ಸತ್ಯವತಿ ಒಬ್ಬ ರಾಜಕನ್ಯೆಯಾಗಿದ್ದಳು; ಆದರೆ ಅವಳು ಅಂಬಿಗರ ಮನೆಯಲ್ಲಿ ಬೆಳೆದಿದ್ದಳು. ಅವಳ ತಂದೆ ದಾಶರಾಜನು ಅವಳ ವಿವಾಹಕ್ಕೆ ರಾಜನ ಮುಂದೆ ಈ ಒಂದು ಶರತ್ತನ್ನು ಇಟ್ಟನು - ಈಕೆಯ ಗರ್ಭದಲ್ಲಿ ಜನಿಸುವ ಪುತ್ರನೇ ರಾಜ್ಯಕ್ಕೆ ಅಧಿಕಾರಿಯಾಗಬೇಕು. ರಾಜನು ಅವನ ಶರತ್ತನ್ನು ಒಪ್ಪಲಿಲ್ಲ. ಆದರೆ ಆತನಿಂದ ಆ ರಾಜಕನ್ಯೆಯನ್ನು ಮರೆಯಲಾಗಲಿಲ್ಲ. ಆತನು ಅವಳನ್ನು ಪಡೆಯುವ ಚಿಂತೆಯಲ್ಲಿ ಉದಾಸೀನನಾಗಿರುತ್ತಿದ್ದನು. ದೇವವ್ರತನಿಗೆ ತಂದೆಯ ಉದಾಸೀನತೆಯ ಕಾರಣ ತಿಳಿದಾಗ ಆತನು ತಾನೇ ಆ ದಾಶರಾಜನ ಬಳಿ ಹೋಗಿ ತನ್ನ ತಂದೆಗಾಗಿ ಕನ್ಯೆಯನ್ನು ಯಾಚಿಸಿದನು. ದೇವವ್ರತನು ಅವನ ಕರಾರನ್ನು ಒಪ್ಪಿಕೊಳ್ಳುತ್ತಾ ಎಲ್ಲರ ಎದುರಿನಲ್ಲಿಯೇ ಈ ರೀತಿ ಪ್ರತಿಜ್ಞೆ ಮಾಡಿದನು- 'ಈಕೆಯ ಗರ್ಭದಲ್ಲಿ ಹುಟ್ಟುವ ಮಗನೇ ಹಸ್ತಿನಾವತಿಯ ರಾಜನಾಗುವನು.' ಆದರೆ ದಾಶರಾಜನಿಗೆ ಇದರಿಂದ ಸಂತೋಷವಾಗಲಿಲ್ಲ.

ದೇವವ್ರತನ ಮಾತೇನೋ ಎಂದಿಗೂ ಸಟೆಯಾಗದು; ಆದರೆ ಇವನ ಮಗ ರಾಜ್ಯದ ಅಧಿಕಾರಿ ಆಗಬಹುದು ಎಂದು ಅವನು ಯೋಚಿಸಿದನು. ಬುದ್ಧಿಶಾಲಿಯಾದ ದೇವವ್ರತ ಅವನ ಅಭಿಪ್ರಾಯವನ್ನು ತಿಳಿದುಕೊಂಡನು. ಆತನು ಕೂಡಲೇ ಈ ಎರಡನೇ ಕಠಿಣ ಪ್ರತಿಜ್ಞೆ ಮಾಡಿದನು. 'ನಾನು ಜೀವನಪರ್ಯಂತ ಬ್ರಹ್ಮಚರ್ಯವ್ರತದ ಪಾಲನೆ ಮಾಡುವೆನು.' ಕುಮಾರ ದೇವವ್ರತನ ಈ ಭೀಷಣ-ಪ್ರತಿಜ್ಞೆಯನ್ನು ಕೇಳಿ ದೇವತೆಗಳು ಹೂಮಳೆ ಸುರಿಸಿದರು ಮತ್ತು ಆಗಿನಿಂದಲೇ ಜನರು ಆತನನ್ನು 'ಭೀಷ್ಮ' ಎಂದು ಕರೆದರು. ಭೀಷ್ಮರು ಸತ್ಯವತಿಯನ್ನು ಕರೆದುಕೊಂಡು ಹೋಗಿ ತಮ್ಮ ತಂದೆಗೆ ವಹಿಸಿಕೊಟ್ಟರು. ಭೀಷ್ಮರ ಈ ಅಸಾಧ್ಯವಾದ ಕಾರ್ಯವನ್ನು ಕೇಳಿ ರಾಜಾ ಶಾಂತನು ಬಹಳ ಸಂತೋಷಪಟ್ಟು ತನ್ನ ಮಗನಿಗೆ ಇಚ್ಛಾಮರಣದ ವರವನ್ನು ಕೊಟ್ಟನು. ಈ ಪ್ರಕಾರ ಭೀಷ್ಮರು ಜೀವನದ ಪ್ರಾರಂಭದಲ್ಲಿಯೇ ತಂದೆಯ ಇಚ್ಛಾ-ಪೂರ್ತಿಗಾಗಿ ಪ್ರಪಂಚದ ಎದುರಿಗೆ ಅಲೌಕಿಕ ತ್ಯಾಗದ ಆದರ್ಶವನ್ನು ಸ್ಥಾಪಿಸಿದರು. ಯಾವ ರಾಜ್ಯಕ್ಕಾಗಿ ಅವರಿಂದ ಎರಡು ಪೀಳಿಗೆಯ ನಂತರ ಅವರ ಮಕ್ಕಳು-ಮೊಮ್ಮಕ್ಕಳಲ್ಲಿ ಹಾಗೂ ಅವರ ಸಮ್ಮುಖದಲ್ಲಿ ಭೀಷಣ ಸಂಹಾರಕಾರಿ ಮಹಾಯುದ್ಧವಾಯಿತೋ, ಅದೇ ರಾಜ್ಯವನ್ನು ಅವರು ಮಾತು ಮಾತಿನಲ್ಲಿಯೇ ತನ್ನ ತಂದೆಯ ಒಂದು ಸಾಧಾರಣವಾದ ಇಚ್ಛೆಗೆ ತ್ಯಜಿಸಿದ್ದರು. ಕಾಮಿನೀ-ಕಾಂಚನಕ್ಕಾಗಿ ಪ್ರಪಂಚದ ಇತಿಹಾಸದಲ್ಲಿ ಎಷ್ಟು ಬಾರಿ ರಕ್ತದ ಕೋಡಿ ಹರಿದಿಲ್ಲ! ರಾಜ್ಯಕ್ಕೆ ರಾಜ್ಯವೇ ಭಸ್ಮವಾಗಿಹೋಗಿವೆಯೋ ಗೊತ್ತಿಲ್ಲ! ಅವುಗಳನ್ನು ಶಾಶ್ವತವಾಗಿ ಹುಲ್ಲುಕಡ್ಡಿಯಂತೆ ಪರಿತ್ಯಾಗ ಮಾಡಿ ಅವರು ಒಬ್ಬ ವಿರಕ್ತ ಮಹಾತ್ಮರಂತೆ ಆಚರಣೆ ಮಾಡಿದರು. ಅವರ ಪಿತೃಭಕ್ತಿ ಧನ್ಯವಾಯಿತು.

ಸತ್ಯವತಿಯ ಗರ್ಭದಿಂದ ಮಹಾರಾಜ ಶಾಂತನುಗೆ ಇಬ್ಬರು ಪುತ್ರರು ಜನಿಸಿದರು. ದೊಡ್ಡವನೇ ಚಿತ್ರಾಂಗದ ಮತ್ತು ಚಿಕ್ಕವನು ವಿಚಿತ್ರವೀರ್ಯ. ಚಿತ್ರಾಂಗದನಿನ್ನೂ ಪ್ರಾಯಕ್ಕೆ ಬಂದಿರಲಿಲ್ಲ ಅಷ್ಟರಲ್ಲಿ ರಾಜಾ ಶಾಂತನು ಈ ಲೋಕದಿಂದ ಹೊರಟುಹೋದನು. ಚಿತ್ರಾಂಗದ ರಾಜನಾದನು, ಆದರೆ

ಆತನು ಕೆಲವು ದಿನಗಳ ನಂತರ ಗಂಧರ್ವನೊಡನೆ ನಡೆದ ಯುದ್ಧದಲ್ಲಿ ಸಾವನ್ನಪ್ಪಿದನು. ವಿಚಿತ್ರವೀರ್ಯನೂ ಸಹ ಇನ್ನೂ ಬಾಲಕನಾಗಿದ್ದನು. ಆದುದರಿಂದ ಅವನು ಭೀಷ್ಮರ ನೇತೃತ್ವದಲ್ಲಿ ರಾಜ್ಯದ ಆಡಳಿತ ನಡೆಸುತ್ತಿದ್ದನು. ಸ್ವಲ್ಪ ದಿನಗಳ ಮೇಲೆ ಭೀಷ್ಮರಿಗೆ ವಿಚಿತ್ರವೀರ್ಯನ ವಿವಾಹದ ಚಿಂತೆ ಉಂಟಾಯಿತು. ಅದೇ ದಿನಗಳಲ್ಲಿ ಕಾಶೀ ನರೇಶನ ಮೂವರು ಕನ್ಯೆಯರ ಸ್ವಯಂವರ ಜರುಗುವುದ ರಲ್ಲಿತ್ತು. ಭೀಷ್ಮರು ಒಂಟಿಯಾಗಿಯೇ ರಥಾರೂಢರಾಗಿ ಕಾಶಿಗೆ ಹೋದರು. ಇವರು ಸಹೋದರನಿಗಾಗಿ ಬಲಪೂರ್ವಕ ಕನ್ಯೆಯರನ್ನು ತಮ್ಮ ರಥದಲ್ಲಿ ಕುಳ್ಳಿರಿಸಿಕೊಂಡು ಅವರನ್ನು ಹಸ್ತಿನಾಪುರಕ್ಕೆ ಕರೆದುಕೊಂಡು ಹೊರಟರು. ಸ್ವಯಂವರಕ್ಕಾಗಿ ನೆರೆದಿದ್ದ ಎಲ್ಲಾ ರಾಜರುಗಳೂ ಇವರ ಮೇಲೆ ಆಕ್ರಮಣ ಮಾಡಿದರು. ಆದರೆ ಅವರದೇನೂ ನಡೆಯಲಿಲ್ಲ. ಇವರು ಒಂಟಿಯಾಗಿಯೇ ಎಲ್ಲರನ್ನೂ ಸೋಲಿಸಿ ಕನ್ಯೆಯರನ್ನು ಕರೆತಂದು ವಿಚಿತ್ರವೀರ್ಯನ ವಶಕ್ಕೆ ಒಪ್ಪಿಸಿಬಿಟ್ಟರು. ಆ ಸಂದರ್ಭದಲ್ಲಿ ಇವರ ಅಲೌಕಿಕ ಪರಾಕ್ರಮ ಹಾಗೂ ಅಸ್ತ್ರ-ಕೌಶಲ ಪ್ರಥಮ ಬಾರಿಗೆ ಪ್ರಪಂಚಕ್ಕೆ ಪರಿಚಯವಾಯಿತು.

ಭೀಷ್ಮರು ಬಲವಂತವಾಗಿ ಕರೆದುಕೊಂಡು ಬಂದಿದ್ದ ಮೂವರು ಕಾಶೀ ರಾಜನ ಕನ್ಯೆಯರಲ್ಲಿ ಎಲ್ಲರಿಗಿಂತ ಹಿರಿಯವಳಾದ ಕನ್ಯೆ ಅಂಬೆ ಮನಸ್ಸಿನಲ್ಲಿಯೇ ಶಾಲ್ವರಾಜನನ್ನು ವರಿಸಿದ್ದಳು. ಭೀಷ್ಮರಿಗೆ ಇದು ಗೊತ್ತಾದ ಕೂಡಲೇ ಅವರು ಅಂಬೆಯನ್ನು ಅಲ್ಲಿಂದ ಬೀಳ್ಕೊಟ್ಟರು. ಉಳಿದ ಇಬ್ಬರು ಕನ್ಯೆಯರ ವಿವಾಹವನ್ನು ವಿಚಿತ್ರವೀರ್ಯನೊಡನೆ ನಡೆಸಿದರು. ಆದರೆ ವಿಚಿತ್ರವೀರ್ಯನು ಹೆಚ್ಚು ಕಾಲ ಜೀವಿಸಲಿಲ್ಲ. ವಿವಾಹವಾದ ಕೆಲವೇ ವರ್ಷಗಳ ನಂತರ ಆತನು ಕ್ಷಯ ರೋಗಕ್ಕೆ ತುತ್ತಾಗಿ ಮೃತ್ಯುವನ್ನಪ್ಪಿದನು. ಆತನಿಗೆ ಯಾವ ಸಂತಾನವೂ ಇರಲಿಲ್ಲ. ಆದ್ದರಿಂದ ಕುರುವಂಶ ಅಂತ್ಯಗೊಳ್ಳುವ ಪ್ರಸಂಗ ಬಂದೊದಗಿತು. ಭೀಷ್ಮರು ಮನಸ್ಸು ಮಾಡಿದ್ದರೆ ಅವರೇ ಸುಲಭವಾಗಿ ರಾಜ್ಯಕ್ಕೆ ರಾಜರಾಗಬಹುದಾಗಿತ್ತು. ಪ್ರಜೆಗಳು ಅವರಿಗೆ ಅನುಕೂಲರಾಗಿದ್ದರು. ವಂಶರಕ್ಷಣೆಗಾಗಿ ವಿವಾಹ ಮಾಡಿಕೊಳ್ಳಲು ಈಗ ಅವರ ಮುಂದೆ ಯಾವ

ಅಡಚಣೆಯೂ ಇರಲಿಲ್ಲ; ಆದರೆ ಅತ್ಯಂತ ಹೆಚ್ಚಿನ ಪ್ರಲೋಭನೆ ಹಾಗೂ ಅವಶ್ಯಕತೆಯೂ ಸಹ ಭೀಷ್ಮರನ್ನು ಅವರ ವಚನದಿಂದ ಕದಲಿಸಲಾಗಲಿಲ್ಲ. ಸತ್ಯವತಿಯ ತಂದೆಯ ಮುಂದೆ ಮಾಡಿದ್ದ ಪ್ರತಿಜ್ಞೆಯನ್ನು ಪುನರುಚ್ಚರಿಸುತ್ತಾ ಒಮ್ಮೆ ಅವರು ಹೇಳಿದ್ದರು - 'ನಾನು ಮೂರು ಲೋಕಗಳ ರಾಜ್ಯ, ಬ್ರಹ್ಮಪದವಿ ಮತ್ತು ಇವೆರಡರಕ್ಕಿಂತ ಮಿಗಿಲಾಗಿ ಮೋಕ್ಷವನ್ನೂ ಕೂಡ ಪರಿತ್ಯಾಗ ಮಾಡಬಲ್ಲೆನು; ಆದರೆ ಸತ್ಯವನ್ನು ತ್ಯಾಗಮಾಡಲಾರೆನು. ಪಂಚ ಭೂತಗಳು ತಮ್ಮ-ತಮ್ಮ ಗುಣಗಳನ್ನು ತ್ಯಜಿಸಲಿ, ಚಂದ್ರನು ತನ್ನ ಶೀತಲತ್ವವನ್ನು ಬಿಡಲಿ ಮತ್ತು ಸ್ವತಃ ಧರ್ಮರಾಜನು ಬೇಕಾದರೆ ತನ್ನ ಧರ್ಮವನ್ನು ಬಿಟ್ಟು ಬಿಡಲಿ; ಆದರೆ ನಾನು ನನ್ನ ಸತ್ಯಪ್ರತಿಜ್ಞೆಯನ್ನು ಬಿಡಬೇಕೆಂಬ ವಿಚಾರವನ್ನು ಯೋಚಿಸಲಾರೆನು. ' ಪ್ರತಿಜ್ಞೆಯ ಪಾಲನೆಯೆಂದರೆ ಇದೆಯೇ ಆಗಿದೆ.

ಈ ಕಡೆ ಅಂಬೆಯನ್ನು ಶಾಲ್ವನು ಸ್ವೀಕರಿಸಲಿಲ್ಲ. ಅವಳು ಈ ಕಡೆಗೂ ಇಲ್ಲ, ಆ ಕಡೆಗೂ ಇಲ್ಲದಂತಾದಳು. ನಾಚಿಕೆಯಿಂದ ತಂದೆಯ ಮನೆಗೂ ಹೋಗಲಾಗಲಿಲ್ಲ. ತನ್ನ ಈ ದುರವಸ್ಥೆಗೆ ಕಾರಣರು ಭೀಷ್ಮರೆಂದು ತಿಳಿದುಕೊಂಡು ಅವಳು ಅವರನ್ನು ಮನಸ್ಸಿನಲ್ಲಿಯೇ ನಿಂದಿಸುತ್ತಿದ್ದಳು ಮತ್ತು ಅವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಉಪಾಯವನ್ನು ಯೋಚಿಸುತ್ತಿದ್ದಳು. ತನ್ನ ಅಜ್ಜ ರಾಜರ್ಷಿ ಹೋತ್ರವಾಹನರ ಸಲಹೆಯಂತೆ ಅವಳು ಜಮದಗ್ನಿನಂದನ ಪರಶುರಾಮರಿಗೆ ಶರಣಾದಳು ಮತ್ತು ಅವರಿಗೆ ತನ್ನ ದುಃಖದ ಕಾರಣವನ್ನು ತಿಳಿಸಿದಳು. ಪರಶುರಾಮರಿಂದ ಭೀಷ್ಮರು ಅಸ್ತ್ರವಿದ್ಯೆಯನ್ನು ಕಲಿತಿದ್ದರು. ಅವರು ಭೀಷ್ಮರನ್ನು ಕುರುಕ್ಷೇತ್ರಕ್ಕೆ ಕರೆಯಿಸಿ ಹೇಳಿದರು- 'ಈ ಕನ್ಯೆಯನ್ನು ಬಲಪೂರ್ವಕವಾಗಿ ಸ್ಪರ್ಶಮಾಡಿ ನೀನು ಇವಳನ್ನು ದೋಷಯುಕ್ತಳನ್ನಾಗಿ ಮಾಡಿಬಿಟ್ಟಿರುವೆ. ಆದುದರಿಂದ ಶಾಲ್ವನು ಇವಳನ್ನು ಸ್ವೀಕರಿಸಲಿಲ್ಲ. ಆದ್ದರಿಂದ ಈಗ ನೀನೇ ಇವಳನ್ನು ವಿಧಿಪೂರ್ವಕವಾಗಿ ಪಾಣಿಗ್ರಹಣ ಮಾಡಿಕೊಳ್ಳಬೇಕಾಗುವುದು. ಭೀಷ್ಮರು ಅವರ ಮಾತನ್ನು ಒಪ್ಪಲಿಲ್ಲ. ಅವರು ಹೇಳಿದರು- 'ಈ ಕನ್ಯೆಯೇ, ನಾನು ಶಾಲ್ವನವಳಾಗಿದ್ದೇನೆಂದು ನನ್ನೊಡನೆ ಹೇಳಿದ್ದಳು. ಅಂತಹ ಸ್ಥಿತಿಯಲ್ಲಿ ನಾನು ಆಕೆಯನ್ನು ಹೇಗೆ ಇಟ್ಟುಕೊಳ್ಳಲು ಸಾಧ್ಯ?"

ಈಗ ಪರಶುರಾಮರ ಕೋಪ ನೆತ್ತಿಗೇರಿತು. ಅವರು ಹೇಳಿದರು- 'ಭೀಷ್ಮ! ನಾನು ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನು ನಾಶಮಾಡಿರುವುದು ನಿನಗೆ ಗೊತ್ತಿಲ್ಲವೇನು?' ಭೀಷ್ಮರು ಹೇಳಿದರು - 'ಗುರುಗಳೇ! ಆ ಕಾಲದಲ್ಲಿ ಭೀಷ್ಮ ಹುಟ್ಟಿರಲಿಲ್ಲ.' ಇದನ್ನು ಕೇಳಿ ಅವರು ಭೀಷ್ಮರನ್ನು ಯುದ್ಧಕ್ಕೆ ಆಹ್ವಾನಿಸಿದರು. ಭೀಷ್ಮರು ಅವರ ಯುದ್ಧದ ಆಹ್ವಾನವನ್ನು ಸ್ವೀಕರಿಸಿದರು. ಗುರು-ಶಿಷ್ಯರಲ್ಲಿ ಭಯಂಕರ ಯುದ್ಧ ಪ್ರಾರಂಭವಾಯಿತು. ಇಪ್ಪತ್ತೂರು ದಿವಸಗಳವರೆಗೆ ಒಂದೇ ಸಮನೇ ಯುದ್ಧ ನಡೆಯುತ್ತಿತ್ತು. ಆದರೆ ಯಾರೂ ಸೋಲಲಿಲ್ಲ. ಕೊನೆಗೆ ದೇವತೆಗಳು ಮತ್ತು ಮುನಿಗಳು ಮಧ್ಯಸ್ಥಿಕೆ ವಹಿಸಿ ಯುದ್ಧವನ್ನು ಸಮಾಪ್ತಿಗೊಳಿಸಿದರು. ಈ ಪ್ರಕಾರ ಭೀಷ್ಮರು ಪರಶುರಾಮರ ಮಾತನ್ನೂ ಕೂಡ ಒಪ್ಪದೆ ತಮ್ಮ ಸತ್ಯವನ್ನು ರಕ್ಷಿಸಿಕೊಂಡರು. ತಮ್ಮ ಅದ್ಭುತ ಪರಾಕ್ರಮದಿಂದ ಪರಶುರಾಮರಂತಹ ಅದ್ವಿತೀಯ ಧನುರ್ಧರರನ್ನೂ ಎದುರಿಸಿ ಅವರಿಂದ ಹೊಗಳಿಸಿಕೊಂಡರು. ಸತ್ಯಪ್ರತಿಜ್ಞೆ ಮತ್ತು ಶೌರ್ಯ ಪರಾಕಾಷ್ಠತೆಯನ್ನು ಮುಟ್ಟಿತು.

ಮಹಾಭಾರತ-ಯುದ್ಧದಲ್ಲಿ ಭೀಷ್ಮರು ಕೌರವಪಕ್ಷದಲ್ಲಿ ಸರ್ವಶ್ರೇಷ್ಠ ಯೋಧರಾಗಿದ್ದರು. ಆದ್ದರಿಂದ ಪ್ರಥಮ ಸೇನಾನಾಯಕರಾಗುವ ಗೌರವ ಇವರಿಗೇ ದೊರೆಯಿತು. ಪಾಂಡವರು ಮತ್ತು ಕೌರವರು ಇಬ್ಬರಿಗೂ ಪಿತಾಮಹರಾದ ಸಂಬಂಧದಿಂದ ಇವರಿಗೆ ಇವರಿಬ್ಬರೊಡನೆಯೂ ಸಮಾನವಾದ ಪ್ರೇಮ ಮತ್ತು ಸಹಾನುಭೂತಿಯಿತ್ತು ಹಾಗೂ ಇಬ್ಬರಿಗೂ ಸಮಾನರೂಪದಿಂದ ಹಿತವನ್ನು ಬಯಸುತ್ತಿದ್ದರು. ಹೀಗಿದ್ದರೂ ಧರ್ಮ ನ್ಯಾಯ ಪಾಂಡವರ ಪಕ್ಷದಲ್ಲಿಯೇ ಇದೆ ಎಂಬುದನ್ನು ತಿಳಿದುಕೊಂಡು, ಇವರು ಪಾಂಡವರೊಡನೆ ವಿಶೇಷವಾದ ಸಹಾನುಭೂತಿ ತೋರಿಸುತ್ತಿದ್ದರು, ಮನಸ್ಸಿನಲ್ಲಿಯೇ ಅವರ ವಿಜಯವನ್ನು ಬಯಸುತ್ತಿದ್ದರು. ಆದರೆ ಹೃದಯಾಂತರಾಳದಲ್ಲಿ ಪಾಂಡವರ ಪಕ್ಷಪಾತಿ ಯಾದರೂ ಯುದ್ಧದಲ್ಲಿ ಎಂದಿಗೂ ಪಾಂಡವರಿಗೆ ರಿಯಾಯಿತಿಯನ್ನು ತೋರಿಸಲಿಲ್ಲ, ಪ್ರಾಣಪಣದಿಂದ ಅವರನ್ನು ಗೆಲ್ಲುವ ಯತ್ನಮಾಡಿದರು. ಯುದ್ಧದ ಹದಿನೆಂಟು ದಿನಗಳಲ್ಲಿ ಹತ್ತು ದಿನಗಳವರೆಗೆ ಒಂಟಿಯಾಗಿ

ಭೀಷ್ಮರೊಬ್ಬರೇ ಕೌರವರ ಸೇನಾನಾಯಕತ್ವವನ್ನು ನಿಭಾಯಿಸಿದರು. ಈ ಮಧ್ಯೆ ಪಾಂಡವ ಪಕ್ಷದ ಬಹಳಷ್ಟು ಸೈನ್ಯವನ್ನು ಸಂಹಾರ ಮಾಡಿಬಿಟ್ಟರು. ವೃದ್ಧರಾಗಿದ್ದರೂ ಕೂಡ ಯುದ್ಧದಲ್ಲಿ ಇವರು ಎಂತಹ ಅದ್ಭುತ ಪರಾಕ್ರಮವನ್ನು ತೋರಿಸಿದರೆಂದರೆ - ಎರಡು ಸಾರಿ ಸ್ವತಃ ಶ್ರೀಕೃಷ್ಣ ಪರಮಾತ್ಮನೇ ಅರ್ಜುನನ ರಕ್ಷಣೆಗಾಗಿ (ಶಸ್ತ್ರವನ್ನು ಹಿಡಿಯದಿರುವ ಪ್ರತಿಜ್ಞೆ ಮಾಡಿದ್ದರೂ ಕೂಡ) ಇವರನ್ನು ಪ್ರತಿಭಟಿಸಲು ಎದುರಾಳಿಯಾಗಿ ನಿಲ್ಲಬೇಕಾಯಿತು. ಅರ್ಜುನನ ಬಲ ಕ್ಷೀಣವಾಗುವುದನ್ನೂ ಕಂಡು ಒಂದು ಸಲ ಆತನು ಚಕ್ರವನ್ನು ತೆಗೆದುಕೊಂಡು ಇವರ ಎದುರಿಗೆ ಓಡಿದನು ಮತ್ತು ಎರಡನೇ ಸಲ ಬಾರಕೋಲನ್ನು ತೆಗೆದುಕೊಂಡು ಆತನು ಭೀಷ್ಮರ ಮೇಲೆ ಏರಿಹೋದನು. ಈ ಪ್ರಕಾರ ಭಕ್ತನ ಪ್ರಾಣರಕ್ಷಣೆ ಮಾಡುತ್ತಾ ಮತ್ತೊಬ್ಬ ಭಕ್ತನ ಗೌರವವನ್ನು ಹೆಚ್ಚಿಸಿ ತನ್ನ ಉಭಯತೋಮುಖೀ ಭಕ್ತವತ್ಸಲತೆಯ ಪರಿಚಯ ಮಾಡಿಕೊಟ್ಟನು. ಕೊನೆಯಲ್ಲಿ ಭೀಷ್ಮರಿದ್ದರೆ ಕೌರವರನ್ನು ಗೆಲ್ಲುವುದು ಅಸಂಭವವೆಂದು ಪಾಂಡವರಿಗೆ ತಿಳಿದಾಗ, ಅವರು ಪಿತಾಮಹರನ್ನು ಅವರ ಮೃತ್ಯುವಿನ ಉಪಾಯವನ್ನು ಕೇಳಿದರು ಮತ್ತು ಅವರು ದಯೆ ತೋರಿಸಿ ಅದನ್ನು ತಿಳಿಸಿದರು. ಅವರು ಹೇಳಿದರು- 'ದ್ರುಪದ ಕುಮಾರ ಶಿಖಂಡಿಯು ಸ್ತ್ರೀರೂಪದಲ್ಲಿ ಹುಟ್ಟಿದ್ದನು. ಅವನು ಈಗ ಪುರುಷನ ರೂಪಕ್ಕೆ ಬದಲಾಯಿಸಿದ್ದರೂ ನನ್ನ ದೃಷ್ಟಿಯಲ್ಲಿ ಅವನು ಹೆಂಗಸೇ. ಇಂತಹ ಪರಿಸ್ಥಿತಿಯಲ್ಲಿ ನಾನು ಅವನ ಮೇಲೆ ಶಸ್ತ್ರ-ಪ್ರಯೋಗ ಮಾಡುವುದಿಲ್ಲ. ಅವನು ನನ್ನ ಎದುರಿಗೆ ಯುದ್ಧಮಾಡಲು ಬಂದರೆ ನಾನು ಶಸ್ತ್ರವನ್ನು ಪ್ರಯೋಗಿಸುವುದಿಲ್ಲ. ಆ ಸಮಯದಲ್ಲಿ ಅರ್ಜುನನು ನನ್ನನ್ನು ಕೊಲ್ಲಬಹುದು'. ಕ್ಷತ್ರಿಯಧರ್ಮದ ಪಾಲನೆ ಮತ್ತು ಶೌರ್ಯದ ಉದಾಹರಣೆ ಇದಕ್ಕಿಂತ ಶ್ರೇಷ್ಠವಾದದ್ದು ಬೇರೆ ಯಾವುದುಂಟು?

ಯುದ್ಧದಲ್ಲಿ ಮರ್ಮಾಘಾತವಾಗಿ ಭೀಷ್ಮರು ಧರೆಗುರುಳಿದಾಗ, ಅವರ ರೋಮ-ರೋಮಕ್ಕೂ ಬಾಣಗಳು ಚುಚ್ಚಿದ್ದವು. ಆ ಬಾಣಗಳ ಮೇಲೆಯೇ ಅವರು ಮಲಗಿಕೊಂಡರು, ಭೂಮಿಗೆ ಅವರ ಸ್ಪರ್ಶವಾಗಲಿಲ್ಲ. ಆ ಸಮಯದಲ್ಲಿ ಸೂರ್ಯನು ದಕ್ಷಿಣಾಯನದಲ್ಲಿದ್ದನು. ದಕ್ಷಿಣಾಯನವು ದೇಹತ್ಯಾಗಕ್ಕೆ ಉಪಯುಕ್ತ

ಕಾಲವಲ್ಲವೆಂದು ತಿಳಿದುಕೊಂಡು ಅವರು ಅಯನಪರಿವರ್ತನೆಯ ಸಮಯದವರೆಗೆ ಅದೇ ಶರಶಯ್ಯೆಯ ಮೇಲೆ ಮಲಗಿದ್ದರು. ಏಕೆಂದರೆ ತಂದೆಯ ವರದಾನದಿಂದ ಮೃತ್ಯು ಅವರ ಅಧೀನದಲ್ಲಿತ್ತು. ಭೀಷ್ಮರು ಬಿದ್ದಕೂಡಲೇ ಆ ದಿನ ಯುದ್ಧ ನಿಂತು ಹೋಯಿತು. ಕೌರವ ಹಾಗೂ ಪಾಂಡವ ವೀರರೆಲ್ಲರೂ ಭೀಷ್ಮರನ್ನು ಮುತ್ತಿಕೊಂಡು ಅವರ ಸುತ್ತಲೂ ನಿಂತುಕೊಂಡರು. ಭೀಷ್ಮರ ಶರೀರವೆಲ್ಲಾ ಬಾಣಗಳ ಮೇಲೆ ಇತ್ತು. ಕೇವಲ ಅವರ ತಲೆ ಕೆಳಗಡೆಗೆ ನೇತಾಡುತ್ತಿತ್ತು. ಅದಕ್ಕೆ ಅವರು ಏನನ್ನಾದರೂ ಆಧಾರ ಬಯಸಿದರು. ಜನರು ಉತ್ತಮೋತ್ತಮ ದಿಂಬುಗಳನ್ನು ತಂದು ಅವರ ಮುಂದಿಟ್ಟರು. ಆದರೆ ಅವುಗಳನ್ನು ಅವರು ಇಷ್ಟಪಡಲಿಲ್ಲ. ಆಗ ಅವರು ಅರ್ಜುನನಿಗೆ ಹೇಳಿದರು- 'ಮಗೂ! ನಿನಗೆ ಕ್ಷತ್ರಿಯಧರ್ಮ ಗೊತ್ತಿದೆ. ನೀನು ನನಗೆ ಅನುರೂಪವಾದ ದಿಂಬನ್ನು ತಂದುಕೊಡು'. ಅರ್ಜುನ ಆ ವೀರಶಿರೋಮಣಿಯ ಅಭಿಪ್ರಾಯವನ್ನು ತಿಳಿದುಕೊಂಡನು. ವೀರರ ಸಂಜ್ಞೆಗಳನ್ನು ವೀರರೇ ಬಲ್ಲರು. ಅವನು ಬಾಣಗಳನ್ನು ಪ್ರಯೋಗಿಸಿ ಭೀಷ್ಮರ ತಲೆಯನ್ನು ಮೇಲೆತ್ತಿದನು. ಆ ಬಾಣಗಳ ಮೇಲೆ ಅವರ ತಲೆ ಕುಳಿತುಕೊಂಡಿತು. ಇತ್ತ ದುರ್ಯೋಧನನು ಬಾಣವನ್ನು ತೆಗೆಯುವುದರಲ್ಲಿ ನಿಪುಣರಾದ ವೈದ್ಯರನ್ನು ಭೀಷ್ಮರ ಚಿಕಿತ್ಸೆಗಾಗಿ ಕರೆಯಿಸಿದನು. ಆದರೆ ಭೀಷ್ಮಪಿತಾಮಹರು ಅವರೆಲ್ಲರನ್ನೂ ಸನ್ಮಾನಪೂರ್ವಕವಾಗಿ ಹಿಂದಕ್ಕೆ ಕಳುಹಿಸಿದರು. ಅಂತಹ ವೀರಗತಿಯನ್ನು ಪಡೆದು ಅವರು ಚಿಕಿತ್ಸೆ ಮಾಡಿಸಿಕೊಳ್ಳುವುದು ತಮಗೆ ಅಪಮಾನವೆಂದು ತಿಳಿದುಕೊಂಡರು. ಜನರೆಲ್ಲಾ ಅವರ ಅಸಾಧಾರಣ ಧರ್ಮನಿಷ್ಠೆ ಮತ್ತು ಸಾಹಸವನ್ನು ನೋಡಿ ಆಶ್ಚರ್ಯ ಪಟ್ಟರು. ಅಂತಹ ಸಮಯದಲ್ಲಿಯೂ ಕೂಡಾ ಅವರು ಯುದ್ಧವನ್ನು ನಿಲ್ಲಿಸುವ ಹಾಗೂ ಎರಡು ಪಕ್ಷಗಳಲ್ಲಿಯೂ ಶಾಂತಿ ಸ್ಥಾಪನೆ ಮಾಡುವ ಪೂರ್ಣ ಪ್ರಯತ್ನ ಮಾಡಿದರು. ಆದರೆ ಅದರಲ್ಲಿ ಅವರು ಸಫಲರಾಗಲಿಲ್ಲ. ವಿಧಿಯ ವಿಧಾನವೇ ಹಾಗಿತ್ತು. ಅದನ್ನು ಯಾರು ತಾನೇ ಉಲ್ಲಂಘಿಸಬಲ್ಲರು?

ಸಹಿಸಲಸಾಧ್ಯವಾದ ಬಾಣಗಳ ನೋವಿನಿಂದ ಭೀಷ್ಮರ ಗಂಟಲು

ಒಣಗುತ್ತಿತ್ತು. ಅವರ ಶರೀರವೆಲ್ಲಾ ಸುಡುತ್ತಿತ್ತು. ಅವರು ಕುಡಿಯಲು ನೀರನ್ನು ಕೇಳಿದರು. ಜನರು ಗಿಂಡಿಗಳಲ್ಲಿ ತಂಪಾದ ಮತ್ತು ಸುಗಂಧಿತ ಜಲವನ್ನು ತುಂಬಿಕೊಂಡು ಬಂದು ಅವರ ಮುಂದೆ ನಿಂತರು. ಭೀಷ್ಮರು ಅದನ್ನು ಹಿಂದಿರುಗಿಸಿದರು. ಮೊದಲು ಉಪಯೋಗಿಸಿದ ಮಾನವೀಯ ಫಲಾನುಭವವನ್ನು ಈಗ ಸ್ವೀಕರಿಸಲಾರೆನು. ಏಕೆಂದರೆ ಈಗ ನಾನು ಶರಶಯ್ಯೆಯ ಮೇಲೆ ಮಲಗಿರುವೆನು. ಆಗ ಅರ್ಜುನನನ್ನು ಕರೆದು ಅವರು ಹೇಳಿದರು- 'ಮಗೂ! ನೀನು ನನಗೆ ವಿಧಿವತ್ತಾಗಿ ಜಲವನ್ನು ಕುಡಿಸಬಲ್ಲೆಯಾ.' ಅರ್ಜುನನು 'ಆಗಲಿ ಆಜ್ಞೆ ಶಿರೋಧಾರ್ಯ'- ಎಂದು ಹೇಳಿ ತನ್ನ ಬತ್ತಳಿಕೆಯಿಂದ ಒಂದು ಥಳಥಳಿಸುವ ಬಾಣವನ್ನು ತೆಗೆದು ಅದನ್ನು ಪರ್ಜನ್ಯಾಸ್ತ್ರದೊಡನೆ ಸಂಯೋಜನೆ ಮಾಡಿ ಭೀಷ್ಮರ ಪಕ್ಕದ ನೆಲಕ್ಕೆ ಪ್ರಯೋಗಿಸಿದನು. ತಕ್ಷಣ ಎಲ್ಲರೂ ನೋಡುತ್ತಿದ್ದ ಹಾಗೇ ಭೂಮಿಯಲ್ಲಿಂದ ದಿವ್ಯ ಜಲದ ಒಂದು ಧಾರೆ ಹೊರಟು ಅದು ಸರಿಯಾಗಿ ಭೀಷ್ಮರ ಬಾಯಿಗೆ ಬೀಳಲಾರಂಭಿಸಿತು. ಅಮೃತಕ್ಕೆ ಸಮಾನವಾದ ಆ ಜಲವನ್ನು ಕುಡಿದು ಭೀಷ್ಮರು ತೃಪ್ತರಾದರು. ಅರ್ಜುನನ ಆ ಕಾರ್ಯವನ್ನು ಅವರು ಬಹಳವಾಗಿ ಪ್ರಶಂಸಿಸಿದರು. ಆ ಸಮಯದಿಂದಲೇ ಭೀಷ್ಮರು ಅನ್ನ-ನೀರನ್ನು ತ್ಯಾಗಮಾಡಿದರು ಮತ್ತು ಅವರು ಜೀವಿಸಿರುವವರೆಗೂ ಬಾಣಗಳ ಆಘಾತದ ನೋವಿನ ಜೊತೆಗೆ ಹಸಿವು-ಬಾಯಾರಿಕೆಯ ಸಹಿಸಲಸಾಧ್ಯವಾದ ವೇದನೆಯನ್ನೂ ಸಹ ಸಹಿಸಿಕೊಳ್ಳುತ್ತಿದ್ದರು. ಈ ಪ್ರಕಾರ ಅವರು ಶೌರ್ಯದ ಜೊತೆಗೆ ಧೈರ್ಯ ಹಾಗೂ ಸಹನಶೀಲತೆಯ ಪರಾಕಾಷ್ಠೆಯನ್ನೂ ತೋರಿಸಿದರು.

ಉದಾರ ಮನಸ್ಸಿನ ಭೀಷ್ಮರು ಕೇವಲ ಆದರ್ಶ ಪಿತೃಭಕ್ತ, ಆದರ್ಶ ಸತ್ಯ ಪ್ರತಿಜ್ಞ ಮತ್ತು ಆದರ್ಶವೀರನೇ ಆಗಿರಲಿಲ್ಲ, ಜೊತೆಗೆ ಶಾಸ್ತ್ರಗಳ ಮಹಾನ್ ಜ್ಞಾನೀ, ಧರ್ಮ ಮತ್ತು ಈಶ್ವರನ ತತ್ತ್ವಗಳನ್ನು ಬಲ್ಲವರೂ ಹಾಗೂ ಮಹಾನ್ ಭಗದ್ಭಕ್ತರೂ ಆಗಿದ್ದರು. ಅವರ ಅಗಾಧ ಜ್ಞಾನವನ್ನು ಸ್ವತಃ ಭಗವಂತನು ಪ್ರಶಂಸಿಸುತ್ತಾ ಹೀಗೆ ಹೇಳಿದ್ದಾನೆ- 'ನೀವು ಈ ಲೋಕದಿಂದ

ಹೊರಟು ಹೋದ ಮೇಲೆ ಎಲ್ಲಾ ಜ್ಞಾನವೂ ಮಾಯವಾಗಿ ಹೋಗುವುದು; ಪ್ರಪಂಚದಲ್ಲಿರುವ ಸಂದೇಹಾಸ್ಪದ ವಿಷಗಳಿಗೆ ಸಮಾಧಾನ ನೀಡಿ ಬಗೆಹರಿಸುವವರು ನಿಮ್ಮ ಹೊರತು ಬೇರೆ ಯಾರೂ ಇಲ್ಲ' ಇತ್ಯಾದಿ. ಶ್ರೀಕೃಷ್ಣಪರಮಾತ್ಮನ ಪ್ರೇರಣೆ ಮತ್ತು ಶಕ್ತಿಯಿಂದ ಇವರು ಯುಧಿಷ್ಠಿರನಿಗೆ ಒಂದೇ ಸವನೇ ಅನೇಕ ದಿನಗಳವರೆಗೆ ವರ್ಣಾಶ್ರಮಧರ್ಮ, ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ, ಶ್ರಾದ್ಧಧರ್ಮ, ದಾನಧರ್ಮ, ಸ್ತ್ರೀಧರ್ಮ ಮುಂತಾದ ಅನೇಕ ಮಹತ್ವಪೂರ್ಣ ವಿಷಯಗಳನ್ನು ಉಪದೇಶ ಮಾಡಿದರು. ಇವೆಲ್ಲಾ ಮಹಾಭಾರತದ ಶಾಂತಿಪರ್ವ ಹಾಗೂ ಅನುಶಾಸನಪರ್ವದಲ್ಲಿ ಸಂಗ್ರಹಿಸಲ್ಪಟ್ಟಿವೆ. ಸಾಕ್ಷಾತ್ ಧರ್ಮದ ಅಂಶದಿಂದ ಉತ್ಪನ್ನನಾದ ಮತ್ತು ಧರ್ಮದ ಪ್ರತ್ಯಕ್ಷಮೂರ್ತಿ ಮಹಾರಾಜ ಯುಧಿಷ್ಠಿರನ ಧಾರ್ಮಿಕ ವಿಷಯಗಳ ಸಂದೇಹಗಳನ್ನು ನಿವಾರಿಸುವುದೇ ಭೀಷ್ಮರ ಕೆಲಸವಾಗಿತ್ತು. ಇವರ ಉಪದೇಶವನ್ನು ಕೇಳುವುದಕ್ಕಾಗಿ ವ್ಯಾಸರೇ ಮುಂತಾದ ಮಹರ್ಷಿಗಳೂ ಕೂಡ ನೆರೆದಿದ್ದರು.

ಶ್ರೀಕೃಷ್ಣಪರಮಾತ್ಮನ ಮಹಾತ್ಮ್ಯ ಮತ್ತು ಪ್ರಭಾವದ ಜ್ಞಾನ ಭೀಷ್ಮರಿಗೆ ಇದ್ದಂತೆ ಆ ಕಾಲದಲ್ಲಿ ಬಹಳ ಜನಕ್ಕಿರಲಿಲ್ಲ, ಅರ್ಥಾತ್ ಅದನ್ನು ಬಲ್ಲವರು ತೀರಾ ಕಡಿಮೆ ಜನರಿದ್ದರು. ಧೃತರಾಷ್ಟ್ರ ಮತ್ತು ದುರ್ಯೋಧನರಿಗೆ ಇವರು ಅನೇಕ ಸಲ ಶ್ರೀಕೃಷ್ಣನ ಮಹಿಮೆಯನ್ನು ತಿಳಿಸಿದ್ದರು. ರಾಜಸೂಯ ಯಜ್ಞದಲ್ಲಿ ಅಗ್ರಪೂಜೆಗಾಗಿ ಶ್ರೀಕೃಷ್ಣನನ್ನೇ ಸರ್ವೋತ್ತಮ ಪಾತ್ರನೆಂದು ನಿರ್ಣಯಿಸುತ್ತಾ ಇವರು ತುಂಬಿದ ಸಭೆಯಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ಹಾಡಿ ಹೊಗಳಿದ್ದರು ಮತ್ತು ಆತನನ್ನು ಸಾಕ್ಷಾತ್ ಪರಮೇಶ್ವರನೆಂದು ತಿಳಿ ಹೇಳಿದ್ದರು. ಶ್ರೀಕೃಷ್ಣನು ಚಕ್ರವನ್ನು ತೆಗೆದುಕೊಂಡು ತನ್ನೆಡೆಗೆ ಓಡಿಬಂದಾಗ ಇವರು ಆತನ ಕೈಯಿಂದ ಸಾಯುವುದನ್ನು ತಮ್ಮ ಗೌರವವೆಂದು ತಿಳಿದುಕೊಂಡು ಶಸ್ತ್ರಗಳ ಮೂಲಕವೇ ಆತನ ಪೂಜೆ ಮಾಡುವುದಕ್ಕಾಗಿ ಆತನನ್ನು ಆವಾಹನೆ ಮಾಡಿದರು. ಇವರು ಯುಧಿಷ್ಠಿರನಿಗೆ ತಿಳಿಸಿದ ಭಗವಾನ್ ವಿಷ್ಣುವಿನ ಸಹಸ್ರನಾಮ ಸ್ತೋತ್ರದಲ್ಲಿ

ಇವರ ಭಗವದ್ಭಕ್ತಿ ಹಾಗೂ ಭಗವತ್ತತ್ವಜ್ಞಾನ ತುಂಬಿತುಳುಕುತ್ತದೆ. ಇಂದಿಗೂ ಆ ವಿಷ್ಣು ಸಹಸ್ರನಾಮವು ಭಕ್ತರಲ್ಲಿ ಬಹಳ ಗೌರವವನ್ನು ಪಡೆದಿದೆ. ಭಗವಾನ್ ಶಂಕರಾಚಾರ್ಯರು ಗೀತಾ, ಉಪನಿಷತ್ ಮತ್ತು ಬ್ರಹ್ಮಸೂತ್ರಗಳಂತೆ ಅದರ ಮೇಲೆಯೂ ವಿಸ್ತೃತವಾದ ಭಾಷ್ಯವನ್ನು ಬರೆದಿದ್ದಾರೆ. ಅವರ ಭಕ್ತಿಯ ಫಲವಾಗಿಯೇ ಸಾಕ್ಷಾತ್ ಶ್ರೀಕೃಷ್ಣಪರಮಾತ್ಮನು ಅಂತ್ಯಕಾಲದಲ್ಲಿ ಅವರಿಗೆ ದರ್ಶನಕೊಟ್ಟು ಕೃತಾರ್ಥರನ್ನಾಗಿ ಮಾಡಿದನು. ಈ ಪ್ರಕಾರ ಭಕ್ತಿ, ಜ್ಞಾನ, ಸದಾಚಾರ ಹೀಗೆ ಯಾವುದೇ ವಿಷಯದ ಕುರಿತು ನಾವು ಭೀಷ್ಮರ ಚರಿತ್ರೆಯ ಮೇಲೆ ದೃಷ್ಟಿ ಹಾಯಿಸಿದರೂ ನಾವು ಅವರ ಆದರ್ಶವನ್ನು ಪಡೆಯುತ್ತೇವೆ. ಭೀಷ್ಮರ ಶ್ರೇಣಿಯ ಮಹಾಪುರುಷರು ಪ್ರಪಂಚದ ಇತಿಹಾಸದಲ್ಲಿ ಅಲ್ಪ-ಸ್ವಲ್ಪವೇ ಕಂಡು ಬರುತ್ತಾರೆ. ಭೀಷ್ಮರು ಪುತ್ರಹೀನರಾಗಿಯೇ ಸತ್ತಿದ್ದರೂ ಮೂರು ವರ್ಣದ ಎಲ್ಲಾ ಹಿಂದೂಗಳೂ ಇಂದಿನವರೆಗೂ ಪಿತೃ-ತರ್ಪಣ ಕೊಡುವ ಸಮಯದಲ್ಲಿ ಇವರಿಗೂ ಜಲವನ್ನರ್ಪಿಸುತ್ತಾರೆ. ಈ ಗೌರವ ಭಾರತದ ಇತಿಹಾಸದಲ್ಲಿ ಬೇರೆ ಯಾವ ಮನುಷ್ಯನಿಗೂ ದೊರೆತಿಲ್ಲ. ಆದುದರಿಂದ ಇಡೀ ಜಗತ್ತು ಇಂದೂ ಕೂಡ ಇವರನ್ನು ಪಿತಾಮಹ ಎಂದು ಕರೆಯುತ್ತದೆ. ಅಪುತ್ರರಾದ ಭೀಷ್ಮರ ಸದ್ಗತಿಯ ಕುರಿತು ದೊಡ್ಡ-ದೊಡ್ಡ ಪುತ್ರವಂತರಿಗೂ ಕೂಡ ಅಸೂಯೆ ಉಂಟಾಗುತ್ತದೆ.

❑❑❑

೩. ಧರ್ಮರಾಜ ಯುಧಿಷ್ಠಿರ

ಮಹಾರಾಜ ಯುಧಿಷ್ಠಿರನು ಭೀಷ್ಮರಂತೆಯೇ ಅತ್ಯಂತ ಉಚ್ಚ ಶ್ರೇಣಿಯ ಮಹಾಪುರುಷನಾಗಿದ್ದನು. ಈತನು ಸಾಕ್ಷಾತ್ ಧರ್ಮದ ಅಂಶದಿಂದ ಜನಿಸಿದ್ದನು. ಈತನು ಧರ್ಮದ ಮೂರ್ತಿಮಂತ ಸ್ವರೂಪವಾಗಿದ್ದನು. ಆದ್ದರಿಂದ ಜನರು ಈತನನ್ನು ಧರ್ಮರಾಜ ಎಂದು ಕರೆಯುತ್ತಾರೆ. ಈತನಲ್ಲಿ ಧೈರ್ಯ, ಸ್ಥಿರತೆ, ಸಹಿಷ್ಣುತೆ, ನಮ್ರತೆ, ದಯಾಪರತೆ, ಅವಿಚಲ ಪ್ರೇಮ ಮುಂತಾದ ಅನೇಕ ಲೋಕೋತ್ತರ ಅರ್ಥಾತ್ ಅಲೌಕಿಕ ಗುಣಗಳಿದ್ದವು. ಈತನು ತನ್ನ ಶೀಲ, ಸದಾಚಾರ ಹಾಗೂ ವಿಚಾರಶೀಲತೆಯ ಕಾರಣ ಬಾಲ್ಯದಲ್ಲಿಯೇ ಅತ್ಯಧಿಕ ಲೋಕಪ್ರಿಯನಾದನು. ಈತನಿನ್ನೂ ಬಹಳ ಚಿಕ್ಕವನಿದ್ದಾಗಲೇ ಇವನ ತಂದೆ ಮಹಾತ್ಮಾ ಪಾಂಡು ಸ್ವರ್ಗವಾಸಿಯಾದನು. ಆಗಿನಿಂದಲೇ ಇವನು ತನ್ನ ದೊಡ್ಡಪ್ಪ ಧೃತರಾಷ್ಟ್ರನನ್ನೇ ತಂದೆಯಂತೆ ಭಾವಿಸಿ ಆತನನ್ನು ಬಹಳ ಗೌರವದಿಂದ ಕಾಣುತ್ತಿದ್ದು, ಅವರ ಯಾವ ಆಜ್ಞೆಯನ್ನೂ ಉಲ್ಲಂಘಿಸುತ್ತಿರಲಿಲ್ಲ. ಆದರೆ ಧೃತರಾಷ್ಟ್ರನು ತನ್ನ ಕುಟಿಲ ಸ್ವಭಾವದ ಕಾರಣ ಈತನ ಗುಣಗಳ ಪ್ರಶಂಸೆಯನ್ನು ಕೇಳಿ-ಕೇಳಿ ಮನಸ್ಸಿನಲ್ಲಿಯೇ ಈತನನ್ನು ದ್ವೇಷಿಸುತ್ತಿದ್ದನು. ಅವನ ಮಗ ದುರ್ಯೋಧನನು ಹೀಗೆ ಯೋಚಿಸಿದನು- 'ಯಾವ ರೀತಿಯಿಂದಲಾದರೂ ಕೆಲವು ದಿನ ಪಾಂಡವರನ್ನು ಹಸ್ತಿನಾಪುರದಿಂದ ದೂರ ಕಳುಹಿಸಿದರೆ, ಅವರು ಇಲ್ಲದಿರುವಾಗ ಅವರ ಪಿತ್ರಾರ್ಜಿತ ಅಧಿಕಾರವನ್ನು ಕಿತ್ತುಕೊಂಡು ನಾನೇ ರಾಜನಾಗಿ ಬಿಡಬೇಕು.' ಅವನು ತನ್ನ ಕುರುಡ ಮತ್ತು ಮತಿಹೀನ ತಂದೆಯನ್ನು ಭ್ರಾಂತಿಗೊಳಿಸಿ ಇದಕ್ಕೆ ಒಪ್ಪಿಗೆ ಪಡೆದುಕೊಂಡನು. ಧೃತರಾಷ್ಟ್ರನು ಪಾಂಡವರನ್ನು ಕರೆಯಿಸಿ ಅವರು ಉತ್ಸವ ನೋಡಬೇಕೆಂಬ ನೆಪಮಾಡಿ ವಾರಣಾವತಕ್ಕೆ ಕಳುಹಿಸುವ ಪ್ರಸ್ತಾಪವನ್ನು ಮುಂದಿಟ್ಟನು. ಅವರು ಆತನ ಆಜ್ಞೆಯೆಂದು ತಿಳಿದುಕೊಂಡು ಅದಕ್ಕೆ ಯಾವುದೇ ಆಕ್ಷೇಪಣೆ ಮಾಡದೆ ಸುಮ್ಮನೆ ತಮ್ಮ ತಾಯಿ ಕುಂತಿಯೊಡನೆ ಐವರು ಸಹೋದರರೂ ವಾರಣಾವತಕ್ಕೆ ಹೊರಟು ಹೋದರು. ಇವರನ್ನು

ಸುಟ್ಟು ಹಾಕುವುದಕ್ಕಾಗಿ ದುರ್ಯೋಧನನು ಅಲ್ಲಿ ಒಂದು ಅರಗಿನ ಮನೆಯನ್ನು ಕಟ್ಟಿಸಿದ್ದನು. ಅದರಲ್ಲಿಯೇ ಅವರು ಉಳಿದು ಕೊಂಡಿರುವಂತೆ ಆಜ್ಞೆಯಾಯಿತು. ಚಿಕ್ಕಪ್ಪ ವಿದುರನ ಸಹಾಯದಿಂದ ಇವರೆಲ್ಲರೂ ಅಲ್ಲಿಂದ ಹೇಗೋ ಪ್ರಾಣ ಉಳಿಸಿಕೊಂಡು ಪಾರಾಗಿ ಕಾಡನ್ನು ಆಶ್ರಯಿಸಿದರು. ಅನಂತರ ಧೃತರಾಷ್ಟ್ರನ ಪುತ್ರರು ಇವರು ಸತ್ತರೆಂದು ತಿಳಿದುಕೊಂಡು ಹಸ್ತಿನಾಪುರದ ರಾಜ್ಯದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡರು.

ಅನೇಕ ದಿನಗಳ ನಂತರ ದ್ರೌಪದಿಯ ಸ್ವಯಂವರದಲ್ಲಿ ಪಾಂಡವರ ರಹಸ್ಯ ಬಯಲಾದಾಗ ಧೃತರಾಷ್ಟ್ರನು ವಿದುರನನ್ನು ಕಳುಹಿಸಿ ಪಾಂಡವರನ್ನು ಹಸ್ತಿನಾಪುರಕ್ಕೆ ಕರೆಯಿಸಿಕೊಂಡನು. ತನ್ನ ಮಕ್ಕಳೊಡನೆ ಅವರ ಜಗಳವನ್ನು ಹೋಗಲಾಡಿಸುವುದಕ್ಕಾಗಿ ಅರ್ಧ ರಾಜ್ಯವನ್ನು ತೆಗೆದುಕೊಂಡು ಖಾಂಡವ ಪ್ರಸ್ಥದಲ್ಲಿ ಇರುವಂತೆ ಪ್ರಸ್ತಾವನ್ನು ಅವರ ಮುಂದಿಟ್ಟನು. ಯುಧಿಷ್ಠಿರನು ಅವನ ಈ ಆಜ್ಞೆಯನ್ನೂ ಸ್ವೀಕರಿಸಿದನು. ಅವನು ತನ್ನ ಸಹೋದರರ ಸಂಗಡ ಖಾಂಡವಪ್ರಸ್ಥದಲ್ಲಿ ನೆಲೆಸಿದನು. ಅಲ್ಲಿ ಇವರು ತಮ್ಮ ಬೇರೆಯಾದ ರಾಜಧಾನಿಯನ್ನು ಸ್ಥಾಪಿಸಿಕೊಂಡರು. ಅದಕ್ಕೆ ಇಂದ್ರಪ್ರಸ್ಥವೆಂದು ಹೆಸರಿಡಲಾಯಿತು. ಅಲ್ಲಿ ಇವರು ಒಂದು ರಾಜಸೂಯ ಯಜ್ಞಮಾಡಿದರು. ದೊಡ್ಡ-ದೊಡ್ಡ ರಾಜರುಗಳು ಬಂದು ಭಾಗವಹಿಸಿ ಇವರಿಗೆ ಬಹುಮೂಲ್ಯ ಕಾಣಿಕೆಗಳನ್ನು ಕೊಟ್ಟರು. ಮತ್ತು ಈತನನ್ನು ತಮ್ಮ ಚಕ್ರವರ್ತಿಯೆಂದು ಸ್ವೀಕರಿಸಿದರು.

ಆದರೆ ಧೃತರಾಷ್ಟ್ರನ ಮಕ್ಕಳು ಅಲ್ಲಿಯೂ ಸಹ ಇವರನ್ನು ಇರಗೊಡಲಿಲ್ಲ. ದುರ್ಯೋಧನನು ಇವರ ವೈಭವವನ್ನು ನೋಡಿ ಅಸೂಯೆ ಪಟ್ಟನು. ಅವನು ಒಂದು ವಿಶಾಲವಾದ ಸಭಾಭವನವನ್ನು ಸಿದ್ಧಪಡಿಸಿ ಪಾಂಡವರನ್ನು ಜೂಜಿಗೆ ಆಮಂತ್ರಿಸಿದನು. ಜೂಜು ಕೆಟ್ಟದ್ದೆಂದು ತಿಳಿದಿದ್ದರೂ ಧೃತರಾಷ್ಟ್ರನ ಆಜ್ಞೆಯೆಂದು ಭಾವಿಸಿ ಯುಧಿಷ್ಠಿರನು ಅವನ ನಿಮಂತ್ರಣವನ್ನು ಸ್ವೀಕರಿಸಿದನು. ಧರ್ಮರಾಜನು ಅಲ್ಲಿ ದುರ್ಯೋಧನನ ಮಾವ ಶಕುನಿಯ ಮೋಸದ ಚಲನೆಗಳಿಂದ ಸರ್ವಸ್ವವನ್ನೂ ಸೋತುಬಿಟ್ಟನು. ತುಂಬಿದ ಸಭೆಯಲ್ಲಿ ರಾಣೀ

ದ್ರೌಪದಿಯನ್ನು ಅಪಮಾನಗೊಳಿಸಲಾಯಿತು. ಇಷ್ಟಾದರೂ ಕೂಡ ಧೃತರಾಷ್ಟ್ರನ ಬಗ್ಗೆ ಯುಧಿಷ್ಠಿರನಿಗೆ ಹಿಂದಿನ ಭಾವನೆಯೇ ಇತ್ತು. ಧೃತರಾಷ್ಟ್ರನೂ ಸಹ ಅವರಿಗೆ ಅವರ ಎಲ್ಲಾ ಐಶ್ವರ್ಯ ಮತ್ತು ರಾಜ್ಯವನ್ನು ಮರಳಿಕೊಟ್ಟು ಅವರನ್ನು ಇಂದ್ರಪ್ರಸ್ಥಕ್ಕೆ ಕಳುಹಿಸಿಕೊಟ್ಟನು. ಆದರೆ ದುರ್ಯೋಧನನಿಗೆ ಇದು ಸಹಿಸಲಾಗಲಿಲ್ಲ. ಅವನು ಧೃತರಾಷ್ಟ್ರನಿಗೆ ತಿಳಿಸಿ - ಏನೇನೋ ಹೇಳಿ ಒಪ್ಪಿಸಿ ಪಾಂಡವರಲ್ಲಿಗೆ ದೂತನನ್ನು ಕಳುಹಿಸಿ ಪುನಃ ದ್ಯೂತಕ್ಕಾಗಿ ಕರೆಯಿಸಲಾಯಿತು; ಅವನೊಡನೆ ವನವಾಸದ ಶರತ್ತಿನ ಮೇಲೆ ಪುನಃ ಜೂಜು ಆಡಲಾಯಿತು. ಯುಧಿಷ್ಠಿರನು ಜೂಜಿನ ದುಷ್ಪರಿಣಾಮವನ್ನು ಒಂದು ಸಲ ಅನುಭವಿಸಿದ್ದನು ಮತ್ತು ಕೌರವರ ನೀತಿಯೂ ಗೊತ್ತಾಗಿ ಹೋಗಿತ್ತು. ಹೀಗಿದ್ದರೂ ತಮ್ಮ ದೊಡ್ಡಪ್ಪನ ಆಜ್ಞೆಯನ್ನು ನಿರಾಕರಿಸಲಾಗಲಿಲ್ಲ ಮತ್ತು ದಾರಿ ಮಧ್ಯದಿಂದಲೇ ಹಿಂದಿರುಗಿ ಬಂದನು. ಈ ಸಲವೂ ಯುಧಿಷ್ಠಿರನೇ ಸೋತನು ಮತ್ತು ಅದರ ಫಲವಾಗಿ ಆತನು ಸರ್ವಸ್ವವನ್ನೂ ಬಿಟ್ಟು ತನ್ನ ಸಹೋದರರು ಹಾಗೂ ರಾಣಿ ದ್ರೌಪದಿಯ ಸಂಗಡ ಹನ್ನೆರಡು ವರ್ಷಗಳ ವನವಾಸ ಹಾಗೂ ಒಂದು ವರ್ಷದ ಅಜ್ಞಾತವಾಸಕ್ಕೆ ಹೋಗಬೇಕಾಯಿತು. ತಂದೆಯ ಆಜ್ಞಾಪಾಲನಾ ಧರ್ಮದ ಆಚರಣೆಗಾಗಿ ಅವನು ಎಲ್ಲವನ್ನೂ ಸಹಿಸಿಕೊಂಡನು. ಅವನ ಪಿತೃಭಕ್ತಿಯು ಧನ್ಯವಾಯಿತು.

ಮಹಾರಾಜ ಯುಧಿಷ್ಠಿರನು ಬಹಳ ಧರ್ಮಭೀರು ಮತ್ತು ಸಹನಶೀಲ ನಾಗಿದ್ದನು. ಆತನು ಎಲ್ಲ ರೀತಿಯ ಹಾನಿಯನ್ನು ಸಹಿಸಿಕೊಳ್ಳುತ್ತಿದ್ದನು; ಆದರೆ ಧರ್ಮದ ಹಾನಿಯನ್ನು ಆತನಿಗೆ ಸಹಿಸಲಾಗುತ್ತಿರಲಿಲ್ಲ. ಮೊದಲ ಸಲ ಜೂಜಿನಲ್ಲಿ ಆತನು ತನ್ನ ನಾಲ್ವರು ತಮ್ಮಂದಿರನ್ನು ಹಾಗೂ ತನ್ನನ್ನು ಮತ್ತು ದ್ರೌಪದಿಯನ್ನೂ ಸೋತಾಗಲೂ ಕೌರವರು ತುಂಬಿದ ಸಭೆಯಲ್ಲಿ ದ್ರೌಪದಿಯನ್ನು ತಿರಸ್ಕಾರ ಮಾಡಿದಾಗಲೂ ಧರ್ಮಪಾಶದಿಂದ ಬಂಧಿತನಾಗಿದ್ದ ಕಾರಣ ಆತನು ಧ್ವನಿ ಎತ್ತಲಿಲ್ಲ ಮತ್ತು ಸದ್ದಿಲ್ಲದೆ ಎಲ್ಲವನ್ನೂ ಸಹಿಸಿಕೊಂಡನು. ಸಾಧಾರಣ ಮನುಷ್ಯನೂ ಕೂಡ ತನ್ನ ಎದುರಿಗೆ ತನ್ನ ಪತ್ನಿಯ ಇಂತಹ ದುರ್ಗತಿಯನ್ನು ನೋಡಲಾರನು. ಆತನ ಭಯದಿಂದ ಅವನ ತಮ್ಮಂದಿರ

ಮನಸ್ಸು ಕುದಿಯುತ್ತಿದ್ದರೂ ಏನೂ ಮಾತನಾಡಲಿಲ್ಲ. ಇವರು ಮನಸ್ಸು ಮಾಡಿದ್ದರೆ ಬಲಪೂರ್ವಕವಾಗಿ ಆ ಅಮಾನುಷ ಅತ್ಯಾಚಾರವನ್ನು ತಡೆದುಬಿಡುತ್ತಿದ್ದರು. ಆದರೆ ಧರ್ಮರಾಜನು ದ್ರೌಪದಿಯನ್ನು ಸ್ವೇಚ್ಛೆಯಿಂದ ಪಣಕ್ಕಿಟ್ಟು ಸೋತಿದ್ದಾನೆಂದು ಯೋಚಿಸಿ ಇವರೆಲ್ಲಾ ಸುಮ್ಮನಿದ್ದರು. ಇವರ ಎದುರಿನಲ್ಲಿ ಯಾರಾದರೂ ದ್ರೌಪದಿಯನ್ನು ಕಣ್ಣೆತ್ತಿ ನೋಡಿದರೂ ಅವನು ಪ್ರಾಣ ಕಳೆದುಕೊಳ್ಳಬೇಕಾಗುತ್ತಿತ್ತು. ಅದೇ ದ್ರೌಪದಿಯ ದುರ್ಗತಿಯನ್ನು ತಮ್ಮ ಕಣ್ಣಿಂದ ನೋಡಿದರೂ ಅದರ ಸೇಡನ್ನು ತೀರಿಸಲು ಆಗಲಿಲ್ಲ. ಶಕುನಿಯು ಅವನನ್ನು ಕಪಟದಿಂದ ಗೆದ್ದಿದ್ದಾನೆಂದು ಯುಧಿಷ್ಠಿರನೂ ತಿಳಿದುಕೊಂಡಿದ್ದನು. ಹೀಗಿದ್ದರೂ ಅವನು ತನ್ನಿಂದ ಧರ್ಮದ ತ್ಯಾಗವು ಉಚಿತವೆಂದು ತಿಳಿಯಲಿಲ್ಲ. ಆತನು ಎಲ್ಲವನ್ನೂ ಸಹಿಸಿಕೊಂಡು ಸತ್ಯ ಮತ್ತು ಧರ್ಮದ ರಕ್ಷಣೆ ಮಾಡಿದನು. ಧರ್ಮ ಪ್ರೇಮ ಮತ್ತು ಸಹನ ಶೀಲತೆಗೆ ಇದಕ್ಕಿಂತ ದೊಡ್ಡ ಉದಾಹರಣೆ ಜಗತ್ತಿನಲ್ಲಿ ಬಹುಶಃ ಬೇರೆ ಇರಲಾರದು.

ಪಾಂಡವರು ಎರಡನೇ ಸಾರಿಯೂ ಜೂಜಿನಲ್ಲಿ ಸೋತು ಕಾಡಿಗೆ ಹೊರಟ ಸಮಯದಲ್ಲಿ ಹಸ್ತಿನಾಪುರದ ಪ್ರಜೆಗಳಿಗೆಲ್ಲಾ ಬಹಳ ದುಃಖವಾಯಿತು. ಜನರೆಲ್ಲಾ ಕೌರವರನ್ನು ದೂಷಿಸಿದರು. ನಗರ ನಿವಾಸಿಗಳೆಲ್ಲಾ ಅಧಿಕ ಸಂಖ್ಯೆಯಲ್ಲಿ ಮನೆ-ಮಠಗಳನ್ನು ಬಿಟ್ಟು ಇವರ ಸಂಗಡ ಹೋಗುವುದಕ್ಕಾಗಿ ಇವರ ಹಿಂದೆಯೇ ಹೊರಟರು. ಅಂತಹ ಸಮಯದಲ್ಲಿಯೂ ಧರ್ಮರಾಜನು ಕೌರವರ ವಿರುದ್ಧ ಒಂದು ಶಬ್ದವನ್ನೂ ಕೂಡಾ ಆಡಲಿಲ್ಲ ಮತ್ತು ಜನರನ್ನೆಲ್ಲಾ ಸಮಾಧಾನಪಡಿಸಿ ತಿಳಿಯಹೇಳಿ ಹಿಂದಕ್ಕೆ ಕಳುಹಿಸಿದನು. ಆದರೂ ಬಹಳ ಜನ ಬ್ರಾಹ್ಮಣರು ಒತ್ತಾಯದಿಂದ ಅವರ ಜೊತೆಗೂಡಿದರು. ಆಗ ಧರ್ಮರಾಜನಿಗೆ ಒಂದು ಚಿಂತೆ ತಲೆದೋರಿತು. 'ಇಷ್ಟೊಂದು ಜನ ಬ್ರಾಹ್ಮಣರು ನನ್ನ ಸಂಗಡ ಬರುತ್ತಿದ್ದಾರೆ, ಇವರ ಊಟದ ವ್ಯವಸ್ಥೆ ಏನು?' ಈತನಿಗೆ ತನ್ನ ಕಷ್ಟಗಳ ಬಗೆಗೆ ಕಿಂಚಿತ್ತೂ ಚಿಂತೆಯಿರಲಿಲ್ಲ; ಆದರೆ ಬೇರೆಯವರ ಕಷ್ಟವನ್ನು ನೋಡಲಾಗುತ್ತಿರಲಿಲ್ಲ. ಕೊನೆಗೆ ಈತನು ಸೂರ್ಯದೇವನನ್ನು ಆರಾಧಿಸಿ

ಆತನಿಂದ ಒಂದು ಅಪೂರ್ವ ಅಕ್ಷಯ ಪಾತ್ರೆಯನ್ನು ಪಡೆದನು. ಅದರಲ್ಲಿ ಮಾಡಿದ ಸ್ವಲ್ಪ ಅಡಿಗೆಯೂ ಸಹ ಅಕ್ಷಯವಾಗುತ್ತಿತ್ತು. ಅದರಿಂದ ಇವರು ಕಾಡಿನಲ್ಲಿರುತ್ತಿದ್ದರೂ ಸಹ ಅತಿಥಿ ಬ್ರಾಹ್ಮಣರಿಗೆ ಭೋಜನ ಮಾಡಿಸಿ ಅನಂತರ ಇವರು ಊಟ ಮಾಡುತ್ತಿದ್ದರು. ವನವಾಸದ ಕಷ್ಟವನ್ನು ಅನುಭವಿಸುತ್ತಿದ್ದರೂ ಈತನು ಆತಿಥ್ಯ-ಧರ್ಮವನ್ನು ಯಥೋಚಿತವಾಗಿ ಪಾಲನೆ ಮಾಡಿದನು. ಮಹಾರಾಜ ಯುಧಿಷ್ಠಿರನ ಈ ಧರ್ಮ-ಪ್ರೇಮದಿಂದ ಆಕರ್ಷಿತರಾಗಿ ದೊಡ್ಡ-ದೊಡ್ಡ ಮಹರ್ಷಿಗಳು ಇವರ ವನವಾಸದ ಸಮಯದಲ್ಲಿ ಇವರ ಬಳಿ ಬಂದು ಇರುತ್ತಿದ್ದರು. ಯಜ್ಞಾದಿ ನಾನಾ ಪ್ರಕಾರಗಳ ಧರ್ಮಾನುಷ್ಠಾನಗಳನ್ನು ಮಾಡುತ್ತಿದ್ದರು.

ಮಹಾರಾಜ ಯುಧಿಷ್ಠಿರನು ಅಜಾತಶತ್ರುವೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಅವನಿಗೆ ಯಾರೊಡನೆಯೂ ವೈರವಿರಲಿಲ್ಲ. ಶತ್ರುಗಳ ಬಗ್ಗೆಯೂ ಆತನ ಹೃದಯದಲ್ಲಿ ಯಾವಾಗಲೂ ಸದ್ಭಾವವೇ ಇರುತ್ತಿತ್ತು. ಶತ್ರುಗಳೂ ಆತನ ದೃಷ್ಟಿಯಲ್ಲಿ ಸೇವೆ ಮತ್ತು ಸಹಾನುಭೂತಿಗೆ ಪಾತ್ರರಾಗಿದ್ದರು. ಅಪಕಾರ ಮಾಡುವವರಿಗೂ ಉಪಕಾರ ಮಾಡುವುದೇ ಸಂತರ ಅತ್ಯಂತ ದೊಡ್ಡ ಲಕ್ಷಣವಾಗಿದೆ.

ಪಾಂಡವರು ದ್ವೈತವನದಲ್ಲಿದ್ದಾಗ ಒಮ್ಮೆ ಘೋಷಯಾತ್ರೆಯ ನೆಪದಲ್ಲಿ ರಾಜಾ ದುರ್ಯೋಧನನು ತನ್ನ ಮಂತ್ರಿಗಳು, ತಮ್ಮಂದಿರು, ರಾಣಿವಾಸದವರೂ, ಹಾಗೂ ಬಹಳ ದೊಡ್ಡ ಸೈನ್ಯ ಇವರೆಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ವನವಾಸೀ ಪಾಂಡವರು ತನ್ನ ವೈಭವದಿಂದ ಅಸೂಯೆ ಪಡಲೆಂಬ ಪಾಪಪೂರ್ಣ ಉದ್ದೇಶದಿಂದ ಆ ವನಕ್ಕೆ ಬಂದನು. ಅಲ್ಲಿ ಜಲಕ್ರೀಡೆಯ ವಿಚಾರದಿಂದ ಅವನು ಒಂದು ಸರೋವರದ ತೀರಕ್ಕೆ ಹೋದನು. ಅಲ್ಲಿಯೇ ಮಹಾರಾಜ ಯುಧಿಷ್ಠಿರನು ಕುಟೀರ ನಿರ್ಮಿಸಿಕೊಂಡು ಇರುತ್ತಿದ್ದನು. ಸರೋವರವನ್ನು ಗಂಧರ್ವರು ಮೊದಲಿನಿಂದಲೂ ಆಕ್ರಮಿಸಿಕೊಂಡಿದ್ದರು. ಅವರೊಡನೆ ದುರ್ಯೋಧನನ ಹೋರಾಟ ನಡೆಯಿತು. ಸರಿ, ಎರಡು ಕಡೆಯಿಂದಲೂ ಬಹು ಭೀಷಣ ಮತ್ತು ರೋಮಾಂಚಕಾರೀ ಯುದ್ಧ ಪ್ರಾರಂಭವಾಯಿತು.

ವಿಜಯ ಗಂಧರ್ವರ ಕಡೆಗಾಯಿತು. ಅವರು ರಾಣಿಯವರ ಸಹಿತ ದುರ್ಯೋಧನನ್ನು ಬಂಧಿಸಿದರು. ಮಹಾರಾಜ ಯುಧಿಷ್ಠಿರನು ಭೀಮಾರ್ಜುನರನ್ನು ಕರೆಸಿ ಹೇಳಿದನು. - 'ನೀವುಗಳೆಲ್ಲರೂ ಹೋಗಿ ಬಲಪೂರ್ವಕವಾಗಿ ರಾಜಾ ದುರ್ಯೋಧನನನ್ನು ಬಿಡಿಸಿಕೊಂಡು ಕರೆತನ್ನಿರಿ. ಇವರು ನಮ್ಮ ಶತ್ರುಗಳೇ ಆದರೂ ಈ ಸಮಯದಲ್ಲಿ ಆಪತ್ತಿನಲ್ಲಿದ್ದಾರೆ. ಈಗ ಇವರ ಅಪರಾಧಗಳನ್ನು ಮರೆತು ಇವರಿಗೆ ಸಹಾಯ ಮಾಡುವುದೇ ನಮ್ಮ ಧರ್ಮ. ಶತ್ರುವಾದರೆ ಏನು. ಕಡೆಗೆ ಇವರು ನಮ್ಮ ಸಹೋದರರೇ ಅಲ್ಲವೇ! ನಾವಿರುವಾಗ ಬೇರೆಯವರು ಇವರನ್ನು ದುರ್ಗತಿಗೆ ತಳ್ಳುವುದೇ? ಇದನ್ನು ನಾವು ನೋಡುವುದಾದರೂ ಹೇಗೆ?' ಮತ್ತಿನ್ನೇನು. ಅರ್ಜುನನು ತನ್ನ ಬಾಣಗಳ ಸುರಿಮಳೆಯಿಂದ ಗಂಧರ್ವರ ಸೊಕ್ಕನ್ನು ಮುರಿದು ದುರ್ಯೋಧನನನ್ನು ತಮ್ಮಂದಿರ ಹಾಗೂ ರಾಣಿಯರ ಸಹಿತ ಗಂಧರ್ವರಿಂದ ಬಿಡಿಸಿದನು. ದುರ್ಯೋಧನನ ಕಪಟ ಷಡ್ಯಂತ್ರವನ್ನು ತಿಳಿದುಕೊಂಡು ದೇವರಾಜ ಇಂದ್ರನೇ ದುರ್ಯೋಧನನನ್ನು ಬಂಧಿಸಿ ಕರೆದುಕೊಂಡು ಬರುವಂತೆ ಗಂಧರ್ವರನ್ನು ಕಳುಹಿಸಿದ್ದನು. ಮಹಾರಾಜ ಯುಧಿಷ್ಠಿರನ ವಿಶಾಲ ಹೃದಯವನ್ನು ನೋಡಿ ಅವರೆಲ್ಲರೂ ಆಶ್ಚರ್ಯಪಟ್ಟರು. ಧನ್ಯ ಅಜಾತಶತ್ರು!

ಇನ್ನೊಮ್ಮೆ ದ್ರೌಪದಿಯನ್ನು ಆಶ್ರಮದಲ್ಲಿ ಒಂಟಿಯಾಗಿ ಬಿಟ್ಟು ಪಾಂಡವರು ಕಾಡಿನಲ್ಲಿ ಸಮಿಧೆ - ದರ್ಭೆತರಲು ಹೋಗಿದ್ದರು. ಹಿಂದಿನಿಂದ ದುರ್ಯೋಧನನ ಭಾವ ಸಿಂಧುರಾಜ ಜಯದ್ರಥನು ಅಲ್ಲಿಗೆ ಬಂದನು. ದ್ರೌಪದಿಯ ಅನುಪಮ ರೂಪಲಾವಣ್ಯವನ್ನು ನೋಡಿ ಅವನ ಮನಸ್ಸು ಕಲುಷಿತವಾಯಿತು. ಅವನು ದ್ರೌಪದಿಯ ಮುಂದೆ ತನ್ನ ಪಾಪಪೂರ್ಣ ಪ್ರಸ್ತಾವವನ್ನು ತಿಳಿಸಿದನು. ಆದರೆ ದ್ರೌಪದಿಯು ಅದನ್ನು ತಿರಸ್ಕಾರಪೂರ್ವಕವಾಗಿ ತಳ್ಳಿಹಾಕಿದಳು. ಆಗ ಅವನು ದ್ರೌಪದಿಯನ್ನು ಎಳೆದುಕೊಂಡು ಬಲಾತ್ಕಾರದಿಂದ ತನ್ನ ರಥದ ಮೇಲೆ ಕುಳ್ಳಿರಿಸಿಕೊಂಡು ಕರೆದುಕೊಂಡು ಹೋದನು. ಪಾಂಡವರಿಗೆ ಜಯದ್ರಥನ ನೀಚತನ ತಿಳಿದಾಗ ಅವರು ಅವನನ್ನು ಹಿಂಬಾಲಿಸಿ ಸ್ವಲ್ಪ ಹೊತ್ತಿನಲ್ಲಿಯೇ ಅವನನ್ನು ತಡೆದರು. ಪಾಂಡವರು ಅವನ ಸೈನ್ಯವನ್ನೆಲ್ಲಾ

ಧ್ವಂಸಮಾಡಿದರು. ಪಾಪಿ ಜಯದ್ರಥನು ಭಯಭೀತನಾಗಿ ದ್ರೌಪದಿಯನ್ನು ರಥದಿಂದ ಇಳಿಸಿ ತಾನು ಪ್ರಾಣ ಉಳಿಸಿಕೊಳ್ಳಲು ಓಡಿದನು. ಭೀಮಸೇನನು ಅವನನ್ನು ಹಿಂಬಾಲಿಸಿ ಹಿಡಿದು ತಂದು ಧರ್ಮರಾಜನ ಮುಂದೆ ನಿಲ್ಲಿಸಿದನು. ಧರ್ಮರಾಜನು ಅವನನ್ನು ಸಂಬಂಧಿಯೆಂದು ತಿಳಿದುಕೊಂಡು ದಯೆಯಿಂದ ಬಿಟ್ಟುಬಿಟ್ಟನು. ಈ ಪ್ರಕಾರ ತನ್ನ ಅದ್ಭುತ ಕ್ಷಮಾಶೀಲತೆ ಮತ್ತು ದಯಾಳುತನದ ಪರಿಚಯ ಮಾಡಿಸಿದನು.

ಮಹಾರಾಜ ಯುಧಿಷ್ಠಿರನು ಬಹಳ ದೊಡ್ಡ ವಿದ್ವಾಂಸ, ನೀತಿಜ್ಞ ಮತ್ತು ಧರ್ಮಜ್ಞನಾಗಿದ್ದನು. ಆತನಲ್ಲಿ ಸಮಾನತೆಯು ಅದ್ಭುತವಾಗಿತ್ತು. ಒಂದು ಸಂದರ್ಭದ ಮಾತು-ಒಂದು ಮರದ ಕೊಂಬೆಗೆ ಒಬ್ಬ ಬ್ರಾಹ್ಮಣನು ಅಗ್ನಿಹೋತ್ರಕ್ಕೆ ಉಪಯೋಗಿಸುವ ಅರಣಿ (ಅಗ್ನಿಯನ್ನು ಉತ್ಪಾದಿಸುವ ಮರದ ಸಾಧನ) ಯನ್ನು ನೇತುಹಾಕಿದ್ದನು. ಒಂದು ಜಿಂಕೆಯು ತನ್ನ ಕೊಂಬುಗಳನ್ನು ಮರಕ್ಕೆ ಉಜ್ಜುತ್ತಿರುವಾಗ ಅರಣಿಯು ಅದರ ಕೊಂಬಿನಲ್ಲಿ ಸಿಕ್ಕಿಹಾಕಿಕೊಂಡಿತು. ಜಿಂಕೆ ಅದನ್ನೂ ತೆಗೆದುಕೊಂಡು ಓಡಿತು. ಅದಿಲ್ಲದೇ ಅಗ್ನಿಹೋತ್ರಕ್ಕೆ ಅಡ್ಡಿಯಾಗುವುದನ್ನು ಕಂಡ ಬ್ರಾಹ್ಮಣನು ಪಾಂಡವರ ಬಳಿ ಬಂದು ಅದನ್ನು ತಂದು ಕೊಡಬೇಕೆಂದು ಪ್ರಾರ್ಥಿಸಿಕೊಂಡನು. ಧರ್ಮರಾಜ ಯುಧಿಷ್ಠಿರನು ತನ್ನ ನಾಲ್ವರು ತಮ್ಮಂದಿರನ್ನೂ ಸಂಗಡ ಕರೆದುಕೊಂಡು ಜಿಂಕೆಯ ಹಿಂದೆ ಓಡಿದನು. ಆದರೆ ಅದು ನೋಡುತ್ತಾ-ನೋಡುತ್ತಾ ಇದ್ದ ಹಾಗೆಯೇ ಅವರ ಕಣ್ಣು ತಪ್ಪಿಸಿ ಎಲ್ಲಿಗೋ ಮಾಯವಾಗಿಬಿಟ್ಟಿತು. ಪಾಂಡವರು ಬಹಳ ಬಳಲಿದರು. ಬಾಯಾರಿಕೆ ಬೇರೆ ಅವರನ್ನು ಕಾಡುತ್ತಿತ್ತು. ಧರ್ಮರಾಜನ ಅಜ್ಞೆ ಪಡೆದು ನಕುಲನು ನೀರನ್ನು ಹುಡುಕುತ್ತಾ ಹೊರಟನು; ಸ್ವಲ್ಪ ದೂರದಲ್ಲಿ ಅವನಿಗೆ ಒಂದು ಸುಂದರವಾದ ಜಲಾಶಯ ಸಿಕ್ಕಿತು. ಅದರ ಹತ್ತಿರಕ್ಕೆ ಹೋಗಿ ನೀರು ಕುಡಿಯಲು ಸಿದ್ಧನಾದಾಗ ಅವನಿಗೆ ಈ ಅಶರೀರವಾಣಿ ಕೇಳಿಬಂತು- 'ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಡು, ನಂತರ ನೀರು ಕುಡಿ'. ಆದರೆ ನಕುಲನಿಗೆ ಬಹಳ ದಾಹವಾಗಿತ್ತು. ಅವನು ಅಶರೀರವಾಣಿಯ ಕಡೆಗೆ ಗಮನ ಕೊಡದೇ ನೀರು ಕುಡಿದುಬಿಟ್ಟನು. ಕೂಡಲೇ ನಿರ್ಜೀವನಾಗಿ ನೆಲದ

ಮೇಲೆ ಉರುಳಿದನು. ಹಿಂದಿನಿಂದ ಧರ್ಮರಾಜನು ಕ್ರಮವಾಗಿ ಸಹದೇವ, ಅರ್ಜುನ ಮತ್ತು ಭೀಮಸೇನರನ್ನು ಕಳುಹಿಸಿದನು, ಆದರೆ ಆ ಮೂವರಿಗೂ ಅದೇ ಸ್ಥಿತಿಯಾಯಿತು. ಕೊನೆಗೆ ಧರ್ಮರಾಜನು ತಾನೇ ಆ ಜಲಾಶಯದ ಬಳಿ ಹೋದನು. ಆತನಿಗೂ ಅದೇ ಶಬ್ದ ಕೇಳಿಸಿತು. ಜೊತೆಗೆ ತನ್ನ ನಾಲ್ವರು ತಮ್ಮಂದಿರೂ ನಿಶ್ಚೇಷ್ಟಿತರಾಗಿ ನೆಲಕ್ಕುರುಳಿರುವುದನ್ನು ಕಂಡನು. ಅಷ್ಟರಲ್ಲಿ ಆತನಿಗೆ ಒಬ್ಬ ವಿಶಾಲಕಾಯದ ಯಕ್ಷನು ಕಂಡು ಬಂದನು. ಅವನು ಯುಧಿಷ್ಠಿರನಿಗೆ ಹೇಳಿದನು- 'ನನ್ನ ಪ್ರಶ್ನೆಗಳಿಗೆ ಉತ್ತರಕೊಡದೆ ನೀರು ಕುಡಿದ ಕಾರಣ ನಿನ್ನ ತಮ್ಮಂದಿರಿಗೆ ಈ ಸ್ಥಿತಿಯುಂಟಾಯಿತು. ನೀನೂ ನನ್ನ ಅಪ್ಪಣೆ ಪಡೆಯದೆ ಯತ್ನಿಸಿದರೆ ಸತ್ತುಹೋಗುವೆ.' ಯುಧಿಷ್ಠಿರನು ಅವನ ಪ್ರಶ್ನೆಗಳಿಗೆ ಉತ್ತರ ಕೊಡಲು ಸಿದ್ಧನಾದನು. ಯಕ್ಷನು ಯುಧಿಷ್ಠಿರನಿಗೆ ಯಾವ-ಯಾವ ಪ್ರಶ್ನೆ ಕೇಳಿದನೋ ಅವುಗಳಿಗೆಲ್ಲಾ ಸಮುಚಿತವಾದ ಉತ್ತರವನ್ನು ಕೊಟ್ಟು ಯುಧಿಷ್ಠಿರನು ಯಕ್ಷನನ್ನು ಚೆನ್ನಾಗಿ ಸಮಾಧಾನ ಪಡಿಸಿದನು. ಈತನ ಉತ್ತರಗಳಿಂದ ಪ್ರಸನ್ನನಾಗಿ ಯಕ್ಷನು ಹೇಳಿದನು - 'ರಾಜಾ! ನಿನ್ನ ತಮ್ಮಂದಿರಲ್ಲಿ ಯಾರನ್ನು ನೀನು ಬದುಕಿಸಲು ಇಚ್ಛಿಸುವೆಯೋ, ಅವನನ್ನು ನಾನು ಬದುಕಿಸಿ ಕೊಡುತ್ತೇನೆ'. ಧರ್ಮರಾಜನು ನಕುಲನನ್ನು ಬದುಕಿಸಲು ಇಚ್ಛಿಸಿದನು. ಕಾರಣವನ್ನು ಕೇಳಲಾಗಿ ಆತನು ಹೇಳಿದನು- 'ನನ್ನ ತಂದೆಗೆ ಕುಂತಿ ಮತ್ತು ಮಾದ್ರಿಯರೆಂಬ ಇಬ್ಬರು ಪತ್ನಿಯರಿದ್ದರು. ನನ್ನ ದೃಷ್ಟಿಯಲ್ಲಿ ಅವರಿಬ್ಬರೂ ಸಮಾನರಾಗಿದ್ದಾರೆ. ಅವರಿಬ್ಬರೂ ಪುತ್ರವತಿಯರಾಗಿರಲೆಂಬುದೇ ನನ್ನ ಇಷ್ಟ. ಕುಂತಿಯ ಪುತ್ರನಾದರೋ ನಾನಿದ್ದೇನೆ; ಮಾದ್ರಿಗೂ ಕೂಡ ಒಬ್ಬ ಪುತ್ರ ಉಳಿಯಲೆಂಬುದೇ ನನ್ನ ಬಯಕೆ. ಆದುದರಿಂದ ನಾನು ಭೀಮ ಮತ್ತು ಅರ್ಜುನರನ್ನು ಬಿಟ್ಟು ಅವನನ್ನು ಬದುಕಿಸುವಂತೆ ಪ್ರಾರ್ಥಿಸಿದ್ದೇನೆ.' ಯುಧಿಷ್ಠಿರನ ಬುದ್ಧಿವಂತಿಕೆ ಮತ್ತು ಧರ್ಮದ ಆಸಕ್ತಿಯ ಪರೀಕ್ಷೆಗಾಗಿ ಸ್ವತಃ ಧರ್ಮವೇ ಈ ಲೀಲೆಯನ್ನು ಮಾಡಿದ್ದನು. ಆತನ ಈ ಅದ್ಭುತ ಸಮಾನತೆಯನ್ನು ನೋಡಿ ಆತನು ಬಹಳ ಸಂತೋಷಪಟ್ಟು ತನ್ನ ಪರಿಚಯ ಮಾಡಿಕೊಟ್ಟು ನಾಲ್ವರು ತಮ್ಮಂದಿರನ್ನೂ ಬದುಕಿಸಿಕೊಟ್ಟನು. ಧರ್ಮವು ಆತನಿಗೆ ಇದನ್ನೂ ಸಹ ಹೇಳಿತು - 'ನಾನೇ

ಜಿಂಕೆಯಾಗಿ ಆ ಬ್ರಾಹ್ಮಣನ ಯಜ್ಞವಸ್ತುವನ್ನು ತೆಗೆದುಕೊಂಡು ಹೋಗಿದ್ದೆನು; ತೆಗೆದುಕೋ ಈ ಯಜ್ಞದ ಪರಿಕರ ನಿನ್ನ ಮುಂದಿದೆ. ಯುಧಿಷ್ಠಿರನು ಆ ಯಜ್ಞದ ಪರಿಕರವನ್ನು ತೆಗೆದುಕೊಂಡು ಹೋಗಿ ಆ ಬ್ರಾಹ್ಮಣನಿಗೆ ಒಪ್ಪಿಸಿದನು.

ಯುಧಿಷ್ಠಿರನು ಸದಾಚಾರ ಸಂಪನ್ನನಾಗಿದ್ದಂತೆಯೇ ವಿನಯಶೀಲನೂ ಆಗಿದ್ದನು. ಆತನು ಸಮಯೋಚಿತ ವ್ಯವಹಾರದಲ್ಲಿ ಬಹುಕುಶಲನಾಗಿದ್ದನು. ಗುರುಗಳ ಮಾನ-ಮರ್ಯಾದೆ ಬಗೆಗೆ ಯಾವಾಗಲೂ ನಿಗಾ ಕೊಡುತ್ತಿದ್ದನು. ಅತ್ಯಂತ ಕಠಿಣ ಸಮಯದಲ್ಲಿಯೂ ಸಹ ಆತನು ಶಿಷ್ಟಾಚಾರ ಮರ್ಯಾದೆಯನ್ನು ಮರೆಯುತ್ತಿರಲಿಲ್ಲ. ಮಹಾಭಾರತ-ಯದ್ಧದ ಆರಂಭದಲ್ಲಿ ಎರಡು ಪಕ್ಷಗಳ ಸೈನ್ಯವು ಯುದ್ಧಕ್ಕಾಗಿ ಸುಸಜ್ಜಿತವಾಗಿ ನಿಂತಿದ್ದಾಗ ಆತನು ಎಲ್ಲಕ್ಕಿಂತ ಮೊದಲು ಶತ್ರುಸೇನೆಯ ಮಧ್ಯಕ್ಕೆ ಹೋಗಿ ಪಿತಾಮಹ ಭೀಷ್ಮ, ಆಚಾರ್ಯ ದ್ರೋಣ ಮತ್ತು ಕೃಪಾಚಾರ್ಯ ಹಾಗೂ ಮಾವ ಶಲ್ಯ-ಇವರ ಪಾದಗಳಿಗೆರಗಿ ಆಶೀರ್ವಾದ ಬೇಡಿದನು. ಆತನ ಈ ವಿನಯಪೂರ್ಣ ಮತ್ತು ಶಿಷ್ಟಜನೋಚಿತ ವ್ಯವಹಾರದಿಂದ ಆ ಗುರುಜನರೆಲ್ಲಾ ಬಹಳ ಸಂತೋಷಪಟ್ಟು ಹೃದಯಾಂತರಾಳದಿಂದ ಆತನಿಗೆ ವಿಜಯವನ್ನು ಕೋರಿದರು. ನಾಲ್ವರೂ ಅನ್ಯಾಯೀ ಕೌರವರ ಪಕ್ಷದಿಂದ ಯುದ್ಧಮಾಡುವುದಕ್ಕೆ ಬಾಧ್ಯರಾದುದಕ್ಕಾಗಿ ದುಃಖವನ್ನು ವ್ಯಕ್ತಪಡಿಸಿ, ಇದನ್ನು ತಮ್ಮ ದೌರ್ಬಲ್ಯವೆಂದು ತಿಳಿಸಿದರು. ಶ್ರೀಕೃಷ್ಣಪರಮಾತ್ಮನೂ ಯುಧಿಷ್ಠಿರನ ಈ ಆದರ್ಶ ವ್ಯವಹಾರವನ್ನು ಅನುಮೋದಿಸಿದನು.

ಯುಧಿಷ್ಠಿರನ ಸತ್ಯವಾದಿತನವು ಜಗದ್ವಿಖ್ಯಾತವಾಗಿತ್ತು. ಯುಧಿಷ್ಠಿರನು ಭಯ ಅಥವಾ ಲೋಭಕ್ಕೊಳಗಾಗಿ ಎಂದಿಗೂ ಅಸತ್ಯವನ್ನು ನುಡಿಯುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿತ್ತು. ಅವನ ಸತ್ಯಸಂಧತೆಯ ಫಲದಿಂದಾಗಿ ಅವನ ರಥದ ಚಕ್ರಗಳು ಯಾವಾಗಲೂ ಭೂಮಿಯಿಂದ ನಾಲ್ಕು ಅಂಗುಲ ಎತ್ತರದಲ್ಲಿ ಚಲಿಸುತ್ತಿದ್ದವು. ಜೀವನದಲ್ಲಿ ಕೇವಲ ಒಂದು ಸಲ ಇವನು ಅಸತ್ಯವನ್ನು ಹೇಳಿದನು. ಅವನು ದ್ರೋಣಾಚಾರ್ಯರ ಮುಂದೆ, ಅಶ್ವತ್ಥಾಮ ಎಂಬ ಆನೆ ಕೊಲ್ಲಲ್ಪಟ್ಟ ನೆಪದಿಂದ 'ಅಶ್ವತ್ಥಾಮ ಕೊಲ್ಲಲ್ಪಟ್ಟ' ಎಂದು

ಸುಳ್ಳು ಸುಳ್ಳಾಗಿ ಹೇಳಿಬಿಟ್ಟನು. ಈ ಒಂದು ಬಾರಿಯ ಸತ್ಯಚ್ಯುತಿಯ ಫಲಸ್ವರೂಪವಾಗಿ ಇವನ ರಥದ ಚಕ್ರಗಳು ಭೂಮಿಗೆ ಹೊಂದಿಕೊಂಡು ಚಲಿಸಲಾರಂಭಿಸಿದವು. ಇದರಿಂದ ಇವನು ಒಂದು ಮುಹೂರ್ತ ಕಾಲ ಪೂರ್ತಿ ಕಲ್ಪಿತ ನರಕದ ದೃಶ್ಯವನ್ನೂ ಸಹ ನೋಡಬೇಕಾಯಿತು.

ಯುಧಿಷ್ಠಿರನ ಉದಾರತೆಯೂ ಸಹ ಅಲೌಕಿಕವಾಗಿತ್ತು. ಕೌರವರು ಯಾವ ರೀತಿಯಿಂದಲೂ ಸಹ ಇವರ ರಾಜ್ಯ ಹಿಂದಿರುಗಿಸಲು ಒಪ್ಪದಿದ್ದಾಗ, ಇವನು ಕೇವಲ ಐದು ಗ್ರಾಮಗಳನ್ನು ತೆಗೆದುಕೊಂಡು ಸಂತೋಷಪಡುವುದಾಗಿ ಒಪ್ಪಿದನು. ಶ್ರೀಕೃಷ್ಣ ಪರಮಾತ್ಮನ ಮೂಲಕ ದುರ್ಯೋಧನನಿಗೆ ಹೀಗೆಂದು ಹೇಳಿ ಕಳುಹಿಸಿದನು- 'ಅವನು ನಮಗೆ ನಮ್ಮ ಇಚ್ಛಾನುಸಾರ ಕೇವಲ ಐದು ಗ್ರಾಮಗಳನ್ನು ಕೊಡಲು ಒಪ್ಪಿದರೆ ನಾವು ಯುದ್ಧ ಮಾಡುವುದಿಲ್ಲ.' ಆದರೆ ದುರ್ಯೋಧನನು ಇವರಿಗೆ ಸೂಜಿಯ ಮೊನೆಯಷ್ಟು ಭೂಮಿಯನ್ನು ಕೊಡಲು ತಿರಸ್ಕರಿಸಿದನು. ಆಗ ಇವರು ವಿಧಿಯಿಲ್ಲದೆ ಯುದ್ಧ ಹೂಡಬೇಕಾಯಿತು. ಅಷ್ಟೇ ಅಲ್ಲ, ದುರ್ಯೋಧನನ ಸೈನ್ಯವೆಲ್ಲಾ ಸತ್ತು-ನಾಶವಾಯಿತು ಮತ್ತು ಅವನು ಸ್ವತಃ ಒಂದು ಕೊಳಕ್ಕೆ ಹೋಗಿ ನೀರಿನಲ್ಲಿ ಅವಿತುಕೊಂಡಾಗ ಧರ್ಮರಾಜನು ಹೇಳಿದನು - 'ನಮ್ಮಲ್ಲಿ ಯಾರೊಡನೆ ನೀನು ಯುದ್ಧ ಮಾಡಬಲ್ಲೆ? ನಮ್ಮಲ್ಲಿ ಯಾರಾದರೂ ಒಬ್ಬರೊಡನೆಯಾದರೂ ದ್ವಂದ್ವ - ಯುದ್ಧದಲ್ಲಿ ನೀನು ವಿಜಯಿಯಾದರೆ ರಾಜ್ಯವೆಲ್ಲಾ ನಿನ್ನದೇ ಆಗಿಹೋಗುವುದು.' ಈ ಪ್ರಕಾರದ ಶರತ್ತನ್ನು ಬೇರೆ ಯಾರಾದರೂ ಇಡಬಲ್ಲರೇ? ಪಾಂಡವರಲ್ಲಿ ಎಲ್ಲರಿಗಿಂತ ಹೆಚ್ಚು ಬಲಶಾಲಿ ಮತ್ತು ಗದಾಯುದ್ಧದಲ್ಲಿ ಪ್ರವೀಣನಾಗಿದ್ದ ಭೀಮಸೇನನೂ ಗದಾಯುದ್ಧದಲ್ಲಿ ಕೂಡ ದುರ್ಯೋಧನನ್ನು ಪ್ರತಿಭಟಿಸಲು ಅಂಜುತ್ತಿದ್ದನು. ಅಂತಹವನ ಸಂಗಡ ಈ ಶರತ್ತನ್ನು ಮಾಡಿಕೊಳ್ಳುವುದು- 'ನಮ್ಮಲ್ಲಿ ಯಾರಾದರೂ ಒಬ್ಬರನ್ನು ನೀನು ಸೋಲಿಸಿದರೆ ರಾಜ್ಯ ನಿನ್ನದಾಗಿ ಹೋಗುವುದು'- ಯುಧಿಷ್ಠಿರನಂತಹ ಮಹಾನುಭಾವರ ಕೆಲಸವಾಗಿತ್ತು. ಕೊನೆಗೆ ಭೀಮಸೇನನ ಜೊತೆಯಲ್ಲಿ ಅವನ ಯುದ್ಧ ನಿಶ್ಚಿತವಾಯಿತು ಮತ್ತು ಭೀಮಸೇನನಿಂದ ಅವನು ಹತನಾದನು.

ಇಷ್ಟೇ ಅಲ್ಲ, ಯುದ್ಧ ಮುಗಿದ ನಂತರ ಯುಧಿಷ್ಠಿರನಿಗೆ ರಾಜ್ಯಾಭಿಷೇಕವಾಯಿತು. ಧೃತರಾಷ್ಟ್ರ ಗಾಂಧಾರಿ ಈತನ ಹತ್ತಿರವೇ ಉಳಿದುಕೊಂಡರು. ಆಗ ಈತನು ಅವರೊಡನೆ ಎಂತಹ ಸುಂದರವಾದ ಆಚರಣೆ ಮಾಡಿದನೆಂದರೆ - ಅವರಿಗೆ ತಮ್ಮ ಮಕ್ಕಳ ಸಾವಿನ ದುಃಖವು ಮರೆತೇ ಹೋಯಿತು. ಅವರಿಗೆ ತಮ್ಮ ಮಕ್ಕಳಿಂದಲೂ ದೊರೆಯದಿದ್ದ ಸುಖ ಈತನಿಂದ ದೊರೆಯಿತು. ಎಲ್ಲಾ ರಾಜ-ಕಾರ್ಯಗಳನ್ನು ಅವರನ್ನು ಕೇಳಿಯೇ ಮಾಡುತ್ತಿದ್ದನು, ರಾಜ್ಯಾಡಳಿತ ನಡೆಸುತ್ತಿದ್ದರೂ ಇವರ ಸೇವೆಗೆ ಸರಿಯಾಗಿ ಕಾಲವನ್ನು ಒದಗಿಸಿಕೊಳ್ಳುತ್ತಿದ್ದನು. ಈತನ ತಾಯಿ ಕುಂತಿಯು, ಸಾಮ್ರಾಜ್ಞೀ ದ್ರೌಪದಿ ಹಾಗೂ ತನ್ನ ಇನ್ನಿತರ ಸೊಸೆಯರ ಜೊತೆಯಲ್ಲಿ ದೇವಿ ಗಾಂಧಾರಿಯ ಸೇವೆಯನ್ನು ಮಾಡುತ್ತಾ ಇದ್ದಳು. ಆಕೆಯ ಎದುರಿಗೆ ಎಂದಿಗೂ ಯಾರೂ ಅವರ ಪುತ್ರ ಶೋಕ ಉಕ್ಕಿ ಬರುವಂತಹ ಮಾತು ಬರದಂತೆ ಯಾವಾಗಲೂ ಇವರು ಗಮನವಿಡುತ್ತಿದ್ದರು. ಕೊನೆಗೆ ಧೃತರಾಷ್ಟ್ರ ಮತ್ತು ಗಾಂಧಾರಿ ತಮ್ಮ ಉಳಿದ ಆಯುಸ್ಸನ್ನು ಕಾಡಿನಲ್ಲಿ ಕಳೆಯಬೇಕೆಂಬ ನಿಶ್ಚಯಮಾಡಿದರು. ಆಗ ಯುಧಿಷ್ಠಿರನಿಗೆ ಬಹಳ ದುಃಖವಾಯಿತು. ಈತನು ತಾನೂ ಸಹ ಅವರೊಡನೆ ವನವಾಸಕ್ಕೆ ಹೋಗಲು ಸಿದ್ಧನಾದನು. ವ್ಯಾಸರು ಬಂದು ಬಹಳ ಕಷ್ಟದಿಂದ ಆತನನ್ನು ಸಮಾಧಾನಪಡಿಸಿದರು. ಆಗ ಈತನು ಧೃತರಾಷ್ಟ್ರ-ಗಾಂಧಾರಿಯರನ್ನು ವನವಾಸಕ್ಕೆ ಅರ್ಥಾತ್ ವಾನಪ್ರಸ್ಥಾಶ್ರಮಕ್ಕೆ ಕಳುಹಿಸಲು ಒಪ್ಪಿದನು. ಆದರೂ ಸಹ ಕುಂತೀ ದೇವಿಯು ತನ್ನ ಭಾವ-ಓರಗಿತ್ತಿಯ ಸಂಗಡ ಹೋದಳು ಹಾಗೂ ಕೊನೆಯವರೆಗೂ ಅವರ ಸೇವೆಯಲ್ಲಿದ್ದಳು, ಅವರ ಜೊತೆಯಲ್ಲಿಯೇ ಪ್ರಾಣತ್ಯಾಗ ಮಾಡಿದಳು. ಕಾಡಿಗೆ ಹೋಗುವ ಮುನ್ನ ಧೃತರಾಷ್ಟ್ರನು ತನ್ನ ಮೃತರಾದ ಮಕ್ಕಳಿಗೆ ಹಾಗೂ ಅನ್ಯ ಸಂಬಂಧಿಗಳಿಗೆ ವಿಧಿಪೂರ್ವಕವಾಗಿ ಕೊನೆಯ ಬಾರಿಗೆ ಶ್ರಾದ್ಧ ಮಾಡಲು ಇಚ್ಛಿಸಿದನು ಮತ್ತು ಅವರ ಶ್ರೇಯಸ್ಸಿಗಾಗಿ ಬ್ರಾಹ್ಮಣರಿಗೆ ಅಪರಿಮಿತ ದಾನ ಕೊಡಲೂ ಬಯಸಿದನು. ಯುಧಿಷ್ಠಿರನಿಗೆ ಆತನ ಇಚ್ಛೆ ಗೊತ್ತಾದಾಗ ಇವನು ವಿದುರನ ಮೂಲಕ ಹೀಗೆ ಹೇಳಿ ಕಳುಹಿಸಿದನು- 'ಅರ್ಜುನನ ಸಹಿತ ನನ್ನ ಪ್ರಾಣ ಪರ್ಯಂತ ಸರ್ವಸ್ವವೂ

ನಿಮ್ಮದೇ', ಆತನ ಇಚ್ಛೆಗಿಂತಲೂ ಅಧಿಕವಾಗಿ ತೆರೆದ ಕೈಗಳಿಂದ ಖರ್ಚುಮಾಡುವಂತೆ ವ್ಯವಸ್ಥೆ ಮಾಡಿಕೊಟ್ಟನು. ಧೃತರಾಷ್ಟ್ರನು ವಿಧಿ-ವಿಧಾನಗಳಿಂದ ತನ್ನ ಸಂಬಂಧಿಗಳೆಲ್ಲರ ಶ್ರಾದ್ಧವನ್ನು ಮಾಡಿ ಬ್ರಾಹ್ಮಣರಿಗೆಲ್ಲಾ ತೃಪ್ತಿಯಾಗಿ ದಾನ ಮಾಡಿದನು. ಆಗ ಮಹಾರಾಜ ಯುಧಿಷ್ಠಿರನು ಧೃತರಾಷ್ಟ್ರನ ಆಜ್ಞಾನುಸಾರ ಧನಕನಕಗಳನ್ನು ನದಿಯಂತೆ ಹರಿಸಿದನು. ನೂರು ಕೊಡುವಂತೆ ಆಜ್ಞೆಯಾದವರಿಗೆ ಸಾವಿರ ಕೊಡಲಾಯಿತು. ಧೃತರಾಷ್ಟ್ರ - ಗಾಂಧಾರಿ ಕಾಡಿಗೆ ಹೊರಟಾಗ ಪಾಂಡವರೆಲ್ಲರೂ ತಮ್ಮ ರಾಣಿಯರೊಡನೆ ಕಾಲ್ನಡಿಗೆಯಲ್ಲಿಯೇ ಬಹುದೂರದವರೆಗೆ ಅವರನ್ನು ಕಳುಹಿಸಲು ಹೋದರು. ಧೃತರಾಷ್ಟ್ರನ ದುರಾಡಳಿತದ ದರ್ಪದಿಂದ ಪಾಂಡವರು ದೊಡ್ಡ-ದೊಡ್ಡ ವಿಪತ್ತುಗಳನ್ನು ಎದುರಿಸಬೇಕಾಯಿತು. ಈ ಕಾರಣದಿಂದ ಅವರು ತಮ್ಮ ಪಿತ್ರಾರ್ಜಿತ ಅಧಿಕಾರದಿಂದ ವಂಚಿತರಾಗಿರಬೇಕಾಯಿತು. ಎಷ್ಟೋ ಸಾರಿ ವನವಾಸದ ಕಷ್ಟಪಡಬೇಕಾಯಿತು; ಧೃತರಾಷ್ಟ್ರನ ಎದುರಿಗೇ ಆತನ ಮಕ್ಕಳು ಸತೀ ಶಿರೋಮಣಿ ದ್ರೌಪದಿಗೆ ತುಂಬಿದ ಸಭೆಯಲ್ಲಿ ಘೋರ ಅಪಮಾನ ಮಾಡಿದರು, ಇವರನ್ನು ಮನೆ-ಮನೆಯ ಭಿಕಾರಿಗಳನ್ನಾಗಿ ಮಾಡಿದರು ಐದು ಗ್ರಾಮಗಳನ್ನು ಕೊಡಲು ಒಪ್ಪಲಿಲ್ಲ - ಅದರ ಫಲವಾಗಿ ಎರಡು ಕಡೆಗಳಲ್ಲಿಯೂ ಇಷ್ಟೊಂದು ಭಯಂಕರ ನರಹತ್ಯೆಯಾಯಿತೋ - ಆ ಧೃತರಾಷ್ಟ್ರನ ಬಗ್ಗೆ ಇಷ್ಟು ನಿಶ್ಚಲ ಪ್ರೇಮ-ಭಾವವನ್ನಿಟ್ಟುಕೊಳ್ಳುವುದು ಮತ್ತು ಅಂತ್ಯದವರೆಗೆ ಅವರನ್ನು ಸುಖವಾಗಿಡಲು ಪೂರ್ಣಪ್ರಯತ್ನ ಮಾಡುವುದು ಯುಧಿಷ್ಠಿರನಂತಹ ಮಹಾನ್ ಆತ್ಮದ ಕೆಲಸವಾಗಿತ್ತು. ವೈರಿಯ ಬಗೆಗೆ ಇಂತಹ ಸತ್ ವ್ಯವಹಾರ ಜಗತ್ತಿನ ಇತಿಹಾಸದಲ್ಲಿಯೇ ಬಹಳ ಅಪರೂಪ.

ಮಹಾರಾಜ ಯುಧಿಷ್ಠಿರನ ಶರಣಾಗತ ವತ್ಸಲತೆ ಹಾಗೂ ಪ್ರೇಮವು ಇನ್ನೂ ಅದ್ಭುತವಾಗಿತ್ತು. ಶ್ರೀಕೃಷ್ಣಪರಮಾತ್ಮನ ಪರಮಧಾಮಗಮನ ಹಾಗೂ ಯಾದವರ ಸಂಹಾರದ ವಿಷಯ ಈತನಿಗೆ ತಿಳಿದಾಗ ಬಹಳ ದುಃಖವಾಯಿತು. ನಮ್ಮ ಪರಮ ಆತ್ಮೀಯ, ಹಿತಕಾರಿಯಾದ ಶ್ರೀಕೃಷ್ಣನೇ ಈ ಭೂಮಿಯಲ್ಲಿ ಇಲ್ಲದಿರುವಾಗ, ಯಾರ ಕೃಪೆಯಿಂದ ನಾವು ಎಲ್ಲವನ್ನೂ ಪಡೆದಿದ್ದೆವೋ

ಆತನೇ ಇಲ್ಲವೆಂದರೆ ನಮಗೆ ಈ ರಾಜ್ಯ ಸುಖ ಯಾವ ಪ್ರಯೋಜನಕ್ಕೆ? ಮತ್ತು ಈ ಜೀವನದಿಂದ ಏನು ಪ್ರಯೋಜನ? ಎಂದು ಯೋಚಿಸಿದನು. ಶ್ರೀಕೃಷ್ಣನ ವಿಚಾರವೇ ಬೇರೆಯಾಗಿತ್ತು, ಆತನು ಪಾಂಡವರ ಪ್ರಾಣವಾಗಿದ್ದನು ಮತ್ತು ಸರ್ವಸ್ವವೂ ಅವನೇ ಆಗಿದ್ದನು. ಅವನ ಮೇಲೆಯೇ ಇವರ ಸರ್ವಸ್ವವೂ ಅವಲಂಬಿತವಾಗಿತ್ತು. ಕೌರವರ ವಿನಾಶದಿಂದಲೂ ಯುಧಿಷ್ಠಿರನಿಗೆ ಬಹಳ ದುಃಖವಾಯಿತು. ಆದುದರಿಂದ ವಿಜಯ ಹಾಗೂ ರಾಜ್ಯ ದೊರೆತ ಉದ್ದೇಶದಿಂದ ಸಂತೋಷ-ಕೂಟವನ್ನು ಆಚರಿಸುವುದಕ್ಕೆ ಬದಲಾಗಿ ಸರ್ವಸ್ವವನ್ನೂ ಬಿಟ್ಟು ಕಾಡಿಗೆ ಹೋಗಲು ಸಿದ್ಧನಾಗಿದ್ದನು. ಬಹಳ ಪ್ರಯಾಸದಿಂದ ಶ್ರೀಕೃಷ್ಣಪರಮಾತ್ಮ ಹಾಗೂ ಮಹರ್ಷಿ ವ್ಯಾಸರೇ ಮುಂತಾದವರು ಈತನನ್ನು ಸಮಾಧಾನಪಡಿಸಿ ರಾಜ್ಯಾಭಿಷೇಕಕ್ಕೆ ಸಿದ್ಧಪಡಿಸಿದರು. ಭೀಷ್ಮ ಪಿತಾಮಹರೂ ಧರ್ಮದ ಉಪದೇಶ ಮಾಡಿ ಈತನ ಶೋಕವನ್ನು ಹೋಗಲಾಡಿಸುವ ಯತ್ನ ಮಾಡಿದರು ಹಾಗೂ ಭೀಷ್ಮರ ಆಜ್ಞೆಯಂತೆ ಈತನು ರಾಜ್ಯಭಾರವನ್ನೂ ಮಾಡಿದನು; ಆದರೆ ತನ್ನವರೆಲ್ಲರ ಸಂಹಾರದಿಂದ ಉಂಟಾದ ದುಃಖ ಈತನ ಚಿತ್ತದಿಂದ ಸಂಪೂರ್ಣವಾಗಿ ಹೋಗಲಿಲ್ಲ. ಈಗ ಶ್ರೀಕೃಷ್ಣನ ಪರಮಧಾಮಗಮನದ ವಾರ್ತೆಯನ್ನು ಕೇಳಿ ಈತನು ಕಾಡಿಗೆ ಹೋಗುವ ದೃಢ ನಿಶ್ಚಯ ಮಾಡಿಕೊಂಡನು ಮತ್ತು ಅರ್ಜುನನ ಮೊಮ್ಮಗ ಪರೀಕ್ಷಿತನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಹಾಗೂ ಕೃಪಾಚಾರ್ಯ ಮತ್ತು ಧೃತರಾಷ್ಟ್ರರ ಮಗ ಯುಯುತ್ಸುವನ್ನು ಅವನ ಮೇಲ್ವಿಚಾರಣೆಗಾಗಿ ನಿಯುಕ್ತಿಮಾಡಿ ಈತನು ತನ್ನ ನಾಲ್ವರು ತಮ್ಮಂದಿರು ಹಾಗೂ ದ್ರೌಪದಿಯನ್ನು ಜೊತೆಯಲ್ಲಿ ಕರೆದುಕೊಂಡು ಹಸ್ತಿನಾಪುರದಿಂದ ಹೊರಟನು. ಭೂ-ಪ್ರದಕ್ಷಿಣೆಯ ಉದ್ದೇಶದಿಂದ ಅನೇಕ ದೇಶಗಳಲ್ಲಿ ಸುತ್ತಾಡಿ ಅವರು ಹಿಮಾಲಯವನ್ನು ಸೇರಿ ಮೇರು ಪರ್ವತದ ಕಡೆಗೆ ಹೋಗುತ್ತಿದ್ದರು. ದಾರಿಯಲ್ಲಿ ದೇವೀ ದ್ರೌಪದಿ ಹಾಗೂ ಈತನ ನಾಲ್ವರು ತಮ್ಮಂದಿರೂ ಒಬ್ಬೊಬ್ಬರಾಗಿ ಕ್ರಮವಾಗಿ ಮಡಿಯುತ್ತಾ ಹೋದರು. ಇವರು ಮಡಿ ಯುವುದನ್ನೂ ಸಹ ಲಕ್ಷಿಸದೆ ಯುಧಿಷ್ಠಿರನು ಮುಂದೆ ಮುಂದೆ ಹೋದನು. ಅಷ್ಟರಲ್ಲಿಯೇ ಸ್ವತಃ ದೇವರಾಜ ಇಂದ್ರನು ಈತನನ್ನು

ಕರೆದುಕೊಂಡು ಹೋಗಲು ರಥಾರೂಢನಾಗಿ ಬಂದನು ಮತ್ತು ಈತನನ್ನು ರಥವೇರಲು ಹೇಳಿದನು. ಯುಧಿಷ್ಠಿರನು ತನ್ನ ತಮ್ಮಂದಿರು ಹಾಗೂ ಪತಿಪ್ರಾಣಾ ದೇವಿ ದ್ರೌಪದಿಯನ್ನು ಬಿಟ್ಟು, ಒಬ್ಬನೇ ರಥದ ಮೇಲೆ ಕುಳಿತುಕೊಳ್ಳಲು ಒಪ್ಪಲಿಲ್ಲ. 'ಅವರೆಲ್ಲರೂ ನಿನಗಿಂತ ಮೊದಲೇ ಸ್ವರ್ಗಕ್ಕೆ ಬಂದು ಬಿಟ್ಟಿದ್ದಾರೆ',- ಎಂದು ಇಂದ್ರನು ಹೇಳಿ ಭರವಸೆಕೊಟ್ಟನಂತರ ಈತನು ರಥದ ಮೇಲೆ ಕುಳಿತುಕೊಳ್ಳಲು ಒಪ್ಪಿದನು. ಆದರೆ ಇವನೊಡನೆ ಒಂದು ನಾಯಿಯೂ ಇತ್ತು. ಅದು ಮೊದಲಿನಿಂದಲೂ ಈತನ ಸಂಗಡವಿತ್ತು. ಈ ನಾಯಿಯೂ ತನ್ನ ಜೊತೆ ಬರಬೇಕೆಂದು ಯುಧಿಷ್ಠಿರನು ಇಚ್ಛಿಸಿದನು. ಇಂದ್ರನು ಅಡ್ಡಿಪಡಿಸಿದರೂ ಸಹ ಈತನು ಸ್ಪಷ್ಟವಾಗಿ ಹೇಳಿದನು- 'ಸ್ವಾಮಿಭಕ್ತನಾಯಿಯನ್ನು ಬಿಟ್ಟು ನಾನೊಬ್ಬನೇ ಒಂಟಿಯಾಗಿ ಸ್ವರ್ಗಕ್ಕೆ ಹೋಗಲು ಸಿದ್ಧನಿಲ್ಲ.' ಈ ನಾಯಿ ಬೇರೆ ಯಾವುದೂ ಆಗಿರಲಿಲ್ಲ, ಸ್ವಯಂ ಧರ್ಮವೇ ಯುಧಿಷ್ಠಿರನ ಪರೀಕ್ಷೆಗಾಗಿ ಈತನ ಜೊತೆಯಲ್ಲಿತ್ತು. ಯುಧಿಷ್ಠಿರನ ಈ ಅನುಪಮ ಶರಣಾಗತವತ್ಸಲತೆಯನ್ನು ನೋಡಿ ಅವನು ತನ್ನ ನಿಜ ರೂಪದಲ್ಲಿ ಪ್ರಕಟವಾದನು ಮತ್ತು ಯುಧಿಷ್ಠಿರನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಇಂದ್ರ ಹಾಗೂ ಅನ್ಯ ದೇವತೆಗಳ, ದೇವರ್ಷಿಗಳ ಸಂಗಡ ಮೇಲಿನ ಲೋಕಗಳಿಗೆ ಹೊರಟು ಹೋದನು. ಆಗ ದೇವರ್ಷಿ ನಾರದರು ಈತನನ್ನು ಪ್ರಶಂಸಿಸುತ್ತಾ ಹೇಳಿದ್ದಾರೆ - 'ಮಹಾರಾಜ ಯುಧಿಷ್ಠಿರನಿಗಿಂತ ಮೊದಲು ಯಾರಾದರೂ ಭೌತಿಕ ಶರೀರದಿಂದ ಸ್ವರ್ಗಕ್ಕೆ ಹೋದರೆಂಬ ಮಾತು ಕೇಳಿ ಬಂದಿಲ್ಲ'. ಮೇಲೆ ಹೋಗುತ್ತಾ ಯುಧಿಷ್ಠಿರನು ನಕ್ಷತ್ರಗಳನ್ನು ದೇವತೆಗಳ ಲೋಕಗಳ ರೂಪದಲ್ಲಿ ನೋಡಿದನು. ಇಂದ್ರನೊಡನೆ ಹೇಳಿದನು- 'ನನ್ನ ತಮ್ಮಂದಿರು, ಬಂಧುಗಳು ಹಾಗೂ ದ್ರೌಪದಿ ಇರುವ ಕಡೆಗೇ ನನ್ನನ್ನು ಕರೆದುಕೊಂಡು ನಡೆಯಿರಿ, ಅಲ್ಲಿಗೆ ಹೋದರೆ ನನಗೆ ಶಾಂತಿ ದೊರೆಯುವುದು, ಬೇರೆಡೆ ಇಲ್ಲ. ಎಲ್ಲಿ ನನ್ನ ತಮ್ಮಂದಿರಿಲ್ಲವೋ, ಆ ಸ್ವರ್ಗವೂ ಸಹ ನನಗೆ ಯಾವ ಪ್ರಯೋಜನಕ್ಕೆ? ಈತನ ಬಂಧುಪ್ರೇಮ ಧನ್ಯವಾಯಿತು.

ಮುಂದೆ ಹೋಗಿ ದೇವರಾಜ ಇಂದ್ರನ ಮಾಯೆಯಿಂದ ಯುಧಿಷ್ಠಿರನಿಗೆ

ನರಕದ ದೃಶ್ಯ ಕಂಡು ಬಂದಾಗ ಈತನು ತನ್ನ ತಮ್ಮಂದಿರು ನರಳುತ್ತಿರುವ ಮತ್ತು ಅಳುತ್ತಿರುವ ಧ್ವನಿಯನ್ನು ಕೇಳಿದನು, ಜೊತೆಗೆ ಜನಗಳು ಹೀಗೆ ಹೇಳುತ್ತಿರುವುದೂ ಸಹ ಕೇಳಿ ಬಂತು- 'ಮಹಾರಾಜ! ಸ್ವಲ್ಪ ಹೊತ್ತು ನಿಂತುಕೊಳ್ಳಿ, ನೀವು ಇಲ್ಲಿರುವುದರಿಂದ ನಮಗೆ ನರಕಯಾತನೆ ಕಂಡುಬರುವುದಿಲ್ಲ.' ಆಗ ಈತನು ಅಲ್ಲಿಯೇ ನಿಂತನು ಮತ್ತು ಈತನನ್ನು ಕರೆದುಕೊಂಡು ಹೋಗಲು ಬಂದಿದ್ದ ದೇವದೂತನೊಡನೆ ಈತನು ಹೇಳಿದನು - 'ನಾನು ಇಲ್ಲಿಯೇ ಇರುವೆನು; ನಾನಿಲ್ಲಿರುವುದರಿಂದ ಇಲ್ಲಿನ ಜೀವರಿಗೆಲ್ಲಾ ಸುಖ ಸಿಕ್ಕುವುದಾದರೆ ಈ ನರಕವೇ ನನಗೆ ಸ್ವರ್ಗಕ್ಕಿಂತ ಶ್ರೇಷ್ಠ.' ಧರ್ಮರಾಜನ ದಯಾಳುತನ ಎಂತಹುದು?

ಸ್ವಲ್ಪ ಹೊತ್ತಿನ ನಂತರ ಆ ದೃಶ್ಯ ಮಾಯವಾಯಿತು ಮತ್ತು ಇಂದ್ರಾದಿ ದೇವತೆಗಳು ಅಲ್ಲಿಗೆ ಬಂದರು. ಅವರೆಲ್ಲರೂ ಈತನ ಈ ಉತ್ತಮ ಭಾವನೆಯಿಂದ ಬಹಳ ಸಂತೋಷಪಟ್ಟರು. ಅವರು ಹೇಳಿದರು - 'ನೀನು ಮೋಸದಿಂದ ಗುರುದ್ರೋಣಾಚಾರ್ಯರಿಗೆ ಅವರ ಪುತ್ರನು ಸತ್ತನೆಂಬ ನಂಬಿಕೆ ಹುಟ್ಟಿಸಿದ್ದೆ. ಆದುದರಿಂದ ನಿನಗೆ ಕಲ್ಪಿತ ನರಕದ ದೃಶ್ಯವನ್ನು ತೋರಿಸಲಾಯಿತು. ನಿನ್ನ ತಮ್ಮಂದಿರೆಲ್ಲಾ ದಿವ್ಯಲೋಕದಲ್ಲಿದ್ದಾರೆ'. ಅನಂತರ ಯುಧಿಷ್ಠಿರನು ಭಗವಂತನ ಪರಮಧಾಮಕ್ಕೆ ಹೋದನು. ಅಲ್ಲಿ ಈತನು ಶ್ರೀಕೃಷ್ಣನನ್ನು ಮೊದಲು ಮರ್ತ್ಯಲೋಕದಲ್ಲಿ ನೋಡುತ್ತಾ ಬಂದಿದ್ದ ರೂಪದಲ್ಲಿಯೇ ದರ್ಶನ ಮಾಡಿದನು. ಅಲ್ಲಿಯೇ ಶ್ರೀಕೃಷ್ಣನ ಸೇವೆ ಮಾಡುತ್ತಿರುವ ಅರ್ಜುನನ್ನೂ ನೋಡಿದನು. ತನ್ನ ತಮ್ಮಂದಿರು ಹಾಗೂ ದೇವಿ ದ್ರೌಪದಿಯನ್ನೂ ಈತನು ಬೇರೆ ಬೇರೆ ಸ್ಥಾನಗಳಲ್ಲಿ ನೋಡಿದನು. ಕೊನೆಗೆ ತನ್ನ ತಂದೆ ಧರ್ಮನ ಶರೀರದಲ್ಲಿ ಲೀನವಾಗಿ ಹೋದನು. ಈ ಪ್ರಕಾರ ಧರ್ಮಜನು ತನ್ನ ಧರ್ಮದ ಬಲದಿಂದ ಮಾನವರಿಗೆ ದುರ್ಲಭವಾದ ಗತಿಯನ್ನು ಪಡೆದನು.

ಯುಧಿಷ್ಠಿರನ ಪವಿತ್ರತೆಯ ಪ್ರಭಾವ ಎಷ್ಟು ಅದ್ಭುತವಾಗಿತ್ತೆಂದರೆ ಈತನು ಹೋದಕಡೆಗಳಲ್ಲೆಲ್ಲಾ ಅಲ್ಲಿನ ವಾತಾವರಣ ಅತ್ಯಂತ ಪವಿತ್ರವಾಗಿ ಹೋಗುತ್ತಿತ್ತು. ಪಾಂಡವರು ಅಜ್ಞಾತವಾಸದಲ್ಲಿ ವಿರಾಟರಾಜನ ಬಳಿ ವಾಸಿಸುತ್ತಾ

ಇದ್ದರು, ಆಗ ಕೌರವರು ಇವರನ್ನು ಗುರುತಿಸಲು ಯೋಚಿಸಿದರು. ಅದೇ ಪ್ರಸಂಗದಲ್ಲಿ ಪಾಂಡವರ ಪ್ರಭಾವವನ್ನು ಚೆನ್ನಾಗಿ ತಿಳಿದಿದ್ದ ಭೀಷ್ಮ ಪಿತಾಮಹರು ಅವರಿಗೆ ತಿಳಿಸಿದರು- ರಾಜಾ ಯುಧಿಷ್ಠಿರನು ಯಾವ ನಗರ ಅಥವಾ ದೇಶದಲ್ಲಿರುವನೋ ಅಲ್ಲಿನ ಜನತೆಯೂ ಸಹ ದಾನಶೀಲರು, ಪ್ರಿಯ-ಭಾಷಿಗಳು, ಜಿತೇಂದ್ರಿಯರೂ ಮತ್ತು ಲಜ್ಜಾಶೀಲರೂ ಆಗುವರು. ಅವರೆಲ್ಲಿರುವರೋ ಅಲ್ಲಿ ಜನರು ಸಂಯಮಿ, ಸತ್ಯಪರಾಯಣ ಹಾಗೂ ಧರ್ಮದಲ್ಲಿ ತತ್ಪರರಾಗುವರು. ಅವರಲ್ಲಿ ಅಸೂಯೆ, ಅಹಂಕಾರ, ಮತ್ಸರ ಮುಂತಾದ ದೋಷಗಳು ಇರುವುದಿಲ್ಲ. ಅಲ್ಲಿ ಯಾವಾಗಲೂ ವೇದ-ಘೋಷ ನಡೆಯುತ್ತಿರುತ್ತದೆ, ಯಜ್ಞಗಳು ನಡೆಯಬಹುದು, ಸಕಾಲದಲ್ಲಿ ಮಳೆಯಾಗುತ್ತಿರಬಹುದು, ಅಲ್ಲಿನ ಭೂಮಿ ಧನ-ಧಾನ್ಯದಿಂದ ತುಂಬಿದ್ದು, ಎಲ್ಲಾ ಪ್ರಕಾರಗಳ ಭಯ ಮತ್ತು ಉಪದ್ರವಗಳಿಂದ ಮುಕ್ತವಾಗಿರುವುದು, ಅಲ್ಲಿ ಹಸುಗಳು ಹೇರಳವಾಗಿರುವವು ಮತ್ತು ಹೃಷ್ಟಪುಷ್ಟವಾಗಿರುವವು. ಇಷ್ಟೇ ಅಲ್ಲಾ ನಾವು ಮೇಲೆ ನೋಡಿರುವಂತೆ, ಈತನ ಸನ್ನಿಧಿಯಿಂದ ನರಕದ ಪ್ರಾಣಿಗಳಿಗೂ ಸಹ ಸುಖ-ಶಾಂತಿ ಸಿಕ್ಕುತ್ತಿತ್ತು. ರಾಜಾ ನಹುಷನಿಗೆ ಮಹರ್ಷಿ ಅಗಸ್ತ್ಯರ ಶಾಪದಿಂದ ಹೆಬ್ಬಾವಿನ ಜನ್ಮ ಪ್ರಾಪ್ತಿಯಾಗಿತ್ತು. ಅವನು ಅದೇ ರೂಪದಲ್ಲಿ ಭೀಮಸೇನನನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದನು; ಯುಧಿಷ್ಠಿರನ ದರ್ಶನ ಹಾಗೂ ಈತನೊಡನೆ ಸಂಭಾಷಣೆ ಮಾಡಿದ ಮಾತ್ರದಿಂದ ಹೆಬ್ಬಾವಿನ ಜನ್ಮದಿಂದ ಬಿಡುಗಡೆಯಾಗಿ ಪುನಃ ಸ್ವರ್ಗವನ್ನು ಪಡೆದುಕೊಂಡನು. ಇಂತಹ ಪುಣ್ಯ ಪ್ರಸಿದ್ಧ ಮಹಾರಾಜ ಯುಧಿಷ್ಠಿರನ ಚರಿತ್ರೆಯನ್ನು ನಾವು ಎಷ್ಟು ಮನನ ಮಾಡಿಕೊಳ್ಳುವೆವೋ ಅಷ್ಟೇ ಪವಿತ್ರರಾಗುವೆವು.

'ಧರ್ಮೋ ವಿವರ್ದ್ಧತಿ ಯುಧಿಷ್ಠಿರ - ಕೀರ್ತನೇನ'.

❑❑❑

೪. ವೀರವರ ಅರ್ಜುನ

ಅರ್ಜುನನು ಸಾಕ್ಷಾತ್ ನರ-ಋಷಿಯ ಅವತಾರವಾಗಿದ್ದನು. ಇವನು ಶ್ರೀಕೃಷ್ಣಪರಮಾತ್ಮನ ಪರಮಭಕ್ತ, ಸ್ನೇಹಿತ ಮತ್ತು ಪ್ರೇಮಿಯಾಗಿದ್ದನು ಹಾಗೂ ಆತನ ಕೈಗಳ ಒಂದು ಉತ್ತಮ ಯಂತ್ರವಾಗಿದ್ದನು. ಇವನನ್ನು ನಿಮಿತ್ತವಾಗಿಸಿ ಕೊಂಡು ಭಗವಂತನು ಮಹಾಭಾರತ ಯುದ್ಧದಲ್ಲಿ ದೊಡ್ಡ-ದೊಡ್ಡ ಯೋಧರುಗಳನ್ನು ಸಂಹಾರ ಮಾಡಿಸಿದನು ಮತ್ತು ಈ ಪ್ರಕಾರ ತನ್ನ ಅವತಾರದ ಅನ್ಯತಮ ಉದ್ದೇಶವಾದ ಭೂ-ಭಾರಹರಣವನ್ನು ಪರಿಣಾಮಕಾರಿಗೊಳಿಸಿದನು. ಈ ಮಾತನ್ನು ಸ್ವತಃ ಶ್ರೀಕೃಷ್ಣ ಪರಮಾತ್ಮನೇ ಗೀತೆಯಲ್ಲಿ ವಿಶ್ವರೂಪ ದರ್ಶನದ ಪ್ರಸಂಗದಲ್ಲಿ ಹೀಗೆ ಹೇಳುತ್ತಾ ಒಪ್ಪಿಕೊಂಡಿದ್ದಾನೆ- 'ಈ ನಿಮ್ಮ ಶತ್ರುಗಳೆಲ್ಲರೂ ನನ್ನ ಮೂಲಕ ಮೊದಲೇ ಸತ್ತುಹೋಗಿದ್ದಾರೆ, ನೀನು ಇವರ ವಧೆಯಲ್ಲಿ ಕೇವಲ ನಿಮಿತ್ತನಾಗು. (೧೧/೩೩) ಇವನ ಭಕ್ತಿ ಹಾಗೂ ಮೈತ್ರಿಯನ್ನು ಭಗವಂತನು ಗೀತೆಯಲ್ಲಿ **'ಭಕ್ತೋऽಸಿ ಮೇ ಸಖಾ ಚೇತಿ, 'ಇಷ್ಟೋऽಸಿ ಮೇ ದೃಢಮಿತಿ'** ಇತ್ಯಾದಿ ಶಬ್ದಗಳಲ್ಲಿ ಸ್ವೀಕರಿಸಿದ್ದಾನೆ.

ಯಾರನ್ನು ಸ್ವತಃ ಭಗವಂತನೇ ತನ್ನ ಭಕ್ತ ಮತ್ತು ಪ್ರಿಯನೆಂದು ಭಾವಿಸಿ ಘೋಷಿಸಿದ್ದಾನೆಯೋ ಅವನು ಭಕ್ತನಾಗುವುದಕ್ಕೆ ಬೇರೆ ಯಾವ ಪ್ರಮಾಣದ ಅವಶ್ಯಕತೆ ಇದೆ? ಗೀತೆಯ ಅಂತ್ಯದಲ್ಲಿ **'ಕರಿಷ್ಯೇ ವಚನಂ ತವ'** ಎಂದು ಹೇಳಿ ಅರ್ಜುನನು ಸ್ವತಃ ಭಗವಂತನ ಕೈ-ಯಂತ್ರವಾಗಲು ಪ್ರತಿಜ್ಞೆ ಮಾಡಿದ್ದಾನೆ ಮತ್ತು ಮಹಾಭಾರತದ ಅವಲೋಕನದಿಂದ ಇವನು ಅಂತ್ಯದವರೆಗೂ ಈ ಪ್ರತಿಜ್ಞೆಯನ್ನು ಚೆನ್ನಾಗಿ ಪಾಲಿಸಿದನು ಎಂಬುದಕ್ಕೆ ಸಾಕಷ್ಟು ಪ್ರಮಾಣವೂ ದೊರೆಯುತ್ತದೆ. ಇವನು ಭಗವಂತನನ್ನು ತನ್ನ ಮಿತ್ರನೆಂದು ಭಾವಿಸಿದ್ದನು ಮತ್ತು ಆತನೊಡನೆ ಸರಿಸಮಾನವಾದ ಸಂಬಂಧವನ್ನೂ ಸಹ ಇಟ್ಟುಕೊಂಡಿದ್ದನು - ಎಂಬುದಕ್ಕೆ ಗೀತೆಯಿಂದಲೂ ಪ್ರಮಾಣ ದೊರೆಯುತ್ತದೆ. ಶ್ರೀಕೃಷ್ಣ ಮತ್ತು ಅರ್ಜುನ ಅನೇಕ ಸಾರಿ ಬೇರೆ-ಬೇರೆ ಸ್ಥಳಗಳಲ್ಲಿ ತಿಂಗಳುಗಳವರೆಗೆ

ಜೊತೆಯಲ್ಲಿಯೇ ಇರುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಸ್ವಾಭಾವಿಕವಾಗಿಯೇ ಅವರು ಕುಳಿತುಕೊಳ್ಳುವುದು, ಏಳುವುದು, ಊಟ-ತಿಂಡಿ, ತಿರುಗಾಟ, ಮಲಗುವುದು ಇತ್ಯಾದಿಗಳೆಲ್ಲಾ ಜೊತೆಯಲ್ಲಿಯೇ ಜರುಗುತ್ತಿದ್ದವು.

ಅಂತಹ ಸ್ಥಿತಿಯಲ್ಲಿ ಅವರಲ್ಲಿ ಪರಸ್ಪರ ಯಾವ ಸಂಕೋಚವೂ ಇರುತ್ತಿರಲಿಲ್ಲ. ಇಬ್ಬರ ಪರಸ್ಪರ ವ್ಯವಹಾರವು ಮುಚ್ಚುಮರೆಯಿಲ್ಲದೆ ನಡೆಯುತ್ತಿತ್ತು, ಅಭಿನ್ನ ಹೃದಯವಾಗಿತ್ತು, ಇಬ್ಬರೂ ಒಬ್ಬರು ಇನ್ನೊಬ್ಬರ ಅಂತಃಪುರಕ್ಕೂ ಸಹ ನಿಃಸಂಕೋಚವಾಗಿ ಹೋಗುವುದು - ಬರುವುದು, ಕುಳಿತುಕೊಳ್ಳುವುದು ಇತ್ಯಾದಿಗಳೆಲ್ಲಾ ಜರುಗುತ್ತಿದ್ದವು. ಇಬ್ಬರಲ್ಲಿಯೂ ಯಾವ ವಿಧವಾದ ಮುಚ್ಚು ಮರೆ, ಭೇದಗಳಿರಲಿಲ್ಲ. ಇವರಿಬ್ಬರಲ್ಲಿ ಎಂತಹ ಪ್ರೇಮವಿತ್ತು, ಇದನ್ನು ಸಂಜಯನು ಧೃತರಾಷ್ಟ್ರನಿಗೆ ಪಾಂಡವರ ಸಂದೇಶವನ್ನು ತಿಳಿಸುವ ಸಮಯದಲ್ಲಿ ವರ್ಣಿಸಿರುವನು. ಯುದ್ಧಕ್ಕೆ ಮೊದಲು, ಸಂಜಯನು ಕೌರವರ ಸಂದೇಶವನ್ನು ಪಾಂಡವರಿಗೆ ತಿಳಿಸಲು ಹೋದಾಗ ಶ್ರೀಕೃಷ್ಣ ಮತ್ತು ಅರ್ಜುನರನ್ನು ಅವನು ಯಾವ ಸ್ಥಿತಿಯಲ್ಲಿ ನೋಡಿದ, ಅದನ್ನು ವರ್ಣಿಸುತ್ತಾ ಸಂಜಯ ಹೇಳುತ್ತಾನೆ- 'ಮಹಾರಾಜ! ನಿಮ್ಮ ಸಂದೇಶವನ್ನು ತಿಳಿಸಲು ನಾನು ಅರ್ಜುನನ ಅಂತಃಪುರಕ್ಕೆ ಹೋದೆನು. ಅಲ್ಲಿಗೆ ಅಭಿಮನ್ಯು ಮತ್ತು ನಕುಲ ಸಹದೇವರೂ ಕೂಡ ಹೋಗಲಾರರು. ಅಲ್ಲಿಗೆ ಹೋದಾಗ ನಾನು ನೋಡಿದೆ ಶ್ರೀಕೃಷ್ಣ ತನ್ನ ಎರಡು ಕಾಲುಗಳನ್ನು ಅರ್ಜುನನ ತೊಡೆಯಮೇಲೆ ಇಟ್ಟುಕೊಂಡಿದ್ದಾನೆ ಹಾಗೂ ಅರ್ಜುನನ ಕಾಲುಗಳು ದ್ರೌಪದಿ ಮತ್ತು ಸತ್ಯಭಾಮೆಯ ತೊಡೆಯ ಮೇಲಿವೆ'.... ಇತ್ಯಾದಿ.

ಪಾಂಡವರು ಜೂಜಿನ ಶರತ್ತಿನ ಪ್ರಕಾರ ಕಾಡಿಗೆ ಹೊರಟು ಹೋಗುತ್ತಾರೆ, ಆಗ ಭಗವಂತನು ಅವರನ್ನು ನೋಡಲು ಬರುತ್ತಾನೆ. ಆ ಸಮಯದಲ್ಲಿ ಆತನು ಅರ್ಜುನನೊಡನೆ ತನ್ನ ಅಭಿನ್ನತೆಯ ಉಲ್ಲೇಖ ಮಾಡುತ್ತಾ ಹೇಳುತ್ತಾನೆ - 'ಅರ್ಜುನಾ! ನೀನೊಬ್ಬನೇ ನನ್ನವನು ಮತ್ತು ನಾನೊಬ್ಬನೇ ನಿನ್ನವನು. ಯಾರು ನನ್ನವರೋ, ಅವರು ನಿನ್ನವರು ಮತ್ತು ಯಾರು ನಿನ್ನವರೋ, ಅವರು ನನ್ನವರು. ಯಾರು ನಿನ್ನನ್ನು ದ್ವೇಷಿಸುತ್ತಾನೆಯೋ, ಅವನು ನನ್ನ

ದ್ವೇಷಿಯಾಗಿದ್ದಾನೆ. ಯಾರು ನಿನ್ನ ಪ್ರೇಮಿಯೋ, ಅವನು ನನ್ನ ಪ್ರೇಮಿ. ನೀನು ನರ ಮತ್ತು ನಾನು ನಾರಾಯಣ. ನೀನು ನನ್ನಿಂದ ಮತ್ತು ನಾನು ನಿನ್ನಿಂದ ಬೇರೆ ಬೇರೆಯಲ್ಲ. ನಮ್ಮಿಬ್ಬರಲ್ಲಿ ಯಾವ ಅಂತರವೂ ಇಲ್ಲ. ನಾವಿಬ್ಬರೂ ಒಂದೇ.' ಅರ್ಜುನನು ಶ್ರೀಕೃಷ್ಣನಿಗೆ ಎಷ್ಟು ಪ್ರಿಯನಾಗಿದ್ದ ಹಾಗೂ ಇಬ್ಬರಲ್ಲಿಯೂ ಎಂತಹ ಅಭಿನ್ನತೆಯಿತ್ತು - ಇದಕ್ಕೆ ಪ್ರಮಾಣ ಮಹಾಭಾರತದ ಅನೇಕ ಘಟನೆಗಳಲ್ಲಿ ದೊರೆಯುತ್ತದೆ. ಅರ್ಜುನನ ತೀರ್ಥಯಾತ್ರೆಯ ಪ್ರಸಂಗದಲ್ಲಿ ಪ್ರಭಾಸಕ್ಷೇತ್ರಕ್ಕೆ ಹೋದಾಗ ಶ್ರೀಕೃಷ್ಣ ಪರಮಾತ್ಮನು ಅವನ ಸಮಾಚಾರವನ್ನು ತಿಳಿದಾಗ ಅವನನ್ನು ನೋಡಲು ದ್ವಾರಕೆಯಿಂದ ಪ್ರಭಾಸ ಕ್ಷೇತ್ರಕ್ಕೆ ಹೋಗುತ್ತಾನೆ. ಅಲ್ಲಿಂದ ಅವನನ್ನು ರೈವತಕ ಪರ್ವತಕ್ಕೆ ಕರೆದುಕೊಂಡು ಬಂದು ಅನೇಕ ದಿನ ಅವನೊಡನೆ ಅಲ್ಲಿ ಇರುತ್ತಾನೆ. ರೈವತಕ ಪರ್ವತದಿಂದ ಇಬ್ಬರೂ ದ್ವಾರಕೆಗೆ ಬರುತ್ತಾರೆ ಮತ್ತು ದ್ವಾರಕೆಯಲ್ಲಿ ಅರ್ಜುನನು ಶ್ರೀಕೃಷ್ಣನ ಅರಮನೆಯಲ್ಲಿಯೇ ಅನೇಕ ದಿನಗಳವರೆಗೆ ಆತನ ಪ್ರಿಯ ಅತಿಥಿಯ ರೂಪದಲ್ಲಿರುತ್ತಾನೆ. ರಾತ್ರಿ ಇಬ್ಬರೂ ಜೊತೆಯಲ್ಲಿ ಮಲಗಿಕೊಳ್ಳುತ್ತಿದ್ದರು. ಅಲ್ಲಿ ಅರ್ಜುನನು ಶ್ರೀಕೃಷ್ಣನ ಸಹೋದರಿ ಸುಭದ್ರೆಯೊಡನೆ ವಿವಾಹ ಮಾಡಿಕೊಳ್ಳಲು ಇಚ್ಛಿಸುತ್ತಾನೆ - ಎಂಬುದು ಶ್ರೀಕೃಷ್ಣನಿಗೆ ತಿಳಿದಾಗ ಆತನು ಬಲರಾಮನನ್ನು ಕೇಳದೆಯೇ ಅದಕ್ಕೆ ಅನುಮತಿ ಕೊಟ್ಟುಬಿಡುತ್ತಾನೆ ಮತ್ತು ಆಕೆಯನ್ನು ಅಪಹರಿಸಿ ಕರೆದುಕೊಂಡು ಹೋಗುವ ಯುಕ್ತಿಯನ್ನೂ ಹೇಳಿಕೊಡುತ್ತಾನೆ. ಅಷ್ಟೇ ಅಲ್ಲ, ತನ್ನ ರಥ ಮತ್ತು ಆಯುಧಗಳನ್ನೂ ಅವನಿಗೆ ಕೊಟ್ಟುಬಿಡುತ್ತಾನೆ. ಸುಭದ್ರಾ-ಹರಣ ಆದ ನಂತರ ಬಲರಾಮನು ಇದನ್ನು ವಿರೋಧಿಸಿದಾಗ, ಶ್ರೀಕೃಷ್ಣನು ಅವನನ್ನು ಸಮಾಧಾನಪಡಿಸಿ ಒಪ್ಪಿಸುತ್ತಾನೆ ಹಾಗೂ ಅಲ್ಲಿಯೇ ದ್ವಾರಕೆಯಲ್ಲಿ ಸುಭದ್ರೆಯ ಪಾಣಿಗ್ರಹಣ ಆಗಿ ಹೋಗುತ್ತದೆ. ಇಷ್ಟೇ ಅಲ್ಲ, ಖಾಂಡವ ವನ ದಹನದ ಸಂದರ್ಭದಲ್ಲಿ ಶ್ರೀಕೃಷ್ಣಪರಮಾತ್ಮನು ತನ್ನ ಮತ್ತು ಅರ್ಜುನನ ಮೈತ್ರಿಯು ಉತ್ತರೋತ್ತರ ಹೆಚ್ಚುತ್ತಾ ಹೋಗುವಂತಾಗಲೆಂದು ಇಂದ್ರನಿಂದ ವರದಾನ ಕೇಳುತ್ತಾನೆ. ಖಾಂಡವದಹನದ ಪ್ರಸಂಗದಲ್ಲಿಯೇ ಅರ್ಜುನ ಮತ್ತು ಶ್ರೀಕೃಷ್ಣರ

ಅಭಿನ್ನತೆಯ ಮತ್ತೊಂದು ಪುರಾವೆ ಸಿಗುತ್ತದೆ. ಖಾಂಡವ ವನದ ಭಯಂಕರ ಅಗ್ನಿಕಾಂಡದಿಂದ ಮಯನೆಂಬ ದಾನವ ಶಿಲ್ಪಿಯು ಓಡಿಹೋಗುವ ಯತ್ನ ಮಾಡುತ್ತಾ ಇದ್ದನು. ಅಗ್ನಿದೇವನು ಸಾಕಾರ ರೂಪತಾಳಿ ಅವನನ್ನು ಸುಟ್ಟು ಹಾಕುವುದಕ್ಕಾಗಿ ಅವನ ಹಿಂದೆ ಓಡುತ್ತಾ ಇದ್ದನು. ಅವನ ಸಹಾಯಕ್ಕಾಗಿ ಶ್ರೀಕೃಷ್ಣ ಪರಮಾತ್ಮನೂ ತನ್ನ ಚಕ್ರಸಹಿತ ಅವನನ್ನು ಕೊಲ್ಲಲು ಮುಂದಾದನು. ಮಯನು ತಾನು ಬದುಕುವ ಯಾವ ಉಪಾಯವನ್ನೂ ಕಾಣದೆ ಅರ್ಜುನನ ಮರೆಹೊಕ್ಕನು ಮತ್ತು ಅರ್ಜುನನು ಅವನಿಗೆ ಅಭಯ ಹಸ್ತ ನೀಡಿದನು. ಆಗ ಶ್ರೀಕೃಷ್ಣನು ತನ್ನ ಚಕ್ರವನ್ನು ಹಿಂದಕ್ಕೆ ತೆಗೆದುಕೊಂಡನು ಮತ್ತು ಅಗ್ನಿದೇವನೂ ಸಹ ಅವನನ್ನು ಹಿಂಬಾಲಿಸುವುದನ್ನು ಬಿಟ್ಟುಬಿಟ್ಟನು. ಮಯನ ಪ್ರಾಣ ಉಳಿಯಿತು. ಮಯನು ಉಪಕಾರಕ್ಕೆ ಪ್ರತ್ಯುಪಕಾರವಾಗಿ ಅರ್ಜುನನ ಸೇವೆ ಮಾಡಲು ಇಚ್ಛಿಸಿದನು. ಅರ್ಜುನ ಹೇಳಿದನು- 'ನೀನು ಶ್ರೀಕೃಷ್ಣನ ಸೇವೆ ಮಾಡು, ಅದರಿಂದ ನನ್ನ ಸೇವೆಯಾಗುವುದು'. ಮಯನು ಬಹು ನಿಪುಣ ಶಿಲ್ಪಿಯಾಗಿದ್ದನು. ಶ್ರೀಕೃಷ್ಣನು ಅವನಿಂದ ಮಹಾರಾಜ ಯುಧಿಷ್ಠಿರನಿಗಾಗಿ ಒಂದು ಬಹಳ ಸುಂದರವಾದ ಸಭಾಭವನವನ್ನು ನಿರ್ಮಾಣ ಮಾಡಿಸಿದನು. ಈ ರೀತಿ ಅರ್ಜುನ ಮತ್ತು ಶ್ರೀಕೃಷ್ಣ ಯಾವಾಗಲೂ ಪರಸ್ಪರ ಪ್ರಿಯವಾದುದನ್ನೇ ಮಾಡುತ್ತಾ ಇರುತ್ತಿದ್ದರು.

ಯಾವ ಪ್ರಕಾರ ಶ್ರೀಕೃಷ್ಣ ಅರ್ಜುನನನ್ನು ಪ್ರೀತಿಸುತ್ತಿದ್ದನೋ, ಅದೇ ಪ್ರಕಾರ ಅರ್ಜುನನೂ ಕೂಡ ಶ್ರೀಕೃಷ್ಣನನ್ನು ತನ್ನ ಪರಮ ಆತ್ಮೀಯ ಮತ್ತು ಹಿತಕಾರಿಯೆಂದು ತಿಳಿದಿದ್ದನು. ಈ ಕಾರಣದಿಂದಲೇ ಇವನು ಶ್ರೀಕೃಷ್ಣಪರಮಾತ್ಮನ ನೂರು ಕೋಟಿ ನಾರಾಯಣೀ ಸೈನ್ಯವನ್ನು ತೆಗೆದುಕೊಳ್ಳದೆ ಒಂಟಿಯಾದ, ನಿರಾಯುಧನಾದ ಶ್ರೀಕೃಷ್ಣನನ್ನೇ ಸಹಾಯಕನ ರೂಪದಲ್ಲಿ ಆರಿಸಿಕೊಂಡನು. ಎಲ್ಲಿ ಭಗವಂತ ಮತ್ತು ಆತನ ಐಶ್ವರ್ಯವನ್ನು ಹೋಲಿಸಲಾಗುವುದೋ, ಅಲ್ಲಿ ನಿಜವಾದ ಭಕ್ತರು ಐಶ್ವರ್ಯವನ್ನು ತ್ಯಜಿಸಿ ಭಗವಂತನನ್ನೇ ಆರಿಸಿಕೊಳ್ಳುತ್ತಾರೆ. ಶ್ರೀಕೃಷ್ಣನೂ ಇವನ ಪ್ರೇಮಕ್ಕೆ ಮಾರುಹೋಗಿ ಯುದ್ಧದಲ್ಲಿ ಇವನ ಸಾರಥ್ಯವನ್ನು ಸ್ವೀಕರಿಸಿದನು. ಜೊತೆಗೆ ಅರ್ಜುನ ತನ್ನ ಜೀವನ-

ರಥದ ಅಧಿಕಾರ ಸೂತ್ರವನ್ನೂ ಆತನ ಕೈಗೇ ವಹಿಸಿಕೊಟ್ಟು, ಶಾಶ್ವತವಾಗಿ ನಿಶ್ಚಿಂತನಾದನು. ಅಂದಮೇಲೆ ಅರ್ಜುನನ ವಿಜಯ ಮತ್ತು ರಕ್ಷಣೆ-ಯೋಗ ಮತ್ತು ಕ್ಷೇಮ- ಎರಡರ ಯೋಚನೆಯೂ ಸರ್ವಸಮರ್ಥ ಶ್ರೀಕೃಷ್ಣನ ಪಾಲಿಗೇ ಸೇರಿಹೋಯಿತು. ಯಾರೇ ಆಗಲಿ ಅನನ್ಯಭಾವದಿಂದ ಆತನ ಚಿಂತನೆ ಮಾಡುತ್ತಾ ತನ್ನ ಎಲ್ಲಾ ಚಿಂತೆಗಳನ್ನೂ ಆತನಮೇಲೆ ಹಾಕಿಬಿಡುತ್ತಾನೆಯೋ, ಅವನ ಯೋಗ ಕ್ಷೇಮದ ಹೊಣೆಯನ್ನು ಆತನು ವಹಿಸಿಕೊಳ್ಳುತ್ತಾನೆ- ಎಂಬುದು ಆತನ ಪ್ರತಿಜ್ಞೆಯಾಗಿ ಸ್ಥಿರಪಟ್ಟಿದೆ. ಯಾರು ಬೇಕಾದರೂ ತನ್ನ ಭಾರವನ್ನು ಆತನ ಮೇಲೆ ಹಾಕಿ ನೋಡಬಹುದು.

ಸರಿ, ಈಗ ಅರ್ಜುನನ್ನು ಗೆಲ್ಲಿಸುವ ಮತ್ತು ಭೀಷ್ಮರಂತಹ ಪ್ರಚಂಡ ಪರಾಕ್ರಮಿ ವೀರರಿಂದ ಇವನನ್ನು ರಕ್ಷಿಸುವ ಜವಾಬ್ದಾರಿಯೆಲ್ಲಾ ಶ್ರೀಕೃಷ್ಣನ ಮೇಲೆ ಬಿತ್ತು. ಹೀಗೆ ಪಾಂಡವರಿಗೇ ವಿಜಯವೆಂಬುದು ಮೊದಲಿನಿಂದಲೇ ನಿಶ್ಚಿತವಾಗಿತ್ತು; ಏಕೆಂದರೆ ಧರ್ಮ ಇವರ ಜೊತೆಗಿತ್ತು. ಯಾವ ಕಡೆ ಧರ್ಮ ಆ ಕಡೆ ಶ್ರೀಕೃಷ್ಣ ಮತ್ತು ಯಾವ ಕಡೆ ಶ್ರೀಕೃಷ್ಣ ಆ ಕಡೆ ವಿಜಯ - ಇದು ಸದಾ ಶಾಶ್ವತ ನಿಯಮವಾಗಿದೆ. ಯುದ್ಧದ ಪ್ರಾರಂಭದಲ್ಲಿ ಶತ್ರುಗಳನ್ನು ಪರಾಜಯಗೊಳಿಸುವುದಕ್ಕಾಗಿ ಅರ್ಜುನನಿಂದ ರಣಚಂಡಿಯ ಆವಾಹನೆ ಮತ್ತು ಸ್ತೋತ್ರ ಮಾಡಿಸುವುದು ಹಾಗೂ ಪ್ರತ್ಯಕ್ಷ ದರ್ಶನ ಮಾಡಿಸಿ ವಿಜಯಕ್ಕಾಗಿ ಆಕೆಯ ಆಶೀರ್ವಾದ ಪಡೆಯುವುದು, ಭಗವದ್ಗೀತೆಯ ಉಪದೇಶ ಹಾಗೂ ವಿಶ್ವರೂಪದರ್ಶನದ ಮೂಲಕ ಈತನ ಮೋಹ ನಿವಾರಣೆ ಮಾಡುವುದು, ಯುದ್ಧದಲ್ಲಿ ಶಸ್ತ್ರ ಹಿಡಿಯುವುದಿಲ್ಲ ಎಂಬ ಪ್ರತಿಜ್ಞೆಯನ್ನೂ ಗಮನಿಸದೆ ಭೀಷ್ಮರ ಪ್ರಚಂಡ ಬಾಣ ವರ್ಷವನ್ನು ತಡೆಯಲು ಅಸಮರ್ಥನಾದ ಅರ್ಜುನನ ಪ್ರಾಣರಕ್ಷಣೆಗಾಗಿ ಒಂದು ಸಲ ಚಕ್ರವನ್ನು ತೆಗೆದುಕೊಂಡು ಮತ್ತೊಂದು ಬಾರಿ ಬಾರಕೋಲು ತೆಗೆದುಕೊಂಡು ಭೀಷ್ಮರ ಮೇಲೆ ಏರಿ ಹೋಗುವುದು, ಭಗದತ್ತನು ಪ್ರಯೋಗಿಸಿದ ಸರ್ವಸಂಹಾರಕ ವೈಷ್ಣವಾಸ್ತ್ರವನ್ನು ತನ್ನ ಎದೆಯ ಮೇಲೆ ಧರಿಸುವುದು, ರಥವನ್ನು ಕಾಲುಗಳಿಂದ ಒತ್ತಿ ಕರ್ಣನು ಬಿಟ್ಟ ಸರ್ಪಾಸ್ತ್ರದಿಂದ ಅರ್ಜುನನ್ನು ರಕ್ಷಿಸುವುದು ಹಾಗೂ ಅಸ್ತ್ರಗಳಿಂದ ಸುಟ್ಟ

ಅರ್ಜುನನ ರಥವನ್ನು ತನ್ನ ಸಂಕಲ್ಪದಿಂದ ಸ್ಥಿರವಾಗಿಡುವುದು ಇತ್ಯಾದಿ ಅನೇಕಾನೇಕ ಲೀಲೆಗಳನ್ನು ಶ್ರೀಕೃಷ್ಣನು ಅರ್ಜುನನ ಯೋಗಕ್ಷೇಮದ ನಿರ್ವಹಣೆಗಾಗಿ ಮಾಡಿದನು.

ಭೀಷ್ಮರು ಪಾಂಡವರೊಡನೆ ಹೋರಾಡುತ್ತಾ ಹೋರಾಡುತ್ತಾ ಒಂಭತ್ತು ದಿವಸಗಳು ಮುಗಿದಿದ್ದವು. ಆದರೂ ಅವರ ಪರಾಕ್ರಮದಲ್ಲಿ ಯಾವ ರೀತಿಯ ಕೊರತೆಯೂ ಕಂಡು ಬರಲಿಲ್ಲ. ಪ್ರತಿದಿನವೂ ಅವರು ಪಾಂಡವ-ಪಕ್ಷದ ಸಾವಿರಾರು ವೀರರನ್ನು ಸಂಹಾರ ಮಾಡುತ್ತಿದ್ದರು. ಅವರನ್ನು ಜಯಿಸುವುದಕ್ಕೆ ಪಾಂಡವರಿಗೆ ಯಾವ ಮಾರ್ಗವೂ ಹೊಳೆಯುತ್ತಿರಲಿಲ್ಲ. ಮಹಾರಾಜ ಯುಧಿಷ್ಠಿರನು ಬಹಳ ಕರುಣಾಪೂರ್ಣ ಶಬ್ದಗಳಲ್ಲಿ ಪರಿಸ್ಥಿತಿಯನ್ನೆಲ್ಲಾ ತನ್ನ ನೌಕೆಯ ನಾವಿಕನಾದ ಶ್ರೀಕೃಷ್ಣನ ಮುಂದಿಟ್ಟನು. ಶ್ರೀಕೃಷ್ಣನು ಅವನನ್ನು ಸಂತೈಸುತ್ತಾ ಹೇಳಿದ ಮಾತುಗಳಿಂದ ಆತನ-ಅರ್ಜುನನ ಬಗೆಗಿನ ಅಸಾಧಾರಣ ಪ್ರೇಮ ಪ್ರಕಟವಾಗುತ್ತದೆ. ಜೊತೆಗೆ ಅರ್ಜುನನ ಸಂಬಂಧದಲ್ಲಿ ಆತನಿಗೆ ಎಂತಹ ಶ್ರೇಷ್ಠ ಭಾವನೆಯಿತ್ತು ಎಂಬುದೂ ಕೂಡ ವೇದ್ಯವಾಗುತ್ತದೆ. ಶ್ರೀಕೃಷ್ಣ ಹೇಳಿದನು- 'ಧರ್ಮರಾಜ! ನೀನು ಖಂಡಿತ ಚಿಂತಿಸಬೇಡ. ಭೀಷ್ಮರು ಕೊಲ್ಲಲ್ಪಟ್ಟ ನಂತರವೇ ನಿಮಗೆ ವಿಜಯ ಕಂಡುಬರುವುದಾದರೆ, ನಾನು ಒಬ್ಬನೇ ಅವರನ್ನು ಕೊಲ್ಲಬಲ್ಲೆನು. ನಿನ್ನ ತಮ್ಮ ಅರ್ಜುನನು ನನ್ನ ಮಿತ್ರ, ಸಂಬಂಧಿ ಹಾಗೂ ಶಿಷ್ಯನಾಗಿದ್ದಾನೆ. ಅವಶ್ಯಕತೆ ಕಂಡುಬಂದರೆ ನಾನು ಇವನಿಗಾಗಿ ನನ್ನ ಶರೀರದ ಮಾಂಸವನ್ನೂ ಸಹ ಕತ್ತರಿಸಿ ಕೊಡಬಲ್ಲೆನು ಮತ್ತು ಈತನೂ ಸಹ ನನಗೋಸ್ಕರ ಪ್ರಾಣ ತ್ಯಾಗ ಮಾಡಬಲ್ಲನು. ಅರ್ಜುನನು ಉಪಪ್ಲಾವ್ಯದಲ್ಲಿ ಎಲ್ಲರ ಎದುರಿಗೆ ಭೀಷ್ಮರನ್ನು ಕೊಲ್ಲುತ್ತೇನೆಂದು ಪ್ರತಿಜ್ಞೆ ಮಾಡಿದ್ದನು. ನಾನು ಅದನ್ನು ಪ್ರತಿಯೊಂದು ರೀತಿಯಿಂದಲೂ ರಕ್ಷಿಸಬೇಕು. ಯಾವ ಕೆಲಸಕ್ಕಾಗಿ ಅರ್ಜುನನು ನನಗೆ ಆಜ್ಞೆ ಮಾಡುತ್ತಾನೆಯೋ, ಅದನ್ನು ನಾನು ಅಗತ್ಯವಾಗಿ ಮಾಡಬೇಕು. ಭೀಷ್ಮರನ್ನು ಕೊಲ್ಲುವುದು ಅರ್ಜುನನಿಗೆ ಯಾವ ದೊಡ್ಡ ವಿಷಯ, ಮಹಾರಾಜ! ಅರ್ಜುನನು ಸಿದ್ಧನಾದರೆ ಅಸಂಭವವಾದ ಕಾರ್ಯವನ್ನೂ ಕೂಡ ಮಾಡಿಬಿಡಬಲ್ಲನು. ದೈತ್ಯ ಮತ್ತು ದಾನವರೊಡನೆ

ಸಂಪೂರ್ಣವಾಗಿ ದೇವತೆಗಳೂ ಯುದ್ಧ ಮಾಡಲು ಬಂದರೂ, ಅರ್ಜುನನು ಅವರನ್ನು ಪರಾಭವಗೊಳಿಸಬಲ್ಲನು. ಹೀಗಿರುವಾಗ ಭೀಷ್ಮರ ವಿಷಯವೇನು? ನಿಜ. **'ಕರ್ತುಮಕರ್ತುಮನ್ಯಥಾಕರ್ತುಂ ಸಮರ್ಥಃ'** ಭಗವಂತನು ಯಾರ ರಕ್ಷಕ ಮತ್ತು ಸಹಾಯಕನೋ, ಅವನು ಏನು ತಾನೇ ಮಾಡಲಾರನು?

ಪುತ್ರಶೋಕದಿಂದ ಪೀಡಿತನಾದ ಅರ್ಜುನನು ಅಭಿಮನ್ಯುವಿನ ಮರಣಕ್ಕೆ ಪ್ರಧಾನ ಕಾರಣನಾದ ಜಯದ್ರಥನನ್ನು ಮಾರನೇ ದಿವಸ ಸೂರ್ಯಾಸ್ತಕ್ಕಿಂತ ಮೊದಲು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿಬಿಡುತ್ತಾನೆ. ಜೊತೆಗೆ - 'ಹಾಗೆ ಮಾಡದೇ ಹೋದರೆ ನಾನು ಸ್ವತಃ ಉರಿಯುತ್ತಿರುವ ಬೆಂಕಿಯಲ್ಲಿ ಹಾರಿಕೊಳ್ಳುವೆನು.' ಎಂಬ ಶಪಥವನ್ನೂ ಕೈಗೊಳ್ಳುತ್ತಾನೆ.

'ಯೋಗಕ್ಷೇಮಂ ವಹಾಮ್ಯಹಮ್' ಈ ವಚನಕ್ಕೆ ಅನುಸಾರವಾಗಿ ಅರ್ಜುನನ ಈ ಪ್ರತಿಜ್ಞೆಯನ್ನು ಪೂರ್ಣಮಾಡುವ ಹೊಣೆ ಶ್ರೀಕೃಷ್ಣನ ಮೇಲೆ ಬಿತ್ತು. ಅರ್ಜುನನಾದರೋ ಆತನ ಭರವಸೆಯಿಂದ ನಿಶ್ಚಿಂತನಾಗಿದ್ದನು. ಈ ಕಡೆ ಕೌರವರ ಕಡೆಯಿಂದ ಜಯದ್ರಥನನ್ನು ಉಳಿಸುವ ಪೂರ್ಣ ಪ್ರಯತ್ನ ನಡೆಯುತ್ತಿತ್ತು. ಅದೇ ದಿವಸ ಶ್ರೀಕೃಷ್ಣನು ಅರ್ಧರಾತ್ರಿ ಸಮಯಕ್ಕೇ ಎಚ್ಚೆತ್ತನು. ಸಾರಥಿ ದಾರುಕನನ್ನು ಕರೆದು ಹೇಳಿದನು- 'ದಾರುಕ! ನನಗೆ ಪತ್ನೀ, ಮಿತ್ರ ಅಥವಾ ಬಂಧು ಬಳಗ ಯಾರೂ ಸಹ ಅರ್ಜುನನಿಗಿಂತ ಹೆಚ್ಚು ಪ್ರಿಯರಲ್ಲ. ಈ ಪ್ರಪಂಚವನ್ನು ಅರ್ಜುನನಿಲ್ಲದೆ ನಾನು ಒಂದು ಕ್ಷಣ ಕೂಡಾ ನೋಡಲಾರೆನು. ಹಾಗೆ ಆಗುವುದೂ ಸಾಧ್ಯವಿಲ್ಲ. ನಾನು ಅರ್ಜುನನ ಮಿತ್ರನೆಂಬುದನ್ನು ನಾಳೆ ಇಡೀ ಜಗತ್ತು ಪರಿಚಯ ಮಾಡಿಕೊಳ್ಳುವುದು. ಯಾರು ಆತನನ್ನು ದ್ವೇಷಿಸುತ್ತಾನೆಯೋ, ಅವನು ನನ್ನ ದ್ವೇಷಿ. ಯಾರು ಅವನಿಗೆ ಅನುಕೂಲನೋ ಅವನು ನನಗೂ ಅನುಕೂಲನು. ಅರ್ಜುನನು ನನ್ನ ಅರ್ಧ ಶರೀರವೆಂಬ ಮಾತನ್ನು ನೀನು ಖಂಡಿತ ನಿಶ್ಚಯಮಾಡಿಕೊ. ನಾಳೆ ಅರ್ಜುನನು ಯಾವ ಯಾವ ವೀರರನ್ನು ಸಂಹಾರ ಮಾಡುವ ಪ್ರಯತ್ನ ಮಾಡುವನೋ, ಅಲ್ಲಲ್ಲಿ ಖಂಡಿತ ಅವನಿಗೆ ವಿಜಯವುಂಟಾಗುವುದೆಂಬ ನಂಬಿಕೆ ನನಗಿದೆ. 'ಸರಿ, ಇಂತಹ ಮಿತ್ರವತ್ಸಲ ಪ್ರಭು ಯಾರಿಗಾಗಿ ಈ ಪ್ರಕಾರ ಸನ್ನದ್ಧನಾಗಿರುವನೋ

ಅವನಿಗೆ ವಿಜಯವಾಗುವುದರಲ್ಲಿ ಸಂದೇಹವೇನಿರಬಹುದು? ಮರುದಿನ ಶ್ರೀಕೃಷ್ಣನು ತಿಳಿಸಿದ ಯುಕ್ತಿಯಿಂದ ಅರ್ಜುನನು ಜಯದ್ರಥನನ್ನು ಕೊಂದನು. ಶ್ರೀಕೃಷ್ಣನ ಕೃಪೆಯಿಂದ ಅರ್ಜುನನ ಒಂದು ಕೂದಲೂ ಸಹ ಕೊಂಕಲಿಲ್ಲ- ಎಂಬುದನ್ನು ಇಡೀ ಜಗತ್ತು ಕಂಡುಕೊಂಡಿತು.

ಕರ್ಣನು ಅರ್ಜುನನೊಡನೆ ಪ್ರಾರಂಭದಿಂದಲೂ ಅಸೂಯೆಪಡುತ್ತಿದ್ದನು. ಇಬ್ಬರೂ ಒಬ್ಬರು- ಮತ್ತೊಬ್ಬರನ್ನು ಕೊಲ್ಲಲು ಹವಣಿಸುತ್ತಿದ್ದರು. ಭೀಷ್ಮರ ಮರಣಾನಂತರ ಶ್ರೀಕೃಷ್ಣನಿಗೆ ಅರ್ಜುನನ ಕುರಿತು ಕರ್ಣನಿಂದ ಅತ್ಯಧಿಕ ಭಯವಿತ್ತು. ಅವನ ಹತ್ತಿರ ಇಂದ್ರನು ಕೊಟ್ಟಿದ್ದ ಒಂದು ಅಮೋಘವಾದ ಶಕ್ತಿಯಿತ್ತು. ಅವನು ಅದನ್ನು ಅರ್ಜುನನ್ನು ಕೊಲ್ಲುವುದಕ್ಕಾಗಿಯೇ ಇಟ್ಟುಕೊಂಡಿದ್ದನು. ಆ ಶಕ್ತಿಯ ಬಲದಿಂದ ಅವನು ಅರ್ಜುನನು ಸತ್ತವನೆಂದೇ ತಿಳಿದುಕೊಂಡಿದ್ದನು. ಅದರ ಪ್ರಯೋಗ ಒಂದು ಸಲ ಮಾತ್ರ ಆಗುವಂತಿತ್ತು. ಕರ್ಣನನ್ನು ಆ ಶಕ್ತಿಯಿಂದ ಕುಂದುವಂತೆ ಮಾಡುವುದಕ್ಕಾಗಿ ಭಗವಂತನು ಅವನನ್ನು ಭೀಮಸೇನನ ಮಗ ಘಟೋತ್ಕಚನೊಡನೆ ಯುದ್ಧ ಮಾಡಿಸಿದನು. ಅವನು ಎಂತಹ ಅದ್ಭುತ ಪರಾಕ್ರಮ ತೋರಿಸಿದನೆಂದರೆ ಕರ್ಣನ ಪ್ರಾಣಕ್ಕೇ ಸಂಚಕಾರ ಒದಗಿತು. ಅವನು ಆತನ ಹೊಡೆತಗಳನ್ನು ಸಹಿಸಿಕೊಳ್ಳಲಾಗಲಿಲ್ಲ. ಅವನು ವಿಧಿಯಿಲ್ಲದೆ ಆ ಇಂದ್ರದತ್ತ ಶಕ್ತಿಯನ್ನು ಘಟೋತ್ಕಚನ ಮೇಲೆ ಪ್ರಯೋಗಿಸಿದನು ಅದು ಘಟೋತ್ಕಚನನ್ನು ಸಂಹಾರ ಮಾಡಿತು. ಘಟೋತ್ಕಚನು ಕೊಲ್ಲಲ್ಪಟ್ಟಿದ್ದರಿಂದ ಪಾಂಡವರ ಶಿಬಿರದಲ್ಲಿ ದುಃಖ ಆವರಿಸಿತು. ಎಲ್ಲರ ಕಣ್ಣುಗಳಲ್ಲಿಯೂ ಕಣ್ಣೀರಧಾರೆ ಹರಿಯಿತು. ಆದರೆ ಈ ಘಟನೆಯಿಂದ ಶ್ರೀಕೃಷ್ಣನಿಗೆ ಬಹಳ ಸಂತೋಷವಾಯಿತು. ಹರ್ಷದಿಂದ ಓಲಾಡಿ ಕುಣಿದನು. ಆತನು ಅರ್ಜುನನ್ನು ಅಪ್ಪಿಕೊಂಡು ಅವನ ಬೆನ್ನನ್ನು ತಟ್ಟಿದನು; ಪದೇ-ಪದೇ ಹರ್ಷಧ್ವನಿಗೈದನು. ಆತನು ಸಂದರ್ಭವಿಲ್ಲದೆ ಈ ಪ್ರಕಾರ ಆನಂದ ಪಡುವುದರ ರಹಸ್ಯವನ್ನು ಅರ್ಜುನನು ತಿಳಿಯಲಿಚ್ಛಿಸಿದನು; ಏಕೆಂದರೆ, ಯಾವ ಕ್ರಿಯೆಯೂ ಅಕಾರಣವಾಗಿರುವುದಿಲ್ಲವೆಂಬುದು ಅವನಿಗೆ ತಿಳಿದಿತ್ತು. ಇದಕ್ಕೆ ಉತ್ತರವಾಗಿ ಶ್ರೀಕೃಷ್ಣನು ಏನೇನು ಹೇಳಿದನೋ, ಅದರಿಂದ ಆತನಿಗೆ ಅರ್ಜುನನಲ್ಲಿದ್ದ

ಅಗಾಧ ಪ್ರೇಮ ಪ್ರಕಟವಾಗುತ್ತದೆ. ಆತನು ಹೇಳಿದನು- 'ಅರ್ಜುನ! ಇಂದು ನಿಜವಾಗಿಯೂ ನನಗೆ ಬಹಳ ಆನಂದದ ಸಂದರ್ಭವಾಗಿದೆ. ಕಾರಣವನ್ನು ತಿಳಿದುಕೊಳ್ಳ ಬೇಕೆನ್ನುವಿಯಾ? ಕೇಳು, ಕರ್ಣನು ಘಟೋತ್ಕಚನನ್ನು ಕೊಂದನೆಂಬುದು ನಿನಗೆ ಗೊತ್ತು. ಆದರೆ ಇಂದ್ರನು ಕೊಟ್ಟಿದ್ದ ಶಕ್ತಿಯನ್ನು ನಿಷ್ಫಲಗೊಳಿಸಿ ಘಟೋತ್ಕಚನೇ ಕರ್ಣನನ್ನು ಕೊಂದು ಹಾಕಿದ್ದಾನೆ ಎಂದು ನಾನು ಭಾವಿಸಿದ್ದೇನೆ, ಈಗ ನೀನು ಕರ್ಣನನ್ನು ಸತ್ತವನೆಂದೇ ತಿಳಿದುಕೊ. ಕರ್ಣನ ಕೈಯಲ್ಲಿ ಆ ಶಕ್ತಿಯಿರುವಾಗ ಅವನ ಎದುರಿಗೆ ನಿಂತು ಹೋರಾಡಬಲ್ಲ ಯಾವ ವೀರನೂ ಇಲ್ಲ.' ಆತನು ಇದನ್ನೂ ಸಹ ತಿಳಿಸಿದನು- 'ನಾನು ನಿನ್ನ ಹಿತಕ್ಕೋಸ್ಕರವಾಗಿ ಜರಾಸಂಧ, ಶಿಶುಪಾಲ ಮುಂತಾದವರನ್ನು ಒಬ್ಬೊಬ್ಬರಾಗಿ ಸಂಹಾರ ಮಾಡಿಸಿದೆನು. ಇವರು ಮೊದಲೇ ಕೊಲ್ಲಲ್ಪಡದೇ ಹೋಗಿದ್ದರೆ, ಈಗ ಬಹಳ ಭಯಂಕರರಾಗುತ್ತಿದ್ದರು. ನಮ್ಮೆಲ್ಲರೊಡನೆ ದ್ವೇಷ ಸಾಧಿಸಿದ ಕಾರಣದಿಂದ ಅವರೆಲ್ಲರೂ ಕೌರವರ ಪಕ್ಷ ಸೇರುತ್ತಿದ್ದರು ಮತ್ತು ದುರ್ಯೋಧನನ ಸಹಾಯ ಪಡೆದು ಅವರು ಸಮಸ್ತ ಭೂಮಂಡಲವನ್ನು ಗೆದ್ದುಕೊಳ್ಳುತ್ತಿದ್ದರು. ಅವರಂತಹ ದೈವದ್ರೋಹಿಗಳನ್ನು ನಾಶಮಾಡುವುದಕ್ಕಾಗಿಯೇ ನನ್ನ ಅವತಾರವಾಗಿದೆ.' ಇದೇ ಪ್ರಸಂಗದಲ್ಲಿ ಆತನು ಸಾತ್ಯಕಿಯೊಡನೆ ಇದನ್ನೂ ಹೇಳಿದನು- 'ಕೌರವ ಪಕ್ಷದವರೆಲ್ಲರೂ ಕರ್ಣನಿಗೆ ಈ ಒಂದು ಸಲಹೆ ಕೊಡುತ್ತಾ ಇದ್ದರು' - 'ಅರ್ಜುನನ ಹೊರತು ಬೇರೆ ಯಾರ ಮೇಲೆಯೂ ಆ ಶಕ್ತಿಯ ಪ್ರಯೋಗ ಮಾಡಬೇಡ ಮತ್ತು ಅವನೂ ಕೂಡ ಇದೇ ವಿಚಾರದಲ್ಲಿದ್ದನು. ಆದರೆ ನಾನೇ ಅವನನ್ನು ಮೋಹಗೊಳಿಸುತ್ತಿದ್ದೆನು. ಈ ಕಾರಣದಿಂದ ಅವನು ಅರ್ಜುನನ ಮೇಲೆ ಆ ಶಕ್ತಿಯ ಪ್ರಹಾರ ಮಾಡಲಿಲ್ಲ. ಸಾತ್ಯಕೀ! ಅರ್ಜುನನಿಗೆ ಆ ಶಕ್ತಿ ಮೃತ್ಯುರೂಪವೆಂದು ಯೋಚಿಸಿ-ಯೋಚಿಸಿ ನನಗೆ ರಾತ್ರಿಯೆಲ್ಲಾ ನಿದ್ರೆಯೇ ಬರುತ್ತಿರಲಿಲ್ಲ. ಇಂದು ಅದು ಘಟೋತ್ಕಚನ ಮೇಲೆ ಬಿದ್ದದ್ದರಿಂದ ವ್ಯರ್ಥವಾಗಿ ಹೋಯಿತು. ಇದನ್ನು ಕಂಡು ಅರ್ಜುನನು ಮೃತ್ಯು-ಮುಖದಿಂದ ಪಾರಾದನೆಂದು ನಾನು ತಿಳಿಯುತ್ತೇನೆ. ನಾನು ಅರ್ಜುನನ ರಕ್ಷಣೆಯನ್ನು ಎಷ್ಟು ಆವಶ್ಯಕವೆಂದು ತಿಳಿದುಕೊಳ್ಳುತ್ತೇನೆಯೋ, ನನ್ನ ತಂದೆ-

ತಾಯಿ ನಿನ್ನಂತಹ ಸಹೋದರರು ಹಾಗೂ ನನ್ನ ಪ್ರಾಣದ ರಕ್ಷಣೆಯನ್ನೂ ಕೂಡ ಅಷ್ಟು ಆವಶ್ಯಕವೆಂದು ತಿಳಿಯುವುದಿಲ್ಲ. ಮೂರು ಲೋಕಗಳ ರಾಜ್ಯಕ್ಕಿಂತಲೂ ದುರ್ಲಭ ಯಾವುದಾದರೂ ವಸ್ತು ಇದ್ದರೆ, ಅದನ್ನೂ ಸಹ ನಾನು ಅರ್ಜುನನ ಹೊರತು ಇಚ್ಛಿಸುವುದಿಲ್ಲ. ಆದುದರಿಂದ ಈಗ ಅರ್ಜುನನು ಸತ್ತು ಬದುಕಿದಂತಾಗಿದೆ, ಎಂದು ತಿಳಿದುಕೊಂಡು ನನಗೆ ಬಹಳ ಆನಂದವಾಗುತ್ತಾ ಇದೆ. ಆದುದರಿಂದ ಈ ರಾತ್ರಿ ನಾನು ರಾಕ್ಷಸ ಘಟೋತ್ಕಚನನ್ನೇ ಕರ್ಣನೊಡನೆ ಹೋರಾಡಲು ಕಳುಹಿಸಿದ್ದೆನು. ಅವನ ಹೊರತು ಬೇರೆ ಯಾರಿಗೂ ಕರ್ಣನನ್ನು ಕುಗ್ಗಿಸಲಾಗುತ್ತಿರಲಿಲ್ಲ.' ಭಗವಂತನ ಈ ವಾಕ್ಯಗಳಿಂದ-ಅರ್ಜುನನು ಭಗವಂತನಿಗೆ ಎಷ್ಟು ಪ್ರಿಯನಾಗಿದ್ದನು ಮತ್ತು ಅವನನ್ನು ಆತನು ಎಷ್ಟು ಜೋಪಾನವಾಗಿಡುತ್ತಿದ್ದನು ಎಂಬುದು ಸ್ಪಷ್ಟವಾಗುತ್ತದೆ. ಯಾರು ತನ್ನನ್ನು ಭಗವಂತನ ಕೈ ಯಂತ್ರವನ್ನಾಗಿ ಮಾಡಿಕೊಳ್ಳುತ್ತಾನೆಯೋ, ಅವನನ್ನು ಭಗವಂತನು ಇದೇ ಪ್ರಕಾರ ಸಂರಕ್ಷಿಸುತ್ತಾನೆ ಮತ್ತು ಅವನ ಕೂದಲು ಕೊಂಕದಿರುವಂತೆ ನೋಡಿಕೊಳ್ಳುತ್ತಾನೆ. ಇಂತಹ ಭಕ್ತವತ್ಸಲ ಪ್ರಭುವಿನ ಶರಣಾಗತಿಯನ್ನು ಬಿಟ್ಟು ಯಾರು ಬೇರೆ-ಬೇರೆ ಸಹಾಯವನ್ನು ಹುಡುಕುತ್ತಾ ಇರುತ್ತಾರೆಯೋ, ಅವರಿಗೆ ಸಮಾನರಾದ ಮೂರ್ಖರು ಯಾರಿದ್ದಾರೆ?

ದ್ರೋಣಾಚಾರ್ಯರ ವಧೆಯಿಂದ ಕೋಪೋದ್ರಿಕ್ತನಾದ ಅಶ್ವತ್ಥಾಮನು ಪಾಂಡವರ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗ ಮಾಡಿದನು. ಅದನ್ನು ಬಿಟ್ಟ ಕೂಡಲೇ ಆಕಾಶದಿಂದ ಬಾಣಗಳ ಸುರಿಮಳೆಯಾಯಿತು ಮತ್ತು ಸೈನ್ಯದಲ್ಲಿ ಸುತ್ತಲೂ ಬೆಂಕಿ ಹರಡಿತು. ಅರ್ಜುನನು ತಾನೊಬ್ಬನೇ ಒಂದು ಅಕ್ಷೋಹಿಣಿ ಸೈನ್ಯವನ್ನು ತೆಗೆದುಕೊಂಡು ಅಶ್ವತ್ಥಾಮನನ್ನು ಎದುರಿಸುತ್ತಿದ್ದನು. ಆ ಅಸ್ತ್ರದ ಪ್ರಭಾವದಿಂದ ಅವನ ಸೈನ್ಯವೆಲ್ಲಾ ಸುಟ್ಟು ಹೇಳ-ಹೆಸರಿಲ್ಲದಂತೆ ನಾಶವಾಯಿತು. ಆದರೆ ಶ್ರೀಕೃಷ್ಣ ಮತ್ತು ಅರ್ಜುನರ ಶರೀರಕ್ಕೆ ಶಾಖವೂ ಸಹ ತಟ್ಟಲಿಲ್ಲ. ಈ ಇಬ್ಬರು ಮಹಾಪುರುಷರೂ ಅಸ್ತ್ರದ ಪ್ರಭಾವದಿಂದ ಮುಕ್ತರಾಗಿರುವುದನ್ನು ನೋಡಿ ಅಶ್ವತ್ಥಾಮನು ಬೆಚ್ಚಿ ಚಿಂತೆಗೊಳಗಾದನು. ತನ್ನ ಕೈಯ್ಯಲ್ಲಿದ್ದ ಧನಸ್ಸನ್ನು ಬಿಸಾಡಿ ಅವನು ರಥದಿಂದ ನೆಗೆದು 'ಧಿಕ್ಕಾರ,

ಧಿಕ್ಕಾರ' ಎಂದು ಕೂಗುತ್ತಾ ರಣಭೂಮಿಯಿಂದ ಓಡಿ ಹೋಗುತ್ತಿದ್ದನು. ಅಷ್ಟರಲ್ಲಿಯೇ ಅವನಿಗೆ ವ್ಯಾಸರು ಕಂಡುಬಂದರು. ಅವನು ಅವರಿಗೆ ನಮಿಸಿ ಆ ಸರ್ವಸಂಹಾರೀ ಅಸ್ತ್ರದ ಪ್ರಭಾವವು ಶ್ರೀಕೃಷ್ಣ ಮತ್ತು ಅರ್ಜುನರ ಮೇಲೆ ಕಿಂಚಿತ್ತೂ ಉಂಟಾಗದಿರಲು ಕಾರಣ ಕೇಳಿದನು. ಆಗ ವ್ಯಾಸರು ಅವನಿಗೆ ಹೇಳಿದರು- 'ಶ್ರೀಕೃಷ್ಣನು ನಾರಾಯಣ ಋಷಿಯ ಅವತಾರ ಮತ್ತು ಅರ್ಜುನನು ನರನ ಅವತಾರ, ಇವರ ಪ್ರಭಾವ ನಾರಾಯಣನಿಗೇ ಸಮಾನವಾಗಿದೆ. ಇವರಿಬ್ಬರು ಋಷಿಗಳೂ ಜಗತ್ತನ್ನು ಧರ್ಮ-ಮರ್ಯಾದೆಯಲ್ಲಿಡುವುದಕ್ಕಾಗಿ ಪ್ರತಿಯೊಂದು ಯುಗದಲ್ಲಿಯೂ ಅವತಾರ ತಾಳುತ್ತಾರೆ.' ವ್ಯಾಸರ ಈ ಮಾತುಗಳನ್ನು ಕೇಳಿ ಅಶ್ವತ್ಥಾಮನ ಸಂಶಯ ನಿವಾರಣೆಯಾಯಿತು. ಅವನಿಗೆ ಅರ್ಜುನ ಮತ್ತು ಶ್ರೀಕೃಷ್ಣರಲ್ಲಿ ಮಹತ್ತ್ವದ ಬುದ್ಧಿ ಉಂಟಾಯಿತು. ವ್ಯಾಸರ ಈ ವಚನಗಳಿಂದಲೂ ಶ್ರೀಕೃಷ್ಣ ಮತ್ತು ಅರ್ಜುನರ ಅಭಿನ್ನತೆಯು ಸ್ಪಷ್ಟವಾಗಿ ಕಾಣುತ್ತದೆ.

ಅರ್ಜುನನು ಶ್ರೀಕೃಷ್ಣಪರಮಾತ್ಮನ ಕೃಪೆಗೆ ಪಾತ್ರನಾಗಿದ್ದನು, ಭಗವಾನ್ ಶಂಕರನಿಗೂ ಇವನ ಮೇಲೆ ಬಹಳ ಕೃಪೆಯಿತ್ತು. ಯುದ್ಧದಲ್ಲಿ ಶತ್ರುಸೇನೆಯ ಸಂಹಾರ ಮಾಡುವಾಗ ಒಬ್ಬ ಅಗ್ನಿಗೆ ಸಮಾನವಾದ ತೇಜಸ್ವೀ ಮಹಾಪುರುಷನು ಇವನ ಮುಂದೆ ಮುಂದೆ ಹೋಗುತ್ತಿರುವುದನ್ನು ಇವನು ಕಂಡನು. ಆತನೇ ಇವನ ಶತ್ರುಗಳನ್ನು ನಾಶಮಾಡುತ್ತಿದ್ದನು, ಆದರೆ ಇದು ಅರ್ಜುನನ ಕಾರ್ಯವೆಂದು ಜನ ತಿಳಿದುಕೊಳ್ಳುತ್ತಿದ್ದರು. ಆತನು ತ್ರಿಶೂಲಧಾರಿಯಾಗಿದ್ದನು. ಸೂರ್ಯನಂತೆ ತೇಜಸ್ವಿಯಾಗಿದ್ದನು. ವೇದವ್ಯಾಸರೊಡನೆ ಮಾತನಾಡಿದ ಮೇಲೆ ಅವರು ಅರ್ಜುನನಿಗೆ - ಆತನು ಭಗವಾನ್ ಶಂಕರನೆಂದು ತಿಳಿಸಿದರು. ಯಾರ ಮೇಲೆ ಶ್ರೀಕೃಷ್ಣನ ಕೃಪೆಯುಂಟೋ, ಅವನ ಮೇಲೆ ಮತ್ತೆಲ್ಲರೂ ಸಹ ಕೃಪೆಮಾಡುವರು- ಇದರಲ್ಲಿ ಆಶ್ಚರ್ಯವಾದರೂ ಏನು!
'ಜಾ ಪರ ಕೃಪಾ ರಾಮ ಕೈ ಹೋಈ। ತಾ ಪರ ಕೃಪಾ ಕರಹಿ ಸಬ ಕೋಈ॥'
(ಯಾರ ಮೇಲೆ ಭಗವಂತನ ಕೃಪೆಯಿರುತ್ತದೆಯೋ ಆತನ ಮೇಲೆ ಎಲ್ಲರ ಕೃಪೆಯೂ ಇರುತ್ತದೆ.)

ಭಗವಂತನ ಪರಮಭಕ್ತ ಮತ್ತು ಕೃಪಾಪಾತ್ರನಾಗಿರುವುದರ ಜೊತೆಗೆ ಅರ್ಜುನನಲ್ಲಿ ಇನ್ನೂ ಅನೇಕ ಗುಣಗಳಿದ್ದವು. ಸೂರ್ಯನ ಸಂಗಡ ಸೂರ್ಯ-ರಶ್ಮಿಗಳಂತೆ ಭಕ್ತಿಯ ಜೊತೆಗೆ ದೈವೀ-ಗುಣಗಳೂ ತಾವಾಗಿ ಒದಗಿಬರುತ್ತವೆ. ಈತನು ಧೀರ, ವೀರ ಇಂದ್ರಿಯವಿಜಯೀ, ದಯಾಳು ಕೋಮಲ ಸ್ವಭಾವ ಮತ್ತು ಸತ್ಯಪ್ರತಿಜ್ಞನಾಗಿದ್ದನು. ಈತನಲ್ಲಿ ದೈವೀ ಗುಣಗಳು ಹುಟ್ಟು ಗುಣವಾಗಿದ್ದವು, ಈ ಮಾತನ್ನು ಗೀತೆಯಲ್ಲಿ ಶ್ರೀಕೃಷ್ಣನು **'ಸಂಪದಮ್ ದೈವೀಮಭಿಜಾತೋಽಸಿ'** ಎಂದು ಹೇಳಿ ಒಪ್ಪಿಕೊಂಡಿದ್ದಾನೆ. ಇವನು ಹುಟ್ಟಿದಾಗ ಅಶರೀರವಾಣಿಯು ಇವನ ತಾಯಿಯನ್ನು ಸಂಬೋಧಿಸುತ್ತಾ ಹೇಳಿತ್ತು- 'ಕುಂತೀ! ಈ ಬಾಲಕನು ಕಾರ್ತವೀರ್ಯಾರ್ಜುನ ಮತ್ತು ಭಗವಾನ್ ಶಂಕರನಿಗೆ ಸಮಾನವಾದ ಪರಾಕ್ರಮಿ ಮತ್ತು ಇಂದ್ರನಿಗೆ ಸಮಾನ ಅಜೇಯನಾಗಿ ನಿನ್ನ ಕೀರ್ತಿಯನ್ನು ಹೆಚ್ಚಿಸುವನು. ವಿಷ್ಣುವು ತನ್ನ ತಾಯಿ ಅದಿತಿಯನ್ನು ಪ್ರಸನ್ನಗೊಳಿಸಿದಂತೆಯೇ ಇವನು ನಿನ್ನನ್ನು ಪ್ರಸನ್ನಗೊಳಿಸುವನು'. ಈ ಅಶರೀರವಾಣಿಯನ್ನು ಕೇವಲ ಕುಂತೀದೇವಿಯೇ ಅಲ್ಲ, ಜನರೆಲ್ಲಾ ಕೇಳಿಸಿಕೊಂಡಿದ್ದರು. ಇದರಿಂದ ಋಷಿಮುನಿ, ದೇವತೆಗಳು ಮತ್ತು ಸಮಸ್ತ ಪ್ರಾಣಿಗಳೂ ಬಹಳ ಸಂತೋಷಪಟ್ಟರು. ಆಕಾಶದಲ್ಲಿ ದುಂದುಭಿಗಳು ಮೊಳಗಿದವು, ಪುಷ್ಪವೃಷ್ಟಿಯಾಯಿತು. ಈ ಪ್ರಕಾರ ಇವನು ಹುಟ್ಟಿದ ಸಮಯದಿಂದಲೇ ಇವನ ಅಲೌಕಿಕತೆ ಪ್ರಕಟವಾಗಲು ಪ್ರಾರಂಭವಾಗಿತ್ತು. ಇವನು ಸ್ವಲ್ಪ ದೊಡ್ಡವನಾದ ಮೇಲೆ ಇವನ ಸಹೋದರರು ಮತ್ತು ದುರ್ಯೋಧನಾದಿ ಧೃತರಾಷ್ಟ್ರನ ಕುಮಾರರೊಡನೆಯೇ ಇವನ ಶಿಕ್ಷಾ-ದೀಕ್ಷಾದಿಗಳ ಭಾರವನ್ನು ಮೊದಲು ಕೃಪಾಚಾರ್ಯರಿಗೂ ಮತ್ತು ಅನಂತರ ದ್ರೋಣಾಚಾರ್ಯರಿಗೂ ವಹಿಸಲಾಗಿತ್ತು. ಸೂತಪುತ್ರನೆಂದು ಪ್ರಸಿದ್ಧನಾಗಿದ್ದ ಕರ್ಣನೂ ಇವರು ಗಳೊಡನೆಯೇ ವಿದ್ಯಾಭ್ಯಾಸ ಮಾಡುತ್ತಿದ್ದನು. ದ್ರೋಣಾಚಾರ್ಯರ ಶಿಷ್ಯರು ಗಳಲ್ಲಿ ಶಿಕ್ಷಾ, ಬಾಹುಬಲ ಮತ್ತು ಉದ್ಯೋಗದ ದೃಷ್ಟಿಯಿಂದ ಹಾಗೂ ಸಮಸ್ತ ಶಸ್ತ್ರಗಳ ಪ್ರಯೋಗ, ಕಲಾಕೌಶಲತೆ ಮತ್ತು ಸ್ಫೂರ್ತಿಯಲ್ಲಿ ಅರ್ಜುನನೇ ಎಲ್ಲರಿಗಿಂತ ಮುಂದಿದ್ದನು. ಇವನು ದ್ರೋಣಾಚಾರ್ಯರ ಸೇವೆಯನ್ನೂ

ಸಹ ಬಹಳವಾಗಿ ಮಾಡುತ್ತಿದ್ದನು. ಇವನ ಸೇವೆ, ಶ್ರದ್ಧೆ ಮತ್ತು ಬುದ್ಧಿಯಿಂದ ಪ್ರಸನ್ನರಾಗಿ ದ್ರೋಣಾಚಾರ್ಯರು ಒಂದು ದಿವಸ ಇವನಿಗೆ ಹೀಗೆ ಹೇಳಿದ್ದರು- 'ಮಗೂ! ಪ್ರಪಂಚದಲ್ಲಿ ನಿನಗೆ ಸಮಾನನಾದವನು ಮತ್ತೆ ಯಾವ ಧನುರ್ಧರನೂ ಇರಬಾರದು ಅಂತಹ ಪ್ರಯತ್ನ ಮಾಡುವೆನು.' ದ್ರೋಣಾಚಾರ್ಯರಂತಹ ಸಿದ್ಧ ಗುರುವಿನ ಪ್ರತಿಜ್ಞೆ ಎಂದಾದರೂ ಅಸತ್ಯವಾಗುವುದೇನು? ಅರ್ಜುನ ನಿಜವಾಗಿಯೂ ಅದ್ವಿತೀಯ ಧನುರ್ಧರನಾದನು.

ಪಾಂಡವ ಮತ್ತು ಕೌರವ ರಾಜಕುಮಾರರು ಅಸ್ತ್ರ ವಿದ್ಯೆಯ ಅಭ್ಯಾಸವನ್ನು ಪೂರ್ಣಗೊಳಿಸಿದಾಗ ಮತ್ತು ಗುರುದಕ್ಷಿಣೆ ಕೊಡುವ ಸಂದರ್ಭ ಬಂದಾಗ ಗುರು ದ್ರೋಣಾಚಾರ್ಯರು ತಮ್ಮ ಶಿಷ್ಯರಿಗೆ ಹೇಳಿದರು- 'ನೀವು ಪಾಂಚಾಲರಾಜ ದ್ರುಪದನನ್ನು ಯುದ್ಧದಲ್ಲಿ ಬಂಧಿಸಿ ತಂದು ಕೊಡಿರಿ, ಇದೇ ನನಗೆ ಎಲ್ಲಕ್ಕಿಂತ ದೊಡ್ಡ ಗುರುದಕ್ಷಿಣೆಯಾಗುವುದು.' ಎಲ್ಲರೂ ಸಂತೋಷದಿಂದ ಗುರುಗಳ ಆಜ್ಞೆಯನ್ನು ಸ್ವೀಕರಿಸಿ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ರಥದಲ್ಲಿ ಕುಳಿತು ಹೊರಟು ದ್ರುಪದನ-ನಗರದ ಮೇಲೆ ಆಕ್ರಮಣ ಮಾಡಿದರು. ಅಲ್ಲಿಗೆ ಬಂದಾಗ ಪಾಂಚಾಲರಾಜನು ತನ್ನ ಸಹೋದರೊಡಗೂಡಿ ಇವರನ್ನು ಎದುರಿಸಿದನು. ಮೊದಲು ಕೌರವರು ಇವನ ಮೇಲೆ ಆಕ್ರಮಣಮಾಡಿದರು; ಆದರೆ ಅವರು ಸೋತು ಹಿಂದಿರುಗಬೇಕಾಯಿತು. ಕೊನೆಗೆ ಅರ್ಜುನನು ಭೀಮ ನಕುಲ ಸಹದೇವರನ್ನು ಜೊತೆಯಲ್ಲಿ ಕರೆದುಕೊಂಡು ದ್ರುಪದರಾಜನ ಮೇಲೆ ಆಕ್ರಮಣ ಮಾಡಿದನು. ಅರ್ಜುನನು ಲೀಲಾಜಾಲವಾಗಿ ಬಲವಂತವಾಗಿ ದ್ರುಪದನನ್ನು ಬಂಧಿಸಿ ದ್ರೋಣಾಚಾರ್ಯರ ಮುಂದೆ ನಿಲ್ಲಿಸಿದನು. ಈ ಪ್ರಕಾರ ಅರ್ಜುನನ ಪರಾಕ್ರಮದ ಪ್ರಭಾವ ಎಲ್ಲೆಲ್ಲಿಯೂ ಹರಡಿತು. ಪಾಂಡವರು ದ್ರೌಪದಿಯ ಸ್ವಯಂವರದ ಸಮಾಚಾರವನ್ನು ತಿಳಿದು ಏಕಚಕ್ರ ನಗರದಿಂದ ದ್ರುಪದ-ನಗರದ ಕಡೆಗೆ ಹೋಗುತ್ತಿದ್ದರು. ಮಾರ್ಗದಲ್ಲಿ ಅವರು ಗಂಧರ್ವರೊಡನೆ ಹೋರಾಡ ಬೇಕಾಯಿತು. ಅರ್ಜುನನು ತನ್ನ ಅಸ್ತ್ರ ಕುಶಲತೆಯಿಂದ ಗಂಧರ್ವರ ಸೊಕ್ಕನ್ನು ಅಡಗಿಸಿದನು ಮತ್ತು ಅವರ ರಾಜ ಅಂಗಾರಪರ್ಣ (ಚಿತ್ರರಥ)ನನ್ನು ಸೆರೆಹಿಡಿದನು. ಕೊನೆಗೆ ಇಬ್ಬರಲ್ಲಿಯೂ ಮೈತ್ರಿಯುಂಟಾಯಿತು. ದ್ರೌಪದಿಯ

ಸ್ವಯಂವರದಲ್ಲಿ ನೆರೆದಿದ್ದ ರಾಜರುಗಳಲ್ಲಿ ಯಾರಿಂದಲೂ ಮಾಡಲು ಅಸಾಧ್ಯವಾದ ಕೆಲಸವನ್ನು ಅರ್ಜುನನು ಮಾಡಿ ತೋರಿಸಿದನು. ದುರ್ಯೋಧನ, ಶಾಲ್ವ, ಜರಾಸಂಧ ಮತ್ತು ಶಲ್ಯ ಮುಂತಾದ ಅನೇಕ ಮಹಾಬಲಶಾಲಿಗಳಾದ ರಾಜರುಗಳೂ ಹಾಗೂ ರಾಜಕುಮಾರರೂ ಅಲ್ಲಿಟ್ಟಿರುವ ಧನುಸ್ಸನ್ನು ಎತ್ತಿ ಹೆದೆ ಏರಿಸುವ ಯತ್ನ ಮಾಡಿದರು, ಆದರೆ ಎಲ್ಲರೂ ಅಸಫಲರಾದರು. ಅರ್ಜುನನು ಕ್ಷಣಾರ್ಧದಲ್ಲಿ ಎತ್ತಿಕೊಂಡು ಹೆದೆ-ಏರಿಸಿ ಜನರು ನೋಡುತ್ತಿದ್ದಂತೆಯೇ ಗುರಿಯನ್ನು ಭೇದಿಸಿ ಬಿಟ್ಟನು. ಆ ಸಂದರ್ಭದಲ್ಲಿ ಅರ್ಜುನನು ಬ್ರಾಹ್ಮಣನ ವೇಷದಲ್ಲಿದ್ದನು. ಆದುದರಿಂದ ಅವನನ್ನು ಬ್ರಾಹ್ಮಣನೆಂದು ತಿಳಿದುಕೊಂಡು ರಾಜರುಗಳೆಲ್ಲಾ ಒಟ್ಟಾಗಿ ಸೇರಿ ಅವನನ್ನು ಪರಾಭವಗೊಳಿಸಲು ಮುಂದಾದರು. ಆದರೆ ಅವರಿಂದ ಅರ್ಜುನ ಮತ್ತು ಭೀಮಸೇನರನ್ನು ಮಣಿಸಲಾಗಲಿಲ್ಲ. ಆ ಸಮಯದಲ್ಲಿ ಅರ್ಜುನ ಮತ್ತು ಕರ್ಣರ ಮಧ್ಯೆ ಬಾಣಯುದ್ಧವೂ, ಭೀಮ ಹಾಗೂ ಶಲ್ಯರ ಮಧ್ಯೆ ಗದಾಯುದ್ಧವೂ ಜರುಗಿತು. ಆದರೆ ಅರ್ಜುನ ಮತ್ತು ಭೀಮಸೇನರ ಮುಂದೆ ಅವರ ಇಬ್ಬರು ಪ್ರತಿದ್ವಂದ್ವಿಗಳೂ ಅಪಮಾನಗೊಳ್ಳಬೇಕಾಯಿತು.

ಖಾಂಡವವನ ದಹನದ ಸಮಯದಲ್ಲಿಯೂ ಅರ್ಜುನನು ಅದ್ಭುತ ಪರಾಕ್ರಮವನ್ನು ತೋರಿಸಿದ್ದನು. ಅಗ್ನಿದೇವನು ಶ್ರೀಕೃಷ್ಣ ಮತ್ತು ಅರ್ಜುನನ ಸಹಾಯದಿಂದ ಖಾಂಡವ ವನವನ್ನು ಸುಡಲು ಪ್ರಾರಂಭಿಸಿದನು. ಆಗ ಅದರ ತಾಪದಿಂದ ದೇವತೆಗಳೆಲ್ಲಾ ಭಯಭೀತರಾಗಿ ದೇವರಾಜ ಇಂದ್ರನ ಬಳಿಗೆ ಹೋದರು. ಆ ಕೂಡಲೇ ಇಂದ್ರನ ಆಜ್ಞೆಯಿಂದ ಮೇಘ-ಸಮೂಹವು ಆ ಪ್ರಚಂಡ ಅಗ್ನಿಯನ್ನು ಶಾಂತಗೊಳಿಸಲು ಜಲಧಾರೆಯನ್ನು ಸುರಿಸಲಾರಂಭಿಸಿದವು. ಅರ್ಜುನನು ತನ್ನ ಅಸ್ತ್ರಬಲದಿಂದ ಬಾಣಗಳ ಮೂಲಕ ಜಲಧಾರೆಗಳನ್ನು ಆಕಾಶದಲ್ಲಿಯೇ ತಡೆದು ಭೂಮಿಯ ಮೇಲೆ ಬೀಳದಂತೆ ಮಾಡಿದನು. ಇಂದ್ರನೂ ತನ್ನ ತೀಕ್ಷ್ಣವಾದ ಬಾಣಗಳ ಸುರಿಮಳೆಯಿಂದ ಅರ್ಜುನನಿಗೆ ಉತ್ತರ ಕೊಟ್ಟನು. ಎರಡು ಪಕ್ಷಗಳಿಂದಲೂ ಭಯಂಕರ ಯುದ್ಧ ಪ್ರಾರಂಭವಾಯಿತು. ಶ್ರೀಕೃಷ್ಣ ಮತ್ತು ಅರ್ಜುನ ಇಬ್ಬರೂ ಸೇರಿ ತಮ್ಮ

ಚಕ್ರ ಮತ್ತು ತೀವ್ರವಾದ ಬಾಣಗಳಿಂದ ದೇವತೆಗಳ ಸೈನ್ಯವನ್ನೆಲ್ಲಾ ಚಲ್ಲಾ-ಪಿಲ್ಲಿಯಾಗಿ ಓಡಿಸಿದರು. ಶ್ರೀಕೃಷ್ಣ ಪರಮಾತ್ಮನು ಆಗ ತನ್ನ ಕಾಲರೂಪವನ್ನು ಪ್ರಕಟಪಡಿಸಿದ್ದನು. ದೇವತೆಗಳು ಮತ್ತು ದಾನವರೆಲ್ಲರೂ ಆತನ ಪೌರುಷವನ್ನು ನೋಡಿ ವಿಸ್ಮಿತರಾಗಿ ಹೋದರು. ಕೊನೆಗೆ ಇಂದ್ರನನ್ನು ಸಂಬೋಧಿಸಿ ಅಶರೀರವಾಣಿಯಾಯಿತು- 'ನೀನು ಅರ್ಜುನ ಮತ್ತು ಶ್ರೀಕೃಷ್ಣರನ್ನು ಯುದ್ಧದಲ್ಲಿ ಯಾವ ರೀತಿಯಿಂದಲೂ ಜಯಿಸಲಾರೆ. ಇವರು ಸಾಕ್ಷಾತ್ ನರ-ನಾರಾಯಣರಾಗಿದ್ದಾರೆ. ಇವರ ಶಕ್ತಿ ಮತ್ತು ಪರಾಕ್ರಮಗಳಿಗೆ ಮಿತಿಯಿಲ್ಲ. ಇವರು ಅಜೇಯರು. ನೀನು ದೇವತೆಗಳನ್ನು ಕರೆದುಕೊಂಡು ಇಲ್ಲಿಂದ ಹೊರಟು ಹೋಗು, ಅದರಿಂದ ನಿನಗೆ ಸೊಗಸುಂಟು.' ಅಶರೀರವಾಣಿಯನ್ನು ಕೇಳಿ ದೇವರಾಜನು ತನ್ನ ಸೇನೆಯೊಡನೆ ಹಿಂದಿರುಗಿದನು ಮತ್ತು ಅಗ್ನಿಯು ಆ ವಿಶಾಲವಾದ ವನವನ್ನು ಭಸ್ಮಮಾಡಿಬಿಟ್ಟನು. ಅರ್ಜುನನ ಸೇವೆಯಿಂದ ಪ್ರಸನ್ನನಾದ ಅಗ್ನಿದೇವನು ಅವನಿಗೆ ದಿವ್ಯಾಸ್ತ್ರವನ್ನು ಕೊಟ್ಟನು. ಇಂದ್ರನೂ ಅವನ ಅಸ್ತ್ರಕೌಶಲದಿಂದ ಪ್ರಸನ್ನನಾಗಿ ಅವನಿಗೆ ಸಮಯ ಬಂದಾಗ ಅಸ್ತ್ರವನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದನು. ಅಗ್ನಿದೇವನ ಪ್ರಾರ್ಥನೆ ಮೇರೆಗೆ ವರುಣದೇವನು ಅವನಿಗೆ ಅಕ್ಷಯ-ಬತ್ತಳಿಕೆ, ಗಾಂಡೀವ ಧನುಸ್ಸು ಮತ್ತು ವಾನರ-ಚಿಹ್ನೆಯುಕ್ತ ಧ್ವಜದಿಂದ ಸುಶೋಭಿತವಾದ ರಥವನ್ನು ಯುದ್ಧಕ್ಕಿಂತ ಮೊದಲೇ ಕೊಟ್ಟುಬಿಟ್ಟಿದ್ದನು.

ಪಾಂಡವರು ಎರಡನೇ ಬಾರಿ ದ್ಯೂತದಲ್ಲಿ ಸೋತು ವನವಾಸದಲ್ಲಿದ್ದಾಗ, ಒಂದು ದಿವಸ ಮಹರ್ಷಿ ವೇದವ್ಯಾಸರು ಅವರ ಬಳಿಗೆ ಬಂದರು ಮತ್ತು ಯುಧಿಷ್ಠಿರನನ್ನು ಒಂಟಿಯಾಗಿ ಕರೆದುಕೊಂಡು ಹೋಗಿ ಅವನಿಗೆ ತಿಳಿಸಿದರು - 'ಅರ್ಜುನನು ನಾರಾಯಣನ ಸಹಚರ, ಮಹಾತಪಸ್ವಿಯಾದ ನರನಾಗಿದ್ದಾನೆ. ಇವನನ್ನು ಯಾರೂ ಗೆಲ್ಲಲಾರರು, ಇವನು ಅಚ್ಯುತಸ್ವರೂಪೀ. ಇವನು ತಪಸ್ಸು ಮತ್ತು ಪರಾಕ್ರಮದ ಮೂಲಕ ದೇವತೆಗಳ ದರ್ಶನದ ಯೋಗ್ಯತೆಯನ್ನು ಗಳಿಸಿದ್ದಾನೆ. ಆದುದರಿಂದ ನೀನು ಇವನನ್ನು ಅಸ್ತ್ರವಿದ್ಯೆ ಪಡೆದುಕೊಳ್ಳುವುದಕ್ಕಾಗಿ ಭಗವಾನ್ ಶಂಕರ, ದೇವರಾಜ ಇಂದ್ರ, ವರುಣ, ಕುಬೇರ ಮತ್ತು ಧರ್ಮರಾಜನ

ಹತ್ತಿರಕ್ಕೆ ಕಳುಹಿಸು. ಇವನು ಅವರುಗಳಿಂದ ಅಸ್ತ್ರವನ್ನು ಪಡೆದುಕೊಂಡು ಬಹಳ ಪರಾಕ್ರಮ ತೋರಿಸುವನು ಮತ್ತು ಕಳೆದು ಹೋದ ನಿನ್ನ ರಾಜ್ಯವನ್ನು ಹಿಂದಕ್ಕೆ ತಂದುಕೊಡುವನು.' ಯುಧಿಷ್ಠಿರನು ವೇದವ್ಯಾಸರ ಆದೇಶವನ್ನು ಸ್ವೀಕರಿಸಿ ಅರ್ಜುನನಿಗೆ ಆ ಮಹರ್ಷಿಯು ಕೊಟ್ಟ ಮಂತ್ರವಿದ್ಯೆಯನ್ನು ಬೋಧಿಸಿ ಇಂದ್ರನ ದರ್ಶನಕ್ಕೋಸ್ಕರ ಇಂದ್ರಕೀಲ ಪರ್ವತಕ್ಕೆ ಕಳುಹಿಸಿಕೊಟ್ಟನು. ಅಲ್ಲಿಗೆ ಹೋದಾಗ ಒಬ್ಬ ತಪಸ್ವಿಯ ರೂಪದಲ್ಲಿ ಇಂದ್ರನ ದರ್ಶನವಾಯಿತು. ಇಂದ್ರನು ಇವನಿಗೆ ಸ್ವರ್ಗದ ಸುಖ-ಭೋಗಗಳ ಮತ್ತು ಐಶ್ವರ್ಯಗಳ ಆಸೆಯನ್ನು ತೋರಿಸಿದನು; ಆದರೆ ಇವನು ಎಲ್ಲವನ್ನೂ ಬಿಟ್ಟು ಅಸ್ತ್ರವಿದ್ಯೆಯನ್ನು ಕಲಿಸಿಕೊಡಬೇಕೆಂದು ಕೇಳಿಕೊಂಡನು. ಇಂದ್ರನು ಹೇಳಿದನು- 'ಮೊದಲು ನೀನು ತಪಸ್ಸಿನ ಮೂಲಕ ಶಂಕರನನ್ನು ಒಲಿಸಿಕೋ, ಆತನ ದರ್ಶನದಿಂದ ಸಿದ್ಧಿಯನ್ನು ಪಡೆದು ನೀನು ಸ್ವರ್ಗಕ್ಕೆ ಬಾ. ಆಗ ನಾನು ನಿನಗೆ ದಿವ್ಯಾಸ್ತ್ರಗಳನ್ನೆಲ್ಲಾ ಕರುಣಿಸುವೆನು. ಅರ್ಜುನನು ಅದನ್ನೇ ಬಯಸುತ್ತಿದ್ದನು. ಕೂಡಲೇ ಕಠೋರವಾದ ತಪಸ್ಸನ್ನಾಚರಿಸಲು ಪ್ರಾರಂಭಿಸಿದನು. ಇವನ ತಪಸ್ಸಿಗೆ ಪ್ರಸನ್ನನಾಗಿ ಶಂಕರನು ಒಬ್ಬ ಕಿರಾತನ ರೂಪದಲ್ಲಿ ಎದುರಿಗೆ ಪ್ರತ್ಯಕ್ಷನಾದನು. ಒಂದು ಕಾಡು ಹಂದಿಯ ಬಗ್ಗೆ ಇಬ್ಬರಲ್ಲಿಯೂ ವಾದ-ವಿವಾದ ಪ್ರಾರಂಭವಾಯಿತು ಹಾಗೂ ಪರಸ್ಪರ ಯುದ್ಧ ನಡೆಯಿತು. ಅರ್ಜುನನು ತನ್ನ ಅಸ್ತ್ರಕೌಶಲದಿಂದ ಶಂಕರನನ್ನು ಪ್ರಸನ್ನಗೊಳಿಸಿದನು. ಆತನು ಹೇಳಿದನು- 'ಅರ್ಜುನಾ! ನಿನ್ನ ಅನುಪಮ ಕರ್ಮದಿಂದ ನಾನು ಸಂತುಷ್ಟನಾಗಿದ್ದೇನೆ. ನಿನ್ನಂತಹ ಧೀರ-ವೀರ ಕ್ಷತ್ರಿಯ ಬೇರೆ ಯಾರೂ ಇಲ್ಲ. ನೀನು ತೇಜಸ್ಸು ಮತ್ತು ಬಲದಲ್ಲಿ ನನಗೆ ಸಮಾನನಾಗಿರುವೆ ನೀನು ಸನಾತನ ಋಷಿ. ನಾನು ನಿನಗೆ ದಿವ್ಯ ಜ್ಞಾನವನ್ನು ಕೊಡುತ್ತೇನೆ. ನೀನು ದೇವತೆಗಳನ್ನೂ ಸಹ ಜಯಿಸಬಲ್ಲೆ.' ನಂತರ ಭಗವಾನ್ ಶಂಕರನು ಅರ್ಜುನನಿಗೆ ಪಾರ್ವತೀದೇವಿ ಸಹಿತ ತನ್ನ ನಿಜ ರೂಪದಲ್ಲಿ ದರ್ಶನ ನೀಡಿ ವಿಧಿಪೂರ್ವಕವಾಗಿ ಪಾಶುಪತಾಸ್ತ್ರದ ಪ್ರಯೋಗವನ್ನು ಕಲಿಸಿಕೊಟ್ಟನು. ಈ ಪ್ರಕಾರ ದೇವಾದಿದೇವ ಮಹಾದೇವನ ಕೃಪೆಗೆ ಪಾತ್ರನಾಗಿ ಅವನು ಸ್ವರ್ಗಲೋಕಕ್ಕೆ ಹೋಗುವ ಮಾತನ್ನು ಯೋಚಿಸುತ್ತಿದ್ದನು, ಅಷ್ಟರಲ್ಲಿಯೇ ವರುಣ, ಕುಬೇರ, ಯಮ

ಮತ್ತು ದೇವರಾಜ ಈ ನಾಲ್ವರು ಲೋಕಪಾಲಕರೂ ಅಲ್ಲಿ ಬಂದು ನೆರೆದರು. ಯಮ, ವರುಣ ಮತ್ತು ಕುಬೇರ ಇವರು ಕ್ರಮಶಃ ಅವನಿಗೆ ದಂಡ, ಪಾಶ ಹಾಗೂ ಅಂತರ್ಧಾನ ಎಂಬ ಅಸ್ತ್ರವನ್ನು ಕೊಟ್ಟರು. ಇಂದ್ರನು ಸ್ವರ್ಗಕ್ಕೆ ಬಂದಾಗ ಅಸ್ತ್ರವನ್ನು ಕೊಡುವುದಾಗಿ ಹೇಳಿ ಹೋದನು. ಅನಂತರ ಇಂದ್ರನಿಂದ ಕಳುಹಿಸಲ್ಪಟ್ಟ ರಥದಲ್ಲಿ ಕಳಿತುಕೊಂಡು ಅರ್ಜುನ ಸ್ವರ್ಗಲೋಕಕ್ಕೆ ಹೋದನು. ಅಲ್ಲಿ ಐದು ವರ್ಷಗಳ ಕಾಲ ಇದ್ದು ಇವನು ಅಸ್ತ್ರಜ್ಞಾನವನ್ನು ಪಡೆದುಕೊಂಡನು, ಜೊತೆಗೆ ಚಿತ್ರಸೇನ ಗಂಧರ್ವನಿಂದ ಗಂಧರ್ವ ವಿದ್ಯೆ (ಸಂಗೀತ-ನೃತ್ಯ) ಯನ್ನು ಕಲಿತನು. ಇಂದ್ರನಿಂದ ಅಸ್ತ್ರವಿದ್ಯೆ ಕಲಿತು ಅರ್ಜುನನು ಎಲ್ಲಾ ಪ್ರಕಾರದ ಅಸ್ತ್ರ-ಪ್ರಯೋಗದಲ್ಲಿ ನಿಪುಣನಾಗಿ ಹೋದಾಗ ದೇವರಾಜನು ನಿವಾತಕವಚರೆಂಬ ದಾನವರನ್ನು ಕೊಲ್ಲಲು ಅವನಿಗೆ ಹೇಳಿದನು. ಇವರು ಸಮುದ್ರದೊಳಗೆ ಒಂದು ದುರ್ಗಮ ಸ್ಥಾನದಲ್ಲಿ ಇರುತ್ತಿದ್ದರು. ಇವರ ಸಂಖ್ಯೆ ಮೂರು ಕೋಟಿಯೆಂದು ಹೇಳಲಾಗುತ್ತಿತ್ತು. ಇವರನ್ನು ದೇವತೆಗಳಿಂದಲೂ ಜಯಿಸಲಾಗುತ್ತಿರಲಿಲ್ಲ. ಅರ್ಜುನನೊಬ್ಬನೇ ಹೋಗಿ ಇವರೆಲ್ಲರನ್ನೂ ಸಂಹಾರ ಮಾಡಿದನು. ಅಷ್ಟೇ ಅಲ್ಲ, ನಿವಾತಕವಚರನ್ನು ಸಂಹಾರಮಾಡಿ ಹಿಂದಿರುಗಿ ಬರುವಾಗ ಕಾಲಕೇಯ ಮತ್ತು ಪೌಲೋಮ ಎಂಬ ದೈತ್ಯರೊಡನೆ ಯುದ್ಧ ನಡೆಯಿತು. ಅವರನ್ನೂ ಅರ್ಜುನನು ನಿರ್ನಾಮ ಮಾಡಿದನು. ಹೀಗೆ ಇಂದ್ರನಿಗೆ ಪ್ರಿಯವಾದ ಕಾರ್ಯಮಾಡಿ ಇಂದ್ರಪುರಿಯಲ್ಲಿ ಕೆಲವು ದಿನಗಳಿದ್ದು ನಂತರ ಅರ್ಜುನನು ತನ್ನ ಸಹೋದರರ ಬಳಿಗೆ ಹೊರಟುಬಂದನು.

ಸ್ವರ್ಗಲೋಕದಿಂದ ಹಿಂದಿರುಗಿ ಬಂದು ಕಾಡಿನಲ್ಲಿ ಹಾಗೂ ಒಂದು ವರ್ಷ ಅಜ್ಞಾತರೂಪದಿಂದ ವಿರಾಟನಗರದಲ್ಲಿ ಇರುತ್ತಿದ್ದರೂ ಅರ್ಜುನನು ಅದ್ಭುತ ಪರಾಕ್ರಮವನ್ನು ತೋರಿಸಿದನು. ಕಾಡಿನಲ್ಲಿ ಇವನು ದುರ್ಯೋಧನಾದಿಯವರನ್ನು ಬಿಡಿಸುವುದಕ್ಕಾಗಿ ಗಂಧರ್ವರೊಡನೆ ಯುದ್ಧ ಮಾಡಿದನು. ಯುಧಿಷ್ಠಿರನ ಪ್ರಸಂಗದಲ್ಲಿ ಇದರ ಉಲ್ಲೇಖ ಮಾಡಿಯಾಗಿದೆ. ಅನಂತರ ವನವಾಸದ ಹನ್ನೆರಡು ವರ್ಷ ಪೂರ್ತಿಯಾಗಿ ಪಾಂಡವರು ಒಂದು ವರ್ಷದ ಅಜ್ಞಾತವಾಸದ ಒಪ್ಪಂದವನ್ನು ಪೂರೈಸಲು ವಿರಾಟನ ಹತ್ತಿರ

ಇದ್ದರು. ಆಗ ಇವರನ್ನು ಪತ್ತೆಹಚ್ಚುವುದಕ್ಕಾಗಿ ದುರ್ಯೋಧನನು ವಿರಾಟನಗರದ ಮೇಲೆ ಆಕ್ರಮಣ ಮಾಡಿದನು. ಭೀಷ್ಮ, ದ್ರೋಣ, ಕರ್ಣ, ಕೃಪ, ಅಶ್ವತ್ಥಾಮ ಮುಂತಾದ ಪ್ರಧಾನ ವೀರರೆಲ್ಲ ಅವನ ಜೊತೆಗಿದ್ದರು. ಇವರೆಲ್ಲಾ ರಾಜಾ ವಿರಾಟನ ಅರವತ್ತು ಸಾವಿರ ಗೋವುಗಳನ್ನು ಅಪಹರಿಸಿಕೊಂಡು ಹೋದರು. ಆಗ ವಿರಾಟ - ಕುಮಾರ ಉತ್ತರನು ಬೃಹನ್ನಳೆಯಾಗಿದ್ದ ಅರ್ಜುನನ್ನು ಸಾರಥಿ ಮಾಡಿಕೊಂಡು ಅವರನ್ನು ತಡೆಯಲು ಹೋದನು. ಕೌರವರ ವಿಶಾಲ ಸೇನೆಯನ್ನು ನೋಡಿದ ಕೂಡಲೇ ಉತ್ತರಕುಮಾರನಿಗೆ ನಡುಕವುಂಟಾಯಿತು. ಅವನು ರಥದಿಂದ ಇಳಿದು ಓಡಲಾರಂಭಿಸಿದನು. ಬೃಹನ್ನಳೆ (ಅರ್ಜುನ)ಯು ಅವನನ್ನು ಹಿಡಿದುಕೊಂಡು ಸಮಾಧಾನಪಡಿಸಿ ಅವನನ್ನು ಸಾರಥಿ ಮಾಡಿಕೊಂಡು ಸ್ವತಃ ತಾನೇ ಯುದ್ಧಕ್ಕೆ ಹೊರಟನು. ಅವನು (ಬೃಹನ್ನಳೆ ರೂಪದ ಅರ್ಜುನ) ಒಬ್ಬೊಬ್ಬರಾಗಿ ಕರ್ಣ, ಕೃಪ, ದ್ರೋಣ, ಅಶ್ವತ್ಥಾಮ ಮತ್ತು ದುರ್ಯೋಧನರನ್ನು ಪರಾಜಯ ಗೊಳಿಸಿದನು ಮತ್ತು ಭೀಷ್ಮರನ್ನು ಸಹ ಮೂರ್ಛೆಗೊಳಿಸಿದನು. ಅನಂತರ ಭೀಷ್ಮ, ದುರ್ಯೋಧನ, ಕರ್ಣ, ದುಶ್ಶಾಸನ, ವಿವಿಂಶತಿ, ದ್ರೋಣಾಚಾರ್ಯ, ಅಶ್ವತ್ಥಾಮ ಮತ್ತು ಕೃಪಾಚಾರ್ಯ - ಈ ಎಲ್ಲಾ ಮಹಾರಥಿಗಳೂ ಒಂದುಗೂಡಿ ಅರ್ಜುನನ ಮೇಲೆ ಆಕ್ರಮಣ ಮಾಡಿದರು ಮತ್ತು ಅವರೆಲ್ಲಾ ಇವನನ್ನು ಸುತ್ತಲೂ ಮುತ್ತಿದರು. ಆದರೆ ಅರ್ಜುನನು ತನ್ನ ಬಾಣಗಳ ಸುರಿಮಳೆಯಿಂದ ಎಲ್ಲರ ಸೊಕ್ಕನ್ನೂ ಅಡಗಿಸಿಬಿಟ್ಟನು. ಕೊನೆಗೆ ಅವನು ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ಎಲ್ಲಾ ಕೌರವ ವೀರರೂ ಪ್ರಜ್ಞಾಹೀನರಾದರು, ಅವರ ಕೈಯಿಂದ ಅಸ್ತ್ರಗಳು ಬಿದ್ದುಹೋದವು. ಆ ಸಂದರ್ಭದಲ್ಲಿ ಅರ್ಜುನ ಇಚ್ಛಿಸಿದ್ದರೆ ಇವರನ್ನೆಲ್ಲಾ ಸುಲಭವಾಗಿ ಕೊಲ್ಲಬಹುದಾಗಿತ್ತು, ಆದರೆ ಆತನು ಇಂತಹ ವಿಚಾರಕ್ಕಿಂತ ಉತ್ತಮನಾಗಿದ್ದನು. ಪ್ರಜ್ಞೆ ಮರಳಿಬಂದ ಮೇಲೆ ಭೀಷ್ಮರ ಸಲಹೆಯಂತೆ ಕೌರವರು ಗೋವುಗಳನ್ನು ಬಿಟ್ಟು ಹಿಂದಿರುಗುವುದೇ ಶ್ರೇಯಸ್ಕರವೆಂದು ತಿಳಿದುಕೊಂಡರು. ಅರ್ಜುನನು ವಿಜಯ ಘೋಷ ಮಾಡುತ್ತಾ ನಗರಕ್ಕೆ ಹೊರಟು ಬಂದನು. ಹೀಗೆ ಅರ್ಜುನನು ವಿರಾಟನ ಗೋವುಗಳ

ಜೊತೆಗೆ ಆತನ ಮಾನವನ್ನೂ ರಕ್ಷಿಸಿ ತನ್ನ ಆಶ್ರಯದಾತನ ಋಣವನ್ನು ತೀರಿಸಿದನು.

ಮಹಾಭಾರತ-ಯುದ್ಧದ ಒಂದು ಪ್ರಧಾನ ಪಾತ್ರವಾಗಿಯೇ ಅರ್ಜುನ ನಿದ್ದನು. ಪಾಂಡವರ ಸೈನ್ಯದ ಪ್ರಧಾನ ಸೇನಾನಾಯಕನೂ ಇವನೇ ಆಗಿದ್ದನು. ಶ್ರೀಕೃಷ್ಣಪರಮಾತ್ಮನು ಇವನ ಸಾರಥಿಯಾಗಿರಲು ಒಪ್ಪಿದನು ಹಾಗೂ ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ ಮುಂತಾದ ಅಜೇಯ ಯೋಧರನ್ನು ಎದುರಿಸುವ ಕೆಲಸವೇ ಇವನದಾಗಿತ್ತು. ಆ ಜನರೆಲ್ಲಾ ಇವನನ್ನು ಅದ್ವಿತೀಯ ಪರಾಕ್ರಮಿಯೆಂದು ಭಾವಿಸಿದ್ದರು. ಜಯದ್ರಥನ ಸಂಹಾರದ ದಿವಸ ಇವನು ತೋರಿಸಿದ ಅದ್ಭುತ ಪರಾಕ್ರಮ ಮತ್ತು ಅಸ್ತ್ರಕೌಶಲ ಅವನ ಯೋಗ್ಯತೆಗೆ ತಕ್ಕಂತಿತ್ತು. ಇವನ ಭಯಂಕರ ಪ್ರತಿಜ್ಞೆಯನ್ನು ಕೇಳಿ ಆ ದಿವಸ ಕೌರವರು ಜಯದ್ರಥನನ್ನು ಎಲ್ಲಾ ಸೈನ್ಯಗಳ ಹಿಂದೆ ನಿಲ್ಲಿಸಿದ್ದರು. ಅನೇಕ ಅಕ್ಷೋಹಿಣಿ ಸೇನೆಯ ಮಧ್ಯದಲ್ಲಿ ದಾರಿಮಾಡಿಕೊಂಡು ಅರ್ಜುನನು ಬಹಳ ಸನ್ನಾಹ ಮತ್ತು ಅದಮ್ಯ ಉತ್ಸಾಹದೊಡನೆ ತನ್ನ ಗುರಿಯತ್ತ ಮುನ್ನುಗ್ಗುತ್ತಾ ಇದ್ದನು. ಶತ್ರುಸೇನೆಯ ಸಾವಿರಾರು ವೀರರು ಆನೆ-ಕುದುರೆಗಳ ಸಹಿತ ಅವನ ಅಮೋಘವಾದ ಬಾಣಗಳಿಗೆ ಗುರಿಯಾಗಿ ಹೋದರು. ಅವನು ರಥದಿಂದ ಎರಡು ಹರಿದಾರಿವರೆಗೆ ಶತ್ರುಗಳನ್ನು ನಿರ್ನಾಮ ಮಾಡುತ್ತಾ ಹೋಗುತ್ತಿದ್ದನು. ಅಷ್ಟರಲ್ಲಿ ಸಾಯಂಕಾಲವಾಗುತ್ತಾ ಬಂದಿತು. ಇವನ ಕುದುರೆಗಳು ಬಾಣಗಳ ಪೆಟ್ಟಿನಿಂದ ಬಹಳವಾಗಿ ನೊಂದಿದ್ದವು ಮತ್ತು ಅಧಿಕ ಪರಿಶ್ರಮದಿಂದ ದಣಿದು ಹೋಗಿದ್ದವು. ಹಸಿವು ಬಾಯಾರಿಕೆಗಳು ಬೇರೆ ಅವುಗಳನ್ನು ಕಾಡುತ್ತಿದ್ದವು. ಅರ್ಜುನನು ಶ್ರೀಕೃಷ್ಣನಿಗೆ ಹೇಳಿದನು- 'ನೀನು ಕುದುರೆಗಳನ್ನು ಬಿಚ್ಚಿ ಅವುಗಳ ಬಾಣಗಳನ್ನು ಕಿತ್ತುಹಾಕು. ಅಷ್ಟುಹೊತ್ತಿಗೆ ನಾನು ಕೌರವರ ಸೇನೆಯನ್ನೆಲ್ಲಾ ತಡೆದಿರುತ್ತೇನೆ.' ಹೀಗೆ ಹೇಳುತ್ತಾ ಅರ್ಜುನನು ರಥದಿಂದ ಕೆಳಗಿಳಿದನು ಮತ್ತು ಬಹಳ ಎಚ್ಚರಿಕೆಯಿಂದ ಧನಸ್ಸನ್ನು ತೆಗೆದುಕೊಂಡು ಅವಿಚಲ ಭಾವದಿಂದ ನಿಂತುಕೊಂಡನು. ಆ ಸಂದರ್ಭವು ಇವನನ್ನು ಪರಾಭವಗೊಳಿಸಲು ಒಳ್ಳೆಯ ಅವಕಾಶವೆಂದು ನೋಡಿ ಶತ್ರು-ಸೈನ್ಯದ ವೀರರುಗಳು ಒಂದು ಗೂಡಿ ಇವನನ್ನು

ಮುತ್ತಿದರು ಮತ್ತು ಬಗೆ-ಬಗೆಯ ಬಾಣ ಮತ್ತು ಶಸ್ತ್ರಗಳಿಂದ ಮುಚ್ಚಿದರು; ಆದರೆ ವೀರವರ ಅರ್ಜುನನು ಅವರ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ತಡೆದು ಪ್ರತಿಯಾಗಿ ಅವರೆಲ್ಲರನ್ನೂ ಬಾಣಗಳಿಂದ ಆಚ್ಛಾದಿಸಿಬಿಟ್ಟನು. ಈ ಕಡೆ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದನು- 'ಕುದುರೆಗಳು ಬಾಯಾರಿಕೆಯಿಂದ ಚಡಪಡಿಸುತ್ತಾ ಇವೆ, ಹತ್ತಿರದಲ್ಲಿ ಯಾವ ಜಲಾಶಯವೂ ಇಲ್ಲ.' ಅದಕ್ಕಾಗಿ ಅರ್ಜುನನು ತಕ್ಷಣ ಅಸ್ತ್ರದ ಮೂಲಕ ಭೂಮಿಯನ್ನು ಕೊರೆದು ನೀರು ಕುಡಿಯಲು ಯೋಗ್ಯವಾದ ಒಂದು ಸುಂದರ ಸರೋವರವನ್ನು ನಿರ್ಮಿಸಿದನು. ಇಷ್ಟೇ ಅಲ್ಲಾ, ಆ ಸರೋವರದ ಮೇಲೆ ಅವನು ಬಾಣಗಳ ಒಂದು ಮನೆಯನ್ನೂ ಮಾಡಿದನು. ಅರ್ಜುನನ ಈ ಅಭೂತಪೂರ್ವ ಪರಾಕ್ರಮವನ್ನು ನೋಡಿ ಸಿದ್ಧರು, ಚಾರಣರು ಮತ್ತು ಸೈನಿಕರೆಲ್ಲಾ ಆಶ್ಚರ್ಯದಿಂದ ಬಾಯಿ ಮೇಲೆ ಬೆರಳಿಟ್ಟುಕೊಂಡು ಭಲೆ-ಭಲೆ ಎನ್ನಲಾರಂಭಿಸಿದರು. ಇದೆಲ್ಲಕ್ಕಿಂತಲೂ ಆಶ್ಚರ್ಯದ ಮಾತೆಂದರೆ ದೊಡ್ಡ-ದೊಡ್ಡ ಮಹಾರಥಿಗಳೂ ಸಹ ಕಾಲ್ನಡಿಗೆಯ ಅರ್ಜುನನನ್ನು ಹಿಮ್ಮೆಟ್ಟಿಸಲಾಗಲಿಲ್ಲ. ಈ ಮಧ್ಯೆ ಶ್ರೀಕೃಷ್ಣನು ಚುರುಕಾಗಿ ಕುದುರೆಗಳ ಬಾಣವನ್ನು ತೆಗೆದು ಅವುಗಳಿಗೆ ಸ್ನಾನ ಮಾಡಿಸಿದನು, ಮಾಲೀಸು ಮಾಡಿದನು; ನೀರು ಕುಡಿಸಿ ಮೇವು ತಿನ್ನಿಸಿದನು ಮತ್ತು ಮಲಗಿಸಿದನು. ನಂತರ ಪುನಃ ಅವುಗಳನ್ನು ರಥಕ್ಕೆ ಹೂಡಿದನು. ಅರ್ಜುನನು ಜಯದ್ರಥನ ಹತ್ತಿರಕ್ಕೆ ಹೋದಾಗ ಅವನ ಮೇಲೆ ಎಂಟು ಮಂದಿ ಮಹಾರಥಿಗಳು ಒಂದೇ ಬಾರಿಗೆ ಆಕ್ರಮಣ ಮಾಡಿದರು ಮತ್ತು ದುರ್ಯೋಧನನು ತನ್ನ ಭಾವನ ರಕ್ಷಣೆಗೋಸ್ಕರ ಅವನನ್ನು ಸುತ್ತಲೂ ಮುತ್ತಿದನು. ಆದರೆ ಅರ್ಜುನ ಅವರೆಲ್ಲರನ್ನೂ ಎದುರಿಸುತ್ತಾ ಮುನ್ನುಗ್ಗುತ್ತಲೇ ಇದ್ದನು. ಇವನ ವೇಗವನ್ನು ಯಾರೂ ತಡೆಯಲಾಗಲಿಲ್ಲ. ಇವನು ಶ್ರೀಕೃಷ್ಣನ ಕೃಪೆಯಿಂದ ಸೂರ್ಯಾಸ್ತ ವಾಗುವುದರೊಳಗೆ ಜಯದ್ರಥನನ್ನು ತನ್ನ ವಜ್ರಸಮಾನವಾದ ಬಾಣಗಳಿಗೆ ಗುರಿಯನ್ನಾಗಿ ಮಾಡಿದನು. ಶ್ರೀಕೃಷ್ಣನು ಹೇಳಿದಂತೆ ಈ ಕೌಶಲದಿಂದ ಅವನ ತಲೆಯನ್ನು ಕತ್ತರಿಸಿದನು ಮತ್ತು ಅದು ಕುರುಕ್ಷೇತ್ರದಿಂದ ಹೊರಕ್ಕೆ ಹೋಗಿ ಅವನ ತಂದೆಯ ಮಡಿಲಿಗೆ ಬಿದ್ದಿತು. ಹೀಗೆ ಶ್ರೀಕೃಷ್ಣನ ಸಹಾಯದಿಂದ

ಸೂರ್ಯಾಸ್ತಕ್ಕಿಂತ ಮೊಟ್ಟಮೊದಲೇ ಅರ್ಜುನನು ಜಯದ್ರಥನನ್ನು ಕೊಂದು ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿದನು.

ಅರ್ಜುನನು ಜಗದ್ವಿಜಯೀ ವೀರ, ಅದ್ವಿತೀಯ ಧನುರ್ಧರನಾಗಿದ್ದನು; ಜೊತೆಗೆ ಅವನು ಬಹು ದೊಡ್ಡ ಸತ್ಯಪ್ರತಿಜ್ಞ, ಸದಾಚಾರಿ, ಧರ್ಮಾತ್ಮಾ ಮತ್ತು ಇಂದ್ರಿಯ-ವಿಜಯಿಯೂ ಆಗಿದ್ದನು. ಪಾಂಡವರು ಇಂದ್ರಪ್ರಸ್ಥದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಆ ಸಮಯದಲ್ಲಿ ಒಂದು ದಿವಸ ದರೋಡೆಕೋರರು ಒಬ್ಬ ಬ್ರಾಹ್ಮಣನ ಗೋವುಗಳನ್ನು ಅಪಹರಿಸಿಕೊಂಡು ಓಡಿ ಹೋದರು. ಬ್ರಾಹ್ಮಣನು ಬಂದು ಪಾಂಡವರ ಮುಂದೆ ಮೊರೆಯಿಟ್ಟನು. ಅರ್ಜುನನು ಅವನ ಕರುಣೆಯ ಕೂಗನ್ನು ಕೇಳಿದನು ಮತ್ತು ಗೋವುಗಳನ್ನು ಹಿಂದಿರುಗಿಸಿಕೊಡುವುದಾಗಿ ಮಾತು ಕೊಟ್ಟನು. ಆದರೆ ಅವನ ಆಯುಧಗಳು ಅಣ್ಣ ಮಹಾರಾಜ ಯುಧಿಷ್ಠಿರನು ದ್ರೌಪದಿಯೊಡನೆ ಏಕಾಂತದಲ್ಲಿ ಕುಳಿತಿರುವ ಮನೆಯಲ್ಲಿದ್ದವು. ಇವರು ಸಹೋದರರಲ್ಲಿ ಮೊದಲಿನಿಂದಲೂ ಈ ಒಂದು ನಿಯಮವಿತ್ತು- ದ್ರೌಪದಿಯು ಯಾವ ಒಬ್ಬ ಸಹೋದರನ ಸಂಗಡ ಏಕಾಂತದಲ್ಲಿರುವ ಸಮಯದಲ್ಲಿ ಮತ್ತೊಬ್ಬ ಸಹೋದರನು ಅವರ ಕೊಠಡಿಗೆ ಪ್ರವೇಶಿಸಿದರೂ ಅವನು ಹನ್ನೆರಡು ವರ್ಷಗಳವರೆಗೆ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾ ಕಾಡಿನಲ್ಲಿರಬೇಕು. ಅರ್ಜುನನು ಬಹು ಪೇಚಾಟಕ್ಕೆ ಒಳಗಾದನು. ಬ್ರಾಹ್ಮಣನ ಗೋವುಗಳನ್ನು ರಕ್ಷಿಸದೇ ಹೋದರೆ ಕ್ಷತ್ರಿಯ-ಧರ್ಮಕ್ಕೆ ಚ್ಯುತಿ ಒದಗುತ್ತದೆ ಮತ್ತು ಅದಕ್ಕೋಸ್ಕರವಾಗಿ ಅಸ್ತ್ರಗಳನ್ನು ತೆಗೆದುಕೊಳ್ಳಲು ಕೊಠಡಿಯೊಳಗೆ ಹೋದರೆ ನಿಯಮ ಭಂಗವಾಗುವುದು. ಕೊನೆಗೆ, ಅರ್ಜುನನು ನಿಯಮ ಭಂಗಮಾಡಿ ಯಾದರೂ ಸರಿ ಬ್ರಾಹ್ಮಣನ ಗೋವುಗಳ ರಕ್ಷಣೆ ಮಾಡಲು ನಿಶ್ಚಯಿಸಿದನು. ಅವನು ಯೋಚಿಸಿದನು- 'ನಿಯಮಭಂಗ ಪಡಿಸಿದ ಕಾರಣಕ್ಕಾಗಿ ನಾನು ಎಂತಹ ಕಠಿಣ ಪ್ರಾಯಶ್ಚಿತ್ತಕ್ಕೂ ಸರಿ, ಬೇಕಾದರೆ ಪ್ರಾಣ ಹೋದರೂ ಸರಿ, ಬ್ರಾಹ್ಮಣನ ಗೋವುಗಳ ಸಂಪತ್ತನ್ನು ರಕ್ಷಿಸಿ ಅಪರಾಧಿಗಳಿಗೆ ಶಿಕ್ಷೆ ಕೊಡುವುದು ನನ್ನ ಧರ್ಮ ಮತ್ತು ನನ್ನ ಜೀವನದ ರಕ್ಷಣೆಗಿಂತಲೂ ಹೆಚ್ಚು ಮಹತ್ವಪೂರ್ಣವಾಗಿದೆ.'

ಅರ್ಜುನನು ಯುಧಿಷ್ಠಿರನ ಕೋಣೆಗೆ ಹೋಗಿ ಆಯುಧಗಳನ್ನು ತೆಗೆದುಕೊಂಡು ಬಂದು, ಆ ಕ್ಷಣದಲ್ಲಿಯೇ ದರೋಡೆಕೋರರನ್ನು ಬೆನ್ನಟ್ಟಿ ಬ್ರಾಹ್ಮಣನ ಗೋವುಗಳನ್ನು ಬಿಡಿಸಿಕೊಂಡು ಬಂದನು. ಅಲ್ಲಿಂದ ಹಿಂದಿರುಗಿ ಬಂದು ಅವನು ತನ್ನ ಅಣ್ಣ ಯುಧಿಷ್ಠಿರನ ಬಳಿ ಹೋಗಿ ನಿಯಮಭಂಗದ ಪ್ರಾಯಶ್ಚಿತ್ತಕ್ಕಾಗಿ ವನವಾಸಕ್ಕೆ ಹೊರಡಲು ಅನುಮತಿ ಕೇಳಿದನು. ಯುಧಿಷ್ಠಿರನು ಅವನನ್ನು ಸಮಾಧಾನ ಪಡಿಸುತ್ತಾ 'ಅಣ್ಣನು ತನ್ನ ಪತ್ನಿಯ ಬಳಿ ಕುಳಿತುಕೊಂಡಿರುವ ಸಮಯದಲ್ಲಿ ತಮ್ಮನು ಅವನ ಹತ್ತಿರಕ್ಕೆ ಬರುವುದು ಅಪರಾಧವಲ್ಲ. ಒಂದು ವೇಳೆ ಅಪರಾಧವಾದರೂ, ಅದು ನನ್ನ ಕುರಿತಾಗಿದೆ. ನಾನು ಅದನ್ನು ಸ್ವೇಚ್ಛೆಯಿಂದ ಕ್ಷಮಿಸುತ್ತೇನೆ. ನೀನು ಧರ್ಮದ ಪಾಲನೆ ಗೋಸ್ಕರವಾಗಿಯೇ ನಿಯಮಭಂಗ ಮಾಡಿರುವೆ, ಆದುದರಿಂದಲೂ ನೀನು ಕಾಡಿಗೆ ಹೋಗಬೇಕಾದ ಅವಶ್ಯಕತೆಯಿಲ್ಲ.' ಈ ನಿಯಮ ಭಂಗದ ಪ್ರಾಯಶ್ಚಿತ್ತದಿಂದ ಪಾರಾಗಲು ಅರ್ಜುನನಿಗೆ ಇದು ಒಳ್ಳೆಯ ಅವಕಾಶವಾಗಿತ್ತು. ಬೇರೆ ಯಾರಾದರೂ ಆಗಿದ್ದಿದ್ದರೆ ಈ ಅವಕಾಶವನ್ನು ಕಳೆದುಕೊಳ್ಳುತ್ತಿರಲಿಲ್ಲ. ಇಂದಿನ ಕಾಲದಲ್ಲಿ ಕಾನೂನಿನ ಬಿಗಿಯಂತ್ರದಿಂದ ಪಾರಾಗಲು ಕಾನೂನನ್ನೇ ಆಶ್ರಯಿಸುವುದು ಸರ್ವಥಾ ಯೋಗ್ಯ ಎಂದು ತಿಳಿಯಲಾಗುತ್ತದೆ; ಆದರೆ ಅರ್ಜುನನು ನೆಪಹೂಡಿ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಬಯಸಲಿಲ್ಲ. ಅವನು ಯುಧಿಷ್ಠಿರನು ಸಮಾಧಾನಪಡಿಸಿದರೂ ಸತ್ಯದ ರಕ್ಷಣೆಗಾಗಿ ನಿಯಮದ ಪಾಲನೆಯು ಅಗತ್ಯವೆಂದು ತಿಳಿದುಕೊಂಡು ವನವಾಸದ ದೀಕ್ಷೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಟುಹೋದನು.

ಅರ್ಜುನನು ಇಂದ್ರಪುರಿಯಲ್ಲಿದ್ದುಕೊಂಡು ಅಸ್ತ್ರವಿದ್ಯೆ ಹಾಗೂ ಗಂಧರ್ವ ವಿದ್ಯೆಯನ್ನು ಕಲಿತುಕೊಳ್ಳುತ್ತಿದ್ದನು. ಆಗ ಒಂದು ದಿವಸ ಇಂದ್ರನು ರಾತ್ರಿವೇಳೆಯಲ್ಲಿ ಅವನ ಸೇವೆಗೆ ಅಲ್ಲಿನ ಸರ್ವ-ಶ್ರೇಷ್ಠ ಅಪ್ಸರೆ ಊರ್ವಶಿಯನ್ನು ಅವನ ಬಳಿಗೆ ಕಳುಹಿಸಿದನು. ಆ ದಿವಸ ಅರ್ಜುನನು ಸಭೆಯಲ್ಲಿ ಊರ್ವಶಿಯ ಕಡೆಗೆ ನೆಟ್ಟ ನೋಟದಿಂದ ನೋಡುತ್ತಿದ್ದುದನ್ನು ಇಂದ್ರನು ಗಮನಿಸಿದ್ದನು. ಊರ್ವಶಿಯು ಅರ್ಜುನನ ರೂಪು ಮತ್ತು ಗುಣಗಳಿಗಾಗಿ ಮೊದಲಿನಿಂದಲೂ

ಮುಗ್ಧಳಾಗಿದ್ದಳು. ಅವಳು ಇಂದ್ರನ ಆಜ್ಞೆಯಿಂದ ಅಂದವಾಗಿ ಶೃಂಗಾರ ಮಾಡಿಕೊಂಡು ಅರ್ಜುನನ ಬಳಿಗೆ ಹೋದಳು. ಅವಳು ರಾತ್ರಿಯಲ್ಲಿ ಒಬ್ಬಳೇ ಈ ರೀತಿಯಲ್ಲಿ ನಿಸ್ಸಂಕೋಚಭಾವದಿಂದ ತನ್ನ ಹತ್ತಿರಕ್ಕೆ ಬಂದುದನ್ನು ನೋಡಿ ಅರ್ಜುನನಿಗೆ ಅಂಜಿಕೆಯಾಯಿತು. ಅವನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು ಮತ್ತು ಊರ್ವಶಿಯನ್ನು ತಾಯಿಯಂತೆ ಭಾವಿಸಿ ನಮಸ್ಕರಿಸಿದನು. ಊರ್ವಶಿಗೆ ಆಶ್ಚರ್ಯವಾಯಿತು. ಅವಳಿಗೆ ಅರ್ಜುನನು ಈ ರೀತಿ ವರ್ತಿಸುತ್ತಾನೆಂಬ ನಂಬಿಕೆಯಿರಲಿಲ್ಲ. ಅವಳು ಮುಚ್ಚುಮರೆಯಿಲ್ಲದೆ ಅರ್ಜುನನಲ್ಲಿ ತನ್ನ ಕಾಮಭಾವವನ್ನು ವ್ಯಕ್ತಪಡಿಸಿದಳು. ಆಗ ಅರ್ಜುನನು ಸಂಕೋಚದಿಂದ ಭೂಮಿಗೇ ಇಳಿದುಹೋದನು. ಅವನು ತನ್ನ ಕೈಗಳಿಂದ ಎರಡು ಕಿವಿಗಳನ್ನೂ ಮುಚ್ಚಿಕೊಂಡು ಹೇಳಿದನು- 'ಅಮ್ಮಾ! ಇದೇನು ಹೇಳುತ್ತಿರುವೆ? ತಾಯಿ! ನಿಸ್ಸಂದೇಹವಾಗಿಯೂ ನೀನು ನನ್ನ ಗುರುಪತ್ನಿಗೆ ಸಮಾನಳು. ದೇವಸಭೆಯಲ್ಲಿ ನಾನು ನಿನ್ನನ್ನು ನೆಟ್ಟನೋಟದಿಂದ ನೋಡಿದುದು ನಿಜ; ಆದರೆ ನನ್ನ ಮನಸ್ಸಿನಲ್ಲಿ ಯಾವ ಕೆಟ್ಟಭಾವನೆಯೂ ಇರಲಿಲ್ಲ. ಪುರುವಂಶದ ಜನನಿ ಈಕೆಯೆಂದೇ ನಾನು ಯೋಚಿಸುತ್ತಿದ್ದೆನು. ಅದರಿಂದಲೇ ನಾನು ನಿನ್ನನ್ನು ನೋಡುತ್ತಾ ಇದ್ದೆನು. ತಾಯಿ! ನನ್ನ ಸಂಬಂಧದಲ್ಲಿ ಬೇರೆ ಯಾವ ಮಾತನ್ನೂ ನೀನು ಯೋಚಿಸಬಾರದು. ನೀನು ನನಗೆ ಹಿರಿಯರಿಗೂ ಹಿರಿಯಳು ಮತ್ತು ನನ್ನ ಪೂರ್ವಜರ ಜನನಿಯಾಗಿರುವೆ. ಕುಂತಿ, ಮಾದ್ರಿ ಮತ್ತು ಇಂದ್ರನ ಪತ್ನಿ ಶಚಿ ಇವರುಗಳು ನನಗೆ ತಾಯಿಯಾಗಿರುವಂತೆಯೇ ನೀನೂ ಸಹ ಕುರುವಂಶದ ಜನನಿಯಾಗಿರುವ ಸಂಬಂಧದಿಂದ ನನಗೆ ಪೂಜ್ಯ ಮಾತೆಯಾಗಿರುವೆ. ನಾನು ನಿನ್ನ ಚರಣಗಳಲ್ಲಿ ತಲೆಬಾಗಿ ಪ್ರಣಾಮ ಮಾಡುತ್ತೇನೆ.'*

---

* ಯಥಾ ಕುಂತೀ ಚ ಮಾದ್ರೀ ಚ ಶಚೀ ಚೈವ ಮಮಾನಘೇ ।
ತಥಾ ಚ ವಂಶಜನನೀ ತ್ವಂ ಹಿ ಮೇಽದ್ಯ ಗರೀಯಸೀ ॥
ಗಚ್ಛ ಮೂರ್ಧ್ನಾ ಪ್ರಪನ್ನೋಽಸ್ಮಿ ಪಾದೌ ತೇ ವರವರ್ಣಿನಿ ।
ತ್ವಂ ಹಿ ಮೇ ಮಾತೃವತ್ ಪೂಜ್ಯಾ ರಕ್ಷ್ಯೋಽಹಂ ಪುತ್ರವತ್ತ್ವಯಾ ॥
(ಮಹಾ ವನ ೪೬/೪೬-೪೭)

ಕೂಡಲೇ ಊರ್ವಶಿಯು ಕೋಪೋದ್ರಿಕ್ತ ಳಾಗಿ ಅರ್ಜುನನಿಗೆ ಶಾಪವಿತ್ತಳು- 'ನಾನು ಇಂದ್ರನ ಆಜ್ಞೆಯಂತೆ ಕಾಮಾತುರಳಾಗಿ ನಿನ್ನ ಹತ್ತಿರಕ್ಕೆ ಬಂದಿದ್ದೆನು. ಆದರೆ ನೀನು ನನ್ನ ಪ್ರೇಮವನ್ನು ತಿರಸ್ಕರಿಸಿದೆ. ಆದ್ದರಿಂದ ಹೋಗು ನೀನು ಹೆಂಗಳೆಯರ ಮಧ್ಯೆ ನರ್ತಕಿಯಾಗಿರಬೇಕಾಗುವುದು ಮತ್ತು ಜನರು ನಿನ್ನನ್ನು ನಪುಂಸಕನೆಂದು ಕರೆಯುವರು.' ಅರ್ಜುನನು ಊರ್ವಶಿಯ ಶಾಪವನ್ನು ಸಂತೋಷದಿಂದ ಸ್ವೀಕರಿಸಿದನು, ಆದರೆ ಧರ್ಮವನ್ನು ಬಿಡಲಿಲ್ಲ. ಏಕಾಂತವಾಗಿ ಸ್ವೇಚ್ಛೆಯಿಂದ ಬಂದಿರುವ ಊರ್ವಶಿಯಂತಹ ಅನುಪಮ ಸುಂದರಿಯನ್ನು ಪರಿತ್ಯಾಗ ಮಾಡುವುದು ಅರ್ಜುನನ ಇಂದ್ರಿಯ ವಿಜಯದ ಸಾಕ್ಷಿಯಾಯಿತು. ಇಂದ್ರನಿಗೆ ಈ ವಿಚಾರ ತಿಳಿದಾಗ ಆತನು ಅರ್ಜುನನ್ನು ಕರೆಯಿಸಿ ಅವನ ಬೆನ್ನು ತಟ್ಟಿದನು ಮತ್ತು ಹೇಳಿದನು- 'ಮಗೂ! ನಿನ್ನಂತಹ ಮಗನನ್ನು ಪಡೆದ ನಿನ್ನ ತಾಯಿ ಧನ್ಯಳಾದಳು. ನೀನು ನಿನ್ನ ಧೈರ್ಯದಿಂದ ಋಷಿಗಳನ್ನೂ ಸಹ ಮೀರಿಸಿದೆ. ಈಗ ನೀನು ಯಾವ ಚಿಂತೆಯನ್ನೂ ಮಾಡಬೇಡ. ಊರ್ವಶಿಯು ನಿನಗೆ ಕೊಟ್ಟಿರುವ ಶಾಪವು ನಿನಗೆ ವರದಾನವಾಗಿ ಉಪಯೋಗವಾಗುವುದು. ಹದಿಮೂರನೇ ವರ್ಷದಲ್ಲಿ ನೀನು ಅಜ್ಞಾತವಾಸದಲ್ಲಿರಬೇಕಾದಾಗ ಈ ಶಾಪವು ನೀನು ತಲೆಮರೆಸಿಕೊಳ್ಳಲು ಸಹಾಯಕವಾಗುವುದು. ಇದಾದ ನಂತರ ನಿನಗೆ ಪುರುಷತ್ವ ಪ್ರಾಪ್ತಿಯಾಗುವುದು.' ಇದು ನಿಜ - **'ಧರ್ಮೋರಕ್ಷತಿ ರಕ್ಷಿತಃ'**

ವಿರಾಟ- ನಗರದಲ್ಲಿ ಅಜ್ಞಾತವಾಸದ ಅವಧಿ ಪೂರ್ಣಗೊಂಡಾಗ ಪಾಂಡವರು ತಮ್ಮನ್ನು ರಾಜಾ ವಿರಾಟನ ಮುಂದೆ ಪ್ರಕಟಪಡಿಸಿಕೊಂಡರು. ಆಗ ರಾಜಾ ವಿರಾಟನು ಕೃತಜ್ಞತೆಗಾಗಿ ತನ್ನ ಮಗಳು ಉತ್ತರೆಯನ್ನು ಅರ್ಜುನನಿಗೆ ಕೊಟ್ಟು ವಿವಾಹ ಮಾಡಲಿಚ್ಛಿಸಿದನು. ಆದರೆ ಅರ್ಜುನನು ಆತನ ಈ ಇಚ್ಛೆಯನ್ನು ಒಪ್ಪಿಕೊಳ್ಳಲಿಲ್ಲ. ಅವನು ಹೇಳಿದನು - 'ಮಹಾರಾಜಾ! ನಾನು ಬಹಳ ಕಾಲದವರೆಗೆ ನಿಮ್ಮ ರಾಣೀವಾಸದಲ್ಲಿದ್ದೆನು. ನಿಮ್ಮ ಮಗಳನ್ನು ಏಕಾಂತದಲ್ಲಿ ಹಾಗೂ ಎಲ್ಲರ ಮುಂದೆಯೂ ಪುತ್ರಿಯಾಗಿ ನೋಡುತ್ತಾ ಬಂದಿದ್ದೇನೆ. ಆಕೆಯೂ ಸಹ ನನ್ನ ಮೇಲೆ ತಂದೆಯಂತೆಯೇ ವಿಶ್ವಾಸವಿಟ್ಟಿದ್ದಾಳೆ.

ನಾನು ಅವಳ ಮುಂದೆ ನರ್ತಿಸುತ್ತಿದ್ದೆನು ಮತ್ತು ಸಂಗೀತವನ್ನೂ ಸಹ ಬಲ್ಲವನಾಗಿದ್ದೇನೆ. ಆದುದರಿಂದ ಅವಳು ನನ್ನನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದಳು, ಆದರೆ ಸದಾ ನನ್ನನ್ನು ಗುರುವೆಂದೇ ಭಾವಿಸಿಕೊಂಡು ಬಂದಿದ್ದಾಳೆ. ಅವಳು ವಯಸ್ಸಿಗೆ ಬಂದಿದ್ದಾಳೆ ಮತ್ತು ಅವಳ ಜೊತೆಯಲ್ಲಿ ಒಂದು ವರ್ಷ ನಾನು ಇರಬೇಕಾಗಿ ಬಂತು. ಆದುದರಿಂದ ನಿಮಗೂ ಅಥವಾ ಇನ್ನಾರಿಗೂ ನಮ್ಮಿಬ್ಬರ ಬಗ್ಗೆ ಅನುಚಿತವಾದ ಸಂದೇಹವುಂಟಾಗದಿರಲೆಂದು ಆಕೆಯನ್ನೂ ನಾನು ನನ್ನ ಸೊಸೆಯನ್ನಾಗಿ ಸ್ವೀಕರಿಸುತ್ತೇನೆ.' ಅರ್ಜುನನ ಈ ಪವಿತ್ರ ಭಾವನೆಯನ್ನು ಎಲ್ಲರೂ ಪ್ರಶಂಸಿಸಿದರು ಮತ್ತು ಉತ್ತರೆಯನ್ನು ಅಭಿಮನ್ಯುವಿನ ಜೊತೆಯಲ್ಲಿ ವಿವಾಹಮಾಡಿ ಕೊಡಲಾಯಿತು. ಅರ್ಜುನನಂತಹ ಮಹಾನ್ ಇಂದ್ರಿಯ ವಿಜಯಿಗೆ ಮಾತ್ರ ಈ ಪ್ರಕಾರ ವಯಸ್ಕಳಾದ ಕನ್ಯೆಯೊಡನೆ ಒಂದು ವರ್ಷದವರೆಗೆ ಗಾಢ ಸಂಪರ್ಕವಿದ್ದರೂ ಸಹ ತನ್ನನ್ನು ವಿಶುದ್ಧನನ್ನಾಗಿಟ್ಟುಕೊಳ್ಳಲು ಸಾಧ್ಯವಾಯಿತು ಹಾಗೂ ಅವನ ಭಾವನೆಯೂ ಅವಳ ಬಗ್ಗೆ ಕೆಟ್ಟುಹೋಗಲಿಲ್ಲ. ವಯಸ್ಕರಾದ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ಶಿಕ್ಷಕರು ಇದರಿಂದ ಒಳ್ಳೆಯ ಆದರ್ಶವನ್ನು ಪಡೆಯಬೇಕು.

ಅಶ್ವತ್ಥಾಮನು ರಾತ್ರಿಯಲ್ಲಿ ಮಲಗಿ ನಿದ್ರಿಸುತ್ತಿದ್ದ ಪಾಂಡವರ ಪುತ್ರರನ್ನು ಹಾಗೂ ಧೃಷ್ಟದ್ಯುಮ್ನ ಮುಂತಾದವರನ್ನು ಕೊಂದು ತಾನು ಗಂಗಾತೀರದಲ್ಲಿ ಹೋಗಿ ಕುಳಿತಿದ್ದನು. ಆಗ ಅವನ ಕ್ರೂರ ಕರ್ಮದ ಸುದ್ದಿಯನ್ನು ಕೇಳಿದ ಭೀಮಸೇನ ಮತ್ತು ಅರ್ಜುನ ಅವನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವನನ್ನುಹುಡುಕಿಕೊಂಡು ಹೊರಟರು. ಅವರಿಬ್ಬರೂ ಬರುತ್ತಿರುವುದನ್ನು ನೋಡಿ ಅಶ್ವತ್ಥಾಮನು ಬಹಳ ಹೆದರಿದನು ಮತ್ತು ಅವರ ಕೈಯಿಂದ ಪಾರಾಗಲು ಯಾವ ಉಪಾಯವನ್ನೂ ಕಾಣದೆ ಅವನು ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿದನು. ನೋಡುತ್ತಿದ್ದಂತೆಯೇ ಅಲ್ಲಿ ಪ್ರಳಯಾಗ್ನಿಯಂತಹ ಅಗ್ನಿ ಉತ್ಪತ್ತಿಯಾಯಿತು ಮತ್ತು ಸುತ್ತಲೂ ಹರಡಿಕೊಂಡಿತು. ಅದನ್ನು ಶಾಂತಗೊಳಿಸುವುದಕ್ಕಾಗಿ ಅರ್ಜುನನೂ ಸಹ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು.

ಏಕೆಂದರೆ ಬ್ರಹ್ಮಾಸ್ತ್ರವನ್ನು ಬ್ರಹ್ಮಾಸ್ತ್ರದ ಮೂಲಕವೇ ಶಾಂತಗೊಳಿಸಲು

ಸಾಧ್ಯ. ಎರಡು ಅಸ್ತ್ರಗಳೂ ಪರಸ್ಪರ ಡಿಕ್ಕಿಹೊಡೆದುದರಿಂದ ಬಹಳ ಗರ್ಜನೆಯುಂಟಾಯಿತು, ಸಾವಿರಾರು ಉಲ್ಕೆಗಳು ಬೀಳಲಾರಂಭಿಸಿದವು ಮತ್ತು ಎಲ್ಲಾ ಪ್ರಾಣಿಗಳಿಗೂ ಭಯವುಂಟಾಯಿತು. ಈ ಭಯಂಕರ ಕಾಂಡವನ್ನು ನೋಡಿ ದೇವರ್ಷಿ ನಾರದ ಮತ್ತು ಮಹರ್ಷಿ ವ್ಯಾಸರು ಇವರಿಬ್ಬರೂ ಇರುವಲ್ಲಿಗೆ ಒಟ್ಟಿಗೆ ಬಂದರು ಮತ್ತು ಇಬ್ಬರು ವೀರರನ್ನೂ ಶಾಂತಗೊಳಿಸಲಾರಂಭಿಸಿದರು. ಈ ಇಬ್ಬರು ಮಹಾಪುರುಷರೂ ಹೇಳಿದುದರಿಂದ ಅರ್ಜುನನು ತಕ್ಷಣ ತನ್ನ ದಿವ್ಯಾಸ್ತ್ರವನ್ನು ಹಿಂದಕ್ಕೆ ತೆಗೆದುಕೊಂಡನು. ಅವನು ಅದನ್ನು ಅಶ್ವತ್ಥಾಮನ ಅಸ್ತ್ರವನ್ನು ಶಮನಗೊಳಿಸುವುದಕ್ಕಾಗಿಯೇ ಪ್ರಯೋಗಿಸಿದ್ದನು. ಆ ಅಸ್ತ್ರದ ಪ್ರಭಾವ ಎಂತಹುದೆಂದರೆ - ಅದನ್ನು ಒಂದು ಸಾರಿ ಬಿಟ್ಟಮೇಲೆ ಕೂಡಲೇ ಅದನ್ನು ಹಿಂದಿರುಗಿಸುವುದು ಅತ್ಯಂತ ಕಠಿಣವಾಗಿತ್ತು. ಕೇವಲ ಬ್ರಹ್ಮಚಾರಿಯೇ ಅದನ್ನು ಹಿಂದಿರುಗಿಸಲು ಸಾಧ್ಯ. ಅಶ್ವತ್ಥಾಮನೂ ಕೂಡ ಆ ಇಬ್ಬರು ಮಹಾಪುರುಷರನ್ನು ನೋಡಿ ಅದನ್ನು ಹಿಂದಿರುಗಿಸಲು ಬಹಳ ಪ್ರಯತ್ನ ಮಾಡಿದನು; ಆದರೆ ಅವನು ಸಂಯಮಿಯಾಗಿಲ್ಲದ ಕಾರಣ ಅದನ್ನು ಹಿಂದಿರುಗಿಸಲು ಆಗಲಿಲ್ಲ. ಕೊನೆಗೆ ವ್ಯಾಸರು ಹೇಳಿದ ಮೇಲೆ ಅವನು ತನ್ನ ಆ ಅಸ್ತ್ರವನ್ನು ಉತ್ತರೆಯ ಗರ್ಭಕ್ಕೆ ಪ್ರಯೋಗಿಸಿದನು ಮತ್ತು ಆ ಬಾಲಕ ಸತ್ತು ಹೊರಕ್ಕೆ ಬಂತು, ಆದರೆ ಶ್ರೀಕೃಷ್ಣಪರಮಾತ್ಮನು ಅದನ್ನು ಪುನಃ ಬದುಕಿಸಿದನು. ಈ ಪ್ರಕಾರ ಅರ್ಜುನನಲ್ಲಿ ಶೂರವೀರತೆ, ಅಸ್ತ್ರಜ್ಞಾನ ಮತ್ತು ಇಂದ್ರಿಯ ನಿಗ್ರಹ ಈ ಗುಣಗಳ ಅದ್ಭುತ ಸಮ್ಮಿಶ್ರಣವಾಗಿತ್ತು.

ಅರ್ಜುನನ ಜೀವನ ಒಂದು ದಿವ್ಯಜೀವನವಾಗಿತ್ತು. ಅವನ ಚರಿತ್ರೆಯ ಮೇಲೆ ನಾವು ಎಷ್ಟು ವಿಚಾರ ಮಾಡಿದರೂ ಅಷ್ಟೇ ಅಧಿಕವಾಗಿ ನಮಗೆ ಅದು ಶ್ರೇಷ್ಠ ಆದರ್ಶ ಮತ್ತು ಉಪದೇಶಗಳಿಂದ ಪರಿಪೂರ್ಣವಾಗಿ ಕಂಡುಬರುತ್ತದೆ.

❑❑❑

೫. ಕುಂತೀದೇವಿ

ಕುಂತೀದೇವಿಯು ಓರ್ವ ಆದರ್ಶ ಮಹಿಳೆಯಾಗಿದ್ದಳು. ಈಕೆ ಮಹಾತ್ಮಾ ಪಾಂಡವರ ತಾಯಿ ಮತ್ತು ಶ್ರೀಕೃಷ್ಣ ಪರಮಾತ್ಮನ ಸೋದರತ್ತೆಯಾಗಿದ್ದಳು. ಈಕೆ ವಸುದೇವನ ಒಡಹುಟ್ಟಿದ ಸಹೋದರಿ ಮತ್ತು ರಾಜಾ ಕುಂತೀಭೋಜನಿಗೆ ದತ್ತು ಕೊಡಲ್ಪಟ್ಟಿದ್ದಳು. ಹುಟ್ಟಿದಾಗಿನಿಂದಲೂ ಇವಳನ್ನು ಜನರು ಪೃಥಾ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಆದರೆ ರಾಜಾ ಕುಂತಿಭೋಜನಲ್ಲಿ ಈಕೆಯ ಪಾಲನೆ-ಪೋಷಣೆಯಾದುದರಿಂದ ಕುಂತೀ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಇವಳು ಬಾಲ್ಯದಿಂದಲೂ ಬಹಳ ಸುಶೀಲೆ, ಸದಾಚಾರಿಣಿ ಸಂಯಮಶೀಲೆ ಮತ್ತು ಭಕ್ತಿಮತಿಯೂ ಆಗಿದ್ದಳು. ರಾಜಾ ಕುಂತಿಭೋಜನ ಮನೆಗೆ ಒಂದು ಸಲ ಮಹಾ ತೇಜಸ್ವೀ ದುರ್ವಾಸ ಋಷಿಗಳು ಅತಿಥಿಯಾಗಿ ಬಂದರು. ಅವರ ಸೇವೆಯ ಕಾರ್ಯವನ್ನು ಬಾಲಕಿ ಕುಂತಿಗೆ ವಹಿಸಿಕೊಡಲಾಯಿತು. ಇವಳಿಗೆ ಬ್ರಾಹ್ಮಣರಲ್ಲಿ ಬಹಳ ಭಕ್ತಿಯಿತ್ತು ಮತ್ತು ಅತಿಥಿ-ಸೇವೆಯಲ್ಲಿ ಬಹಳ ಆಸಕ್ತಿಯಿತ್ತು. ರಾಜಪುತ್ರಿ ಪೃಥಾ ಸೋಮಾರಿತನವನ್ನು ಮತ್ತು ಅಭಿಮಾನವನ್ನು ತ್ಯಜಿಸಿ ದುರ್ವಾಸರ ಸೇವೆಯಲ್ಲಿ ತನು-ಮನದಿಂದ ತಲ್ಲೀನಳಾಗಿ ಹೋದಳು. ಇವಳು ಶುದ್ಧ ಮನಸ್ಸಿನಿಂದ ಸೇವೆಮಾಡಿ ಮುನಿಯನ್ನು ಪೂರ್ಣವಾಗಿ ಪ್ರಸನ್ನಗೊಳಿಸಿಕೊಂಡಳು. ಮುನಿಯ ವ್ಯವಹಾರ ಬಹು ಕಠಿಣವಾಗಿತ್ತು. ಆಗಾಗ್ಗೆ ಅವರು ಅನಿರ್ದಿಷ್ಟ ಸಮಯದಲ್ಲಿ ಬರುತ್ತಿದರು, ಒಮ್ಮೊಮ್ಮೆ ಬರುವುದೇ ಇಲ್ಲ ಮತ್ತು ಒಂದೊಂದು ಸಲ ದೊರೆಯುವುದೇ ಅತ್ಯಂತ ಕಷ್ಟವಾಗಿರುವಂತಹ ಪದಾರ್ಥವನ್ನು ತಿನ್ನಲು ಕೇಳುತ್ತಿದ್ದರು. ಆದರೆ ಪೃಥಾ ಅವರ ಎಲ್ಲಾ ಕಾರ್ಯಗಳನ್ನು ಮೊದಲೇ ಸಿದ್ಧಪಡಿಸಿಟ್ಟುಕೊಂಡಿದ್ದಳೋ ಎಂಬಂತೆ ಮಾಡಿಬಿಡುತ್ತಿದ್ದಳು. ಈಕೆಯ ಶೀಲ-ಸ್ವಭಾವ ಮತ್ತು ಸಂಯಮದಿಂದ ದುರ್ವಾಸ ಮುನಿಗೆ ಬಹಳ ಸಂತೋಷ ವಾಯಿತು. ಕುಂತಿಯ ಈ ಬಾಲ್ಯದ ಮುನಿಗಳ ಸೇವೆ ಅವಳಿಗೆ ಬಹು ಶ್ರೇಯಸ್ಸನ್ನೂ ತಂದು ಕೊಡುವಂತಾಯಿತು. ಇದರಿಂದಲೇ ಆಕೆಯ ಜೀವನದಲ್ಲಿ ಸಂಯಮ, ಸದಾಚಾರ, ತ್ಯಾಗ ಮತ್ತು

ಸೇವಾಭಾವಗಳಿಗೆ ಬುನಾದಿಯಾಯ್ತು. ಮುಂದೆ ಈ ಗುಣಗಳು ಆಕೆಯಲ್ಲಿ ಅದ್ಭುತವಾಗಿ ವಿಕಾಸಗೊಂಡವು.

ಕುಂತಿಯಲ್ಲಿ ನಿಷ್ಕಾಮಭಾವನೆಯೂ ಬಾಲ್ಯದಿಂದಲೇ ವಿಕಾಸಗೊಂಡಿತ್ತು. ಬಹಳ ತತ್ಪರತೆ ಮತ್ತು ಪ್ರೀತಿಯಿಂದ ಮಹಾತ್ಮರಾದ ದುರ್ವಾಸರ ಸೇವೆ ಮಾಡುತ್ತಾ ಒಂದು ವರ್ಷ ಪೂರ್ಣಗೊಂಡಿತು. ಆಕೆಯ ಸೇವಾಮಂತ್ರದ ಅನುಷ್ಠಾನ ಪೂರ್ತಿಯಾಯ್ತು. ಇವಳ ಸೇವೆಯಲ್ಲಿ ಹುಡುಕಿದರೂ ದುರ್ವಾಸರಿಗೆ ಯಾವ ಕೊರತೆಯೂ ಕಂಡುಬರಲಿಲ್ಲ. ಅದರಿಂದ ಅವರು ಬಹಳ ಪ್ರಸನ್ನರಾಗಿ ಹೇಳಿದರು - 'ಮಗೂ! ನಾನು ನಿನ್ನ ಸೇವೆಯಿಂದ ಬಹಳ ಸಂತೋಷ ಪಟ್ಟೆನು. ನನ್ನಿಂದ ಏನಾದರೂ ವರವನ್ನು ಕೇಳಿಕೋ. ಕುಂತಿಯು ಆ ಮುನಿಗಳಿಗೆ ಬಹು ಒಳ್ಳೆಯ ಉತ್ತರಕೊಟ್ಟಳು. ಶ್ರೀಕೃಷ್ಣನ ಸೋದರತ್ತೆ ಮತ್ತು ಪಾಂಡವರ ಭಾವೀ ಮಾತೆಯ ಆ ಉತ್ತರ ಸರ್ವಥಾ ಅನುರೂಪವಾಗಿತ್ತು. ಕುಂತಿಯು ಹೇಳಿದಳು - 'ಸ್ವಾಮಿ! ತಾವು ಮತ್ತು ತಂದೆಯವರು ನನ್ನ ಬಗ್ಗೆ ಪ್ರಸನ್ನರಾಗಿರುವಿರಿ, ನನ್ನ ಕಾರ್ಯಗಳೆಲ್ಲಾ ಇದರಿಂದ ಸಫಲವಾದುವು. ಈಗ ನನಗೆ ವರಗಳ ಯಾವ ಅವಶ್ಯಕತೆಯೂ ಇಲ್ಲ.' ಒಬ್ಬ ಚಿಕ್ಕವಯಸ್ಸಿನ ಹುಡುಗಿಯಲ್ಲಿ ಅದ್ಭುತವಾದ ಸೇವಾ ಭಾವನೆಯ ಜೊತೆಗೆ, ಮಣಿ-ಕಾಂಚನಗಳ ಸಂಯೋಗಕ್ಕೆ ಸಮಾನವಾದಂತಹ ನಿಷ್ಕಾಮ ಭಾವದ ಸಂಯೋಗವಿತ್ತು. ನಮ್ಮ ದೇಶದ ಬಾಲಕಿಯರು ಕುಂತಿಯ ಈ ಆದರ್ಶ ನಿಷ್ಕಾಮ ಸೇವಾಭಾವದಿಂದ ನೀತಿಯನ್ನು ಕಲಿಯಬೇಕು. ಅತಿಥಿ ಸೇವೆಯು ನಮ್ಮ ಸಾಮಾಜಿಕ ಜೀವನದ ಪ್ರಾಣವಾಗಿರುತ್ತದೆ ಮತ್ತು ಅದರ ಶಿಕ್ಷಣವು ಭಾರತವಾಸಿಗಳಿಗೆ ಬಾಲ್ಯದಿಂದಲೇ ದೊರೆಯುತ್ತಿತ್ತು. ಪ್ರಸನ್ನತಾಪೂರ್ವಕ ಮಾಡಲ್ಪಡುವ, ಭಾರಸ್ವರೂಪ ಅಥವಾ ಬೇಸರವಾಗಿ ಕಂಡುಬರದಂತಹ ಮತ್ತು ಪ್ರತಿ ಫಲವನ್ನು ಬಯಸದಿರುವಂತಹ ಸೇವೆಯೇ ಸತ್ಯವಾದ ಮತ್ತು ಸಾತ್ತ್ವಿಕ ಸೇವೆಯಾಗಿದೆ. ಇಂದಿನ ಸೇವೆಯಲ್ಲಿ ಪ್ರಾಯಶಃ ಈ ಎರಡು ವಿಷಯಗಳ ಅಭಾವ ಕಂಡುಬರುತ್ತದೆ. ಸಂತೋಷದಿಂದ ನಿಷ್ಕಾಮಭಾವದಿಂದೊಡಗೂಡಿ ಮಾಡಲ್ಪಡುವ ಸೇವೆಯು ಶ್ರೇಯಸ್ಸಿನ ಪರಮ ಸಾಧನೆಯಾಗಿಬಿಡುತ್ತದೆ. ಅಸ್ತು.

ಕುಂತಿಯು ಮುನಿಯಿಂದ ಯಾವ ವರವನ್ನೂ ಕೇಳದೇ ಇದ್ದರೂ ಅವರು ದೇವತೆಗಳ ಆವಾಹನಾ ಮಂತ್ರವನ್ನು ಗ್ರಹಿಸುವಂತೆ ಆಕೆಗೆ ಹೇಳಿದರು. ಅವರು ಕುಂತಿಗೆ ಏನನ್ನಾದರೂ ಕೊಡಬೇಕೆಂದು ಬಯಸಿದ್ದರು. ಈ ಸಲ ಋಷಿಯ ಅಪಮಾನದ ಭಯದಿಂದ ಕುಂತಿಯು ತಿರಸ್ಕರಿಸಲಾರದೆ ಒಪ್ಪಿದಳು. ಆಗ ಅವರು ಈಕೆಗೆ ಅಥರ್ವವೇದದ ಶಿರೋಭಾಗದಲ್ಲಿ ಬಂದಿರುವ ಮಂತ್ರಗಳನ್ನು ಉಪದೇಶ ಮಾಡಿದರು ಮತ್ತು ಹೇಳಿದರು - 'ಈ ಮಂತ್ರಗಳ ಬಲದಿಂದ ನೀನು ಯಾವ-ಯಾವ ದೇವತೆಯ ಆವಾಹನೆ ಮಾಡುವಿಯೋ, ಅವನೇ ನಿನ್ನ ಅಧೀನನಾಗುವನು.' ಹೀಗೆಂದು ಹೇಳಿ ದುರ್ವಾಸ ಮುನಿಯು ಅಲ್ಲಿಯೇ ಅಂತರ್ಧಾನನರಾದರು. ಅವರು ಕೊಟ್ಟ ಮಂತ್ರಗಳ ಪ್ರಭಾವದಿಂದ ಕುಂತಿಯು ಮುಂದೆ ಧರ್ಮ ಮುಂತಾದ ದೇವತೆಗಳಿಂದ ಯುಧಿಷ್ಠಿರ ಇತ್ಯಾದಿಯವರನ್ನು ಪುತ್ರರೂಪದಲ್ಲಿ ಪಡೆದು ಕೊಳ್ಳಲು ಸಾಧ್ಯವಾಯಿತು.

ಕುಂತಿಯ ವಿವಾಹ ಪಾಂಡು ಮಹಾರಾಜನ ಸಂಗಡ ನಡೆಯಿತು. ಪಾಂಡು ಮಹಾರಾಜನು ಬಹಳ ಧರ್ಮಾತ್ಮನಾಗಿದ್ದನು ಒಂದು ಸಲ ತಿಳಿಯದೇ ಆತನಿಂದ ಮೃಗರೂಪಧಾರೀ ಕಿಂದಮ ಮುನಿಗೆ ಹಿಂಸೆಯಾಗಿ ಬಿಟ್ಟಿತು. ಈ ಘಟನೆಯಿಂದ ಆತನ ಮನಸ್ಸಿನಲ್ಲಿ ಬಹು ವ್ಯಥೆ ಮತ್ತು ವೈರಾಗ್ಯವುಂಟಾಯಿತು. ಆತನು ಸರ್ವಸ್ವವನ್ನೂ ತ್ಯಜಿಸಿ ಕಾಡಿನಲ್ಲಿ ವಾಸಿಸಲು ನಿಶ್ಚಯಿಸಿಕೊಂಡನು. ಕುಂತೀದೇವಿಯು ಬಹಳ ಪತಿಭಕ್ತಿಯುಳ್ಳವಳಾಗಿದ್ದಳು. ಈಕೆಯೂ ತನ್ನ ಪತಿಯೊಡನೆ ಇಂದ್ರಿಯಗಳನ್ನು ವಶಪಡಿಸಿಕೊಂಡು, ಸುಖ-ಭೋಗಗಳಿಗೆ ತಿಲಾಂಜಲಿ ಕೊಟ್ಟು ಕಾಡಿನಲ್ಲಿರಲು ಸಿದ್ಧಳಾದಳು. ಆಗಿನಿಂದ ಈಕೆಯು ಜೀವನ ಪರ್ಯಂತ ನಿಯಮಪೂರ್ವಕವಾಗಿ ಬ್ರಹ್ಮಚರ್ಯ-ವ್ರತದ ಪಾಲನೆಮಾಡಿದಳು ಮತ್ತು ಸಂಯಮದಿಂದಿದ್ದಳು. ಪತಿಯು ಸ್ವರ್ಗವಾಸಿಯಾದ ನಂತರ ಇವಳು ತನ್ನ ಮಕ್ಕಳ ರಕ್ಷಣೆಯ ಭಾರವನ್ನು ತನ್ನ ಚಿಕ್ಕಸವತಿ ಮಾದ್ರಿಗೆ ವಹಿಸಿಕೊಟ್ಟು ತನ್ನ ಪತಿಯನ್ನು ಹಿಂಬಾಲಿಸುವ ಯೋಚನೆ ಮಾಡಿದಳು. ಆದರೆ ಮಾದ್ರಿಯು ಅದನ್ನು ವಿರೋಧಿಸಿದಳು. ಆಕೆ ಹೇಳಿದಳು - 'ಅಕ್ಕಾ! ನಾನಿನ್ನು ಯುವತಿ, ಆದ್ದರಿಂದ ನಾನೇ ಪತಿದೇವರನ್ನು ಹಿಂಬಾಲಿಸುವೆನು.

ನೀನು ನನ್ನ ಮಕ್ಕಳನ್ನು ಕಾಪಾಡುವುದು.' ಕುಂತಿಯು ಮಾದ್ರಿಯ ಮಾತನ್ನು ಒಪ್ಪಿಕೊಂಡಳು ಮತ್ತು ಕೊನೆಯವರೆಗೂ ಅವಳ ಮಕ್ಕಳನ್ನು ತನ್ನ ಮಕ್ಕಳಿಗಿಂತ ಮಿಗಿಲಾಗಿ ತಿಳಿದುಕೊಂಡಿದ್ದಳು. ಸವತಿ ಮತ್ತು ಅವಳ ಪುತ್ರರೊಡನೆ ಹೇಗೆ ನಡೆದುಕೊಳ್ಳಬೇಕು, ಇದರ ಶಿಕ್ಷಣವನ್ನು ನಮ್ಮ ತಾಯಿ-ಸಹೋದರಿಯರು ಕುಂತಿಯ ಜೀವನದಿಂದ ಪಡೆಯಬೇಕು.

ಪತಿಯ ಜೀವನಕಾಲದಲ್ಲಿ ಈಕೆಯು ಮಾದ್ರಿಯನ್ನು ತಂಗಿಯೆಂದೇ ಭಾವಿಸಿಕೊಂಡು ನಡೆದುಕೊಂಡಳು ಮತ್ತು ಅವಳು ಸಹಗಮನ ಮಾಡಿಕೊಂಡ ನಂತರ ಅವಳ ಪುತ್ರರ ಬಗ್ಗೆ ಒಬ್ಬ ಸಾಧ್ವಿ ಹೆಂಗಸು ಇಟ್ಟುಕೊಳ್ಳಬೇಕಾದಂತಹ ಭಾವನೆಯನ್ನೇ ಇಟ್ಟುಕೊಂಡಿದ್ದಳು. ಸಹದೇವನ ಬಗ್ಗೆ ಈಕೆಗೆ ವಿಶೇಷ ಮಮತೆಯಿತ್ತು ಮತ್ತು ಅವನೂ ಸಹ ಇವಳಲ್ಲಿ ಬಹು ಹೆಚ್ಚಿನ ಸ್ನೇಹ-ಶ್ರದ್ಧೆಯಿಟ್ಟುಕೊಂಡಿದ್ದನು.

ಪತಿಯ ಮರಣಾನಂತರ ಕುಂತೀದೇವಿಯ ಜೀವನ ಒಂದೇ ಸಮ ಕಷ್ಟದಲ್ಲಿಯೇ ಕಳೆಯಿತು. ಆದರೆ ಈಕೆಯು ಬಹಳ ವಿಚಾರಪರಳೂ ಮತ್ತು ಧೈರ್ಯಶಾಲಿಯೂ ಆಗಿದ್ದಳು. ಆದುದರಿಂದ ಇವಳು ಕಷ್ಟಗಳಿಗಾಗಿ ಕಿಂಚಿತ್ತೂ ಚಿಂತಿಸಲಿಲ್ಲ; ಕೊನೆಯವರೆಗೂ ಧರ್ಮನಿರತಳಾಗಿದ್ದಳು. ದುರ್ಯೋಧನನ ಅತ್ಯಾಚಾರಗಳನ್ನೂ ಈಕೆ ಮೌನವಾಗಿ ಸಹಿಸಿಕೊಳ್ಳುತ್ತಿದ್ದಳು. ಈಕೆಯ ಸ್ವಭಾವ ಬಹು ಕೋಮಲ ಮತ್ತು ದಯಾಳುವಾಗಿತ್ತು. ಈಕೆಗೆ ತನ್ನ ಕಷ್ಟಗಳ ಬಗ್ಗೆ ಯಾವ ಯೋಚನೆಯೂ ಇರಲಿಲ್ಲ. ಆದರೆ ಈಕೆಗೆ ಇತರರ ಕಷ್ಟವನ್ನು ನೋಡಲಾಗುತ್ತಿರಲಿಲ್ಲ. ಅರಗಿನ ಮನೆಯಿಂದ ಹೊರಬಂದು ಈಕೆ ತನ್ನ ಪುತ್ರರೊಡನೆ ಏಕಚಕ್ರ ನಗರದಲ್ಲಿ ತಂಗಿದಳು. ಆ ಕಾಲದಲ್ಲಿ ಅಲ್ಲಿನ ಜನರಿಗೆ ಒಂದು ಬಹು ದೊಡ್ಡ ಸಂಕಟವಿತ್ತು. ಆ ನಗರದ ಹತ್ತಿರದಲ್ಲಿಯೇ ಬಕಾಸುರನೆಂಬ ಒಬ್ಬ ರಾಕ್ಷಸ ಇದ್ದನು. ಆ ರಾಕ್ಷಸನಿಗೆ ನಗರವಾಸಿಗಳು ಪ್ರತಿದಿನವೂ ಒಂದು ಬಂಡಿ ಅನ್ನ ಹಾಗೂ ಎರಡು ಕೋಣಗಳನ್ನು ತಲುಪಿಸಬೇಕಾಗಿತ್ತು. ಇವುಗಳನ್ನು ತೆಗೆದುಕೊಂಡು ಹೋದ ಮನುಷ್ಯನನ್ನೂ ಆ ರಾಕ್ಷಸನು ತಿಂದು ಹಾಕುತ್ತಿದ್ದನು. ಅಲ್ಲಿನ ನಗರವಾಸಿಗಳು ಸರದಿಯಂತೆ

ಈ ಕೆಲಸ ಮಾಡಬೇಕಾಗಿತ್ತು. ಪಾಂಡವರು ಭಿಕ್ಷುಕರ ರೂಪದಲ್ಲಿ ತಂಗಿದ್ದ ಬ್ರಾಹ್ಮಣನ ಮನೆಯಿಂದ ಒಂದು ದಿವಸ ರಾಕ್ಷಸನಿಗೆ ಮನುಷ್ಯನನ್ನು ಕಳುಹಿಸಿಕೊಡಬೇಕಾದ ಸರದಿ ಬಂತು. ಬ್ರಾಹ್ಮಣ-ಪರಿವಾರದಲ್ಲಿ ಗೋಳಾಟ ಗದ್ದಲ ಪ್ರಾರಂಭವಾಯ್ತು. ಕುಂತಿಗೆ ಈ ವಿಚಾರ ಗೊತ್ತಾಯಿತು. ಆಗ ಆಕೆಯ ಹೃದಯ ದಯೆಯಿಂದ ತುಂಬಿಬಂತು. ಆಕೆ ಯೋಚಿಸಿದಳು - 'ನಾವುಗಳೆಲ್ಲಾ ಇರುವಾಗ ಬ್ರಾಹ್ಮಣ - ಪರಿವಾರಕ್ಕೆ ಕಷ್ಟ ಅನುಭವಿಸುವುದು, ಇದು ನಮಗೆ ಬಹಳ ನಾಚಿಕೆಯ ಮಾತಾಗಿದೆ. ಅಲ್ಲದೆ ನಮಗೆ ಇವರು ಆಶ್ರಯದಾತರು ಇವರಿಗೆ ಪ್ರತ್ಯುಪಕಾರವಾಗಿ ನಾವು ಯಾವುದಾದರೂ ರೂಪದಲ್ಲಿ ಏನಾದರೂ ಮಾಡಲೇಬೇಕು. ಅವಕಾಶ ಒದಗಿಬಂದಾಗ ಉಪಕಾರಗಳಿಗೆ ಪ್ರತ್ಯುಪಕಾರ ಮಾಡದಿರುವುದು ಧರ್ಮಭ್ರಷ್ಟರಾದಂತೆ. ಇವರ ಮನೆಯಲ್ಲಿ ನಾವುಗಳು ಇರುತ್ತಿರುವಾಗ ಇವರ ದುಃಖವನ್ನು ಹಂಚಿಕೊಳ್ಳುವುದು ನಮ್ಮ ಕರ್ತವ್ಯ.'

ಹೀಗೆ ಯೋಚಿಸಿ ಕುಂತಿಯು ಬ್ರಾಹ್ಮಣನ ಮನೆಗೆ ಹೋದಳು. ಬ್ರಾಹ್ಮಣನು ತನ್ನ ಪತ್ನೀ ಮತ್ತು ಪುತ್ರರ ಜೊತೆಯಲ್ಲಿ ಕುಳಿತಿರುವುದನ್ನು ನೋಡಿದಳು. ಅವನು ತನ್ನ ಹೆಂಡತಿಯೊಡನೆ ಹೇಳುತ್ತಿದ್ದಾನೆ - 'ನೀನು ಕುಲೀನಳು, ಶೀಲವತಿ ಮತ್ತು ಮಕ್ಕಳ ತಾಯಿ. ನಾನು ರಾಕ್ಷಸನಿಂದ ನನ್ನನ್ನು ರಕ್ಷಿಸಿ ಕೊಳ್ಳಲು ನಿನ್ನನ್ನು ಅವನ ಹತ್ತಿರಕ್ಕೆ ಕಳುಹಿಸಿಕೊಡಲಾರೆ.' ಪತಿಯ ಮಾತನ್ನು ಕೇಳಿ ಬ್ರಾಹ್ಮಣಿಯು ಹೇಳಿದಳು - 'ಇಲ್ಲಾ ನಾನು ಸ್ವತಃ ಅವನ ಬಳಿಗೆ ಹೋಗುವೆನು. ತನ್ನ ಪ್ರಾಣವನ್ನು ಅರ್ಪಿಸಿ ಪತಿಯನ್ನು ರಕ್ಷಿಸುವುದು ಪತ್ನಿಗೆ ಅತ್ಯುತ್ತಮ ಸನಾತನ ಕರ್ತವ್ಯವಾಗಿದೆ. ಪತ್ನಿಯು ತನ್ನ ಪತಿಗಿಂತ ಮೊದಲೇ ಪರಲೋಕವಾಸಿ ಯಾಗುವುದು ಸ್ತ್ರೀಯರಿಗೆ ಬಹುದೊಡ್ಡ ಸೌಭಾಗ್ಯದ ಮಾತು. ಹೆಂಗಸು ವಧೆಗೆ ಅರ್ಹಳಲ್ಲವೆಂದು ತಿಳಿದುಕೊಂಡು ಆ ರಾಕ್ಷಸನು ನನ್ನನ್ನು ಕೊಲ್ಲದೇ ಇರುವ ಸಂಭವವೂ ಇದೆ. ಪುರುಷನ ವಧೆ ನಿರ್ವಿವಾದವಾಗಿದೆ ಮತ್ತು ಹೆಂಗಸಿನದು ಸಂದೇಹಾಸ್ಪದವಾಗಿದೆ. ಆದುದರಿಂದ ನನ್ನನ್ನೇ ಅವನ

ಹತ್ತಿರಕ್ಕೆ ಕಳುಹಿಸಿರಿ.' ತಾಯಿ-ತಂದೆಯರ ದುಃಖದ ಮಾತನ್ನು ಕೇಳಿ ಮಗಳು ಹೇಳಿದಳು - 'ನೀವೇಕೆ ಅಳುತ್ತಿರುವಿರಿ? ನೋಡಿ, ಧರ್ಮಾನುಸಾರ ನೀವಿಬ್ಬರೂ ನನ್ನನ್ನು ಒಂದಲ್ಲ ಒಂದು ದಿವಸ ಬಿಟ್ಟುಬಿಡುವಿರಿ. ಆದ್ದರಿಂದ ಇಂದೇ ನನ್ನನ್ನು ಬಿಟ್ಟುಕೊಟ್ಟು ನಿಮ್ಮ ರಕ್ಷಣೆಯನ್ನು ಮಾಡಿಕೊಳ್ಳಬಾರದೇ? ನಮ್ಮನ್ನು ದುಃಖದಿಂದ ಪಾರು ಮಾಡಲೆಂದೇ ಜನರು ಮಕ್ಕಳನ್ನು ಬಯಸುತ್ತಾರೆ.' ಇದನ್ನು ಕೇಳಿ ತಾಯಿ-ತಂದೆಗಳಿಬ್ಬರೂ ಅಳಲಾರಂಭಿಸಿದರು, ಮಗಳಿಂದಲೂ ಅಳದೇ ಇರಲಾಗಲಿಲ್ಲ. ಎಲ್ಲರೂ ಅಳುತ್ತಿರುವುದನ್ನು ನೋಡಿ ಬ್ರಾಹ್ಮಣನ ಪುಟ್ಟ ಬಾಲಕನು ಹೇಳಲಾರಂಭಿಸಿದ - 'ಅಪ್ಪಾ! ಅಮ್ಮಾ! ಅಕ್ಕಾ! ಅಳಬೇಡಿರಿ!' ಪುನಃ ಅವನು ಒಂದು ಕಡ್ಡಿಯನ್ನು ತೆಗೆದುಕೊಂಡು ನಗುತ್ತಾ ಹೇಳಿದನು - 'ನಾನು ಇದರಿಂದಲೇ ರಾಕ್ಷಸನನ್ನು ಕೊಂದು ಹಾಕುವೆನು.' ಈಗ ಎಲ್ಲರೂ ನಕ್ಕುಬಿಟ್ಟರು. ಕುಂತಿಯು ಇದನ್ನೆಲ್ಲಾ ನೋಡುತ್ತಾ - ಕೇಳುತ್ತಾ ಇದ್ದಳು. ಈಕೆ ಈಗ ಮುಂದೆ ಹೋಗಿ ಅವರೊಡನೆ ಹೇಳಿದಳು - 'ಸ್ವಾಮಿ! ನಿಮಗಾದರೋ ಒಬ್ಬ ಮಗ ಮತ್ತು ಒಬ್ಬಳೇ ಮಗಳು. ತಮ್ಮ ದಯೆಯಿಂದ ನನಗೆ ಐವರು ಪುತ್ರರಿದ್ದಾರೆ. ರಾಕ್ಷಸನಿಗೆ ಊಟ ತೆಗದುಕೊಂಡು ಹೋಗಲು ನಾನು ಅವರಲ್ಲಿ ಯಾರನ್ನಾದರೂ ಕಳುಹಿಸಿಕೊಡುವೆನು, ತಾವು ಗಾಬರಿಪಟ್ಟುಕೊಳ್ಳಬೇಡಿರಿ.' ಬ್ರಾಹ್ಮಣನು ಕುಂತೀ ದೇವಿಯ ಈ ಪ್ರಸ್ತಾಪವನ್ನು ಒಪ್ಪಿಕೊಳ್ಳಲಿಲ್ಲ. ಆತನು ಹೇಳಿದನು - 'ತಾಯಿ! ನೀವು ಹೀಗೆ ಹೇಳುವುದು ನಿಮಗೆ ಅನುರೂಪವಾಗಿಯೇ ಇದೆ; ಆದರೆ ನಾನು ನಮಗೋಸ್ಕರ ನನ್ನ ಅತಿಥಿಯ ಹತ್ಯೆ ಮಾಡಲಾರೆ.' ಕುಂತಿಯು ಆತನಿಗೆ ತಿಳಿಯ ಹೇಳಿದಳು - 'ನಾನು ನನ್ನ ಯಾವ ಪುತ್ರನನ್ನು ರಾಕ್ಷಸನ ಬಳಿಗೆ ಕಳುಹಿಸುವೆನೋ, ಅವನು ಬಹು ಬಲಶಾಲಿ, ಮಂತ್ರಸಿದ್ಧ ಮತ್ತು ತೇಜಸ್ವಿಯಾಗಿದ್ದಾನೆ; ಯಾರೂ ಅವನ ಒಂದು ಕೂದಲನ್ನೂ ಕೊಂಕಿಸಲಾರರು.' ನಂತರ ಬ್ರಾಹ್ಮಣನು ಸಮ್ಮತಿಸಿದನು. ಆಗ ಕುಂತಿಯು ಭೀಮಸೇನನನ್ನು ಆ ಕೆಲಸಕ್ಕಾಗಿ ರಾಕ್ಷಸನ ಹತ್ತಿರಕ್ಕೆ ಕಳುಹಿಸಿಬಿಟ್ಟಳು. ಬೇರೆಯವರ ಪ್ರಾಣ ರಕ್ಷಣೆಗಾಗಿ ಈ ರೀತಿ ತನ್ನ ಹೃದಯದ ತುಣುಕನ್ನು ತಿಳಿದೂ ತಿಳಿದೂ ಯಾವ ತಾಯಿ ತಾನೆ ಬಲಿದಾನ ಮಾಡಬಲ್ಲಳು?

ಕುಂತಿಯ ಈ ಆದರ್ಶತ್ಯಾಗದ ಪ್ರಭಾವದಿಂದ ಪ್ರಪಂಚಕ್ಕೆ ಬಹಳ ಒಳ್ಳೆಯ ಪರಿಣಾಮವುಂಟಾಗಿದೆಯೆಂದು ಹೇಳಬಹುದು. ಆದುದರಿಂದ ಎಲ್ಲರೂ ಇದರಿಂದ ನೀತಿಯನ್ನು ಕಲಿಯಬೇಕು.'

ಕುಂತಿದೇವಿಯ ಸತ್ಯಪ್ರೇಮವೂ ಸಹ ಆದರ್ಶವಾಗಿತ್ತು. ಈಕೆಯು ವಿನೋದಕ್ಕಾಗಿಯೂ ಎಂದೂ ಯಾವಾಗಲೂ ಸುಳ್ಳು ಹೇಳಲಿಲ್ಲ. ಮರೆವಿನಿಂದಾದರೂ ಈಕೆಯ ಬಾಯಿಂದ ಹೊರಟ ಮಾತನ್ನು ತನುಮನಗಳಿಂದ ಪಾಲಿಸುತ್ತಿದ್ದಳು. ಈ ಪ್ರಕಾರದ ಸತ್ಯನಿಷ್ಠಳು. ಇತಿಹಾಸದ ಪುಟಗಳನ್ನು ತಿರುವಿಹಾಕಿದರೂ ಬೇರೆ ಕಡೆ ಪ್ರಾಯಶಃ ನೋಡಲು ದೊರಕಲಾರದು. ಅರ್ಜುನ ಮತ್ತು ಭೀಮ ಸ್ವಯಂವರದಲ್ಲಿ ದ್ರೌಪದಿಯನ್ನು ಗೆದ್ದು ತಾಯಿಯ ಬಳಿ ಕರೆದುಕೊಂಡು ಬಂದಾಗ ಹೇಳಿದರು - 'ಅಮ್ಮಾ! ಈ ದಿವಸ ನಾವು ಈ ಭಿಕ್ಷೆ ತಂದಿದ್ದೇವೆ.' ಆದರೆ ಈಕೆಯು ಅವರನ್ನು ನೋಡದೆಯೇ ಹೇಳಿಬಿಟ್ಟಳು - ಮಗೂ! ಐವರು ಸಹೋದರರೂ ಸೇರಿ ಅದನ್ನು ಹಂಚಿಕೊಳ್ಳಿರಿ.' ಇವರು ಒಬ್ಬ ಕನ್ಯೆಯನ್ನು ಕರೆ ತಂದಿರುವುದು ಗೊತ್ತಾದಾಗ ಈಕೆಯು ಪೇಚಾಟಕ್ಕೆ ಸಿಕ್ಕಿಬಿದ್ದಳು. ಈಕೆಯು ಯೋಚಿಸಿದಳು - 'ನಾನು ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಂಡೆನಾದರೆ ಅಸತ್ಯದ ದೋಷ ತಟ್ಟುವುದು ಮತ್ತು ತನ್ನ ಮಕ್ಕಳಿಗೆ ಅದರ ಪ್ರಕಾರ ನಡೆದುಕೊಳ್ಳುವಂತೆ ಹೇಳಿದರೆ ಸನಾತನ ಮರ್ಯಾದೆಯ ಲೋಪವಾಗುತ್ತದೆ. ಐವರು ಸಹೋದರರು ಒಬ್ಬ ಸ್ತ್ರೀಯೊಡನೆ ವಿವಾಹ ಮಾಡಿಕೊಳ್ಳುವುದೇ? - ಇದನ್ನು ಮೊದಲು ಯಾವಾಗಲೂ ನೋಡಿಲ್ಲ-ಕೇಳಿಯೂ ಇಲ್ಲ.

ಇಂತಹ ಸ್ಥಿತಿಯಲ್ಲಿ ಕುಂತಿದೇವಿಗೆ ಏನೊಂದು ನಿಶ್ಚಯವನ್ನು ಮಾಡಲು ಸಾಧ್ಯವಾಗಲಿಲ್ಲ; ಆಕೆಗೆ ದಿಕ್ಕೇ ತೋಚದಂತಾಯಿತು. ಕೊನೆಗೆ ಅವಳು ಧರ್ಮರಾಜ ಯುಧಿಷ್ಠಿರನ ಸಮ್ಮತಿಯನ್ನು ಕೇಳಿದಳು; ಆತನು ಸತ್ಯದಲ್ಲಿ ಸ್ಥಿರವಾಗಿರುವಂತೆ ಸಲಹೆ ಕೊಟ್ಟನು. ರಾಜಾ ದ್ರುಪದನ ಕಡೆಯಿಂದ ತೊಂದರೆಯುಂಟಾದಾಗ ವೇದವ್ಯಾಸರು ದ್ರೌಪದಿಯ ಪೂರ್ವಜನ್ಮದ ಕಥೆ ಹೇಳುತ್ತಾ ಅವರಿಗೆ ಹೀಗೆ ತಿಳಿಸಿದರು - ಶಂಕರನ ವರದಾನದಿಂದ ಈ

ಐವರೂ ದ್ರುಪದ ಕುಮಾರಿಯ ಪಾಣಿಗ್ರಹಣ ಮಾಡುವರು. ಈ ಪ್ರಕಾರ ಐವರೊಡನೆಯೂ ದ್ರುಪದಕುಮಾರಿಯ ವಿವಾಹವು ವಿಧಿಪೂರ್ವಕ ನಡೆಯಿತು. ಕುಂತಿದೇವಿಯ ಸತ್ಯನಿಷ್ಠೆಗೂ ವಿಜಯವಾಯಿತು. ಅವಳ ಬಾಯಿಂದ ಮುಂದೆ ಏನಾಗಬೇಕಾಗಿತ್ತೋ ಆ ಮಾತು ಥಟ್ಟೆಂದು ಹೊರಟಿತು. ದೃಢವಾಗಿ ಸತ್ಯದ ಆಶ್ರಯ ಪಡೆದರೆ ಹೀಗೆ ನಡೆಯುವುದು ಯಾರಿಗೂ ಸಹ ಅಸಂಭವವೇನಿಲ್ಲ; ಇರಲಿ.

ಕುಂತಿದೇವಿಯ ಜೀವನ ಪ್ರಾರಂಭದಿಂದ ಅಂತ್ಯದವರೆಗೂ ಬಹಳ ತ್ಯಾಗ ಪೂರ್ಣ, ತಪಸ್ಯಾಮಯ ಮತ್ತು ಅನಾಸಕ್ತವಾಗಿತ್ತು. ಪಾಂಡವರ ವನವಾಸ ಹಾಗೂ ಅಜ್ಞಾತವಾಸದ ಸಮಯದಲ್ಲಿ ಈಕೆಯು ಅವರಿಂದ ಬೇರೆ ಹಸ್ತಿನಾಪುರದಲ್ಲಿಯೇ ಇದ್ದಳು ಮತ್ತು ಅಲ್ಲಿಂದಲೇ ತನ್ನ ಪುತ್ರರಿಗೆ ತನ್ನ ಸಹೋದರನ ಮಗ ಶ್ರೀಕೃಷ್ಣನ ಮೂಲಕ ಕ್ಷತ್ರಿಯ ಧರ್ಮದಲ್ಲಿ ಸ್ಥಿರವಾಗಿರಬೇಕೆಂದು ಸಂದೇಶವನ್ನು ಕಳುಹಿಸಿದಳು. ಈಕೆಯು ವಿದುಲಾ ಮತ್ತು ಸಂಜಯ ಇವರ ದೃಷ್ಟಾಂತವನ್ನು ಕೊಟ್ಟು ಬಹು ಮಾರ್ಮಿಕವಾದ ಶಬ್ದಗಳಲ್ಲಿ ಅವರಿಗೆ ಹೀಗೆ ಹೇಳಿಕಳುಹಿಸಿದ್ದಳು - 'ಪುತ್ರರೇ! ಯಾವ ಕಾರ್ಯಕ್ಕಾಗಿ ಕ್ಷತ್ರಿಯ ಸ್ತ್ರೀಯು ಪುತ್ರರನ್ನು ಹಡೆಯುತ್ತಾಳೆಯೋ, ಆ ಕಾರ್ಯವನ್ನು ಮಾಡುವ ಸಮಯ ಬಂದುಬಿಟ್ಟಿದೆ.'* ಮಹಾಭಾರತ ಯುದ್ಧದ ಸಮಯದಲ್ಲಿಯೂ ಈಕೆ ಅಲ್ಲಿಯೇ ಇದ್ದಳು ಮತ್ತು ಯುದ್ಧಮುಗಿದ ನಂತರ ಧರ್ಮರಾಜ ಯುಧಿಷ್ಠಿರನು ಚಕ್ರವರ್ತಿ ಪದವಿಯಲ್ಲಿ ಪಟ್ಟಾಭಿಷಿಕ್ತನಾದಾಗ ಈಕೆಗೆ ರಾಜಮಾತೆಯಾಗುವ ಸೌಭಾಗ್ಯ ಪ್ರಾಪ್ತಿಯಾಯಿತು. ಆ ಸಮಯದಲ್ಲಿ ಪುತ್ರ ವಿಯೋಗದಿಂದ ದುಃಖಿತರಾಗಿದ್ದ ತನ್ನ ಭಾವ-ಓರಗಿತ್ತಿಯರ ಸೇವೆಯ ಜವಾಬ್ದಾರಿಯನ್ನು ಈಕೆ ತಾನೇ ವಹಿಸಿಕೊಂಡಳು. ದ್ವೇಷ ಮತ್ತು ಅಭಿಮಾನರಹಿತಳಾಗಿ ಅವರ ಸೇವೆಯಲ್ಲಿ ತನ್ನ ಸಮಯವನ್ನು ಕಳೆಯುತ್ತಿದ್ದಳು.

---

* ಏತದ್ಧನಂಜನಯೋ ವಾಚ್ಯೋ ನಿತ್ಯೋದ್ಯುಕ್ತೋ ವೃಕೋದರಃ ।
ಯದರ್ಥಂ ಕ್ಷತ್ರಿಯಾ ಸೂತೇ ತಸ್ಯ ಕಾಲೋಽಯಮಾಗತಃ ॥
(ಮಹಾ. ಉದ್ಯೋಗ ೧೩೭/೯-೧೦)

ಅವರಿಬ್ಬರೂ ಯುಧಿಷ್ಠಿರನಿಂದ ಅನುಮತಿ ಪಡೆದುಕೊಂಡು ವನವಾಸಕ್ಕೆ ಹೊರಟಾಗ ಈಕೆಯೂ ಅವರೊಡನೆ ಸಿದ್ಧಳಾದಳು. ಯುಧಿಷ್ಠಿರಾದಿಯವರು ಸಮಾಧಾನಪಡಿಸಿ ತಿಳಿಸಿದರೂ ತನ್ನ ದೃಢ ನಿಶ್ಚಯದಿಂದ ವಿಚಲಿತಳಾಗಲಿಲ್ಲ. ಜೀವನವಿಡೀ ದುಃಖ ಮತ್ತು ಸಂಕಟವನ್ನು ಅನುಭವಿಸಿದ ನಂತರ ಸುಖದ ದಿನಗಳು ಬಂದಾಗ ಆ ಸಮಯದಲ್ಲಿಯೂ ಕೂಡ ಸಾಂಸಾರಿಕ ಸುಖ-ಭೋಗಗಳನ್ನು ಕಡೆಗಣಿಸಿ ಸ್ವೇಚ್ಛೆಯಿಂದ ತ್ಯಾಗ, ತಪಸ್ಸು ಮತ್ತು ಸೇವಾಮಯ ಜೀವನವನ್ನು ಸ್ವೀಕರಿಸುವುದು ಕುಂತಿದೇವಿಯಂತಹ ಪವಿತ್ರಾತ್ಮದ ಕೆಲಸವಾಗಿತ್ತು. ಯಾವ ಭಾವ ಓರಿಗಿತ್ತಿಯಿಂದ ಈಕೆಗೆ ಹಾಗೂ ಇವಳ ಮಕ್ಕಳಿಗೆ ಮತ್ತು ಸೊಸೆ ಇವರುಗಳಿಗೆ ಕಷ್ಟ, ಅಪಮಾನ ಮತ್ತು ಅತ್ಯಾಚಾರಗಳಲ್ಲದೆ ಮತ್ತೇನೂ ದೊರೆಯಲಿಲ್ಲವೋ, ಆ ಭಾವ-ಓರಗಿತ್ತಿಗಾಗಿ ಇಷ್ಟೊಂದು ತ್ಯಾಗ ಪ್ರಪಂಚದಲ್ಲಿ ನೋಡಲು ಎಲ್ಲಿ ಸಿಕ್ಕುವುದು? ನಮ್ಮ ತಾಯಂದಿರು ಮತ್ತು ಸಹೋದರಿಯರು ಕುಂತಿದೇವಿಯ ಈ ಅನುಪಮ ತ್ಯಾಗದಿಂದ ಪಾಠ ಕಲಿತುಕೊಳ್ಳಬೇಕು.

ಕುಂತಿದೇವಿಯು ಕಾಡಿಗೆ ಹೊರಟ ಸಮಯದಲ್ಲಿ ಭೀಮಸೇನನು ತಿಳಿಸಿದನು - 'ಅಮ್ಮಾ! ನೀನು ಕೊನೆಯಲ್ಲಿ ಇದನ್ನೇ ಮಾಡಬೇಕೆಂದಿದ್ದರೆ ಮತ್ತೆ ವ್ಯರ್ಥವಾಗಿ ನಮ್ಮಗಳಿಂದ ಇಷ್ಟೊಂದು ನರ-ಹತ್ಯೆಯನ್ನು ಏಕೆ ಮಾಡಿಸಿದೆ? ನಮ್ಮ ವನವಸೀ ತಂದೆಯ ಮೃತ್ಯುವಿನ ನಂತರ ನಮ್ಮನ್ನು ಕಾಡಿನಿಂದ ನಗರಕ್ಕೆ ಏಕೆ ಕರೆತಂದೆ?' ಆ ಸಮಯದಲ್ಲಿ ಕುಂತೀದೇವಿಯು ಅವನಿಗೆ ಯಾವ ಉತ್ತರ ಕೊಟ್ಟಳೋ, ಅದು ಹೃದಯದಲ್ಲಿ ನೆಲಸಲು ಯೋಗ್ಯವಾಗಿದೆ. ಅವಳು ಹೇಳಿದಳು - 'ಮಗೂ! ನೀವುಗಳು ಹೇಡಿಗಳಾಗಿ ಕೈಕಟ್ಟಿಕೊಂಡು ಕುಳಿತುಕೊಳ್ಳದಿರಲಿ, ಕ್ಷತ್ರಿಯೋಚಿತ ಪುರುಷಾರ್ಥವನ್ನು ತ್ಯಾಗಮಾಡಿ ಅಪಮಾನದಿಂದ ಕೂಡಿದ ಜೀವನ ನಡೆಸದಿರಲಿ, ಶಕ್ತಿಯಿರುವಾಗ ತಮ್ಮ ನ್ಯಾಯೋಚಿತ ಅಧಿಕಾರವನ್ನು ಶಾಶ್ವತವಾಗಿ ಕಳೆದುಕೊಂಡು ಕುಳಿತುಕೊಳ್ಳದಿರಲಿ - ಎಂಬ ಉದ್ದೇಶದಿಂದ ನಾನು ನಿಮ್ಮನ್ನು ಯುದ್ಧಕ್ಕೆ ಪ್ರೇರೇಪಿಸಿದ್ದೆನು. ನನ್ನ ಸುಖವನ್ನು ಬಯಸಿ ಆ ರೀತಿ ಮಾಡಲಿಲ್ಲ. ನನಗೆ ರಾಜ್ಯ-ಸುಖಭೋಗಗಳ ಆಸೆಯಿಲ್ಲ. ನಾನು ಈಗ ತಪಸ್ಸಿನ ಮೂಲಕ ಪತಿಯ ಲೋಕಕ್ಕೆ ಹೋಗಲು

ಇಚ್ಛಿಸುತ್ತೇನೆ. ಆದುದರಿಂದ ನನ್ನ ವನವಾಸೀ ಭಾವ-ಓರಗಿತ್ತಿಯ ಸೇವೆಯಲ್ಲಿದ್ದುಕೊಂಡು ನಾನು ನನ್ನ ಉಳಿದ ಜೀವನವನ್ನು ತಪಸ್ಸಿನಲ್ಲಿಯೇ ಕಳೆಯುವೆನು. ನೀವುಗಳೆಲ್ಲಾ ಸುಖವಾಗಿ ಮನೆಗೆ ಹಿಂದಿರುಗಿ ಹೋಗಿ ಮತ್ತು ಧರ್ಮದಿಂದ ಪ್ರಜಾಪಾಲನೆ ಮಾಡುತ್ತಾ ನಿಮ್ಮ ಆಶ್ರಿತ ಪರಿವಾರದವರಿಗೆ ಸುಖ-ಸಂತೋಷವುಂಟುಮಾಡಿರಿ.' ಈ ಪ್ರಕಾರ ತನ್ನ ಮಕ್ಕಳಿಗೆ ತಿಳಿಸಿ ಸಮಾಧಾನಪಡಿಸಿ ಕುಂತಿದೇವಿಯು ತನ್ನ ಭಾವ-ಓರಿಗಿತ್ತಿಯ ಜೊತೆ ಕಾಡಿಗೆ ಹೊರಟು ಹೋದಳು ಮತ್ತು ಅಂತ್ಯದ ಸಮಯದವರೆಗೂ ಅವರ ಸೇವೆಯಲ್ಲಿದ್ದುಕೊಂಡು ಈ ದೇವಿಯು ಅವರೊಡನೆಯೇ ದಾವಾಗ್ನಿಯಲ್ಲಿ ಸುಟ್ಟು ಯೋಗಿಗಳಂತೆ ಶರೀರವನ್ನು ಬಿಟ್ಟುಬಿಟ್ಟಳು. ಕುಂತೀದೇವಿಯಂತಹ ಆದರ್ಶ ಮಹಿಳೆಯರು ಪ್ರಪಂಚದ ಇತಿಹಾಸದಲ್ಲಿ ಸಿಕ್ಕುವುದು ಬಹಳ ಅಪರೂಪ.

❑❑❑

೬. ದೇವಿ ದ್ರೌಪದಿ

ದ್ರೌಪದಿಯು ಪಾಂಚಾಲದರಸು ದ್ರುಪದ ರಾಜನ ಮಗಳು. ಇವಳು ಅಯೋನಿಜೆ. ಯಜ್ಞವೇದಿಕೆಯಿಂದ ಇವಳ ಉತ್ಪತ್ತಿಯಾಗಿತ್ತು. ಇವಳಂತಹ ಸುಂದರಿ ಆ ಸಮಯದಲ್ಲಿ ಇಡೀ ಭೂಮಂಡಲದಲ್ಲಿ ಯಾರೂ ಇರಲಿಲ್ಲ. ಇವಳ ಶರೀರದಿಂದ ಆಗತಾನೇ ಅರಳಿದ ಕಮಲದಂತಹ ಸುವಾಸನೆ ಹೊರಟು ಒಂದೆರಡು ಮೈಲುಗಳಷ್ಟು ದೂರದವರೆಗೂ ಹರಡುತ್ತಿತ್ತು. ಇವಳು ಹುಟ್ಟಿದಾಗ ಅಶರೀರವಾಣಿ ಹೇಳಿತ್ತು - 'ದೇವತೆಗಳ ಕಾರ್ಯವನ್ನು ಸಫಲಗೊಳಿಸುವುದಕ್ಕಾಗಿ ಕ್ಷತ್ರಿಯರ ಸಂಹಾರದ ಉದ್ದೇಶದಿಂದ ಈ ರಮಣೀರತ್ನದ ಜನನವಾಗಿದೆ. ಈ ಕಾರಣದಿಂದ ಕೌರವರಿಗೆ ಬಹಳ ಭಯವಾಗುವುದು.' ಕೃಷ್ಣವರ್ಣದವಳಾದುದರಿಂದ ಜನ ಇವಳನ್ನು ಕೃಷ್ಣಾ ಎಂದು ಹೇಳುತ್ತಿದ್ದರು. ಪೂರ್ವಜನ್ಮದಲ್ಲಿ ಕೊಟ್ಟಿದ ಭಗವಾನ್ ಶಂಕರನ ವರದಿಂದ ಇವಳಿಗೆ ಈ ಜನ್ಮದಲ್ಲಿ ಐವರು ಪತಿಗಳಾದರು. ಅರ್ಜುನನೊಬ್ಬನಿಂದಲೇ ಸ್ವಯಂವರ ಗೆಲ್ಲಲ್ಪಟ್ಟಿದ್ದರೂ ತಾಯಿ ಕುಂತಿಯ ಆಜ್ಞೆಯಂತೆ ಇವಳನ್ನು ಐವರು ಸೋದರರೂ ವಿವಾಹವಾಗಿದ್ದರು.

ದ್ರೌಪದಿಯು ಉಚ್ಚಶ್ರೇಣಿಯ ಪತಿವ್ರತೆ ಮತ್ತು ಭಗವದ್ಭಕ್ತಳಾಗಿದ್ದಳು, ಈಕೆಗೆ ಶ್ರೀಕೃಷ್ಣ ಪರಮಾತ್ಮನ ಪಾದಗಳಲ್ಲಿ ಅವಿಚಲವಾದ ಪ್ರೀತಿಯಿತ್ತು. ಇವಳು ಆತನನ್ನು ತನ್ನ ರಕ್ಷಕ, ಹಿತೈಷಿ ಮತ್ತು ಪರಮ ಆತ್ಮೀಯನೆಂದೇ ಭಾವಿಸಿಕೊಂಡಿದ್ದಳು. ಆತನ ಸರ್ವವ್ಯಾಪಕತೆ ಮತ್ತು ಸರ್ವಶಕ್ತತೆಯಲ್ಲಿ ಇವಳಿಗೆ ಪೂರ್ಣ ನಂಬಿಕೆಯಿತು. ಕೌರವರ ಸಭೆಯಲ್ಲಿ ದುಷ್ಟ ದುಶ್ಯಾಸನನು ಇವಳನ್ನು ವಿವಸ್ತ್ರಗೊಳಿಸಲು ಯತ್ನಿಸಿದನು ಮತ್ತು ಸಭೆಯ ಸದಸ್ಯರುಗಳಲ್ಲಿ ಈ ಅಮಾನುಷ ಅತ್ಯಾಚಾರವನ್ನು ತಡೆಯಲು ಯಾರಿಗೂ ಧೈರ್ಯವುಂಟಾಗಲಿಲ್ಲ. ಅಂತಹ ಸಮಯದಲ್ಲಿ ತನ್ನ ಮಾನ ಸಂರಕ್ಷಣೆಗೆ ಬೇರೆ ಯಾವ ಉಪಾಯವನ್ನೂ ಕಾಣದೆ ಆಕೆಯು ಅತ್ಯಂತ ಕಾತುರಳಾಗಿ ಶ್ರೀಕೃಷ್ಣ ಪರಮಾತ್ಮನನ್ನು ಕೂಗಿ ಮೊರೆಯಿಟ್ಟಳು -

ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ ।
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ ॥
ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ ।
ಕೌರವಾರ್ಣವಮಗ್ನಾಂ ಮಾಮುದ್ಧರಸ್ವ ಜನಾರ್ದನ ॥
ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇऽವಸೀದತೀಮ್ ॥

(ಮಹಾ. ಸಭಾ. ೬೮/೪೧-೪೩)

'ಹೇ ಗೋವಿಂದ ! ಎಲೈ ದ್ವಾರಕಾವಾಸಿಯೇ! ಹೇ ಸಚ್ಚಿದಾನಂದ ಸ್ವರೂಪೀ ಪ್ರೇಮಘನನೇ ! ಹೇ ಗೋಪೀಜನವಲ್ಲಭ ! ಹೇ ಸರ್ವಶಕ್ತಿವಂತ ಪ್ರಭು! ಕೌರವರು ನನ್ನನ್ನು ಅಪಮಾನಗೊಳಿಸುತ್ತಿದ್ದಾರೆ. ಈ ವಿಷಯ ನಿನಗೆ ಗೊತ್ತಿಲ್ಲವೇ? ಹೇ ನಾಥ ! ಹೇ ರಮಾನಾಥ ! ಹೇ ಮಥುರಾ ನಾಥ ! ಹೇ ಸಂಕಟಹರ ಜನಾರ್ದನ ! ನಾನು ಕೌರವರ ಸಮುದ್ರದಲ್ಲಿ ಮುಳುಗುತ್ತಿದ್ದೇನೆ. ನೀನು ನನ್ನನ್ನು ಉದ್ಧಾರಮಾಡು. ಹೇ ಕೃಷ್ಣ! ನೀನು ಸಚ್ಚಿದಾನಂದ ಸ್ವರೂಪೀ ಮಹಾಯೋಗಿ ಯಾಗಿರುವೆ. ನೀನು ಸರ್ವಸ್ವರೂಪೀ ಮತ್ತು ಎಲ್ಲರ ಜೀವನದಾತಾ. ಹೇ ಗೋವಿಂದಾ! ನಾನು ಕೌರವರಿಂದ ಸುತ್ತುವರಿಯಲ್ಪಟ್ಟು ಬಹಳ ಸಂಕಟದಲ್ಲಿ ಸಿಕ್ಕಿಬಿದ್ದಿದ್ದೇನೆ. ನಿನಗೆ ಶರಣಾಗಿದ್ದೇನೆ, ನನ್ನನ್ನು ರಕ್ಷಿಸು.'

ಶುದ್ಧ ಹೃದಯದ ಕರುಣೆಯ ಕೂಗನ್ನು ಭಗವಂತನು ಬಹಳ ಬೇಗ ಕೇಳಿಸಿಕೊಳ್ಳುತ್ತಾನೆ. ಶ್ರೀಕೃಷ್ಣನು ಆಗ ದ್ವಾರಕೆಯಲ್ಲಿದ್ದನು, ಅಲ್ಲಿಂದ ಆತನು ತಕ್ಷಣ ಓಡಿ ಬಂದನು ಮತ್ತು ಧರ್ಮರೂಪದಿಂದ ದ್ರೌಪದಿಯ ವಸ್ತ್ರಗಳಲ್ಲಿ ಅಡಗಿಕೊಂಡು ಅವಳ ಮಾನ ಸಂರಕ್ಷಣೆ ಮಾಡಿದನು. ಭಗವಂತನ ಕೃಪೆಯಿಂದ ದ್ರೌಪದಿಯ ಸೀರೆ ಅನಂತವಾಯಿತು, ಅಕ್ಷಯವಾಗಿಹೋಯಿತು. ದುಶ್ಶಾಸನನು ಅದನ್ನು ಎಷ್ಟು ಎಳೆದರೂ ಅಷ್ಟೇ ಅದು ಹೆಚ್ಚುತ್ತಾ ಹೋಗುತ್ತಿತ್ತು. ನೋಡುತ್ತಾ-ನೋಡುತ್ತಾ ಇದ್ದಂತೆಯೇ ಅಲ್ಲಿ ವಸ್ತ್ರದ ರಾಶಿಯೇ ಬಿತ್ತು. ಮಹಾಬಲಶಾಲಿ ದುಶ್ಶಾಸನನ ಪ್ರಚಂಡ ಭುಜಗಳು ಬಳಲಿ ಹೋದವು.

ಆದರೆ ಸೀರೆಯ ಕೊನೆಯ ತುದಿ ಕೈಗೆ ಬರಲಿಲ್ಲ. ನೆರೆದಿದ್ದ ಎಲ್ಲಾ ಜನರೂ ಭಗವದ್ಭಕ್ತಿ ಮತ್ತು ಪಾತಿವ್ರತ್ಯದ ಅದ್ಭುತ ಚಮತ್ಕಾರವನ್ನು ನೋಡಿದರು. ಕೊನೆಗೆ ದುಶ್ಯಾಸನನು ಸೋತು ನಾಚಿಕೊಂಡು ಕುಳಿತುಬಿಟ್ಟನು. ಭಕ್ತವತ್ಸಲ ಪ್ರಭು ತನ್ನ ಭಕ್ತಿ ಗೌರವವನ್ನು ಉಳಿಸಿಕೊಂಡನು. ಭಕ್ತವತ್ಸಲತೆ ಧನ್ಯವಾಯಿತು.

ಪಂಚ ಪಾಂಡವರು ದ್ರೌಪದಿಯ ಸಂಗಡ ಕಾಮ್ಯಕವನದಲ್ಲಿ ವಾಸಿಸುತ್ತಾ ಇದ್ದರು. ಆಗ ಒಂದು ದಿನ ದುರ್ಯೋಧನನು ಹೇಳಿ ಕಳುಹಿಸಿದ ಮಹರ್ಷಿ ದುರ್ವಾಸರು ತಮ್ಮ ಹತ್ತು ಸಾವಿರ ಶಿಷ್ಯರನ್ನು ಜೊತೆಯಲ್ಲಿ ಕರೆದುಕೊಂಡು ಪಾಂಡವರ ಬಳಿಗೆ ಬಂದರು. ಇವರೆಲ್ಲರೂ ಊಟ ಮುಗಿಸಿ ವಿಶ್ರಾಂತಿಯಲ್ಲಿದ್ದರು. ತಿಳಿದೂ-ತಿಳಿದೂ ದುರ್ಯೋಧನನು ಅಂತಹ ಸಮಯದಲ್ಲಿ ಅವರನ್ನು ಕಳುಹಿಸಿದ್ದನು. ಮಹಾರಾಜ ಯುಧಿಷ್ಠಿರನು ಅತಿಥಿಸೇವೆ - ಸತ್ಕಾರದ ಉದ್ದೇಶದಿಂದಲೇ ಸೂರ್ಯದೇವನಿಂದ ಒಂದು ಅಕ್ಷಯ ಪಾತ್ರೆಯನ್ನು ಪಡೆದುಕೊಂಡಿದ್ದನು. ಅದರಲ್ಲಿ ಮಾಡಿದ ಸ್ವಲ್ಪ ಅಡಿಗೆಯು ಅಕ್ಷಯವಾಗುತ್ತಿತ್ತು. ಆದರೆ ಅದರ ಒಂದು ನಿಯಮವಿತ್ತು. ದ್ರೌಪದಿಯು ಊಟ ಮಾಡುವವರೆಗೆ ಅದರಿಂದ ಎಷ್ಟು ಬಡಿಸಿದರೂ ಆ ಪಾತ್ರೆಯಿಂದ ಯಥೇಚ್ಛವಾದ ಅನ್ನ ದೊರಕುತ್ತಿತು. ಯುಧಿಷ್ಠಿರನು ಮಹರ್ಷಿಗೆ ಶಿಷ್ಯವೃಂದದ ಸಹಿತ ಭೋಜನಕ್ಕೆ ಆಹ್ವಾನ ನೀಡಿದನು. ದುರ್ವಾಸರು ಮಧ್ಯಾಹ್ನದ ಸ್ನಾನ-ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಬರುವುದಕ್ಕಾಗಿ ಎಲ್ಲರ ಜೊತೆಯಲ್ಲಿ ಗಂಗಾನದಿಯ ತೀರಕ್ಕೆ ಹೊರಟು ಹೋದರು.

ದುರ್ವಾಸರ ಸಂಗಡ ಹತ್ತು ಸಾವಿರ ಶಿಷ್ಯರ ಒಂದು ಪೂರ್ಣ ವಿಶ್ವವಿದ್ಯಾಲಯವೋ ಎಂಬಂತೆ ನಡೆಯುತ್ತಿದ್ದಿತು. ಧರ್ಮರಾಜನು ಅವರೆಲ್ಲರಿಗೂ ಭೋಜನಕ್ಕೆ ಆಹ್ವಾನವನ್ನೇನೋ ಕೊಟ್ಟುಬಿಟ್ಟನು ಮತ್ತು ಋಷಿಯು ಅದನ್ನು ಸ್ವೀಕರಿಸಿಯೂ ಆಯಿತು; ಆದರೆ ದ್ರೌಪದಿ ಭೋಜನ ಮಾಡಿ ಮುಗಿಸಿದ್ದಾಳೆ, ಆದ್ದರಿಂದ ಸೂರ್ಯನು ಕೊಟ್ಟಿರುವ ಪಾತ್ರೆಯಿಂದ

ಆ ಜನರಿಗೆ ಭೋಜನದ ವ್ಯವಸ್ಥೆ ಆಗಲಾರದು ಎಂಬ ವಿಚಾರವನ್ನು ಯಾರೂ ಯೋಚಿಸಲೇ ಇಲ್ಲ. ದ್ರೌಪದಿಯು ಬಹಳ ಚಿಂತೆಗೊಳಗಾದಳು. ಆಕೆಯು ಯೋಚಿಸಿದಳು - 'ಋಷಿಗಳು ಭೋಜನ ಮಾಡದೇ ಹಾಗೆಯೇ ಹಿಂದಿರುಗಿ ಹೋದರೆ, ಅವರು ಶಾಪ ಕೊಡದೇ ಇರಲಾರರು.' ಅವರ ಕ್ರೋಧದ ಸ್ವಭಾವ ಜಗದ್ವಿಖ್ಯಾತವಾಗಿತ್ತು. ದ್ರೌಪದಿಗೆ ಬೇರೆ ಯಾವ ಉಪಾಯವೂ ತೋಚಲಿಲ್ಲ. ಆಗ ಮನಸ್ಸಿನಲ್ಲಿಯೇ ಭಕ್ತಭಯಭಂಜನ ಭಗವಾನ್ ಶ್ರೀಕೃಷ್ಣನನ್ನು ಸ್ಮರಿಸಿದಳು ಮತ್ತು ಈ ಗಂಡಾಂತರದಿಂದ ಕಾಪಾಡುವಂತೆ ಆತನಲ್ಲಿ ಈ ಪ್ರಕಾರ ಪ್ರಾರ್ಥಿಸಿಕೊಂಡಳು -

ಕೃಷ್ಣ ಕೃಷ್ಣ ಮಹಾಬಾಹೋ ದೇವಕೀನಂದನಾವ್ಯಯ ॥
ವಾಸುದೇವ ಜಗನ್ನಾಥ ಪ್ರಣತಾರ್ತಿವಿನಾಶನ ।
ವಿಶ್ವಾತ್ಮನ್ ವಿಶ್ವಜನಕ ವಿಶ್ವಹರ್ತಃ ಪ್ರಭೋಽವ್ಯಯ ॥
ಪ್ರಪನ್ನಪಾಲ ಗೋಪಾಲ ಪ್ರಜಾಪಾಲ ಪರಾತ್ಪರ ।
ಆಕೂತೀನಾಂ ಚ ಚಿತ್ತೀನಾಂ ಪ್ರವರ್ತಕ ನತಾಸ್ಮಿ ತೇ ॥
ವರೇಣ್ಯ ವರದಾನಂತ ಅಗತೀನಾಂ ಗತಿರ್ಭವ ।
ಪುರಾಣಪುರುಷ ಪ್ರಾಣಮನೋವೃತ್ತ್ಯಾದ್ಯಗೋಚರ ॥
ಸರ್ವಾಧ್ಯಕ್ಷ ಪರಾಧ್ಯಕ್ಷ ತ್ವಾಮಹಂ ಶರಣಂ ಗತಾ ।
ಪಾಹಿ ಮಾಂ ಕೃಪಯಾ ದೇವ ಶರಣಾಗತವತ್ಸಲ ॥
ನೀಲೋತ್ಪಲದಲಶ್ಯಾಮ ಪದ್ಮಗರ್ಭಾರುಣೇಕ್ಷಣ ।
ಪೀತಾಂಬರಪರೀಧಾನ ಲಸತ್ಕೌಸ್ತುಭಭೂಷಣ ॥
ತ್ವಮಾದಿರಂತೋ ಭೂತನಾಂ ತ್ವಮೇವ ಚ ಪರಾಯಣಮ ।
ಪರಾತ್ಪರತರಂ ಜ್ಯೋತಿರ್ವಿಶ್ವಾತ್ಮಾ ಸರ್ವತೋಮುಖ ॥
ತ್ವಾಮೇವಾಹುಃ ಪರಂ ಬೀಜಂ ನಿಧಾನಂ ಸರ್ವಸಂಪದಾಮ್ ।
ತ್ವಯಾ ನಾಥೇನ ದೇವೇಶ ಸರ್ವಾಪದ್ಭ್ಯೋ ಭಯಂ ನ ಹಿ ॥
ದುಃಶಾಸನಾದಹಂ ಪೂರ್ವಂ ಸಭಾಯಾಂ ಮೋಚಿತಾ ಯಥಾ ।
ತಥೈವ ಸಂಕಟಾದಸ್ಮಾನ್ಮಾಮುದ್ಧರ್ತುಮಿಹಾರ್ಹಸಿ ॥

(ಮಹಾ. ವನ ೨೬೩/೮-೧೬)

'ಹೇ ಕೃಷ್ಣಾ! ಹೇ ಮಹಾಬಾಹೋ ಶ್ರೀಕೃಷ್ಣ! ಹೇ ದೇವಕೀ ನಂದನ! ಹೇ ಅವಿನಾಶೀ ವಾಸುದೇವ! ಪಾದಗಳಿಗೆರಗಿರುವ ದುಃಖಿಗಳ ದುಃಖವನ್ನು ಹೋಗಲಾಡಿಸುವ ಹೇ ಜಗದೀಶ್ವರ! ನೀನೇ ಇಡೀ ಜಗತ್ತಿನ ಆತ್ಮವಾಗಿರುವೆ. ಈ ವಿಶ್ವವನ್ನು ರಚಿಸುವುದು ಮತ್ತು ನಾಶಮಾಡುವುದು ನಿನ್ನ ಆಟವೇ ಆಗಿದೆ. ಪ್ರಭು! ನೀನು ಅವಿನಾಶಿ; ಶರಣಾಗತರನ್ನು ರಕ್ಷಿಸುವ ಗೋಪಾಲ! ನೀನೇ ಎಲ್ಲಾ ಪ್ರಜೆಗಳ ರಕ್ಷಕನಾದ ಪರಾತ್ಪರ ಪರಮೇಶ್ವರನಾಗಿರುವೆ. ಮನಸ್ಸಿನ ಸ್ವಭಾವ ಮತ್ತು ಭಾವನೆಗಳ ಪ್ರವರ್ತಕ ನೀನೇ ಆಗಿರುವೆ, ನಾನು ನಿನಗೆ ಪ್ರಣಾಮ ಮಾಡುತ್ತೇನೆ. ಎಲ್ಲವನ್ನು ನಿವಾರಣೆ ಮಾಡಲು ಯೋಗ್ಯ ವರದಾತಾ ಅನಂತ! ಬಾ; ಯಾರಿಗೆ ನಿನ್ನ ಹೊರತು ಬೇರೆ ಯಾರೂ ಸಹಾಯಕರಿಲ್ಲವೋ, ಅಂತಹ ಅಸಹಾಯಕ ಭಕ್ತರಿಗೆ ಸಹಾಯ ಮಾಡು. ಪುರಾಣಪುರುಷ! ಪ್ರಾಣ ಮತ್ತು ಮನಸ್ಸಿನ ವೃತ್ತಿಗಳು ನಿನ್ನತನಕ ಬರಲಾರವು. ಎಲ್ಲಕ್ಕೂ ಸಾಕ್ಷಿಭೂತವಾದ ಪರಮೋತ್ಕೃಷ್ಟದೇವ! ನಾನು ನಿನಗೆ ಶರಣಾಗಿದ್ದೇನೆ. ಶರಣಾಗತವತ್ಸಲ! ಕಮಲ-ಪುಷ್ಪದೊಳಗಿನ ಕಿಂಚಿತ್ ಕೆಂಪುವರ್ಣದ ಕಣ್ಣುಗಳುಳ್ಳವನೇ! ಕೌಸ್ತುಭಮಣೀ ಭೂಷಿತ ಮತ್ತು ಪೀತಾಂಬರಧಾರಿಯೇ! ಶ್ರೀಕೃಷ್ಣ! ನೀನೇ ಎಲ್ಲಾ ಜೀವಿಗಳ ಆದಿ ಮತ್ತು ಅಂತ್ಯನಾಗಿರುವೆ, ನೀನೇ ಪರಮಾಶ್ರಯನಾಗಿರುವೆ. ನೀನೇ ಪರಾತ್ಪರ, ಸರ್ವಲೋಕಾಧೀಶ, ಜ್ಯೋತಿರ್ಮಯ, ಸರ್ವವ್ಯಾಪಕ ಮತ್ತು ಸರ್ವಾತ್ಮಕ ನಾಗಿರುವೆ. ಜ್ಞಾನಿಗಳು ನಿನ್ನನ್ನೇ ಈ ಜಗತ್ತಿನ ಪರಮಬೀಜ ಮತ್ತು ಸಂಪೂರ್ಣ ಸಂಪತ್ತುಗಳಿಗೂ ಆಧಾರನೆಂದು ಹೇಳಿದ್ದಾರೆ. ದೇವೇಶ! ನೀನು ನನ್ನ ರಕ್ಷಕನಾಗಿರುವಾಗ ನನ್ನ ಮೇಲೆ ಎಲ್ಲಾ ವಿಪತ್ತುಗಳೂ ಆಕ್ರಮಣ ಮಾಡಿದರೂ ಭಯವಿಲ್ಲ. ಹಿಂದೆ ಸಭೆಯಲ್ಲಿ ದುಃಶಾಸನನ ಕೈಯಿಂದ ಹೇಗೆ ನೀನು ನನ್ನನ್ನು ಕಾಪಾಡಿದ್ದೆಯೋ, ಹಾಗೆಯೇ ಈಗ ಸಂಭವಿಸಿರುವ ಸಂಕಟದಿಂದಲೂ ನನ್ನನ್ನು ಪಾರುಮಾಡು.'

ಶ್ರೀಕೃಷ್ಣನಾದರೋ ಘಟನೆಗಳನ್ನೆಲ್ಲಾ ತಿಳಿಯುವವನು. ಆತನು ತಕ್ಷಣ ಅಲ್ಲಿಗೆ ಬಂದನು. ಆತನನ್ನು ನೋಡಿ ದ್ರೌಪದಿಗೆ ಶರೀರದಲ್ಲಿ ಪ್ರಾಣವೇ

ಬಂದಂತಾಯಿತು. ಮುಳುಗುತ್ತಿರುವವನಿಗೆ ಆಸರೆ ದೊರೆತಂತಾಯಿತು. ದ್ರೌಪದಿಯು ಸಂಕ್ಷೇಪವಾಗಿ ಆತನಿಗೆ ಎಲ್ಲವನ್ನೂ ತಿಳಿಸಿದಳು. ಶ್ರೀಕೃಷ್ಣ ಗಾಬರಿಯನ್ನು ಪ್ರದರ್ಶಿಸುತ್ತಾ ಹೇಳಿದಳು - 'ಎಲ್ಲಾ ಮಾತುಗಳು ಆಮೇಲೆ ಆಗಲಿ. ಮೊದಲು ನನಗೆ ಬೇಗ ಏನಾದರೂ ತಿನ್ನಲು ಕೊಡು. ನನಗೆ ಬಹಳ ಹಸಿವಾಗಿದೆ. ನಾನು ಎಷ್ಟು ದೂರದಿಂದ ಸೋತು-ಸೊರಗಿ ಬಂದಿದ್ದೇನೆಂದು ನಿನಗೆ ಗೊತ್ತಿಲ್ಲವೆ?' ದ್ರೌಪದಿಯು ನಾಚಿಕೆಯಿಂದ ಕುಗ್ಗಿಹೋದಳು. ಆಕೆಯು ತಡೆ-ತಡೆದು ಹೇಳಿದಳು - 'ಪ್ರಭು! ನಾನು ಈಗಿನ್ನೂ ಊಟಮಾಡಿ ಎದ್ದಿದ್ದೇನೆ. ಈಗ ಆ ಪಾತ್ರೆಯಲ್ಲಿ ಏನೂ ಉಳಿದಿಲ್ಲ' ಶ್ರೀಕೃಷ್ಣನು ಹೇಳಿದನು - 'ಸ್ವಲ್ಪ ನಿನ್ನ ಪಾತ್ರೆಯನ್ನು ನನಗೆ ತೋರಿಸು ನೋಡೋಣ! ದ್ರೌಪದಿಯು ಪಾತ್ರೆಯನ್ನು ತೆಗೆದುಕೊಂಡು ಬಂದಳು. ಶ್ರೀಕೃಷ್ಣನು ಕೈಗೆತ್ತಿಕೊಂಡು ನೋಡಿದರೆ ಅದರ ಕೊರಳಲ್ಲಿ ಒಂದು ಸೊಪ್ಪಿನ ಎಲೆಯು ಅಂಟಿಕೊಂಡಿರುವುದು ಸಿಕ್ಕಿತು. ಆತನು ಅದನ್ನೇ ಬಾಯಲ್ಲಿ ಹಾಕಿಕೊಂಡು ಹೇಳಿದನು - 'ಈ ಸೊಪ್ಪಿನ ಎಲೆಯಿಂದ ಇಡೀ ಜಗತ್ತಿನ ಆತ್ಮ ಯಜ್ಞಭೋಕ್ತಾ ಪರಮೇಶ್ವರನು ತೃಪ್ತನಾಗಲಿ.' ಅನಂತರ ಆತನು ಸಹದೇವನಿಗೆ ಹೇಳಿದನು - 'ಅಯ್ಯಾ! ಈಗ ನೀನು ಹೋಗಿ ಮುನೀಶ್ವರನನ್ನು ಭೋಜನಕ್ಕೆ ಕರೆದುಕೊಂಡು ಬಾ.' ಸಹದೇವನು ಗಂಗಾತೀರಕ್ಕೆ ಹೋಗಿ ನೋಡಿದರೆ ಅಲ್ಲಿ ಯಾರೂ ಕಾಣಸಿಕ್ಕಲಿಲ್ಲ. ವಿಷಯ ಹೀಗೆ ನಡೆಯಿತು, ಶ್ರೀಕೃಷ್ಣನು ಸೊಪ್ಪಿನ ಎಲೆಯನ್ನು ಬಾಯಲ್ಲಿ ಹಾಕಿಕೊಂಡು ಸಂಕಲ್ಪಿಸಿದಾಗ ಆ ಮುನಿಗಳೆಲ್ಲರೂ ನೀರಿನಲ್ಲಿ ನಿಂತುಕೊಂಡು ಪಾಪನಾಶಕ ಮಂತ್ರದ (ಅಘಮರ್ಷಣ) ಉಚ್ಚಾರಣೆ ಮಾಡುತ್ತಿದ್ದರು. ಇದ್ದಕ್ಕಿದ್ದಂತೆಯೇ ಅವರ ಹೊಟ್ಟೆ ಗಂಟಲಿನವರೆಗೂ ಆಹಾರದಿಂದ ತುಂಬಿಹೋದಂತಹ ಅನುಭವವಾಯಿತು. ಅವರೆಲ್ಲರೂ ಒಬ್ಬರ ಮುಖವನ್ನು ಮತ್ತೊಬ್ಬರು ನೋಡುತ್ತಾ - 'ಈಗ ನಾವುಗಳು ಅಲ್ಲಿಗೆ ಹೋಗಿ ಊಟ ಮಾಡುವುದು ಹೇಗೆ?' ದುರ್ವಾಸರು ಹೇಳದೆ-ಕೇಳದೆ ಓಡಿಹೋಗುವುದೇ ಶ್ರೇಯಸ್ಕರವೆಂದು ತಿಳಿದುಕೊಂಡರು. ಏಕೆಂದರೆ ಪಾಂಡವರು ಭಗವದ್ಭಕ್ತರೆಂಬುದನ್ನು ಅವರು

ತಿಳಿದಿದ್ದರು. ಅಂಬರೀಷನ ಸಲುವಾಗಿ ಅವರು ಅನುಭವಿಸಿದ್ದ ಘಟನೆಯ ನಂತರ ಅವರಿಗೆ ಭಗವದ್ಭಕ್ತರೆಂದರೆ ಬಹಳ ಭಯವಾಗುತ್ತಿತ್ತು. ಆದ್ದರಿಂದ ಅವರೆಲ್ಲರೂ ಅಲ್ಲಿಂದ ಸದ್ದಿಲ್ಲದೆ ಓಡಿದರು. ಸಹದೇವನಿಗೆ ಅಲ್ಲಿ ಇರುತ್ತಿದ್ದ ತಪಸ್ವಿಗಳಿಂದ ಅವರೆಲ್ಲರೂ ಓಡಿಹೋದ ಸಮಾಚಾರ ಗೊತ್ತಾಯಿತು. ಅವನು ಹಿಂದಿರುಗಿ ಬಂದು ಎಲ್ಲಾ ವಿಷಯವನ್ನೂ ಧರ್ಮರಾಜನಿಗೆ ತಿಳಿಸಿದನು. ಈ ಪ್ರಕಾರ ದ್ರೌಪದಿಯು ಶ್ರೀಕೃಷ್ಣ ಭಕ್ತಿಯಿಂದ ಪಾಂಡವರ ಒಂದು ದೊಡ್ಡ ಆಪತ್ತು ದೂರವಾಯ್ತು. ಶ್ರೀಕೃಷ್ಣನು ಬಂದು ಇವರನ್ನು ದುರ್ವಾಸರ ಕೋಪದಿಂದ ಪಾರುಮಾಡಿದನು. ಮತ್ತು ಈ ಪ್ರಕಾರ ತಾನು ಶರಣಾಗತ-ವತ್ಸಲನೆಂಬುದನ್ನು ಪರಿಚಯಿಸಿದನು.

ಒಂದು ಸಲ ಶ್ರೀಕೃಷ್ಣ ಪರಮಾತ್ಮನು ಸತ್ಯಭಾಮೆಯ ಸಂಗಡ ಪಾಂಡವರನ್ನು ನೋಡಲು ಕಾಡಿಗೆ ಬಂದನು. ಆಗ ಮಾತು-ಮಾತುಗಳಲ್ಲಿ ಸತ್ಯಭಾಮೆಯು ದ್ರೌಪದಿಯನ್ನು ಕೇಳಿದಳು - 'ಸೋದರಿ! ನಾನು ನಿನ್ನಲ್ಲಿ ಒಂದು ಮಾತನ್ನು ಕೇಳುತ್ತೇನೆ. ನಾನು ನೋಡಿದಂತೆ ಶೂರರೂ ಬಲಶಾಲಿಗಳಾದ ನಿನ್ನ ಪತಿಗಳು ಯಾವಾಗಲೂ ನಿನಗೆ ಅಧೀನರಾಗಿರುತ್ತಾರೆ; ಇದಕ್ಕೆ ಕಾರಣವೇನು? ನೀನು ಯಾವುದಾದರೂ ಯಂತ್ರ-ಮಂತ್ರ ಅಥವಾ ಔಷಧಿ ಕಂಡು ಕೊಂಡಿರುವಿಯಾ? ಅಥವಾ ಜಪ, ತಪ, ವ್ರತ, ಹೋಮ ಅಥವಾ ವಿದ್ಯೆಯಿಂದ ಅವರನ್ನು ವಶದಲ್ಲಿಟ್ಟುಕೊಂಡಿರುವೆಯಾ? ಭಗವಾನ್ ಶ್ಯಾಮಸುಂದರನು ನನ್ನ ವಶವಾಗುವಂತಹ ಯಾವುದಾದರೂ ಉಪಾಯವನ್ನು ನನಗೂ ತಿಳಿಸು' ದ್ರೌಪದಿಯು ಹೇಳಿದಳು - 'ಸೋದರಿ! ನೀನು ಈ ರೀತಿ ಸಂಶಯಪಡುವುದು ಉಚಿತವಲ್ಲ. ಏಕೆಂದರೆ ನೀನು ಬುದ್ಧಿವಂತೆ ಮತ್ತು ಶ್ರೀಕೃಷ್ಣನ ಪಟ್ಟದರಾಣಿಯಾಗಿರುವೆ. ಪತ್ನಿಯು ಪತಿಯನ್ನು ವಶದಲ್ಲಿಟ್ಟುಕೊಳ್ಳುವುದಕ್ಕಾಗಿ ಏನೇನೋ ಯಂತ್ರ-ಮಂತ್ರಗಳ ಪ್ರಯೋಗ ಮಾಡುತ್ತಿದ್ದಾಳೆಂಬುದು ಪತಿಗೆ ಗೊತ್ತಾದಾಗ, ಮನೆಗೆ ನುಗ್ಗಿದ ಹಾವಿನಿಂದ ದೂರವಿರಲು ಯತ್ನಿಸುವಂತೆ ಅವನೂ ಅವಳಿಂದ ದೂರವಿರುತ್ತಾನೆ. ಆದುದರಿಂದ ಮಂತ್ರ-ತಂತ್ರಗಳಿಂದ

ಎಂದಿಗೂ ಪತಿಯು ಪತ್ನಿಯ ವಶವಾಗಲಾರನು. ಇದಕ್ಕೆ ವಿರುದ್ಧವಾಗಿ, ಇದರಿಂದ ಅನೇಕ ರೀತಿಯ ಅನರ್ಥವೇ ಆಗಿಹೋಗುತ್ತದೆ. ಆದುದರಿಂದ ಸ್ತ್ರೀಯು ಎಂದಿಗೂ ಯಾವ ಪ್ರಕಾರದಿಂದಲೂ ತನ್ನ ಪತಿಗೆ ಅಪ್ರಿಯವಾದುದನ್ನು ಮಾಡಬಾರದು.'

ಅನಂತರ ತನ್ನ ಪತಿಯರನ್ನು ಸಂತೋಷವಾಗಿಟ್ಟುಕೊಳ್ಳಲು ಯಾವ ಪ್ರಕಾರದ ಆಚರಣೆ ಮಾಡುತ್ತಿದ್ದಳು ಎಂಬುದನ್ನು ಇವಳು ತಿಳಿಸಿದಳು. ದ್ರೌಪದಿಯು ಹೇಳಿದಳು - 'ಸೋದರಿ! ನಾನು ಅಹಂಕಾರ ಮತ್ತು ಕಾಮ-ಕ್ರೋಧಗಳನ್ನು ಪರಿತ್ಯಾಗ ಮಾಡಿ ಬಹಳ ಜಾಗರೂಕತೆಯಿಂದ ಎಲ್ಲಾ ಪಾಂಡವರ ಮತ್ತು ಅವರ ಪತ್ನಿಯರ ಸೇವೆ ಮಾಡುತ್ತೇನೆ. ನಾನು ಅಸೂಯೆಯಿಂದ ದೂರವಿರುತ್ತೇನೆ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಂಡು ಕೇವಲ ಸೇವೆಯ ಇಚ್ಛೆಯಿಂದಲೇ ನನ್ನ ಪತಿಗಳ ಮನಸ್ಸನ್ನು ವಶದಲ್ಲಿಟ್ಟುಕೊಂಡಿದ್ದೇನೆ. ನಾನು ಕಠೋರವಾದ ಮಾತುಗಳಿಂದ ದೂರವಿರುತ್ತೇನೆ, ಅಸಭ್ಯವಾಗಿ ಇರುವುದಿಲ್ಲ, ಸುಳ್ಳು-ಪೊಳ್ಳು ಮಾತುಗಳ ಕಡೆಗೆ ದೃಷ್ಟಿ ಹಾಯಿಸುವುದಿಲ್ಲ, ಕೆಟ್ಟ ಸ್ಥಳಗಳಲ್ಲಿ ಕುಳಿತುಕೊಳ್ಳುವುದಿಲ್ಲ, ದೂಷಿತ ಆಚರಣೆಗಳ ಹತ್ತಿರ ಸುಳಿಯುವುದಿಲ್ಲ ಹಾಗೂ ಪತಿರಾಯರ ಅಭಿಪ್ರಾಯದ ಸಂಕೇತಗಳನ್ನು ಅನುಸರಣೆ ಮಾಡುತ್ತೇನೆ. ದೇವತೆ, ಮನುಷ್ಯ, ಗಂಧರ್ವ, ಯುವಕ, ಹಣವಂತ ಅಥವಾ ರೂಪವಂತ - ಎಂತಹ ಪುರುಷನೇ ಆಗಿರಲಿ, ನನ್ನ ಮನಸ್ಸು ಪಾಂಡವರ ಹೊರತು ಬೇರೆ ಕಡೆ ಎಲ್ಲಿಗೂ ಹೋಗುವುದಿಲ್ಲ. ನನ್ನ ಪತಿಗಳು ಭೋಜನ ಮಾಡದ ಹೊರತು ನಾನು ಭೋಜನ ಮಾಡುವುದಿಲ್ಲ. ಸ್ನಾನ ಮಾಡದೇ ಸ್ನಾನ ಮಾಡುವುದಿಲ್ಲ ಮತ್ತು ಕುಳಿತುಕೊಳ್ಳದೆ ನಾನು ಸ್ವತಃ ಕುಳಿತುಕೊಳ್ಳುವುದಿಲ್ಲ. ನನ್ನ ಪತಿಗಳು ಮನೆಗೆ ಬಂದಾಗಲೆಲ್ಲಾ ನಾನು ನಿಂತುಕೊಂಡು ಅವರಿಗೆ ಆಸನ ಮತ್ತು ನೀರು ಕೊಡುತ್ತೇನೆ. ನಾನು ಮನೆಯ ಪಾತ್ರೆಗಳನ್ನು ಉಜ್ಜಿ-ತೊಳೆದು ಸ್ವಚ್ಛವಾಗಿಡುತ್ತೇನೆ, ರುಚಿಯಾದ ಅಡಿಗೆ ತಯಾರಿಸುತ್ತೇನೆ ಮತ್ತು ಸಮಯಕ್ಕೆ ಸರಿಯಾಗಿ ಊಟ ಮಾಡಿಸುತ್ತೇನೆ. ಯಾವಾಗಲೂ ಜಾಗರೂಕಳಾಗಿರುತ್ತೇನೆ,

ಮನೆಯಲ್ಲಿ ದವಸ-ಧಾನ್ಯಗಳ ರಕ್ಷಣೆ ಮಾಡುತ್ತೇನೆ ಮತ್ತು ಮನೆಯನ್ನು ಧೂಳು-ಕಸ ಗುಡಿಸಿ ಸ್ವಚ್ಛವಾಗಿಡುತ್ತೇನೆ.

ನಾನು ಮಾತು-ಕತೆಗಳಲ್ಲಿ ಯಾರನ್ನೂ ತಿರಸ್ಕಾರ ಮಾಡುವುದಿಲ್ಲ. ವ್ಯಭಿಚಾರೀ ಸ್ತ್ರೀಯರ ಹತ್ತಿರಕ್ಕೆ ಸುಳಿಯುವುದೇ ಇಲ್ಲ. ಯಾವಾಗಲೂ ಪತಿಯರಿಗೆ ಅನುಕೂಲವಾಗಿದ್ದುಕೊಂಡು ಆಲಸ್ಯದಿಂದ ದೂರವಿರುತ್ತೇನೆ. ನಾನು ಪದೇ ಪದೇ ಬಾಗಿಲಿಗೆ ಹೋಗಿ ನಿಂತುಕೊಳ್ಳುವುದಿಲ್ಲ. ಹೊರಗೆ ಅಥವಾ ಕಸಕಡ್ಡಿಗಳನ್ನು ಹಾಕುವ ಜಾಗದಲ್ಲಿಯೂ ಹೆಚ್ಚು ಹೊತ್ತು ನಿಲ್ಲುವುದಿಲ್ಲ. ಆದರೆ ಯಾವಾಗಲೂ ನಿಜ ಹೇಳುತ್ತಾ ಪತಿಸೇವೆಯಲ್ಲಿಯೇ ತತ್ಪರಳಾಗಿರುತ್ತೇನೆ.

ಪತಿದೇವರಿಲ್ಲದೆ ಒಂಟಿಯಾಗಿರುವುದು ನನಗೆ ಖಂಡಿತ ಇಷ್ಟವಿಲ್ಲ. ಯಾವುದಾದರೂ ಕೌಟುಂಬಿಕ ಕಾರ್ಯದಿಂದ ಪತಿ ಹೊರಗಡೆ ಹೋಗಿದ್ದರೆ ನಾನು ಹೂ ಮತ್ತು ಚಂದನಾದಿಗಳನ್ನು ಬಿಟ್ಟು ನಿಯಮ ಮತ್ತು ವ್ರತಗಳನ್ನು ಪಾಲಿಸುತ್ತಾ ಸಮಯ ಕಳೆಯುತ್ತೇನೆ. ನನ್ನ ಪತಿ ಯಾವ ಪದಾರ್ಥವನ್ನು ತಿನ್ನುವುದಿಲ್ಲವೋ, ಕುಡಿಯುವುದಿಲ್ಲವೋ ಅಥವಾ ಸೇವಿಸುವುದಿಲ್ಲವೋ, ಅವುಗಳಿಂದ ನಾನೂ ಸಹ ದೂರವಿರುತ್ತೇನೆ. ಸ್ತ್ರೀಯರಿಗಾಗಿ ಶಾಸ್ತ್ರವು ಯಾವ-ಯಾವ ವಿಷಯಗಳನ್ನು ತಿಳಿಸಿದೆಯೋ, ಅವುಗಳನ್ನೆಲ್ಲಾ ನಾನು ಪಾಲಿಸುತ್ತೇನೆ. ಶರೀರವನ್ನು ದೊರೆತಷ್ಟು ವಸ್ತ್ರಾಲಂಕಾರಗಳಿಂದ ಅಲಂಕರಿಸಿಕೊಂಡಿರುತ್ತೇನೆ. ಯಾವಾಗಲೂ ಎಚ್ಚರಿಕೆಯಿಂದ ಪತಿದೇವರನ್ನು ತೃಪ್ತಿಪಡಿಸುವುದರಲ್ಲಿ ತತ್ಪರಳಾಗಿರುತ್ತೇನೆ.

ಅತ್ತೆಯವರು ನನಗೆ ಕುಟುಂಬ-ಸಂಬಂಧವಾಗಿ ತಿಳಿಸಿರುವ ಧರ್ಮಗಳನ್ನೆಲ್ಲಾ ನಾನು ಚಾಚೂ ತಪ್ಪದೆ ಪಾಲಿಸುತ್ತೇನೆ. ಭಿಕ್ಷೆ ಕೊಡುವುದು, ಪೂಜೆ, ಶ್ರಾದ್ಧ ಮತ್ತು ಹಬ್ಬಗಳಲ್ಲಿ ತುಪ್ಪದಲ್ಲಿ ಕರಿದ ತಿಂಡಿ-ತಿನಿಸುಗಳನ್ನು ಮಾಡುವುದು, ಸಾಧ್ವೀ ಹೆಂಗಸರನ್ನು ಗೌರವಿಸುವುದು ಮತ್ತು ನನಗೆ ಯೋಗ್ಯವಾದ ಯಾವ-ಯಾವ ವಿಹಿತ ಧರ್ಮಗಳಿವೆಯೋ, ಅವುಗಳೆಲ್ಲವನ್ನೂ ನಾನು ಎಚ್ಚರಿಕೆಯಿಂದ ರಾತ್ರೀ-ಹಗಲು ಆಚರಿಸುತ್ತೇನೆ. ನಾನು ವಿನಯ ಮತ್ತು

ನಿಯಮಗಳನ್ನು ಯಾವಾಗಲೂ ಎಲ್ಲಾ ಪ್ರಕಾರಗಳಿಂದ ಅಳವಡಿಸಿಕೊಂಡಿರುತ್ತೇನೆ. ನನ್ನ ವಿಚಾರದಲ್ಲಿ ಸ್ತ್ರೀಯರಿಗೆ ಪತಿಯು ಅಧೀನದಲ್ಲಿರುವುದೇ ಸನಾತನಧರ್ಮವಾಗಿದೆ. ಆತನೇ ಅವರಿಗೆ ಇಷ್ಟದೈವ. ನಾನು ನನ್ನ ಪತಿಯರಿಗಿಂತ ಹೆಚ್ಚಿನವಳೆಂದು ಎಂದಿಗೂ ತಿಳಿಯುವುದಿಲ್ಲ. ಅವರಿಗಿಂತ ಒಳ್ಳೆಯ ಭೋಜನ ಮಾಡುವುದಿಲ್ಲ. ಅವರಿಗಿಂತ ಉತ್ತಮವಾದ ವಸ್ತ್ರಾಭೂಷಣಗಳನ್ನು ಧರಿಸುವುದಿಲ್ಲ ಮತ್ತು ಎಂದಿಗೂ ಅತ್ತೆಯೊಂದಿಗೆ ವಾದ-ವಿವಾದ ಮಾಡುವುದಿಲ್ಲ. ಹಾಗೂ ಸದಾ ಸಂಯಮವನ್ನೇ ಪಾಲಿಸುತ್ತೇನೆ. ನಾನು ಯಾವಾಗಲೂ ನನ್ನ ಪತಿಯರಿಗಿಂತ ಮೊದಲು ಏಳುತ್ತೇನೆ ಹಾಗೂ ಹಿರಿಯರ-ವೃದ್ಧರ ಸೇವೆಯಲ್ಲಿ ತೊಡಗಿರುತ್ತೇನೆ. ವಸ್ತ್ರ ಆಭೂಷಣ ಮತ್ತು ಭೋಜನಾದಿಗಳಲ್ಲಿ ನಾನು ಎಂದಿಗೂ ಅವರಿಗಿಂತ ನನಗೋಸ್ಕರವಾಗಿ ಯಾವ ವಿಶೇಷತೆಯನ್ನೂ ಇಟ್ಟುಕೊಳ್ಳುವುದಿಲ್ಲ. ಮೊದಲು ಮಹಾರಾಜ ಯುಧಿಷ್ಠಿರನ ಬಳಿ ಹತ್ತುಸಾವಿರ ದಾಸಿಯರಿದ್ದರು. ನನಗೆ ಅವರ ಹೆಸರು, ರೂಪು, ವಸ್ತ್ರ ಇತ್ಯಾದಿ ಎಲ್ಲಾ ಗೊತ್ತಿರುತ್ತಿತ್ತು ಮತ್ತು ಯಾರು ಯಾವ ಕೆಲಸ ಮಾಡಿದರು ಮತ್ತು ಯಾವುದನ್ನು ಮಾಡಿಲ್ಲ ಎಂಬ ವಿಚಾರವೂ ನನ್ನ ಗಮನದಲ್ಲಿರುತ್ತಿತ್ತು. ಇಂದ್ರಪ್ರಸ್ಥದಲ್ಲಿ ಇದ್ದುಕೊಂಡು ಮಹಾರಾಜ ಯುಧಿಷ್ಠಿರನು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ ಒಂದು ಲಕ್ಷ ಕುದುರೆ ಮತ್ತು ಅಷ್ಟೇ ಆನೆಗಳಿದ್ದವು. ಅವುಗಳ ಲೆಕ್ಕ ಮತ್ತು ವ್ಯವಸ್ಥೆನ್ನು ನಾನೇ ನೋಡಿಕೊಳ್ಳುತ್ತಿದ್ದೆ ಹಾಗೂ ನಾನೇ ಅವುಗಳ ಅವಶ್ಯಕತೆಗಳನ್ನು ತಿಳಿಯುತ್ತಿದ್ದೆನು. ಅಂತಃಪುರದವರು; ಗೊಲ್ಲರು ಮತ್ತು ಕುರುಬರಿಂದ ಹಿಡಿದು ಎಲ್ಲಾ ಸೇವಕರುಗಳ ಕೆಲಸ-ಕಾರ್ಯಗಳ ಮೇಲ್ವಿಚಾರಣೆಯನ್ನು ನಾನೇ ಮಾಡುತ್ತಿದ್ದೆ.

'ಮಹಾರಾಜರ ಆದಾಯ-ಖರ್ಚು ಮತ್ತು ಉಳಿತಾಯ - ಈ ಎಲ್ಲದರ ವಿವರವನ್ನು ನಾನೊಬ್ಬಳೇ ಇಡುತ್ತಿದ್ದೆನು. ಪಾಂಡವರು ಕುಟುಂಬದ ಜವಾಬ್ದಾರಿಯನ್ನೆಲ್ಲಾ ನನ್ನ ಮೇಲೆ ಬಿಟ್ಟು ಪೂಜಾ - ಪಾಠಗಳಲ್ಲಿ ತೊಡಗಿರುತ್ತಿದ್ದರು ಮತ್ತು ಬಂದು-ಹೋದವರ ಸ್ವಾಗತ-ಸತ್ಕಾರ ಮಾಡುತ್ತಿದ್ದರು.

ನಾನು ಎಲ್ಲಾ ಪ್ರಕಾರದ ಸುಖವನ್ನು ಬಿಟ್ಟು ಅದರ ನಿರ್ವಹಣೆ ಮಾಡುತ್ತಿದ್ದೆನು. ನನ್ನ ಪತಿಯರ ಅಖಂಡ ಖಜಾನೆಯ ಪರಿಚಯ ನನಗೊಬ್ಬಳಿಗೆ ಮಾತ್ರ ಗೊತ್ತಿತ್ತು. ನಾನು ಹಸಿವು-ಬಾಯಾರಿಕೆಗಳನ್ನು ಸಹಿಸಿಕೊಂಡು ರಾತ್ರೀ-ಹಗಲೂ ಪಾಂಡವರ ಸೇವೆಯಲ್ಲಿ ನಿರತಳಾಗಿರುತ್ತೇನೆ. ಆ ಸಮಯದಲ್ಲಿ ರಾತ್ರಿ ಮತ್ತು ಹಗಲುಗಳು ನನಗೆ ಸಮನಾಗಿರುತ್ತವೆ. ನಾನು ಯಾವಾಗಲೂ ಎಲ್ಲರಿಗಿಂತ ಮುಂಚೆ ಏಳುತ್ತಿದ್ದೆ ಮತ್ತು ಎಲ್ಲರಿಗಿಂತ ಕಡೆಯಲ್ಲಿ ಮಲಗಿಕೊಳ್ಳುತ್ತಿದ್ದೆ. ಸತ್ಯಭಾಮಾ! ಪತಿಯರಿಗೆ ಅನುಕೂಲ ಮಾಡಿಕೊಡಲು ನನಗೆ ಇದೇ ಉಪಾಯ ಗೊತ್ತಿದೆ.' ಒಬ್ಬ ಆದರ್ಶ ಗೃಹಿಣಿಯು ಮನೆಯಲ್ಲಿ ಯಾವ ಪ್ರಕಾರ ಇರಬೇಕು - ಇದರ ಪಾಠವನ್ನು ನಾವು ದ್ರೌಪದಿಯ ಜೀವನದಿಂದ ಕಲಿಯಬೇಕು.

ದ್ರೌಪದಿಯಲ್ಲಿ ಕ್ಷತ್ರಿಯೋಚಿತ ತೇಜಸ್ಸು ಮತ್ತು ಭಕ್ತೋಚಿತ ಕ್ಷಮೆ ಇವೆರಡರ ಅಭೂತಪೂರ್ವ ಸಮ್ಮಿಶ್ರವಾಗಿತ್ತು. ಈಕೆ ಬಹು ಬುದ್ಧಿವಂತೆ ಮತ್ತು ವಿದುಷಿಯೂ ಆಗಿದ್ದಳು. ಇವಳ ತ್ಯಾಗವೂ ಅದ್ಭುತವಾಗಿತ್ತು. ಇವಳ ಪಾತಿವ್ರತ್ಯವನ್ನಾದರೋ ಎಲ್ಲಾ ಜನರೂ ಆದರಿಸುತ್ತಿದ್ದರು. ಇವಳನ್ನು ದುರುಳ ದುಃಶಾಸನನು ಕೂದಲು ಹಿಡಿದೆಳೆಯುತ್ತಾ ಸಭೆಗೆ ಎಳೆದುಕೊಂಡು ಬಂದಾಗ ಇವಳು ಸಭಿಕರನ್ನು ಗದರಿಸುತ್ತಾ ತನ್ನ ಪತಿಯರ ಕೋಪದ ಭಯವನ್ನು ತೋರಿಸಿದಳು. ಸಭಾ ಸದಸ್ಯರನ್ನೆಲ್ಲಾ ಧಿಕ್ಕಾರ ಮಾಡುತ್ತಾ ದ್ರೋಣ, ಭೀಷ್ಮ ಮತ್ತು ವಿದುರನಂತಹ ಗೌರವಾನ್ವಿತ ಗುರುಜನರನ್ನೂ ಸಹ ಅವರುಗಳು ಸುಮ್ಮನೆ ಕುಳಿತುಕೊಂಡಿರುವುದಕ್ಕಾಗಿ ವಿಚಾರಿಸಿದಳು. ಇವಳು ಸಾಹಸದಿಂದ ಸಭಾಸದರಲ್ಲಿ ನ್ಯಾಯ ಕೋರಿದಳು ಮತ್ತು ಅವರನ್ನು ಧರ್ಮದ ಸಹಾಯಕ್ಕಾಗಿ ಕೂಗಿ ಹೀಗೆ ಕೇಳಿದಳು - 'ಮಹಾರಾಜ ಯುಧಿಷ್ಠಿರ ತನ್ನನ್ನು ಸೋತು ಅನಂತರ ನನ್ನನ್ನು ಪಣಕ್ಕಿಟ್ಟಿದ್ದಾರೆ. ಇಂತಹ ಸ್ಥಿತಿಯಲ್ಲಿ ನನ್ನನ್ನು ಪಣಕ್ಕಿಡಲು ಅವರಿಗೆ ಅಧಿಕಾರವಿದೆಯೇ ಅಥವಾ ಇಲ್ಲವೇ?' ಸಭಾಸದಸ್ಯರೆಲ್ಲಾ ಮೌನವಾಗಿದ್ದರು. ಯಾರಿಗೂ ದ್ರೌಪದಿಯ ಈ ಪ್ರಶ್ನೆಗೆ ಉತ್ತರ ಕೊಡಲು ಆಗಲಿಲ್ಲ. ಕೊನೆಗೆ ದುರ್ಯೋಧನನ ತಮ್ಮ ವಿಕರ್ಣನು

ಎದ್ದು ನಿಂತು ದ್ರೌಪದಿಯ ಪ್ರಶ್ನೆಗೆ ಉತ್ತರ ಕೊಡುವಂತೆ ಮತ್ತು ಮೌನವನ್ನು ಬಿಟ್ಟು ಮಾತನಾಡುವಂತೆ ಆಗ್ರಹಪಡಿಸಿದನು. ಜೊತೆಗೆ ತನ್ನ ವಿಚಾರವನ್ನು ಹೀಗೆ ಪ್ರಕಟಿಸಿದನು - 'ಮೊದಲನೆಯದಾಗಿ ದ್ರೌಪದಿಯಾದರೋ ಐವರು ಸಹೋದರರ ಹೆಂಡತಿ, ಆದ್ದರಿಂದ ಯುಧಿಷ್ಠಿರನು ತಾನೊಬ್ಬನೇ ಈಕೆಯನ್ನು ಪಣಕ್ಕಿಡಲು ಯಾವ ಅಧಿಕಾರವೂ ಇರಲಿಲ್ಲ.'

ಎರಡನೆಯದಾಗಿ, 'ಈತನು ತಾನು ಸೋತನಂತರ ದ್ರೌಪದಿಯನ್ನು ಪಣಕ್ಕಿಟ್ಟಿದ್ದನು, ಆದುದರಿಂದ ಇದು ಆತನ ಅನಧಿಕಾರದ ಯತ್ನವೆಂದೇ ತಿಳಿಯಲಾಗುತ್ತದೆ.' ವಿಕರ್ಣನ ಮಾತನ್ನು ಕೇಳಿ ವಿದುರನು ಅದನ್ನು ಸಮರ್ಥನೆ ಮಾಡಿದನು. ಇತರೇ ಸಭಾಸದಸ್ಯರೂ ಸಹ ಅದನ್ನು ಪ್ರಶಂಸಿಸಿದರು. ಆದರೆ ಕರ್ಣನು ಗದರಿಸುತ್ತಾ ಅವನನ್ನು ಬಲಪೂರ್ವಕಾಗಿ ಕುಳ್ಳಿರಿಸಿದನು. ಈ ಪ್ರಕಾರ ತುಂಬಿದ ಸಭೆಗೆ ದುಃಶಾಸನನು ಎಳೆದು ತಂದು ಅಪಮಾನಿತಗೊಳಿಸಿ ದ್ರೌಪದಿಯ ನೈತಿಕ ವಿಜಯವೇ ಆಯಿತು. ಇವಳ ಬುದ್ಧಿ ಉತ್ಕೃಷ್ಟವಾಗಿತ್ತು. ಯಾರಿಗೂ ಈಕೆಯ ಮಾತನ್ನು ಖಂಡಿಸಲಾಗಲಿಲ್ಲ. ಅಂತ್ಯದಲ್ಲಿ ವಿದುರನು ತಿಳಿಯ ಹೇಳಿದ ಮೇಲೆ ಧೃತರಾಷ್ಟ್ರನು ದುರ್ಯೋಧನನನ್ನು ಗದರಿಸಿದನು ಮತ್ತು ದ್ರೌಪದಿಯನ್ನು ಪ್ರಸನ್ನಪಡಿಸುವುದಕ್ಕಾಗಿ ಬೇಕಾದ ವರವನ್ನು ಕೇಳಿಕೊಳ್ಳುವಂತೆ ಆಕೆಗೆ ಹೇಳಿದನು. ಆಕೆಯು ವರದಾನದ ರೂಪದಲ್ಲಿ ಧೃತರಾಷ್ಟ್ರನಿಂದ ಕೇವಲ ಈ ವರವನ್ನು ಕೇಳಿದಳು - 'ನನ್ನ ಐವರು ಪತಿಗಳೂ ದಾಸ್ಯದಿಂದ ಮುಕ್ತರಾಗಿ ಹೋಗಲಿ.' ಧೃತರಾಷ್ಟ್ರನು ಹೇಳಿದನು - 'ಮಗೂ! ಮತ್ತೆ ಇನ್ನೇನನ್ನಾದರೂ ಕೇಳಿಕೋ.' ಆ ಸಂದರ್ಭದಲ್ಲಿ ದ್ರೌಪದಿಯು ಆತನಿಗೆ ಕೊಟ್ಟ ಉತ್ತರವು ಸರಿಯಾಗಿ ದ್ರೌಪದಿಗೆ ಅನುರೂಪವೇ ಆಗಿತ್ತು. ಅದರಿಂದ ಇವಳ ನಿರ್ಲೋಭತನ (ಆಸೆ) ಮತ್ತು ಧರ್ಮಪ್ರೇಮ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಅವಳು ಹೇಳಿದಳು - 'ಮಹಾರಾಜಾ! ಅತಿಯಾದ ಆಸೆ ಸರಿಯಲ್ಲ. ಇನ್ನೂ ಏನನ್ನಾದರು ಕೇಳಲು ನನಗೆ ಖಂಡಿತ ಇಚ್ಛೆಯಿಲ್ಲ. ನನ್ನ ಪತಿಯರು ಸ್ವಯಂ ಸಮರ್ಥರಾಗಿದ್ದಾರೆ. ಈಗ ಅವರು ದಾಸ್ಯದಿಂದ ಮುಕ್ತರಾಗಿ

ಹೋಗಿರುವುದರಿಂದ ಉಳಿದುದೆಲ್ಲವನ್ನೂ ಅವರೇ ಸ್ವತಃ ಮಾಡಿಕೊಳ್ಳುವರು.' ಈ ಪ್ರಕಾರ ದ್ರೌಪದಿಯು ತನ್ನ ಬುದ್ಧಿವಂತಿಕೆ ಮತ್ತು ಪಾತಿವ್ರತ್ಯದ ಬಲದಿಂದ ತನ್ನ ಪತಿಯರನ್ನು ದಾಸ್ಯದಿಂದ ಮುಕ್ತಗೊಳಿಸಿದಳು.

ದ್ರೌಪದಿಯು ಉದ್ಬುದ್ಧದ ಕಪ್ಪು ಕೇಶರಾಶಿಯು ಕೆಲವು ದಿವಸಗಳ ಮುಂಚೆ ರಾಜಸೂಯ-ಯಾಗದಲ್ಲಿ ಅವಭೃತ-ಸ್ನಾನದ ಸಮಯದಲ್ಲಿ ಮಂತ್ರೋಕ್ತ ಪವಿತ್ರ ಜಲದಿಂದ ಅಭಿಷೇಕ ಮಾಡಲ್ಪಟ್ಟಿತ್ತು. ಆ ಕೇಶರಾಶಿಯನ್ನು ದುಷ್ಟ ದುಃಶಾಸನನು ತುಂಬಿದ ಸಭೆಯಲ್ಲಿ ಎಳೆದುದನ್ನು ದ್ರೌಪದಿಯು ಎಂದೆಂದಿಗೂ ಮರೆಯಲಿಲ್ಲ. ಆ ಅಭೂತಪೂರ್ವ ಅಪಮಾನದ ಬೆಂಕಿ ಇವಳ ಹೃದಯದಲ್ಲಿ ಯಾವಾಗಲೂ ಉರಿಯುತ್ತಿತ್ತು. ಆದುದರಿಂದ ಇವಳ ಮುಂದೆ ಕೌರವರೊಡನೆ ಸಂಧಿಮಾಡಿಕೊಳ್ಳುವ ಮಾತು ಬಂದಾಗ ಅದನ್ನು ವಿರೋಧಿಸಿದಳು ಮತ್ತು ಪದೇ-ಪದೇ ತನ್ನ ಅಪಮಾನದ ಜ್ಞಾಪಕ ಮಾಡಿಸುತ್ತಾ ತನ್ನ ಪತಿಯರನ್ನು ಯುದ್ಧಕ್ಕೆ ಪ್ರೋತ್ಸಾಹಿಸುತ್ತಿದ್ದಳು. ಕೊನೆಗೆ ಒಂದು ಸಲ ಕೌರವರಿಗೆ ತಿಳಿಸಿ - ಸಮಾಧಾನ ಪಡಿಸಿ ನೋಡೋಣ ಮತ್ತು ಶ್ರೀಕೃಷ್ಣ ಪರಮಾತ್ಮನು ಪಾಂಡವರ ಪರವಾಗಿ ಸಂಧಿಯ ಪ್ರಸ್ತಾಪಕ್ಕಾಗಿ ಹಸ್ತಿನಾಪುರಕ್ಕೆ ಹೋಗುವುದೆಂದು ತೀರ್ಮಾನ ಕೈಗೊಂಡಾಗಲೂ ಇವಳು ತನ್ನ ಅಪಮಾನದ ಮಾತನ್ನು ಮರೆಯಲಿಲ್ಲ. ಇವಳು ತನ್ನ ಉದ್ಬುದ್ಧದ ಕೇಶಗಳನ್ನು ಕೈಯಲ್ಲಿ ಹಿಡಿದುಕೊಂಡು ಕೇಶವನಿಗೆ ಹೇಳಿದಳು - 'ಹೇ! ಶ್ರೀಕೃಷ್ಣ! ನೀನು ಸಂಧಿ ಮಾಡಲು ಹೋಗುತ್ತಿರುವೆ, ಅದೇನೋ ಸರಿ, ಆದರೆ ನೀನು ನನ್ನ ಈ ಕೂದಲುಗಳನ್ನು ಮರೆತುಬಿಡಬೇಡ.' ಇವಳು ಇಲ್ಲಿಯವರೆಗೂ ಹೇಳಿಬಿಟ್ಟಳು - 'ಪಾಂಡವರಿಗೆ ಯುದ್ಧಮಾಡಲು ಇಚ್ಛೆಯಿರದಿದ್ದರೆ ಏನೂ ಅಭ್ಯಂತರವಿಲ್ಲ; ನನ್ನ ಮಹಾರಥಿ ಪುತ್ರರ ಸಹಿತ ನನ್ನ ವೃದ್ಧ ತಂದೆಯು ಕೌರವರೊಡನೆ ಯುದ್ಧ ಮಾಡುವರು ಹಾಗೂ ಅಭಿಮನ್ಯುವಿನ ಸಹಿತ ನನ್ನ ಐವರು ಬಲಶಾಲೀ ಪುತ್ರರೂ ಅವರೊಡನೆ ಯುದ್ಧಮಾಡುವರು.'

ಕಾಮ್ಯಕ ವನದಲ್ಲಿ ದುಷ್ಟ ಜಯದ್ರಥನು ದ್ರೌಪದಿಯನ್ನು ಬಲಾತ್ಕಾರದಿಂದ

ಎಳೆದೊಯ್ಯುವ ಪ್ರಯತ್ನ ಮಾಡಿದಾಗ ಇವಳು ಅವನಿಗೆ ಎಂತಹ ಬಲವಾದ ಹೊಡೆತ ಕೊಟ್ಟಳೆಂದರೆ ಅವನು ಕಡಿದುಹಾಕಿದ ಮರದಂತೆ ನೆಲಕ್ಕೆ ಬಿದ್ದನು. ಆದರೆ ಅವನು ತಕ್ಷಣ ಚೇತರಿಸಿಕೊಂಡು ನಿಂತುಕೊಂಡನು. ನಂತರ ಇವಳನ್ನು ಬಲವಂತವಾಗಿ ರಥದಲ್ಲಿ ಕುಳ್ಳಿರಿಸಿಕೊಂಡು ಕರೆದೊಯ್ದನು. ಹಿಂದಿನಿಂದ ಹೋಗಿ ಭೀಮಾರ್ಜುನರು ಅವನನ್ನು ಹಿಡಿದು ತಂದರು ಮತ್ತು ಅವನನ್ನು ಸಾಕಷ್ಟು ಬಡಿದು-ಚಚ್ಚಿದರು. ಆಗ ದ್ರೌಪದಿಯು ದಯೆಯಿಂದ ಅವನನ್ನು ಬಿಡಿಸಿದಳು. ಹೀಗೆ ಕ್ರೋಧದ ಜೊತೆಗೆ ಕ್ಷಮಿಸುವುದೂ ಆಕೆಗೆ ತಿಳಿದಿತ್ತು. ಈಕೆಯ ಪಾತಿವ್ರತ್ಯದ ತೇಜಸ್ಸು ಅಪೂರ್ವವಾಗಿತ್ತು. ಯಾರು-ಯಾರು ಈಕೆಯನ್ನು ಕೆಣಕಿ ರೇಗಿಸಿದ್ದರೋ ಅಥವಾ ದುಶ್ಚೇಷ್ಟೆ ಮಾಡಿದ್ದರೋ, ಅವರು ಪ್ರಾಣ ತೆರ ಬೇಕಾಯಿತು. ದುರ್ಯೋಧನ, ದುಃಶಾಸನ, ಕರ್ಣ, ಜಯದ್ರಥ, ಕೀಚಕ, ಮುಂತಾದವರೆಲ್ಲರಿಗೂ ಇದೇ ಗತಿಯಾಯಿತು. ಪತಿವ್ರತೆಯನ್ನು ನೋಯಿಸಿದರೆ ಆ ನಾರಿಯ ನಿಟ್ಟುಸಿರು ಯಾರನ್ನೂ ನಾಶಮಾಡದೇ ಬಿಡದು. ಮಹಾಭಾರತ ಯುದ್ಧದಲ್ಲಿ ಆದ ಕೌರವರ ಸರ್ವನಾಶಕ್ಕೆ ಸತೀಸಾಧ್ವೀ ದ್ರೌಪದಿಯ ಅಪಮಾನವೇ ಮೂಲಕಾರಣ.

❑❑❑

೭. ಪತಿವ್ರತಾ ಗಾಂಧಾರಿ

ಪ್ರಪಂಚದಲ್ಲಿ ಪತಿವ್ರತಾ ಸ್ತ್ರೀಯರುಗಳಲ್ಲಿ ಗಾಂಧಾರಿಯ ಸ್ಥಾನ ಬಹಳ ಶ್ರೇಷ್ಠವಾಗಿದೆ. ಈಕೆಯು ಗಾಂಧಾರದ ರಾಜಾ ಸುಬಲನ ಪುತ್ರಿ ಮತ್ತು ಶಕುನಿಯ ಸಹೋದರಿಯಾಗಿದ್ದಳು. ಅವಳು ಕನ್ಯಾವಸ್ಥೆಯಲ್ಲಿಯೇ ಭಗವಾನ್ ಶಂಕರನನ್ನು ಚೆನ್ನಾಗಿ ಆರಾಧಿಸಿ ಆತನಿಂದ ನೂರುಮಂದಿ ಪುತ್ರರ ವರವನ್ನು ಪಡೆದು ಕೊಂಡಿದ್ದಳು. ಇವಳ ವಿವಾಹವು ನೇತ್ರಹೀನ ಧೃತರಾಷ್ಟ್ರನೊಡನೆ ನಡೆಯುವುದೆಂದು ಇವಳಿಗೆ ಗೊತ್ತಾಯಿತು, ಆ ಕ್ಷಣದಿಂದಲೇ ಇವಳು ತನ್ನೆರಡು ಕಣ್ಣುಗಳಿಗೂ ಪಟ್ಟಿಯನ್ನು ಕಟ್ಟಿಕೊಂಡಳು. ನನ್ನ ಪತಿಯೇ ನೇತ್ರಸುಖದಿಂದ ವಂಚಿತನಾಗಿರುವಾಗ ಪ್ರಪಂಚವನ್ನು ನೋಡಲು ನನಗೇನು ಅಧಿಕಾರವೆಂದು ಯೋಚಿಸಿದಳು. ಆಗಿನಿಂದ ಜೀವಸಹಿತ ಇರುವವರೆಗೂ ತನ್ನ ಆ ದೃಢ ನಿಶ್ಚಯದಲ್ಲಿ ಸ್ಥಿರವಾಗಿದ್ದಳು. ಪತಿಗಾಗಿ ಇಂದ್ರಿಯಸುಖದ ತ್ಯಾಗದ ಇಂತಹ ಅದ್ಭುತ ಉದಾಹರಣೆ ಪ್ರಪಂಚದ ಇತಿಹಾಸದಲ್ಲಿ ಎಲ್ಲಿಯೂ ದೊರೆ ಯುವುದಿಲ್ಲ. ಆಕೆಯ ಈ ತಪಸ್ಸು ಮತ್ತು ತ್ಯಾಗ ಅನುಪಮ, ಪ್ರಪಂಚಕ್ಕೇ ಒಂದು ಅದ್ಭುತ ವಸ್ತು. ಇವಳು ಸದಾ ತನ್ನ ಪತಿಯ ಅನುಯಾಯಿಯಾಗಿದ್ದಳು. ಇವಳು ಗಂಡನ ಮನೆಗೆ ಬಂದ ಮೇಲೆ ತನ್ನ ಚರಿತ್ರೆ ಮತ್ತು ಸದ್ಗುಣಗಳಿಂದ ಪತಿ ಮತ್ತು ಇಡೀ ಪರಿವಾರವನ್ನು ಮುಗ್ಧಗೊಳಿಸಿದಳು.

ದೇವೀ ಗಾಂಧಾರಿಯು ಪತಿವ್ರತೆಯಾಗಿದ್ದಂತೆಯೇ ನಿರ್ಭೀತ ಮತ್ತು ನ್ಯಾಯಪ್ರಿಯಳೂ ಆಗಿದ್ದಳು. ಇವಳು ಯಾವಾಗಲೂ ಸತ್ಯ, ನೀತಿ ಮತ್ತು ಧರ್ಮದ ಪಕ್ಷಪಾತಿಯಾಗಿದ್ದಳು, ಅನ್ಯಾಯವನ್ನು ಎಂದಿಗೂ ಸಮರ್ಥಿಸು ತ್ತಿರಲಿಲ್ಲ, ಇವಳ ಪುತ್ರರು ದೇವಿ ದ್ರೌಪದಿಗೆ ತುಂಬಿದ ಸಭೆಯಲ್ಲಿ ಮಾಡಿದ ಅಪಮಾನದಿಂದ ಇವಳ ಮನಸ್ಸಿಗೆ ಬಹಳ ದುಃಖವಾಯಿತು. ಈ ವಿಚಾರದಿಂದ ಇವಳಿಗೆ ತನ್ನ ಮಕ್ಕಳ ಬಗ್ಗೆ ಸಂತೋಷ ಉಂಟಾಗಲಿಲ್ಲ. ಈಕೆಯ ಪತಿ

ಧೃತರಾಷ್ಟ್ರನು ತನ್ನ ಮಕ್ಕಳ ಮಾತನ್ನು ಕೇಳಿ ಎರಡನೇ ಸಲ ಪಾಂಡವರನ್ನು ದ್ಯೂತಕ್ಕೆ ಕರೆಯಿಸಿದನು. ಆಗ ಇವಳಿಗೆ ಬಹಳ ದುಃಖವಾಯಿತು. ಇವಳು ದ್ಯೂತನನ್ನು ವಿರೋಧಿಸುತ್ತಾ ತನ್ನ ಪತಿಯೊಡನೆ ಹೇಳಿದಳು - 'ಸ್ವಾಮಿ! ದುರ್ಯೋಧನನು ಹುಟ್ಟಿದ ಕೂಡಲೇ ನರಿಯಂತೆ ಅಳಲು-ಅರಚಲು ಪ್ರಾರಂಭಿಸಿದ್ದನು; ಆದ್ದರಿಂದ ಆ ಸಮಯದಲ್ಲಿ ಪರಮಜ್ಞಾನೀ ವಿದುರನು ಹೇಳಿದ್ದನು - 'ಈ ಪುತ್ರನನ್ನು ಪರಿತ್ಯಾಗ ಮಾಡಿಬಿಡಿರಿ.' ನನಗೆ ಈ ಮಾತು ಜ್ಞಾಪಕಕ್ಕೆ ಬಂದಾಗಲೆಲ್ಲಾ ಇವನು ಕುರುವಂಶವನ್ನು ನಾಶಮಾಡಿಬಿಡುವನು - ಎಂದು ಗೊತ್ತಾಗುತ್ತದೆ. ಆರ್ಯಪುತ್ರ! ನೀವು ನಿಮ್ಮ ದೋಷದಿಂಧ ಎಲ್ಲರನ್ನೂ ವಿಪತ್ತಿಗೆ ತಳ್ಳಬೇಡಿ. ಈ ಹಠಮಾರಿ ಮೂರ್ಖನನ್ನು ಬೆಂಬಲಿಸಬೇಡಿರಿ. ಈ ವಂಶದ ನಾಶಕ್ಕೆ ಕಾರಣವಾಗಬೇಡಿ.

ಕಟ್ಟಿರುವ ಸೇತುವೆಯನ್ನು ಒಡೆದು ನಾಶಮಾಡಬೇಡಿ. ಆರಿರುವ ಬೆಂಕಿ ಪುನಃ ಭುಗಿಲೆದ್ದೀತು. ಪಾಂಡವರು ಈಗ ಶಾಂತವಾಗಿದ್ದಾರೆ ಮತ್ತು ವೈರ ವಿರೋಧಗಳಿಂದ ವಿಮುಕ್ತರಾಗಿದ್ದಾರೆ. ಅವರನ್ನು ಕೋಪೋದ್ರೇಕಗೊಳಿಸುವುದು ಸರಿಯಲ್ಲ. ಈ ವಿಚಾರ ನಿಮಗೂ ಗೊತ್ತು ಆದರೂ ನಾನು ನಿಮಗೆ ಜ್ಞಾಪಕ ಮಾಡುತ್ತಿದ್ದೇನೆ. ದುರ್ಬುದ್ಧಿಯುಳ್ಳವರ ಮನಸ್ಸಿನ ಮೇಲೆ ಶಾಸ್ತ್ರಗಳ ಉಪದೇಶ ಪ್ರಭಾವ ಬೀರುವುದಿಲ್ಲ. ಆದರೆ ನೀವು ವೃದ್ಧರಾಗಿಯೂ ಮಕ್ಕಳ ಹಾಗೆ ಮಾತನಾಡುವುದು ಉಚಿತವಲ್ಲ. ಈಗ ನೀವು ನಿಮ್ಮ ಪುತ್ರ ಸಮಾನರಾದ ಪಾಂಡವರನ್ನು ಆತ್ಮೀಯರನ್ನಾಗಿಟ್ಟುಕೊಳ್ಳಿರಿ. ಅವರು ದುಃಖಿಗಳಾಗಿ ನಿಮ್ಮಿಂದ ಬೇರ್ಪಟ್ಟು ಹೋಗದಿರಲಿ. ಕುಲಕ್ಕೇ ಕಳಂಕಪ್ರಾಯನಾದ ದುರ್ಯೋಧನನನ್ನು ತ್ಯಜಿಸಿಬಿಡುವುದೇ ಶ್ರೇಯಸ್ಕರ. ನಾನು ಮೋಹಕ್ಕೊಳಗಾಗಿ ಅಂದು ವಿದುರನ ಮಾತನ್ನು ತಿರಸ್ಕರಿಸಿದೆ; ಅದರ ಫಲವೇ ಇದು. ಶಾಂತಿ, ಧರ್ಮ ಮತ್ತು ಮಂತ್ರಿಗಳ ಸಮ್ಮತಿಯಂತೆ ನಿಮ್ಮ ವಿಚಾರಶಕ್ತಿಯನ್ನು ಸುರಕ್ಷಿತವಾಗಿಟ್ಟುಕೊಳ್ಳಿ. ಅಜಾಗರೂಕರಾಗಬೇಡಿರಿ. ಯೋಚಿಸದೆ ಕೆಲಸ ಮಾಡುವುದು ನಿಮಗೆ ದುಃಖ

ಕಾರಿಯಾಗುವುದು. ರಾಜ್ಯಲಕ್ಷ್ಮಿಯು ಕ್ರೂರಿಗಳ ಕೈಸಿಕ್ಕಿ ಅವರನ್ನೇ ನಾಶಮಾಡಿಬಿಡುವಳು.' ಗಾಂಧಾರಿಯ ಈ ವಾಕ್ಯಗಳಿಂದ ಧರ್ಮ, ನೀತಿ ಮತ್ತು ನಿಷ್ಪಕ್ಷಪಾತ ಪ್ರಕಟವಾಗುತ್ತದೆ. ಈಕೆಯು ದುರ್ಯೋಧನನನ್ನೂ ಕೂಡ ಅವನ ಅನುಚಿತ ಕಾರ್ಯ ಪ್ರವೃತ್ತಿಗಾಗಿ ವಿರೋಧಿಸುತ್ತಿದ್ದಳು. ಅವನ ಉದ್ದಂಡತೆಗಾಗಿ ಅವನನ್ನು ಗದರಿಸುತ್ತಿದ್ದಳು ಮತ್ತು ಅನೀತಿಯ ಭಾವೀ ದುಷ್ಪರಿಣಾಮದ ಭಯಂಕರ ಚಿತ್ರವನ್ನು ಅವನ ಮುಂದಿಡುತ್ತಿದ್ದಳು. ಆದರೆ ದುರ್ಯೋಧನನ ತಲೆಯ ಮೇಲೆ ಯಮನು ನರ್ತಿಸುತ್ತಿದ್ದನು, ಅವನು ಈ ಹಿತಕರವಾದ ಯಾವ ಮಾತುಗಳಿಗೂ ಗಮನ ಕೊಡುತ್ತಿರಲಿಲ್ಲ.

ಪಾಂಡವರ ಕಡೆಯಿಂದ ಸಂಧಿಯ ಸಂದೇಶವನ್ನು ತೆಗೆದುಕೊಂಡು ಸ್ವತಃ ಶ್ರೀಕೃಷ್ಣಪರಮಾತ್ಮನೇ ಹಸ್ತಿನಾಪುರಕ್ಕೆ ಬಂದನು ಮತ್ತು ಆತನೂ ದುರ್ಯೋಧನ ನಿಗೆ ತಿಳಿವಳಿಕೆ ನೀಡಿ ಸೋತು ಹೋದನು. ಆಗ ಧೃತರಾಷ್ಟ್ರನು ದೇವಿ ಗಾಂಧಾರಿಯನ್ನು ಕರೆಯಿಸಿ ಆಕೆಗೆ ಹೇಳಿದನು - 'ಈಗ ನೀನೇ ನಿನ್ನ ಮಗನಿಗೆ ಬುದ್ಧಿಹೇಳು. ಅವನು ನಮ್ಮಲ್ಲಿ ಯಾರ ಮಾತನ್ನೂ ಕೇಳುವುದಿಲ್ಲ.' ಪತಿಯ ಈ ಮಾತನ್ನು ಕೇಳಿ ಗಾಂಧಾರಿಯು ಹೇಳಿದಳು - 'ಮಹಾರಾಜ! ನೀವು ಪುತ್ರವ್ಯಾಮೋಹಕ್ಕೆ ಒಳಗಾಗಿರುವಿರಿ, ಆದುದರಿಂದ ಈ ವಿಷಯದಲ್ಲಿ ಎಲ್ಲರಿಗಿಂತ ಹೆಚ್ಚು ದೋಷಿ ನೀವೇ. ದುರ್ಯೋಧನನು ಬಹು ಪಾಪಿಯೆಂದು ತಿಳಿದಿದ್ದರೂ ನೀವು ಅವನು ಹೇಳಿದಂತೆಯೇ ನಡೆದುಕೊಳ್ಳುತ್ತಿರುವಿರಿ. ಕಾಮ, ಕ್ರೋಧ ಲೋಭಗಳು ದುರ್ಯೋಧನನನ್ನು ತಮ್ಮ ವಶದಲ್ಲಿಟ್ಟುಕೊಂಡಿವೆ. ಈಗ ನೀವು ಬಲಪೂರ್ವಕವಾಗಿಯೂ ಅವನನ್ನು ಆ ಮಾರ್ಗದಿಂದ ತಪ್ಪಿಸಲಾಗುವುದಿಲ್ಲ. ನೀವು ಈ ಮೂರ್ಖ, ದುರಾತ್ಮಾ, ದುಸ್ಸಹವಾಸೀ ಮತ್ತು ಲೋಭಿಯಾದ ಪುತ್ರನಿಗೆ ಸ್ವಲ್ಪವೂ ಹಿಂದೂ ಮುಂದೂ ಯೋಚಿಸದೆ ರಾಜ್ಯಾಡಳಿತದ ಸೂತ್ರವನ್ನು ವಹಿಸಿಕೊಟ್ಟಿರಿ; ಅದರ ಫಲವನ್ನೇ ನೀವು ಅನುಭವಿಸುತ್ತಿರುವಿರಿ. ನಮ್ಮ ಮನೆಯಲ್ಲಿ ಬೆಳೆಯುತ್ತಿರುವ ವೈಮನಸ್ಸನ್ನು

ಕಲಹಗಳನ್ನು ನೀವು ಉಪೇಕ್ಷೆ ಮಾಡುತ್ತಾ ಬರುತ್ತಿರುವಿರಿ. ಹೀಗೆ ಮಾಡಿ ನೀವು ಪಾಂಡವರ ದೃಷ್ಟಿಯಲ್ಲಿ ನಿಮ್ಮನ್ನು - ನೀವೇ ಹಾಸ್ಯಾಸ್ಪದ ಮಾಡಿಕೊಳ್ಳುತ್ತಿರುವಿರಿ. ನೋಡಿರಿ, ಸಾಮ ಅಥವಾ ಭೇದದಿಂದಲೇ ವಿಪತ್ತು ತೊಲಗಿ ಹೋಗುವುದಾದರೆ ಯಾರು ತಾನೇ ಬುದ್ಧಿವಂತರಾದ ಸ್ವಜನರು ದಂಡವನ್ನು ಏಕೆ ಪ್ರಯೋಗಿಸುವರು?' ಗಾಂಧಾರಿಯು ಈ ಉಕ್ತಿಯು ಎಂತಹ ನಿರ್ಭೀತ, ನಿಷ್ಪಕ್ಷ, ಹಿತಕಾರೀ, ನೀತಿಪೂರ್ಣ ಮತ್ತು ಸತ್ಯವಾಗಿತ್ತು.

ಅನಂತರ ಗಾಂಧಾರಿಯು ತನ್ನ ಮಗನನ್ನು ಕರೆದು ಅವನಿಗೆ ಬುದ್ಧಿ ಹೇಳಲು ಪ್ರಾರಂಭಿಸಿದಳು. ಅವಳು ಹೇಳಿದಳು - 'ಮಗೂ! ನನ್ನ ಮಾತನ್ನು ಕೇಳು. ನಿಮ್ಮ ತಂದೆ, ಭೀಷ್ಮರು, ದ್ರೋಣಾಚಾರ್ಯರು, ಕೃಪಾಚಾರ್ಯರು ಮತ್ತು ವಿದುರ ಇವರೆಲ್ಲಾ ನಿನಗೆ ಹೇಳಿರುವ ಮಾತನ್ನು ಒಪ್ಪಿಕೊಂಡುಬಿಡು. ನೀನು ಪಾಂಡವರೊಡನೆ ಸಂಧಿಮಾಡಿಕೊಂಡರೆ, ಇದರಿಂದ ಪಿತಾಮಹ ಭೀಷ್ಮರಿಗೂ, ನಿಮ್ಮ ತಂದೆಗೂ, ನನಗೂ ಮತ್ತು ದ್ರೋಣಾಚಾರ್ಯರೇ ಮುಂತಾದ ಹಿತೈಷಿಗಳೆಲ್ಲರಿಗೂ ನಿನ್ನಿಂದ ದೊಡ್ಡ ಸೇವೆಯಾಗಬಹುದೆಂಬುದನ್ನು ಸತ್ಯವೆಂದು ತಿಳಿ. ಮಗೂ! ರಾಜ್ಯವನ್ನು ಪಡೆಯುವುದು, ಉಳಿಸುವುದು ಮತ್ತು ಅನುಭವಿಸುವುದು ನಮ್ಮ ಕೈಯಿಂದಾಗುವ ಮಾತಲ್ಲ. ಜಿತೇಂದ್ರಿಯನಾಗಿ ರುವವನೇ ರಾಜ್ಯದ ರಕ್ಷಣೆ ಮಾಡಬಲ್ಲನು. ಕಾಮ ಮತ್ತು ಕ್ರೋಧಗಳು ಮನುಷ್ಯನನ್ನು ಅರ್ಥಚ್ಯುತನನ್ನಾಗಿ ಮಾಡಿಬಿಡುತ್ತವೆ. ಈ ಎರಡು ಶತ್ರುಗಳನ್ನೂ ಗೆದ್ದರೇ ರಾಜನು ಇಡೀ ಪೃಥ್ವಿಯನ್ನು ಗೆಲ್ಲಬಲ್ಲನು. ನೋಡು - ಉದ್ಧಂಡ ಕುದುರೆಗಳು ಮೂರ್ಖ ಸಾರಥಿಯನ್ನು ಮಾರ್ಗದಲ್ಲಿಯೇ ಕೊಂದು ಹಾಕುವಂತೆಯೇ, ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳದೇ ಹೋದರೆ ಅವು ಮನುಷ್ಯನನ್ನು ನಾಶಮಾಡಲು ಸಮರ್ಥವಾಗುತ್ತವೆ. ಹೀಗೆ ತನ್ನ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವವನ ಮತ್ತು ಎಲ್ಲಾ ಕೆಲಸಗಳನ್ನೂ ಯೋಚಿಸಿ - ಚಿಂತಿಸಿ ಮಾಡುವವನ, ಹತ್ತಿರ ಲಕ್ಷ್ಮಿಯು ಸ್ಥಿರವಾಗಿರುತ್ತಾಳೆ.

ಮಗೂ! ನಿಮ್ಮ ತಾತ ಭೀಷ್ಮರು ಮತ್ತು ಗುರುಗಳಾದ ದ್ರೋಣಾಚಾರ್ಯರು ಹೇಳಿರುವ ಮಾತು ಖಂಡಿತವಾಗಿಯೂ ಸರಿಯಾಗಿದೆ. ವಾಸ್ತವವಾಗಿಯ ಶ್ರೀಕೃಷ್ಣ ಮತ್ತು ಅರ್ಜುನರನ್ನು ಯಾರೂ ಜಯಿಸಲಾರರು. ಆದುದರಿಂದ ನೀನು ಶ್ರೀಕೃಷ್ಣನಿಗೆ ಶರಣಾಗು. ಈತನು ಪ್ರಸನ್ನನಾದರೆ ಎರಡು ಪಕ್ಷಗಳಿಗೂ ಹಿತವಾಗುವುದು. ವತ್ಸ! ಯುದ್ಧ ಮಾಡುವುದರಿಂದ ಏಳಿಗೆಯೇನೂ ಆಗದು. ಅದರಲ್ಲಿ ಧರ್ಮ ಮತ್ತು ಅರ್ಥವೂ ಇಲ್ಲದಿದ್ದರೆ ಸುಖವಿನ್ನೆಲ್ಲಿ? ನೀನು ನಿನ್ನ ಮಂತ್ರಿಗಳೊಡಗೂಡಿ ರಾಜ್ಯ ಸುಖವನ್ನು ಅನುಭವಿಸಲು ಇಚ್ಛಿಸುವುದಾದರೆ ಪಾಂಡವರ ನ್ಯಾಯೋಚಿತ ಭಾಗವನ್ನು ಅವರಿಗೆ ಕೊಟ್ಟುಬಿಡು. ಪಾಂಡವರನ್ನು ಹದಿಮೂರು ವರ್ಷ ಮನೆಯಿಂದ ಹೊರಗೆ ಕಳುಹಿಸಿದುದೂ ಒಂದು ದೊಡ್ಡ ಅಪರಾಧವಾಗಿದೆ. ಈಗ ಸಂಧಿಯೇರ್ಪಡಿಸಿ ಇದನ್ನು ಪರಿಷ್ಕರಿಸು. ಪ್ರಪಂಚದಲ್ಲಿ ಲೋಭದಿಂದ ಯಾರಿಗೂ ಸಂಪತ್ತು ದೊರೆಯುವುದಿಲ್ಲ. ಆದುದರಿಂದ ನೀನು ಲೋಭವನ್ನು ಬಿಡು ಮತ್ತು ಪಾಂಡವರೊಡನೆ ಸಂಧಿಮಾಡಿಕೊ.' ಎಂತಹ ಹಿತಪೂರ್ಣ ಮತ್ತು ಮಾರ್ಮಿಕ ಉಪದೇಶ. ಗಾಂಧಾರಿಯು ವಿದುಷಿಯಾಗಿದ್ದಳು ಮತ್ತು ಅವಳು ಶ್ರೀಕೃಷ್ಣ ಮತ್ತು ಅರ್ಜುನರ ಮಹಿಮೆಯನ್ನು ತಿಳಿದು ಕೊಂಡಿದ್ದಳು.

ದುಷ್ಟ ದುರ್ಯೋಧನನ ಮೇಲೆ ಗಾಂಧಾರಿಯ ಈ ಉತ್ತಮ ಉಪದೇಶದಿಂದ ಯಾವ ಪರಿಣಾಮವೂ ಉಂಟಾಗಲಿಲ್ಲ. ಅವನು ತನ್ನ ಹಟವನ್ನು ಬಿಡಲಿಲ್ಲ. ಅದರ ಪರಿಣಾಮವಾಗಿ ಎರಡು ಕಡೆಗಳಿಂದಲೂ ಯುದ್ಧದ ಸಿದ್ಧತೆ ಪ್ರಾರಂಭವಾಯಿತು. ಹದಿನೆಂಟು ದಿನಗಳವರೆಗೆ ಕುರುಕ್ಷೇತ್ರದ ರಣರಂಗದಲ್ಲಿ ಹೋರಾಟ ನಡೆಯಿತು. ಯುದ್ಧದ ದಿನಗಳಲ್ಲಿ ದುರ್ಯೋಧನನು ಪ್ರತಿದಿನವೂ ಈಕೆಯನ್ನು ಪ್ರಾರ್ಥಿಸುತ್ತಿದ್ದನು - 'ಅಮ್ಮಾ! ನಾನು ಶತ್ರುಗಳೊಡನೆ ಯುದ್ಧಕ್ಕೆ ಹೋಗುತ್ತಿದ್ದೇನೆ; ನೀನು ನನಗೆ ಆಶೀರ್ವಾದ ಮಾಡು, ಅದರಿಂದ ಯುದ್ಧದಲ್ಲಿ ನನಗೆ ಯಶಸ್ಸು ದೊರೆಯಲಿ.' ಗಾಂಧಾರಿಯಲ್ಲಿ ಪಾತಿವ್ರತ್ಯದ

ತೇಜಸ್ಸು ಬಹಳವಾಗಿದ್ದಿತು. ಅವಳು ಮಗನಿಗೆ ಆಶೀರ್ವಾದ ಕೊಟ್ಟಿದ್ದರೆ ಅದು ನೆರವೇರುತ್ತಿತ್ತು. ಆದರೆ ಅವಳು ಹೇಗೆ ಕೊಟ್ಟಾಳು? ದುರ್ಯೋಧನನು ಅತ್ಯಾಚಾರಿಯೆಂಬುದನ್ನು ತಿಳಿದುಕೊಂಡಿದ್ದಳು. ಅತ್ಯಾಚಾರಿಯ ಕೈಯಲ್ಲಿ ಎಂದಿಗೂ ರಾಜ್ಯ-ಲಕ್ಷ್ಮೀ ನಿಲ್ಲಲಾರಳು; ಆದುದರಿಂದ ಅವಳು ಪ್ರತಿ ಸಲವೂ ಇದೇ ಉತ್ತರ ಕೊಡುತ್ತಿದ್ದಳು - 'ಮಗೂ! ಎಲ್ಲಿ ಧರ್ಮವಿದೆಯೋ ಅಲ್ಲಿಯೇ ವಿಜಯ. ವಿಜಯವನ್ನು ಬಯಸುವುದಾದರೆ ಧರ್ಮದ ಆಶ್ರಯವನ್ನು ಪಡೆದುಕೋ, ಅಧರ್ಮವನ್ನು ಪರಿತ್ಯಾಗ ಮಾಡು.' ಆಕೆಯು ಎಂದಿಗೂ ದುರ್ಯೋಧನನ ಪಕ್ಷವನ್ನು ವಹಿಸಲಿಲ್ಲ. ಆದರೆ ತನ್ನ ನೂರಕ್ಕೆ ನೂರೂ ಪುತ್ರರು ಕೊಲ್ಲಲ್ಪಟ್ಟರು ಎಂಬುದನ್ನು ಕೇಳಿದಾಗ ಶೋಕದ ಆವೇಗದಲ್ಲಿ ಆಕೆಯ ಕ್ರೋಧ ಉದ್ರೇಕಗೊಂಡಿತು. ಅವಳು ಪಾಂಡವರಿಗೆ ಶಾಪಕೊಡುವ ವಿಚಾರ ಮಾಡಲಾರಂಭಿಸಿದಳು. ಭಗವಾನ್ ವೇದವ್ಯಾಸರು ಮನಸ್ಸಿನಲ್ಲಿರುವ ಮಾತನ್ನೂ ಅರಿತುಕೊಳ್ಳುತ್ತಿದ್ದರು. ಅವರಿಗೆ ಈ ವಿಚಾರ ತಿಳಿದಾಗ ಅವರು ಗಾಂಧಾರಿಯ ಹತ್ತಿರಕ್ಕೆ ಬಂದು ಆಕೆಗೆ ಸಮಾಧಾನ ಹೇಳಿ ಅವಳ ಅಸತ್ಯದ ಸಂಕಲ್ಪವನ್ನು ತಡೆದರು. ಆ ಸಂದರ್ಭದಲ್ಲಿ ಪಾಂಡವರೂ ಅಲ್ಲಿಯೇ ಇದ್ದರು. ತಾಯಿ ಗಾಂಧಾರಿಯ ಮನಸ್ಸಿನ ಕ್ಷೋಭೆಯನ್ನು ಕಂಡು ಯುಧಿಷ್ಠಿರನು ಆಕೆಯ ಬಳಿ ಹೋಗಿ ತನ್ನನ್ನು ತಾನೇ ಧಿಕ್ಕರಿಸಿಕೊಳ್ಳುತ್ತಾ ಆಕೆಯ ಚರಣಗಳಿಗೆ ನಮಸ್ಕರಿಸಿ ಗಾಂಧಾರಿಯ ಕ್ರೋಧಯುಕ್ತ ದೃಷ್ಟಿಯು ಕಣ್ಣಿನ ಪಟ್ಟಿಯಿಂದ ಹೊರಟು ಯುಧಿಷ್ಠಿರನ ಉಗುರುಗಳ ಮೇಲೆ ಬಿದ್ದಿತು. ಇದರಿಂದ ಸುಂದರ ಕೆಂಪು-ಕೆಂಪಾದ ಉಗುರುಗಳು ಕೂಡಲೇ ಕಪ್ಪಾಗಿಹೋದವು. ಇದನ್ನು ನೋಡಿದ ಅವನ ಸಹೋದರರೂ ಭಯದಿಂದ ಆಕಡೆ ಈಕಡೆ ಅವಿತುಕೊಳ್ಳತೊಡಗಿದರು. ಅವರುಗಳು ಈ ಪ್ರಕಾರ ಅಂಜಿಕೆಯಿಂದ ಪರದಾಡುವುದನ್ನು ಅರಿತ ಗಾಂಧಾರಿಯ ಕ್ರೋಧ ಶಾಂತವಾಯಿತು ಮತ್ತು ಆಕೆಯು ತಾಯಿಯಂತೆ ಪಾಂಡವರಿಗೆ ಧೈರ್ಯಕೊಟ್ಟಳು.

ಮೇಲಿನ ಘಟನೆಯಿಂದ ಗಾಂಧಾರಿಯ ಅನುಪಮ ಪಾತಿವ್ರತ್ಯದ ತೇಜಸ್ಸು ಗೊತ್ತಾಗುತ್ತದೆ. ಕೊನೆಗೆ ಗಾಂಧಾರಿಯು ತನ್ನ ಕೋಪವನ್ನು ಶ್ರೀಕೃಷ್ಣನ ಮೇಲೆ ತೋರಿಸಿದಳು ಅಥವಾ ಹೀಗೆ ಹೇಳಬೇಕಾಗಬಹುದು - ಅಂತರ್ಯಾಮೀ ಶ್ರೀಕೃಷ್ಣನೇ ಅವಳ ಬುದ್ಧಿಯನ್ನು ಬದಲಿಸಿ ಪಾಂಡವರನ್ನು ಆಕೆಯ ಕೋಪದಿಂದ ಪಾರುಮಾಡಿ ಅವಳ ಅಭಿಶಾಪವನ್ನು ತಾನು ಸ್ವೀಕರಿಸಿದನು. ದೇವೀ ಗಾಂಧಾರಿಯು ಕುರುಕ್ಷೇತ್ರಕ್ಕೆ ಹೋಗಿ ಅಲ್ಲಿನ ಹೃದಯವಿದ್ರಾವಕ ದೃಶ್ಯವನ್ನು ನೋಡಿದಾಗ ಆಕೆಯಿಂದ ತನ್ನ ಶೋಕವನ್ನು ಸಹಿಸಿಕೊಳ್ಳಲಾಗಲಿಲ್ಲ. ಆಕೆ ಕುಪಿತಳಾಗಿ ಶ್ರೀಕೃಷ್ಣನಿಗೆ ಹೇಳಿದಳು - ಕೃಷ್ಣ! ಪಾಂಡವರು ಮತ್ತು ಕೌರವರು ತಮ್ಮ ಕಲಹದ ಕಾರಣದಿಂದ ಹಾಳಾಗಿ ಹೋಗಿದ್ದಾರೆ, ಆದರೆ ನೀನು ಸಮರ್ಥನಾಗಿದ್ದರೂ ನಿನ್ನ ಸಂಬಂಧಿಗಳನ್ನು ಏಕೆ ಉಪೇಕ್ಷೆಮಾಡಿಬಿಟ್ಟೆ? ನಿನ್ನ ಹತ್ತಿರ ಅನೇಕಾನೇಕ ಸೇವಕರಿದ್ದರು ಮತ್ತು ಬಹುದೊಡ್ಡ ಸೈನ್ಯವೂ ಇತ್ತು. ನೀನು ಇವರಿಬ್ಬರನ್ನೂ ಬಗ್ಗು ಬಡಿಯಬಹುದಾಗಿದ್ದಿತು. ನಿನ್ನ ವಾಕ್‌ಚಾತುರ್ಯದಿಂದ ಇವರಿಗೆ ತಿಳಿವಳಿಕೆಯನ್ನೂ ಹೇಳಬಹುದಾಗಿತ್ತು; ಆದರೆ ನೀನು ತಿಳಿದೂ ತಿಳಿದೂ ಕೌರವರ ಸಂಹಾರವಾಗುವುದನ್ನು ಉಪೇಕ್ಷೆ ಮಾಡಿಬಿಟ್ಟೆ. ಆದುದರಿಂದ ಈಗ ನೀನು ಅದರ ಫಲವನ್ನು ಅನುಭವಿಸು. ನಾನು ಪತಿಸೇವೆಯಿಂದ ಪಡೆದಿರುವ ತಪಸ್ಸಿನ ಬಲದಿಂದ ನಿನಗೆ ಶಾಪಕೊಡುತ್ತೇನೆ - ಯಾವ ರೀತಿ ಪರಸ್ಪರ ಯುದ್ಧ ಮಾಡುತ್ತಿರುವ ಕೌರವರನ್ನೂ ಮತ್ತು ಪಾಂಡವರನ್ನೂ ನೀನು ಉಪೇಕ್ಷೆ ಮಾಡಿದೆಯೋ ಅದೇ ಪ್ರಕಾರ ನೀನು ನಿನ್ನ ಬಂಧು-ಬಾಂಧವರನ್ನೂ ವಧೆ ಮಾಡುವೆ ಮತ್ತು ನೀನು ಸಹ ಅನಾಥನಂತೆ ಕೊಲ್ಲಲ್ಪಡುವೆ. ಇಂದು ಈ ಭರತವಂಶದ ಸ್ತ್ರೀಯರು ಆರ್ತನಾದ ಮಾಡುತ್ತಿರುವ ಹಾಗೆಯೇ ನಿಮ್ಮ ಕುಟುಂಬದ ಸ್ತ್ರೀಯರೂ ಸಹ ತಮ್ಮ ಬಂಧು-ಬಾಂಧವರು ಸತ್ತು ಹೋದಾಗ ತಲೆ ಚಚ್ಚಿಕೊಂಡು ರೋದಿಸುವರು.

ಗಾಂಧಾರಿಯ ಈ ಕಠೋರವಾದ ಮಾತುಗಳನ್ನು ಕೇಳಿ ಉದಾರ

ಮನಸ್ಸಿನ ಶ್ರೀಕೃಷ್ಣನು ಮುಗುಳ್ನಕ್ಕು ಹೇಳಿದನು - 'ಈ ವಿಷಯ ಇದೇ ರೀತಿ ಆಗುತ್ತದೆ ಎಂದು ನನಗೆ ತಿಳಿದಿತ್ತು. ಶಾಪ ಕೊಟ್ಟು ನೀನು ಮುಂದಾಗುವುದನ್ನೇ ತಿಳಿಸಿರುವೆ. ವೃಷ್ಣಿವಂಶದ ನಾಶ ದೈವೀ ಕೋಪದಿಂದಲೇ ಉಂಟಾಗುವುದು ಎಂಬುದರಲ್ಲಿ ಸಂದೇಹವೇ ಇಲ್ಲ. ಇದರ ನಾಶವನ್ನೂ ನನ್ನ ಹೊರತು ಬೇರೆ ಯಾರೂ ಮಾಡಲಾರರು. ಮನುಷ್ಯರೇನು, ದೇವತೆಗಳು ಅಥವಾ ಅಸುರರೂ ಇದರ ಸಂಹಾರವನ್ನು ಮಾಡಲಾರರು. ಆದುದರಿಂದ ಈ ಯದುವಂಶಿಗಳು ಪರಸ್ಪರ ಕಲಹದಿಂದಲೇ ನಾಶವಾಗುವರು.'

ಯುಧಿಷ್ಠಿರನ ರಾಜ್ಯಾಭಿಷೇಕದ ನಂತರ ದೇವಿ ಗಾಂಧಾರಿಯು ಸ್ವಲ್ಪ ಸಮಯದವರೆಗೆ ಆತನ ಹತ್ತಿರವಿದ್ದು ಕೊನೆಗೆ ತನ್ನ ಪತಿಯೊಡನೆ ಕಾಡಿಗೆ ಹೊರಟು ಹೋದಳು ಮತ್ತು ಅಲ್ಲಿ ತಪಸ್ವಿಗಳ ಜೀವನ ಮಾಡಿ ತಪಸ್ವಿಗಳಂತೆಯೇ ಆಕೆಯು ತನ್ನ ಪತಿಯ ಸಂಗಡ ದಾವಾಗ್ನಿಯಿಂದ ತನ್ನ ಶರೀರವನ್ನು ಉರಿಸಿ ಪತಿಯೊಡನೆಯೇ ಕುಬೇರನ ಲೋಕಕ್ಕೆ ಹೊರಟು ಹೋದಳು. ಈ ಪ್ರಕಾರ ಪತಿ ಪರಾಯಣೆ ಗಾಂಧಾರಿಯು ಈ ಲೋಕದಲ್ಲಿ ಪತಿಸೇವೆ ಮಾಡಿ ಪರಲೋಕದಲ್ಲಿಯೂ ಪತಿಯ ಸಾನ್ನಿಧ್ಯ ಹಾಗೂ ಸೇವೆಯನ್ನು ಪಡೆದಳು. ಇದು ಪ್ರತಿಯೊಬ್ಬ ಪತಿವ್ರತೆಯ ಅಭೀಷ್ಟ ಗುರಿಯಾಗಿರುತ್ತದೆ. ಪ್ರತಿಯೊಬ್ಬ ಪತಿವ್ರತಾ ನಾರಿಯು ಗಾಂಧಾರಿಯ ಚರಿತ್ರೆಯನ್ನು ಮನನ ಮಾಡಿಕೊಂಡು ಅದರಿಂದ ಪಾಠವನ್ನು ಕಲಿತುಕೊಳ್ಳಬೇಕು.

❑❑❑

೮. ಮಹಾತ್ಮಾ ವಿದುರ

ಮಹಾತ್ಮಾ ವಿದುರನು ಸಾಕ್ಷಾತ್ ಧರ್ಮದ ಅವತಾರ. ಮಾಂಡವ್ಯ ಋಷಿಯ ಶಾಪದಿಂದ ಈತನು ಶೂದ್ರನಾಗಿ ಹುಟ್ಟಬೇಕಾಯಿತು. ಇವನು ಮಹಾರಾಜ ವಿಚಿತ್ರವೀರ್ಯನ ದಾಸಿಯ ಗರ್ಭದಿಂದ ಉದಿಸಿದ್ದನು. ಈ ಪ್ರಕಾರ ಇವನು ಧೃತರಾಷ್ಟ್ರ ಮತ್ತು ಪಾಂಡುವಿಗೆ ಒಂದು ಬಗೆಯಲ್ಲಿ ಒಡಹುಟ್ಟಿದ ಸಹೋದರನೇ ಆಗಿದ್ದನು. ಈತನು ಬಹು ಬುದ್ಧಿವಂತ, ನೀತಿಜ್ಞ, ಧರ್ಮಜ್ಞ, ವಿದ್ವಾಂಸ, ಸದಾಚಾರಿ ಮತ್ತು ಭಗವದ್ಭಕ್ತನೂ ಆಗಿದ್ದನು. ಈ ಗುಣಗಳ ಕಾರಣದಿಂದ ಜನರೆಲ್ಲರೂ ಇವನನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಇವನು ಬಹು ನಿರ್ಭೀತನೂ, ಸತ್ಯವಾದಿಯೂ ಆಗಿದ್ದನು ಹಾಗೂ ಧೃತರಾಷ್ಟ್ರ ಮುಂತಾದವರಿಗೆ ಶ್ರೇಷ್ಠವಾದ ಸಲಹೆ ನೀಡುತ್ತಿದ್ದನು. ಈತನು ಧೃತರಾಷ್ಟ್ರನಿಗೆ ಮಂತ್ರಿಯೂ ಆಗಿದ್ದನು. ದುರ್ಯೋಧನನು ಹುಟ್ಟಿದ ಕೂಡಲೇ ನರಿಯಂತೆ ಅರಚಲಾರಂಭಿಸಿದ್ದನು. ಅವನು ಹುಟ್ಟುವ ಸಮಯದಲ್ಲಿ ಅನೇಕ ಅಮಂಗಳ ಸೂಚಕ ದುಶ್ಶಕುನಗಳು ಕಾಣಿಸಿಕೊಂಡವು. ಇವೆಲ್ಲವನ್ನೂ ನೋಡಿ ವಿದುರನು ಬ್ರಾಹ್ಮಣರ ಜೊತೆಯಲ್ಲಿ ರಾಜಾ ಧೃತರಾಷ್ಟ್ರನಿಗೆ ಹೇಳಿದನು - 'ನಿಮ್ಮ ಈ ಪುತ್ರ ಕುಲನಾಶಕನಾಗುವನು, ಆದ್ದರಿಂದ ಇವನನ್ನು ತ್ಯಾಗ ಮಾಡಿಬಿಡುವುದೇ ಶ್ರೇಯಸ್ಕರ. ಇವನು ಜೀವದಿಂದಿದ್ದರೆ ನೀವು ದುಃಖವನ್ನು ಅನುಭವಿಸ ಬೇಕಾಗುವುದು. ಕುಲಕ್ಕೋಸ್ಕರ ಒಬ್ಬ ಮನುಷ್ಯನನ್ನು, ಗ್ರಾಮಕ್ಕಾಗಿ ಒಂದು ಕುಲವನ್ನು, ದೇಶಕ್ಕೋಸ್ಕರ ಒಂದು ಗ್ರಾಮವನ್ನು ಮತ್ತು ಆತ್ಮಕ್ಕೋಸ್ಕರವಾಗಿ ಇಡೀ ಪೃಥ್ವಿಯನ್ನೇ ಪರಿತ್ಯಾಗ ಮಾಡಿಬಿಡಬೇಕೆಂದು ಶಾಸ್ತ್ರಗಳ ಆಜ್ಞೆ ಇದೆ. ಆದರೆ ಧೃತರಾಷ್ಟ್ರನು ಮೋಹವಶನಾಗಿ ವಿದುರನ ಮಾತನ್ನು ಸಮ್ಮತಿಸಲಿಲ್ಲ. ಅದರ ಫಲವಾಗಿ ದುರ್ಯೋಧನನ ಕಾರಣದಿಂದ ಅವನು ಜೀವನ ಪರ್ಯಂತ ದುಃಖಪಡಬೇಕಾಯಿತು, ತಾನು

ಜೀವಿಸಿರುವಾಗ ಕುಲದ ನಾಶವನ್ನು ನೋಡಬೇಕಾಯಿತು. ಮಹಾತ್ಮರುಗಳ ಹಿತವಚನಗಳ ಕಡೆಗೆ ಗಮನ ಕೊಡದೇ ಹೋಗುವುದರಿಂದ ದುಃಖವನ್ನೇ ಅನುಭವಿಸಬೇಕಾಗುವುದು.

ದುರ್ಯೋಧನನು ಪಾಂಡವರ ಮೇಲೆ ಅನಾಚಾರ ಮಾಡಲು ತೊಡಗಿದಾಗ ಈತನ ಸಹಾನುಭೂತಿ ಸ್ವಾಭಾವಿಕವಾಗಿಯೇ ಪಾಂಡವರ ಕಡೆಗೇ ಉಂಟಾಯಿತು. ಏಕೆಂದರೆ ಮೊದಲನೆಯದಾಗಿ ಅವರು ಪಿತೃವಿಹೀನರಾಗಿದ್ದರು, ಎರಡನೆಯದಾಗಿ ಧರ್ಮಾತ್ಮರಾಗಿದ್ದರು. ಈತನು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಚೆನ್ನಾಗಿ ಅವರ ರಕ್ಷಣೆ ಮತ್ತು ಸಹಾಯ ಮಾಡುತ್ತಿದ್ದನು. ಧರ್ಮಾತ್ಮರುಗಳ ಬಗ್ಗೆ ಧರ್ಮದ ಸಹಾನುಭೂತಿ ಇರಲೇಬೇಕು. ಅದರಲ್ಲಿಯೂ ವಿದುರನು ಸಾಕ್ಷಾತ್ ಧರ್ಮದ ಅವತಾರವಾಗಿದ್ದನು.

ಪಾಂಡವರಿಗೆ ಎಷ್ಟೇ ವಿಪತ್ತುಗಳು ಬಂದೊದಗಿದರೂ, ಅಂತ್ಯದಲ್ಲಿ ವಿಜಯವು ಅವರಿಗೇ ಎಂಬುದು ಈತನಿಗೆ ಚೆನ್ನಾಗಿ ತಿಳಿದಿತ್ತು. **'ಯತೋ ಧರ್ಮಸ್ತತೋ ಜಯ:'** ಪಾಂಡವರೆಲ್ಲರೂ ದೀರ್ಘಾಯುಗಳಾಗಿದ್ದಾರೆ, ಆದುದರಿಂದ ಅವರನ್ನು ಯಾರೂ ಕೊಲ್ಲಲಾರರು - ಎಂಬುದನ್ನೂ ಇವನು ತಿಳಿದುಕೊಂಡಿದ್ದನು. ಆದ್ದರಿಂದ ದುರ್ಯೋಧನನು ಆಟವಾಡುತ್ತಾ-ಆಡುತ್ತಾ ಭೀಮಸೇನನಿಗೆ ವಿಷ ಉಣಿಸಿ ಗಂಗಾನದಿಯಲ್ಲಿ ತಳ್ಳಿಬಿಟ್ಟನು, ಅವನು ಮನೆಗೆ ಹಿಂತಿರುಗಿ ಬಾರದೇ ಇದ್ದಾಗ ತಾಯಿ ಕುಂತಿಗೆ ಚಿಂತೆಯ ಜೊತೆಗೆ ದುರ್ಯೋಧನನ ಬಗ್ಗೆ ಅನಿಷ್ಟದ ಸಂಶಯವೂ ಸಹ ಉಂಟಾದಾಗ ವಿದುರನು ಹೋಗಿ ಆಕೆಯನ್ನು ಈ ರೀತಿ ಸಮಾಧಾನಪಡಿಸಿದನು 'ಈ ಸಮಯದಲ್ಲಿ ಮೌನವಾಗಿ ಗುರಿ ಸಾಧಿಸುವುದೇ ಒಳ್ಳೆಯದು. ದುರ್ಯೋಧನನ ಬಗ್ಗೆ ಸಂದೇಹವನ್ನು ಪ್ರಕಟಪಡಿಸುವುದು ಅಪಾಯ. ಇದರಿಂದ ಅವನು ಮತ್ತಷ್ಟು ಕುಪಿತನಾಗುವನು, ಆಗ ನಿಮ್ಮ ಬೇರೇ ಮಕ್ಕಳಿಗೂ ಸಂಕಟ ಒದಗಬಹುದು. ಭೀಮಸೇನನು ಸಾಯಲಾರನು, ಅವನು ಬೇಗ ಹಿಂದಿರುಗಿ ಬರುವನು.'

ಕುಂತಿಯು ವಿದುರನ ನೀತಿಪೂರ್ಣ ಸಲಹೆಯನ್ನು ಒಪ್ಪಿಕೊಂಡಳು. ಅವನ ಮಾತು ನಿಜವಾಯಿತು. ಭೀಮಸೇನನು ಕೆಲವೇ ದಿನಗಳ ನಂತರ ನಿರೋಗಿಯಾಗಿ ಹಿಂದಿರುಗಿ ಬಂದನು.

ಅರಗಿನ ಮನೆಯಿಂದ ಪಾರಾಗಿ ಹೊರಕ್ಕೆ ಹೋಗುವ ಯುಕ್ತಿಯನ್ನೂ ಪಾಂಡವರಿಗೆ ವಿದುರನೇ ತಿಳಿಸಿದ್ದನು. ಈತನು ನೀತಿಜ್ಞನಾಗಿದ್ದು ಜೊತೆಗೆ ಅನೇಕ ಭಾಷೆಗಳನ್ನು ತಿಳಿದಿದ್ದನು. ಪಾಂಡವರೆಲ್ಲರೂ ವಾರಣಾವತಕ್ಕೆ ಹೋಗುತ್ತಿದ್ದ ಸಮಯದಲ್ಲಿ ಈತನು ಮ್ಲೇಚ್ಛ-ಭಾಷೆಯಲ್ಲಿ ಯುಧಿಷ್ಠಿರನಿಗೆ ಅವರ ಮೇಲೆ ಬಂದೊದಗುವ ವಿಪತ್ತಿನ ಸೂಚನೆಯನ್ನೂ ಕೊಟ್ಟಿದ್ದನು ಮತ್ತು ಜೊತೆಗೆ ಅದರಿಂದ ಪಾರಾಗುವ ಉಪಾಯವನ್ನೂ ತಿಳಿಸಿದ್ದನು.

ಅಷ್ಟೇ ಅಲ್ಲ, ಈತನು ಮೊದಲಿನಿಂದಲೇ ಒಬ್ಬ ಸುರಂಗ ತೋಡುವವನಿಗೆ ಅರಗಿನ ಮನೆಯಿಂದ ಹೊರಗೆ ಹೋಗುವುದಕ್ಕಾಗಿ ಸುರಂಗ ನಿರ್ಮಿಸಲು ಹೇಳಿದ್ದನು. ಅವನು ಗುಟ್ಟಾಗಿ ಭೂಮಿಯ ಒಳಗೊಳಗೇ ಕಾಡಿಗೆ ಹೋಗುವ ಒಂದು ದಾರಿ ಮಾಡಿದನು. ಅರಗಿನ ಮನೆಗೆ ಬೆಂಕಿ ಹಚ್ಚಿ ಪಾಂಡವರು ತಾಯಿ ಕುಂತಿಯೊಡನೆ ಅದೇ ದಾರಿಯಿಂದ ಸುರಕ್ಷಿತವಾಗಿ ಹೊರಕ್ಕೆ ಬಂದರು. ಗಂಗಾತೀರದಲ್ಲಿ ಇವರು ನದಿಯನ್ನು ದಾಟಿ ಹೋಗಲು ವಿದುರನು ನಾವಿಕರ ಸಂಗಡ ಒಂದು ನೌಕೆಯನ್ನು ಸಹ ಮೊದಲೇ ಸಿದ್ಧವಾಗಿ ಇಡಿಸಿದ್ದನು. ಅದರಿಂದ ಅವರೆಲ್ಲಾ ಗಂಗಾನದಿಯನ್ನು ದಾಟಿ ಹೋದರು. ಈ ಪ್ರಕಾರ ವಿದುರನು ಬುದ್ಧಿವಂತಿಕೆ ಹಾಗೂ ನೀತಿವಂತನಾಗಿ ಪಾಂಡವರ ಪ್ರಾಣವನ್ನು ಉಳಿಸಿದನು ಮತ್ತು ದುರ್ಯೋಧನಾದಿಗಳಿಗೆ ಗೊತ್ತಾಗದ ಹಾಗೆ ಗಮನವಿಟ್ಟನು. ಪಾಂಡವರು ತಮ್ಮ ತಾಯಿ ಸಹಿತ ಅರಗಿನ ಮನೆಯಲ್ಲಿ ಸುಟ್ಟು ಸತ್ತುಹೋದರೆಂದೇ ಜನ ತಿಳಿದುಕೊಂಡರು. ಯಾವಾಗಲೂ ಕೇವಲ ಶಾರೀರಿಕಬಲ ಅಥವಾ ಅಸ್ತ್ರಬಲವೇ ಉಪಯೋಗಿಯಾಗುವುದಿಲ್ಲ. ಆತ್ಮರಕ್ಷಣೆಗಾಗಿ ನೀತಿಬಲದ ಅವಶ್ಯಕತೆಯೂ ಬೇಕು. ಮಹಾತ್ಮಾ ವಿದುರನು ಧರ್ಮ ಮತ್ತು ಶಾಸ್ತ್ರಜ್ಞಾನದ ಜೊತೆಗೆ ನೀತಿಯ ಭಂಡಾರವೂ ಆಗಿದ್ದನು.

ವಿದುರನು ಪಾಂಡವರ ಬಗ್ಗೆ ಸಹಾನುಭೂತಿ, ಪ್ರೇಮವನ್ನು ಇಟ್ಟು ಕೊಂಡಿದ್ದಂತೆಯೇ ತನ್ನ ಅಣ್ಣ ರಾಜಾ ಧೃತರಾಷ್ಟ್ರ ಮತ್ತು ಆತನ ಮಕ್ಕಳ ಬಗ್ಗೆಯೂ ಸ್ನೇಹ ಆತ್ಮೀಯತೆ ಇಟ್ಟುಕೊಂಡಿದ್ದನು. ಈತನು ಅವರ ಹಿತವನ್ನು ಗಮನದಲ್ಲಿಟ್ಟುಕೊಂಡಿದ್ದನು ಮತ್ತು ಯಾವಾಗಲೂ ಒಳ್ಳೆಯ ಸಲಹೆ ಕೊಡುತ್ತಿದ್ದನು. **'ಹಿತಂ ಮನೋಹಾರಿ ಚ ದುರ್ಲಭಂ ವಚಃ'** - ಈ ಸಿದ್ಧಾಂತಕ್ಕೆ ಅನುಸಾರವಾಗಿ ಈತನ ಮಾತುಗಳು ಸತ್ಯ ಮತ್ತು ಹಿತಕಾರಿಯಾಗಿದ್ದರೂ ದುರ್ಯೋಧನಾದಿಗಳಿಗೆ ಅಪ್ರಿಯವಾಗುತ್ತಿದ್ದವು. ಆದುದರಿಂದ ದುರ್ಯೋಧನ ಮತ್ತು ಅವನ ಜೊತೆಯವರು ಯಾವಾಗಲೂ ಆತನ ಬಗ್ಗೆ ಅಸಂತುಷ್ಟ ರಾಗಿರುತ್ತಿದ್ದರು. ಆದರೆ ಆತನು ಅವರ ಅಪ್ರಸನ್ನತೆಗಾಗಿ ಕಿಂಚಿತ್ತೂ ಯೋಚಿಸದೆ ಸದಾ ಅವರಿಗೆ ಮಂಗಳವನ್ನೇ ಹಾರೈಸುತ್ತಿದ್ದನು. ಹಾಗೂ ಅವರನ್ನು ದುರ್ಮಾಗದಿಂದ ಪಾರುಮಾಡಲು ಅನವರತ ಪ್ರಯತ್ನಿಸುತ್ತಿದ್ದನು. ಧೃತರಾಷ್ಟ್ರನೂ ತನ್ನ ದುರಾತ್ಮನಾದ ಮಗನ ಪ್ರಭಾವಕ್ಕೆ ಒಳಗಾದ ಕಾರಣ ಪ್ರತಿ ಸಮಯದಲ್ಲಿಯೂ ವಿದುರನ ಮಾತು ಮತ್ತು ಅಭಿಪ್ರಾಯಗಳನ್ನು ಕಾರ್ಯಾನ್ವಿತ ಪಡಿಸಲಾಗದಿದ್ದರೂ, ಅದರಿಂದ ಕಷ್ಟವನ್ನೇ ಪಡೆಯುತ್ತಿದ್ದರೂ ಅವನಿಗೆ ಇವನ ಮೇಲೆ ಬಹಳ ನಂಬಿಕೆಯಿತ್ತು. ಅವನು ಈತನನ್ನು ಬುದ್ಧಿವಂತ, ದೂರದರ್ಶಿ ಮತ್ತು ತನ್ನ ಪರಮ ಹಿತಚಿಂತಕನೆಂದು ಭಾವಿಸುತ್ತಿದ್ದನು. ಬಹುಶಃ ಈತನ ಸಲಹೆಯನ್ನು ಪಡೆಯದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಪಾಂಡವರೊಡನೆ ವ್ಯವಹರಿಸುವ ಸಮಯದಲ್ಲಿ ಆತನು ವಿಶೇಷ ರೀತಿಯಲ್ಲಿ ಈತನ ಸಲಹೆಯನ್ನು ತೆಗೆದುಕೊಂಡೇ ಇರುತ್ತಿದ್ದನು. ಪಾಂಡವರ ಸಂಬಂಧದಲ್ಲಿ ವಿದುರನ ಸಲಹೆ ಪಕ್ಷಪಾತರಹಿತವಾಗಿದೆ ಎಂದು ಧೃತರಾಷ್ಟ್ರನಿಗೆ ಗೊತ್ತಿತ್ತು.

ಮಾವ ಶಕುನಿಯ ಸಲಹೆಯಂತೆ ದುಷ್ಟಬುದ್ಧಿಯ ದುರ್ಯೋಧನನು ಪಾಂಡವರೊಡನೆ ಜೂಜಾಡುವ ಪ್ರಸ್ತಾಪವನ್ನು ತನ್ನ ತಂದೆಯ ಮುಂದಿಟ್ಟಾಗ ಆತನು ನಿಯಮಾನುಸಾರ ವಿದುರನನ್ನು ಸಲಹೆಗಾಗಿ ಕರೆಯಿಸಿದನು. ತನ್ನ

ಮಾತನ್ನು ಒಪ್ಪದಿದ್ದರೆ ದುರ್ಯೋಧನನು ಪ್ರಾಣ ಕಳೆದುಕೊಳ್ಳುವುದಾಗಿ ಆತನಿಗೆ ಭಯ ತೋರಿಸಿದನು; ಆದರೆ ಆತನು ಅವನಿಗೆ ಸ್ಪಷ್ಟವಾಗಿ ಹೇಳಿಬಿಟ್ಟನು - 'ವಿದುರನೊಡನೆ ಆಲೋಚಿಸಿದೆ ನಾನು ನಿನಗೆ ಜೂಜಾಡಲು ಎಂದೆಂದಿಗೂ ಅನುಮತಿಯನ್ನು ಕೊಡಲಾರೆ.' ದುರ್ಯೋಧನನ ಪಾಪಯುಕ್ತ ಪ್ರಸ್ತಾಪವನ್ನು ಕೇಳಿ ವಿದುರನು ಈಗ ಕಲಿಯುಗ ಬರುತ್ತಾ ಇದೆ ಎಂದು ತಿಳಿದುಕೊಂಡನು. ಆತನು ಈ ಪ್ರಸ್ತಾಪವನ್ನು ಘೋರವಾಗಿ ವಿರೋಧಿಸಿದನು ಮತ್ತು ತನ್ನ ಅಣ್ಣನಿಗೂ ಹೀಗೆ ತಿಳಿಸಿದನು - 'ಜೂಜಾಡುವುದರಿಂದ ನಿಮ್ಮ ಮಕ್ಕಳಿಗೂ ಮತ್ತು ನಿಮ್ಮ ತಮ್ಮನ ಮಕ್ಕಳಿಗೂ ವೈರ-ವಿರೋಧವೇ ಹೆಚ್ಚಾಗುವುದು. ಅವರಿಗೆ ಯಾರಿಗೂ ಹಿತಕರವಾಗುವುದಿಲ್ಲ. ಆದುದರಿಂದ ದ್ಯೂತದ ವ್ಯವಸ್ಥೆಯನ್ನು ಮಾಡದೇ ಇರುವುದೇ ಒಳ್ಳೆಯದು. ಇದರಿಂದ ಎರಡು ಕಡೆಯವರಿಗೂ ಶ್ರೇಯಸ್ಸಾಗುವುದು.'

ಧೃತರಾಷ್ಟ್ರ ವಿದುರನನ್ನೂ ಮತ್ತು ಅವನ ಅಭಿಪ್ರಾಯವನ್ನೂ ಪ್ರಶಂಸೆ ಮಾಡುತ್ತಾ ದುರ್ಯೋಧನನಿಗೆ ಬಹಳ ತಿಳಿಯ ಹೇಳಿದನು. ಆದರೆ ಅವನು ಇದಾವುದನ್ನೂ ಒಪ್ಪಲಿಲ್ಲ. ಅವನು ಪಾಂಡವರನ್ನು ಜೂಜಿನಲ್ಲಿ ಸೋಲಿಸಿ ಅಪಮಾನಗೊಳಿಸಲು ಸಿದ್ಧನಾಗಿದ್ದನು. ಪಾಂಡವರ ಅತುಲ ವೈಭವವನ್ನು ನೋಡಿ ಅವನಿಗೆ ಸಹಿಸಲಾಗಲಿಲ್ಲ. ದುರ್ಯೋಧನನು ಯಾವ ರೀತಿಯಿಂದಲೂ ಒಪ್ಪದಿರುವುದನ್ನು ನೋಡಿ ಕೊನೆಗೆ ಧೃತರಾಷ್ಟ್ರನು ಅವನ ಪ್ರಸ್ತಾಪವನ್ನೇ ಒಪ್ಪಿ ವಿದುರನ ಮೂಲಕವೇ ಪಾಂಡವರಿಗೆ ಇಂದ್ರಪ್ರಸ್ಥದಿಂದ ಬರುವಂತೆ ಆಹ್ವಾನವನ್ನು ಕಳುಹಿಸಿದನು. ವಿದುರನಿಗೆ ಈ ವಿಚಾರ ಸರಿಯೆಂದು ಕಾಣದಿದ್ದರೂ ಅಣ್ಣನ ಆಜ್ಞೆಯನ್ನು ಉಲ್ಲಂಘಿಸುವುದು ಆತನಿಂದ ಆಗಲಿಲ್ಲ.

ಪಾಂಡವರ ಬಳಿಗೆ ಹೋಗಿ ವಿದುರನು ಅವರಿಗೆ ಎಲ್ಲವನ್ನೂ ತಿಳಿಸಿದನು. ಮಹಾರಾಜ ಯುಧಿಷ್ಠಿರನೂ ಜೂಜು ಒಳ್ಳೆಯದಲ್ಲವೆಂದು ತಿಳಿದಿದ್ದರೂ ತನ್ನ ತಂದೆಯ ಆಜ್ಞೆಯೆಂದು ಭಾವಿಸಿ ದುರ್ಯೋಧನನ ಆಹ್ವಾನವನ್ನು

ಸ್ವೀಕರಿಸಿದನು. ದ್ಯೂತದ ಸಮಯದಲ್ಲಿಯೂ ವಿದುರನು ಜೂಜಿನ ಕೆಡುಕನ್ನು ತಿಳಿಸುತ್ತಾ ರಾಜಾ ಧೃತರಾಷ್ಟ್ರನಿಗೆ ಹೇಳಿದನು - 'ನೀವು ಈಗಲಾದರೂ ಎಚ್ಚೆತ್ತುಕೊಳ್ಳಿರಿ, ದುರ್ಯೋಧನನು ಹೇಳಿದಂತೆ ಕೇಳುವುದನ್ನು ಬಿಟ್ಟು, ಬಿಡಿ ಮತ್ತು ಸರ್ವನಾಶವಾಗುವುದರಿಂದ ಕುಲವನ್ನು ಪಾರುಮಾಡಿರಿ. ಪಾಂಡವರೊಡನೆ ವಿರೋಧ ಮಾಡಿಕೊಂಡು ಅವರನ್ನು ನಿಮ್ಮ ಶತ್ರುಗಳನ್ನಾಗಿ ಮಾಡಿಕೊಳ್ಳಬೇಡಿರಿ.' ಪಾಂಡವರು ವನವಾಸಕ್ಕೆ ಹೊರಟು ಹೋದ ಮೇಲೆ ಧೃತರಾಷ್ಟ್ರನ ಮನದಲ್ಲಿ ಬಹಳ ಚಿಂತೆ ಮತ್ತು ಸಂತಾಪವಾಯಿತು. ಆತನು ವಿದುರನನ್ನು ಕರೆಯಿಸಿ ತನ್ನ ಮನದ ವ್ಯಥೆಯನ್ನು ತೋಡಿಕೊಂಡನು ಮತ್ತು 'ಈಗ ಪ್ರಜೆಗಳು ನಮ್ಮ ಬಗ್ಗೆ ಸಂತುಷ್ಟರಾಗಿರಲು ಮತ್ತು ಪಾಂಡವರೂ ಕುಪಿತರಾಗಿ ನಮಗೆ ಯಾವ ಹಾನಿಯನ್ನೂ ಮಾಡದಂತೆ ಇರಲು, ಆ ಪ್ರಕಾರದ ವ್ಯವಹಾರ ಮಾಡಬೇಕು' ಎಂಬುದನ್ನು ಆತನಿಂದ ತಿಳಿದುಕೊಳ್ಳಲಿಚ್ಛಿಸಿದನು. ವಿದುರನು ಆತನಿಗೆ ಸಮಾಧಾನಪಡಿಸಿ ಹೇಳಿದನು - 'ರಾಜಾ! ಅರ್ಥ, ಧರ್ಮ ಮತ್ತು ಕಾಮ - ಈ ಮೂರು ಫಲಗಳೂ ಧರ್ಮದಿಂದಲೇ ಪ್ರಾಪ್ತಿಯಾಗುತ್ತವೆ. ರಾಜ್ಯದ ತಳಹದಿ ಧರ್ಮ, ಆದುದರಿಂದ ನೀವು ಧರ್ಮವನ್ನು ಸ್ಥಿರವಾಗಿ ಅನುಸರಿಸಿ ಪಾಂಡವರ ಮತ್ತು ನಿಮ್ಮ ಮಕ್ಕಳ ರಕ್ಷಣೆಯನ್ನು ಮಾಡಿರಿ.

ನಿಮ್ಮ ಮಗನು ಶಕುನಿಯ ಸಲಹೆಯಂತೆ ತುಂಬಿದ ಸಭೆಯಲ್ಲಿ ಧರ್ಮವನ್ನು ತಿರಸ್ಕಾರ ಮಾಡಿದ್ದಾನೆ; ಏಕೆಂದರೆ ಸತ್ಯಸಂಧನಾದ ಯುಧಿಷ್ಠಿರನನ್ನು ಕಪಟದ್ಯೂತದಲ್ಲಿ ಸೋಲಿಸಿ ಅವನ ಸರ್ವಸ್ವವನ್ನೂ ಕಿತ್ತುಕೊಂಡಿದ್ದಾನೆ. ಇದು ದೊಡ್ಡ ಅಧರ್ಮವಾಗಿದೆ. ಇದರ ನಿವಾರಣೆಗೆ ನನ್ನ ದೃಷ್ಟಿಯಲ್ಲಿ ಒಂದೇ ಉಪಾಯವಿದೆ. ಹಾಗೆ ಮಾಡುವುದರಿಂದ ನಿಮ್ಮ ಮಗನು ಪಾಪ ಮತ್ತು ಕಳಂಕದಿಂದ ಬಿಡುಗಡೆಯಾಗಿ ಗೌರವವನ್ನು ಪಡೆಯುವನು. ಆ ಉಪಾಯವೇನೆಂದರೆ - 'ನೀವು ಪಾಂಡವರಿಂದ ಕಿತ್ತುಕೊಂಡಿರುವುದನ್ನೆಲ್ಲಾ ಅವರಿಗೆ ಹಿಂತಿರುಗಿ ಕೊಟ್ಟುಬಿಡುವುದು. ತನ್ನ ಹಕ್ಕು ಎಷ್ಟಿದೆಯೋ ಅಷ್ಟರಲ್ಲಿ

ಸಂತುಷ್ಟನಾಗಿರುವುದು ಮತ್ತು ಇತರರ ಹಕ್ಕನ್ನು ಬಯಸದೇ ಇರುವುದು ರಾಜನ ಪರಮ ಧರ್ಮವಾಗಿದೆ. ನಾನು ತಿಳಿಸಿರುವ ಉಪಾಯದಿಂದ ನಿಮ್ಮ ದೋಷ ಬಿಡುಗಡೆಯಾಗಿ ಹೋಗುವುದು, ಸಹೋದರರಲ್ಲಿ ಪರಸ್ಪರ ಕಲಹ ವುಂಟಾಗುವುದಿಲ್ಲ ಮತ್ತು ಅಧರ್ಮವೂ ಆಗುವುದಿಲ್ಲ. ನಿಮ್ಮ ಮಕ್ಕಳ ಸೌಭಾಗ್ಯ ಕಿಂಚಿತ್ತಾದರೂ ಉಳಿದುಕೊಂಡಿದ್ದರೆ ಶೀಘ್ರಾತಿ ಶೀಘ್ರವಾಗಿ ಕೆಲಸವನ್ನು ಮಾಡಿಬಿಡಬೇಕು. ನೀವೇನಾದರೂ ಮೋಹವಶರಾಗಿ ಹಾಗೆ ಮಾಡದೇ ಹೋದರೆ ಕುರುವಂಶವೆಲ್ಲಾ ನಾಶವಾಗಿ ಹೋಗುವುದು. ನಿಮ್ಮ ಮಗ ದುರ್ಯೋಧನನು ಸಂತೋಷದಿಂದ ಈ ಮಾತನ್ನು ಅನುಮೋದಿಸಿಕೊಂಡರೆ ಒಳ್ಳೆಯದು; ಇಲ್ಲವಾದರೆ ಪರಿವಾರ ಮತ್ತು ಪ್ರಜೆಗಳ ಸುಖಕ್ಕೋಸ್ಕರ ಆ ಕುಲ ಕಳಂಕಿ ಮತ್ತು ದುರಾತ್ಮನನ್ನು ಬಂಧಿಸಿ ಯುಧಿಷ್ಠಿರನನ್ನು ರಾಜ ಸಿಂಹಾಸನದ ಮೇಲೆ ಕುಳ್ಳಿರಿಸಿರಿ. ಯುಧಿಷ್ಠಿರನ ಮನಸ್ಸಿನಲ್ಲಿ ಯಾರ ಬಗ್ಗೆಯೂ ರಾಗ-ದ್ವೇಷವಿಲ್ಲ. ಆದುದರಿಂದ ಆತನೇ ಧರ್ಮದಿಂದ ಭೂಮಿಯನ್ನು ಆಳಲಿ. ದುಃಶಾಸನನು ತುಂಬಿದ ಸಭೆಯಲ್ಲಿ ಭೀಮಸೇನ ಮತ್ತು ದ್ರೌಪದಿಯಲ್ಲಿ ಕ್ಷಮೆಯನ್ನು ಕೇಳಿಕೊಳ್ಳಲಿ. ಇನ್ನೇನು ಹೇಳಲಿ, ಸಾಕು ಇಷ್ಟನ್ನು ಮಾಡುವುದರಿಂದ ನೀವು ಕೃತಕೃತ್ಯರಾಗುವಿರಿ.'

ವಿದುರನ ಈ ಸಲಹೆ ಎಷ್ಟು ಸತ್ಯ, ಹಿತಪೂರ್ಣ, ಧರ್ಮಯುಕ್ತ ಮತ್ತು ನಿರ್ಭೀತವಾಗಿತ್ತು. ಆದರೆ, ಮರಣೋನ್ಮುಖನಾದವನಿಗೆ ಔಷಧಿಯು ಪ್ರಯೋಜನಕಾರಿಯಾಗದಿರುವಂತೆ ಧೃತರಾಷ್ಟ್ರನಿಗೆ ವಿದುರನ ಈ ಸಲಹೆಯು ಇಷ್ಟವಾಗಲಿಲ್ಲ. ಅವನು ವಿದುರನ ಮೇಲೆ ಕೋಪಗೊಂಡು ಹೇಳಿದನು - 'ವಿದುರ! ಈಗ ನನಗೆ ನಿನ್ನ ಅವಶ್ಯಕತೆಯಿಲ್ಲ; ನಿನಗೆ ಇಚ್ಛೆಯಿದ್ದರೆ ಇಲ್ಲಿಯೇ ಇರು ಅಥವಾ ಹೊರಟುಹೋಗು. ನೀನು ಪದೇ-ಪದೇ ಪಾಂಡವರ ಪಕ್ಷವನ್ನೇ ವಹಿಸುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ನಾನು ಅವರಿಗೋಸ್ಕರ ನನ್ನ ಮಕ್ಕಳನ್ನು ಹೇಗೆ ಬಿಟ್ಟು ಬಿಡಲಿ?' ಈಗ ಕೌರವ-ಕುಲದ ನಾಶ ಸಂಭವಿಸುತ್ತಿದೆ

ಎಂದು ವಿದುರನಿಗೆ ಗೊತ್ತಾಯಿತು. ಆದುದರಿಂದ ಆತನು ಸುಮ್ಮನಿದ್ದು ಅಲ್ಲಿಂದ ಹೊರಟು ತಕ್ಷಣ ರಥವೇರಿ ಕಾಮ್ಯಕ ವನದಲ್ಲಿದ್ದ ಪಾಂಡವರ ಹತ್ತಿರಕ್ಕೆ ಹೋದನು. ಅಲ್ಲಿಗೆ ಹೋಗಿ ಅವನು ಪಾಂಡವರಿಗೆ ಹಸ್ತಿನಾಪುರದಿಂದ ಹೊರಟುಬಂದ ಕಾರಣವನ್ನು ತಿಳಿಸಿದನು. ಧೃತರಾಷ್ಟ್ರನಿಗೆ ವಿದುರನು ಪಾಂಡವರ ಹತ್ತಿರಕ್ಕೆ ಹೊರಟು ಹೋದನೆಂಬ ಸುದ್ದಿ ತಿಳಿದಾಗ ಬಹಳ ಪಶ್ಚಾತ್ತಾಪವಾಯಿತು.

ವಿದುರನ ಸಹಾಯ ಮತ್ತು ಸಲಹೆಯನ್ನು ಪಡೆದರೆ ಪಾಂಡವರು ಮತ್ತಷ್ಟು ಬಲಶಾಲಿಗಳಾಗುವರೆಂದು ಅವನು ಯೋಚಿಸಿದನು. ಆ ಕೂಡಲೇ ಅವನು ಸಂಜಯನನ್ನು ಕಳುಹಿಸಿ ವಿದುರನನ್ನು ಕರೆತರುವಂತೆ ಹೇಳಿದನು. ವಿದುರನು ಸಂಪೂರ್ಣವಾಗಿ ರಾಗ-ದ್ವೇಷರಹಿತನಾಗಿದ್ದನು. ಅವನ ಮನಸ್ಸಿನಲ್ಲಿ ಧೃತರಾಷ್ಟ್ರನ ಬಗ್ಗೆ ಕಿಂಚಿತ್ತೂ ಸಹ ದ್ವೇಷವಿರಲಿಲ್ಲ. ಅಣ್ಣನ ಅಪ್ಪಣೆಯಂತೆ ಯಾವ ರೀತಿ ಹಸ್ತಿನಾಪುರದಿಂದ ಹೊರಟು ಬಂದಿದ್ದನೋ, ಅದೇ ಪ್ರಕಾರ ಹಿಂತಿರುಗಿ ಹೊರಟು ಪಾಂಡವರಿಂದ ಬೀಳ್ಕೊಂಡು ಆತನ ಬಳಿಗೆ ಹೋದನು. ಅಲ್ಲಿಗೆ ಹೋಗಿ ಇವನು ಧೃತರಾಷ್ಟ್ರನಿಗೆ ಹೇಳಿದನು - 'ನನಗೆ ಪಾಂಡವರು ಮತ್ತು ನಿಮ್ಮ ಮಕ್ಕಳು ಎಲ್ಲರೂ ಒಂದೇ ಸಮ; ಆದರೂ ಪಾಂಡವರು ಅಸಹಾಯಕರೆಂದು ನನ್ನ ಮನಸ್ಸಿನಲ್ಲಿ ಸ್ವಾಭಾವಿಕವಾಗಿಯೇ ಅವರಿಗೆ ಸಹಾಯ ಮಾಡಬೇಕೆಂಬ ವಿಚಾರ ಬರುತ್ತದೆ. ನನ್ನ ಮನಸ್ಸಿನಲ್ಲಿ ನಿಮ್ಮ ಮಕ್ಕಳ ಬಗೆಗೆ ಯಾವ ದ್ವೇಷ-ಭಾವವೂ ಇಲ್ಲ.' ನಿಜವಾಗಿಯೂ ವಿಚಾರ ಹಾಗೆಯೇ ಇತ್ತು. ಧೃತರಾಷ್ಟ್ರನೂ ತನ್ನ ಅನುಚಿತ ವ್ಯವಹಾರಕ್ಕಾಗಿ ಈತನಲ್ಲಿ ಕ್ಷಮೆಯನ್ನು ಕೇಳಿಕೊಂಡನು. ವಿದುರನು ಮೊದಲಿನಂತೆಯೇ ಧೃತರಾಷ್ಟ್ರನ ಬಳಿಯಿದ್ದು ಅವನ ಸೇವೆಯಲ್ಲಿ ತೊಡಗಿದನು.

ಒಂದು ದಿವಸ ರಾತ್ರಿ ಧೃತರಾಷ್ಟ್ರನಿಗೆ ನಿದ್ರೆ ಬರಲಿಲ್ಲ, ಆಗ ಅವನು ಆ ರಾತ್ರಿಯಲ್ಲಿಯೇ ವಿದುರನನ್ನು ಕರೆಯಿಸಿ ಶಾಂತಿಯ ಉಪಾಯವನ್ನು ಕೇಳಿದನು. ಆ ಸಂದರ್ಭದಲ್ಲಿ ವಿದುರನು ಧೃತರಾಷ್ಟ್ರನಿಗೆ ಧರ್ಮ ಮತ್ತು

ನೀತಿಯ ಸುಂದರವಾದ ಉಪದೇಶವಿತ್ತನು. ಅದು "ವಿದುರನೀತಿ" ಎಂದು ಉದ್ಯೋಗ ಪರ್ವದ ೩೩ ರಿಂದ ೪೦ ರವರೆಗೆ ಎಂಟು ಅಧ್ಯಾಯಗಳಲ್ಲಿ ಸಂಗ್ರಹಿಸಲ್ಪಟ್ಟಿದೆ. ಅದು ಸ್ವತಂತ್ರವಾಗಿ ಅಧ್ಯಯನ ಮತ್ತು ಮನನ ಮಾಡಿಕೊಳ್ಳುವ ವಿಷಯವಾಗಿದೆ.

ವಿದುರನ ಭಾಷಣವನ್ನು ಕೇಳಿ ಧೃತರಾಷ್ಟ್ರನಿಗೆ ತೃಪ್ತಿಯಾಗಲಿಲ್ಲ. ಅವನು ಮತ್ತಷ್ಟು ಕೇಳಲು ಇಚ್ಛಿಸಿದನು. ವಿದುರನು ಹೇಳಿದನು - 'ಮಹಾರಾಜ! ನಾನು ಏನು ಹೇಳಬೇಕಾಗಿತ್ತೋ ಅದನ್ನು ನಿಮಗೆ ಹೇಳಿಬಿಟ್ಟಿದ್ದೇನೆ. ಈಗ ಬ್ರಹ್ಮನ ಸುತ ಸನತ್ಸುಜಾತ ಎಂಬ ಸನಾತನ ಋಷಿಗಳಿದ್ದಾರೆ. ಅವರೇ ನಿಮಗೆ ತತ್ತ್ವ ವಿಷಯವಾಗಿ ಉಪದೇಶ ಮಾಡುವರು. ತತ್ತ್ವೋಪದೇಶ ಮಾಡಲು ನನಗೆ ಅಧಿಕಾರವಿಲ್ಲ; ಏಕೆಂದರೆ ನನ್ನ ಜನ್ಮ ಶೂದ್ರರ ವಂಶದಲ್ಲಿ ಉಂಟಾಗಿದೆ. ಹೀಗೆ ಹೇಳಿ ಅವನು ಆಗಲೇ ಮಹರ್ಷಿ ಸನತ್ಸುಜಾತರನ್ನು ಸ್ಮರಿಸಿದನು. ಅವರು ಕೂಡಲೇ ಅಲ್ಲಿ ಪ್ರತ್ಯಕ್ಷರಾದರು. ಸನತ್ಸುಜಾತರು ರಾಜಾ ಧೃತರಾಷ್ಟ್ರನ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಪರಮಾತ್ಮನ ಸ್ವರೂಪ ಹಾಗೂ ಆತನ ಸಾಕ್ಷಾತ್ಕಾರದ ವಿಷಯದಲ್ಲಿ ಬಹುಸುಂದರವಾದ ವಿವೇಚನೆ ಮಾಡಿದರು. ಈ ಪ್ರಕಾರ ವಿದುರನು ತಾನೇ ಸ್ವತಃ ಧೃತರಾಷ್ಟ್ರನಿಗೆ ಧರ್ಮ ಮತ್ತು ನೀತಿಯ ವಿಚಾರಗಳನ್ನು ತಿಳಿಸಿದನು; ಸನತ್ಸುಜಾತರಂತಹ ಸಿದ್ಧಯೋಗಿ ಮತ್ತು ಪರಮ ಮಹರ್ಷಿಗಳ ಮೂಲಕ ಅವನಿಗೆ ತತ್ತ್ವದ ಉಪದೇಶ ಮಾಡಿಸಿ ಅವನ ಶ್ರೇಯಸ್ಸಿನ ಮಾರ್ಗವನ್ನು ಪ್ರಶಸ್ತಗೊಳಿಸಿದನು. ವಿದುರನ ಮೂಲಕ ಧೃತರಾಷ್ಟ್ರ ಮತ್ತು ಅವನ ಮಕ್ಕಳಿಗೋಸ್ಕರ ನಡೆಯುವ ಯತ್ನಗಳೆಲ್ಲವೂ ಅವರ ಏಳಿಗೆಗಾಗಿಯೇ ನಡೆಯುತ್ತಿದ್ದವು.

ಮಹಾತ್ಮರ ಜೀವನವೇ ಇತರರ ಶ್ರೇಯಸ್ಸಿಗಾಗಿರುತ್ತದೆ. ವಿದುರನು ತತ್ತ್ವಜ್ಞಾನಿಯಾಗಿದ್ದರೂ ಸಹ ಶೂದ್ರನಾದ ಕಾರಣ ಅವನು ಸ್ವತಃ ಉಪದೇಶ ಮಾಡದೆ ಸನಾತನ ಮರ್ಯಾದೆಯ ರಕ್ಷಣೆ ಮಾಡಿದನು ಮತ್ತು ಈ ಪ್ರಕಾರ

ಜಗತ್ತಿಗೆ ತನ್ನ ಆಚರಣೆಯ ಮೂಲಕ ಜ್ಞಾನಿಯಾದವನೂ ಸಹ ಶಾಸ್ತ್ರ ಮರ್ಯಾದೆಯ ರಕ್ಷಣೆ ಮಾಡುವುದು ಅವಶ್ಯಕವೆಂದು ಆದರ್ಶದ ಉಪದೇಶ ಕೊಟ್ಟನು. ಸನತ್ಸುಜಾತರ ಈ ಉಪದೇಶ 'ಸನತ್ಸುಜಾತೀಯ' ಎಂಬ ಹೆಸರಿನಿಂದ ಉದ್ಯೋಗಪರ್ವದ ೪೧ ರಿಂದ ೪೬ ರವರೆಗೆ ಆರು ಅಧ್ಯಾಯಗಳಲ್ಲಿ ಸಂಗ್ರಹವಾಗಿದೆ. ಪಾಠಕರು ಅದರಲ್ಲಿ ಪೂರ್ಣವಾಗಿ ನೋಡಬೇಕು.

ವಿದುರನು ಜ್ಞಾನೀ ಮತ್ತು ತತ್ತ್ವದರ್ಶಿ ಆಗಿರುವುದರ ಜೊತೆಗೆ ಅನನ್ಯ ಭಗವದ್ಭಕ್ತನೂ ಆಗಿದ್ದನು. ಇವನಿಗೆ ಶ್ರೀಕೃಷ್ಣಪರಮಾತ್ಮನ ಚರಣಗಳಲ್ಲಿ ನಿಶ್ಚಲವಾದ ಪ್ರೀತಿಯಿತ್ತು. ಶ್ರೀಕೃಷ್ಣಪರಮಾತ್ಮನೂ ಈತನನ್ನು ಬಹಳವಾಗಿ ಮೆಚ್ಚುತ್ತಿದ್ದನು. ಆತನು ಪಾಂಡವರ ಕಡೆಯಿಂದ ರಾಯಭಾರಿಯಾಗಿ ಹಸ್ತಿನಾಪುರಕ್ಕೆ ಹೋದ ಸಮಯದಲ್ಲಿ ರಾಜಾ ಧೃತರಾಷ್ಟ್ರ ಮತ್ತು ಅವನ ಸಭಾಸದರನ್ನು ಭೇಟಿ ಮಾಡಿ ನೇರವಾಗಿ ವಿದುರನ ಮನೆಗೆ ಹೋಗಿ ಆತನ ಆತಿಥ್ಯವನ್ನು ಸ್ವೀಕರಿಸಿದನು. ಅನಂತರ ಅವನು ತನ್ನ ಸೋದರತ್ತೆ ಕುಂತಿಯನ್ನು ಸಂಧಿಸಿದನು. ಇಷ್ಟೇ ಅಲ್ಲದೆ ದುರ್ಯೋಧನನ ಹತ್ತಿರಕ್ಕೆ ಹೋದ ಮೇಲೆ ಅವನು ಸಂಬಂಧಿ ಎಂಬುದಾಗಿ ಶ್ರೀಕೃಷ್ಣನನ್ನು ಭೋಜನಕ್ಕಾಗಿ ಪ್ರಾರ್ಥಿಸಿಕೊಂಡಾಗ ಆತನು ಸ್ಪಷ್ಟವಾಗಿ ತಿರಸ್ಕರಿಸಿ ಪುನಃ ವಿದುರನ ಬಳಿಗೇ ಹೊರಟು ಹೋದನು. ಭೀಷ್ಮ, ದ್ರೋಣ, ಕೃಪ, ಬಾಹ್ಲೀಕ ಮುಂತಾದ ಅನೇಕ ಸಂಭಾವಿತರು ಆತನನ್ನು ಭೇಟಿ ಮಾಡಲು ಅಲ್ಲಿಗೆ ಬಂದರು ಮತ್ತು ಅವರೆಲ್ಲರೂ ನಮ್ಮಲ್ಲಿಗೆ ಬಂದು ಆತಿಥ್ಯವನ್ನು ಸ್ವೀಕರಿಸಬೇಕೆಂದು ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡರು. ಆದರೆ ಶ್ರೀಕೃಷ್ಣನು ಅವರೆಲ್ಲರನ್ನೂ ಸಮ್ಮಾನ ಪೂರ್ವಕ ಬೀಳ್ಕೊಟ್ಟನು ಮತ್ತು ಆ ದಿವಸ ವಿದುರನ ಮನೆಯಲ್ಲಿಯೇ ಮೊದಲು ಬ್ರಾಹ್ಮಣರಿಗೆ ಭೋಜನ ಮಾಡಿಸಿ ತಾನೂ ಭೋಜನ ಮಾಡಿದನು. ವಿದುರನಿಗೆ ಶ್ರೀಕೃಷ್ಣ ಮೇಲೆ ಎಂತಹ ಅನುರಾಗವಿತ್ತೆಂಬುದನ್ನು ಈ ಘಟನೆಯಿಂದ ಸಹಜವಾಗಿಯೇ ಊಹಿಸ ಲಾಗುತ್ತದೆ.

ಶ್ರೀಕೃಷ್ಣನಾದರೋ ಗೀತೆಯಲ್ಲಿ ಹೇಳಿಯೇ ಇರುವನು.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯು ಪಹೃತಮಶ್ನಾಮಿ ಪ್ರಯತಾತ್ಮನಃ ॥

(ಗೀತಾ ೯/೨೬)

ಪ್ರೇಮವಿಲ್ಲದೆ ದೊಡ್ಡ-ದೊಡ್ಡ ಸಿದ್ಧತೆಗಳು ಮತ್ತು ರಾಜಯೋಗ್ಯ ಆಡಂಬರಗಳು ಆತನನ್ನು ಆಕರ್ಷಿಸಲಾರವು, ಆದರೆ ಪ್ರೇಮ ರಸದಲ್ಲಿ ಮುಳುಗಿದ ಸಾಮಾನ್ಯ ಭೋಜನವೇ ಆತನ ತೃಪ್ತಿಗೆ ಸಾಕಾಗುತ್ತದೆ.

ಭೋಜನದ ನಂತರ ರಾತ್ರಿಯಲ್ಲಿಯೂ ಕೂಡಾ ಶ್ರೀಕೃಷ್ಣನು ವಿದುರನ ಮನೆಯಲ್ಲಿಯೇ ತಂಗಿದನು ಮತ್ತು ಅವರು ಮಾತನಾಡುತ್ತಾ ಇಡೀ ರಾತ್ರಿಯನ್ನು ಕಳೆದರು. ಪ್ರಾತಃಕಾಲ ನಿತ್ಯಕರ್ಮಗಳಿಂದ ನಿವೃತ್ತನಾಗಿ ಶ್ರೀಕೃಷ್ಣನು ಕೌರವರ ಸಭೆಗೆ ಹೋದನು. ಅಲ್ಲಿ ದುರ್ಯೋಧನನು ಶ್ರೀಕೃಷ್ಣನನ್ನು ಹಿಡಿದು ಬಂಧಿಸುವ ದುಃಸಾಹಸ ಪೂರ್ಣ ಯೋಚನೆ ಮಾಡಿದಾಗ ವಿದುರನು ಶ್ರೀಕೃಷ್ಣನ ಬಲ ಮತ್ತು ಮಹಿಮೆಯ ವರ್ಣನೆ ಮಾಡುತ್ತಾ ಅವನಿಗೆ ಹೀಗೆ ತಿಳಿಸಿದನು - 'ಈತನು ಸಾಕ್ಷಾತ್ ಸರ್ವತಂತ್ರ ಸ್ವತಂತ್ರ ಈಶ್ವರ. ಈತನನ್ನು ತಿರಸ್ಕಾರ ಮಾಡುವ ಸಾಹಸ ಮಾಡಿದರೆ ಅಗ್ನಿಯಲ್ಲಿ ಬಿದ್ದು ಪತಂಗವು ನಾಶವಾಗುವಂತೆ ನೀನು ನಿರ್ನಾಮವಾಗಿ ಹೋಗುವೆ.' ಅನಂತರ ಶ್ರೀಕೃಷ್ಣಪರಮಾತ್ಮನು ತನ್ನ ವಿಶ್ವರೂಪವನ್ನು ಪ್ರಕಟಿಸಿದನು. ಆಗ ಜನರೆಲ್ಲಾ ಭಯಗೊಂಡು ತಮ್ಮ-ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಕೇವಲ ದ್ರೋಣಾಚಾರ್ಯ, ಭೀಷ್ಮ, ವಿದುರ, ಸಂಜಯ ಮತ್ತು ನೆರೆದಿದ್ದ ಋಷಿಗಳು ಇವರಿಗೆ ಮಾತ್ರ ಆತನ ದರ್ಶನ ಮಾಡಲು ಸಾಧ್ಯವಾಯಿತು, ಏಕೆಂದರೆ ಭಗವಂತನು ಇವರೆಲ್ಲರಿಗೂ ದಿವ್ಯ ದೃಷ್ಟಿಯನ್ನು ಕೊಟ್ಟಿದ್ದನು. ಸ್ವಲ್ಪ ಹೊತ್ತಿನ ನಂತರ ತನ್ನ ಈ ಲೀಲೆಯನ್ನು ಉಪಸಂಹಾರ ಮಾಡಿ ಶ್ರೀಕೃಷ್ಣಪರಮಾತ್ಮನು ಹಿಂದಿರುಗಿ ಪಾಂಡವರ ಕಡೆಗೇ ಹೊರಟನು. ವಿದುರನೂ ಎಲ್ಲರೊಡನೆ ಸ್ವಲ್ಪ ದೂರದವರೆಗೆ

ಆತನನ್ನು ಕಳುಹಿಸಿಕೊಡಲು ಹೋದನು ಮತ್ತು ಆತನಿಂದ ಬೀಳ್ಕೊಂಡು ಹಿಂದಿರುಗಿ ಬಂದನು.

ಶ್ರೀಕೃಷ್ಣನ ಸಂಧಾನವು ಮುರಿದು ಹೋದಾಗ ಎರಡು ಪಕ್ಷಗಳಿಂದಲೂ ಯುದ್ಧದ ಸಿದ್ಧತೆಗಳು ನಡೆಯಲಾರಂಭಿಸಿದವು. ಹದಿನೆಂಟು ಅಕ್ಷೌಹಿಣಿ ಸೈನ್ಯ ಸಮೇತ ಎರಡು ದಳಗಳೂ ಕುರುಕ್ಷೇತ್ರದ ರಣರಂಗದಲ್ಲಿ ಸಮಾವೇಶಗೊಂಡವು. ಹದಿನೆಂಟು ದಿವಸಗಳಲ್ಲಿ ಹದಿನೆಂಟು ಅಕ್ಷೌಹಿಣಿ ಸೇನೆಯು ಹುಲ್ಲಿನಂತೆ ಕತ್ತರಿಸಿ ಬಿತ್ತು. ರಾಜಾ ಧೃತರಾಷ್ಟ್ರನು ತನ್ನ ನೂರಕ್ಕೆ ನೂರೂ ಮಂದಿ ಮಕ್ಕಳು ಹಾಗೂ ಮೊಮ್ಮಕ್ಕಳೂ ವಿನಾಶವಾದುದರಿಂದ ಬಹು ದುಃಖಿಯಾದನು. ಆಗ ವಿದುರನು ಮೃತ್ಯುವಿನ ಅನಿವಾರ್ಯತೆಯನ್ನು ನಿರೂಪಿಸುತ್ತಾ ಹೇಳಿದನು - 'ಯುದ್ಧದಲ್ಲಿ ಮರಣಹೊಂದುವವರಿಗೆ ಅತ್ಯಂತ ಉತ್ತಮಗತಿಯುಂಟಾಗುತ್ತದೆ, ಆದುದರಿಂದ ಅವರಿಗಾಗಿ ಶೋಕಪಡಬಾರದು.' ಆತನು ಇದನ್ನೂ ಕೂಡ ತಿಳಿಸಿದನು - 'ಜೀವನು ಎಷ್ಟು ಬಾರಿ ಜನ್ಮ ತಾಳುತ್ತಾನೆಯೋ ಅಷ್ಟೇ ಸಾರಿ ಅವನು ಬೇರೆ-ಬೇರೆ ವ್ಯಕ್ತಿಗಳೊಡನೆ ಸಂಬಂಧವನ್ನು ಪಡೆಯುತ್ತಾನೆ ಮತ್ತು ಮೃತ್ಯುವಿನ ನಂತರ ಆ ಎಲ್ಲಾ ಸಂಬಂಧಗಳೂ ಸ್ವಪ್ನದಂತೆ ವಿಲೀನವಾಗಿ ಹೋಗುತ್ತವೆ. ಆದ್ದರಿಂದಲೂ ಮೃತಪಟ್ಟ ಸಂಬಂಧಿಗಳಿಗಾಗಿ ದುಃಖಪಡುವುದು ಬುದ್ಧಿವಂತಿಕೆಯಲ್ಲ. ಸುಖ-ದುಃಖಗಳೊಡನೆ ಸಂಬಂಧವುಳ್ಳ ಸಂಯೋಗ-ವಿಯೋಗ ಮುಂತಾದ ಘಟನೆಗಳೆಲ್ಲವೂ ತನ್ನಿಂದಲೇ ಮಾಡಲ್ಪಟ್ಟ ಶುಭಾಶುಭ ಕರ್ಮಗಳ ಫಲರೂಪದಲ್ಲಿ ದೊರೆಯುತ್ತವೆ ಮತ್ತು ಕರ್ಮಫಲವನ್ನು ಎಲ್ಲಾ ಜೀವಿಗಳೂ ಅನುಭವಿಸಲೇಬೇಕಾಗುತ್ತದೆ.' ಅನಂತರ ವಿದುರನು ಜಗತ್ತಿನ ಅಶಾಶ್ವತೆ, ನಿಃಸಾರತೆ, ಪರಿವರ್ತನಶೀಲತೆ, ಜನ್ಮ ಮೃತ್ಯುವಿನ ಕ್ಲೇಶ, ಜೀವಿಯ ಅವಿವೇಕ, ಮೃತ್ಯುವಿನ ದೃಷ್ಟಿಯಲ್ಲಿ ಎಲ್ಲರ ಸಮಾನತೆ ಹಾಗೂ ಧರ್ಮದ ಆಚರಣೆಯ ಮಹತ್ತ್ವಗಳನ್ನು ತಿಳಿಸುತ್ತಾ ಪ್ರಾಪಂಚಿಕ ದುಃಖಗಳಿಂದ ಬಿಡುಗಡೆ ಹೊಂದುವ ಉಪಾಯಗಳ ದಿಗ್ದರ್ಶನ ಮಾಡಿಸಿದನು.

ಯುಧಿಷ್ಠಿರನ ರಾಜ್ಯಾಭಿಷೇಕವಾದ ನಂತರ ಧೃತರಾಷ್ಟ್ರನು ಪಾಂಡವರ ಹತ್ತಿರ ಇರುವಾಗ ವಿದುರನೂ ಆತನ ಸಮೀಪದಲ್ಲಿಯೇ ಇದ್ದು ಆತನಲ್ಲಿ ಧರ್ಮದ ಸಂಭಾಷಣೆ ಮಾಡುತ್ತಿದ್ದನು. ಅಲ್ಲಿಂದ ಧೃತರಾಷ್ಟ್ರ ಮತ್ತು ಗಾಂಧಾರಿ ವಾನಪ್ರಸ್ಥಾಶ್ರಮಕ್ಕೆ ಹೊರಟಾಗ ಈತನೂ ಅವರೊಡನೆ ಹೋದನು. ಅಲ್ಲಿ ವಿದುರನು ಘೋರ ತಪಸ್ಸಿನ ವ್ರತವನ್ನು ಕೈಗೊಂಡನು. ಆತನು ನಿರಾಹಾರಿಯಾಗಿ ನಿರ್ಜನ ವನದಲ್ಲಿ ಏಕಾಂತವಾಸ ಪ್ರಾರಂಭಿಸಿದನು. ಶೂನ್ಯ ವನದಲ್ಲಿ ಆಗಾಗ್ಗೆ ಜನಗಳ ದರ್ಶನವಾಗುತ್ತಿತ್ತು. ಕೆಲವು ದಿನಗಳ ನಂತರ ಮಹಾರಾಜಾ ಯುಧಿಷ್ಠಿರನು ತನ್ನ ಸಮಸ್ತ ಪರಿವಾರ ಮತ್ತು ಸೇನೆಯೊಡನೆ ತನ್ನ ದೊಡ್ಡಪ್ಪ-ದೊಡ್ಡಮ್ಮ ಹಾಗೂ ತಾಯಿ ಕುಂತಿಯನ್ನು ಭೇಟಿ ಮಾಡಲು ಕಾಡಿಗೆ ಬಂದನು. ಆಗ ಅಲ್ಲಿ ವಿದುರನನ್ನು ಕಾಣದೆ ಆತನ ಬಗೆಗೆ ರಾಜಾ ಧೃತರಾಷ್ಟ್ರನನ್ನು ಕೇಳುತ್ತಿದ್ದನು, ಅಷ್ಟರಲ್ಲಿ ಆತನಿಗೆ ವಿದುರನು ದೂರದಲ್ಲಿ ಕಂಡುಬಂದನು. ಆತನು ತಲೆಯ ಮೇಲೆ ಜಟೆಯನ್ನು ಧರಿಸಿಕೊಂಡಿದ್ದನು, ದಿಗಂಬರನಾಗಿದ್ದನು ಬಾಯಿಯಲ್ಲಿ ಕಲ್ಲನ್ನು ಇಟ್ಟುಕೊಂಡಿದ್ದನು ಮತ್ತು ಧೂಳು ಕೊಳೆಗಳಿಂದ ಕೂಡಿದ ದುರ್ಬಲ ಅವನ ಶರೀರದಲ್ಲಿ ನರಗಳು ಉಬ್ಬಿ ಬಂದಿದ್ದವು. ಆತನು ಆಶ್ರಮದ ಕಡೆಗೆ ನೋಡಿ ಹಿಂದಿರುಗಿ ಹೋಗುತ್ತಿದ್ದನು.

ಯುಧಿಷ್ಠಿರನು ಆತನನ್ನು ಭೇಟಿ ಮಾಡುವುದಕ್ಕಾಗಿ ಆತನ - ಹಿಂದೆ ಓಡುತ್ತಾ ಗಟ್ಟಿಯಾಗಿ ತನ್ನ ಹೆಸರನ್ನು ಹೇಳಿ ಆತನನ್ನು ಕೂಗಲಾರಂಭಿಸಿದನು. ಘೋರವಾದ ಕಾಡಿನತ್ತ ಹೋಗಿ ವಿದುರನು ಒಂದು ಮರದ ಸಹಾಯ ಪಡೆದು ಸ್ಥಿರವಾಗಿ ನಿಂತುಕೊಂಡನು. ರಾಜಾ ಯುಧಿಷ್ಠಿರನು ಕಂಡುದೇನು - ವಿದುರನ ಶರೀರ ಕೇವಲ ಅಸ್ಥಿಪಂಜರವಾಗಿ ಹೋಗಿತ್ತು. ಆತನನ್ನು ಗುರುತು ಹಿಡಿಯುವುದು ಬಹಳ ಕಷ್ಟವಾಗುವಂತಿತ್ತು. ಯುಧಿಷ್ಠಿರನು ಆತನ ಮುಂದೆ ಹೋಗಿ ನಿಂತು ಆತನ ಪೂಜೆ ಮಾಡಿದನು. ವಿದುರನು ಸಮಾಧಿಸ್ಥನಾಗಿ ನೆಟ್ಟ-ನೋಟದಿಂದ ಯುಧಿಷ್ಠಿರನನ್ನೇ ನೋಡುತ್ತಿದ್ದನು. ತದನಂತರ ಆತನು

ಯೋಗಬಲದಿಂದ ತನ್ನ ಅಂಗಗಳನ್ನು ಯುಧಿಷ್ಠಿರನ ಅಂಗಗಳಲ್ಲಿ, ಇಂದ್ರಿಯಗಳನ್ನು ಆತನ ಇಂದ್ರಿಯಗಳಲ್ಲಿ ಹಾಗೂ ಪ್ರಾಣವನ್ನು ಪ್ರಾಣದಲ್ಲಿಯೂ ಸೇರಿಸಿ ಆತನ ಶರೀರದಲ್ಲಿ ಪ್ರವೇಶ ಮಾಡಿಬಿಟ್ಟನು. ಆತನ ಶರೀರ ನಿರ್ಜೀವವಾಗಿ ಯಥಾ ಪ್ರಕಾರ ಮರದ ಸಹಾಯದಿಂದ ನಿಂತುಕೊಂಡಿದ್ದಿತು. ಈ ಪ್ರಕಾರ ಸಾಕ್ಷಾತ್ ಧರ್ಮದ ಅವತಾರವಾದ ಮಹಾತ್ಮಾ ವಿದುರನು ಧರ್ಮಮಯ ಜೀವನವನ್ನು ನಡೆಯಿಸಿ ಅಂತ್ಯದಲ್ಲಿ ಧರ್ಮಮೂರ್ತಿ ಮಹಾರಾಜ ಯುಧಿಷ್ಠಿರನ ಶರೀರವನ್ನೇ ಪ್ರವೇಶಿಸಿಬಿಟ್ಟನು.

❑❑❑

೯. ಮಂತ್ರಿಶ್ರೇಷ್ಠ ಸಂಜಯ

ಸಂಜಯನು ಮಹಾರಾಜ ಧೃತರಾಷ್ಟ್ರನ ಮಂತ್ರಿಯಾಗಿದ್ದನು. ಈತ ಜಾತಿಯಲ್ಲಿ ಸೂತ. ಇವನು ದೊಡ್ಡ ಸ್ವಾಮಿಭಕ್ತ, ಬುದ್ಧಿವಂತ, ನೀತಿಜ್ಞ ಮತ್ತು ಧರ್ಮಜ್ಞನೂ ಆಗಿದ್ದನು. ಈತ ಸತ್ಯಸಂಧನೂ, ನಿರ್ಭೀತನೂ ಆಗಿದ್ದ. ಇವನು ಧೃತರಾಷ್ಟ್ರನಿಗೆ ಬಹು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದನು. ಆತನ ಹಿತದ ದೃಷ್ಟಿಯಿಂದ ಆಗಾಗ್ಗೆ ಕಠಿಣವಾದ ಮಾತುಗಳನ್ನೂ ಹೇಳುತ್ತಿದ್ದನು. ಈತನು ಅಂತ್ಯದವರೆಗೂ ಧೃತರಾಷ್ಟ್ರನ ಜೊತೆಯಲ್ಲೇ ಇದ್ದನು. ಇವನು ಮಹರ್ಷಿ ವೇದವ್ಯಾಸರ ಕೃಪೆಗೆ ಪಾತ್ರನಾಗಿದ್ದು ಅರ್ಜುನ ಹಾಗೂ ಶ್ರೀಕೃಷ್ಣಪರಮಾತ್ಮನ ಪ್ರೇಮಿಯಾಗಿದ್ದನು.

ಸಂಜಯನು ದುರ್ಯೋಧನನ ಅತ್ಯಾಚಾರಗಳನ್ನು ಬಹಳ ಬಿರುಸಿನಿಂದ ವಿರೋಧಿಸುತ್ತಿದ್ದನು ಮತ್ತು ಅವುಗಳನ್ನು ಸಮರ್ಥಿಸಿದರೆ ಧೃತರಾಷ್ಟ್ರನನ್ನೂ ಗದರಿಬಿಡುತ್ತಿದ್ದನು. ಪಾಂಡವರು ಎರಡನೇ ಸಲ ದ್ಯೂತದಲ್ಲಿ ಸೋತು ವನವಾಸ ಮಾಡುತ್ತಿದ್ದ ಸಮಯದಲ್ಲಿ ಈತನು ಪಾಂಡವರೊಡನೆ ದುರ್ಯೋಧನನ ಅನುಚಿತ ವರ್ತನೆಯನ್ನು ಬಹು ತೀವ್ರವಾಗಿ ಆಲೋಚಿಸುತ್ತಾ ರಾಜಾ ಧೃತರಾಷ್ಟ್ರನಿಗೆ ಹೇಳಿದನು - 'ಮಹಾರಾಜಾ! ನಿಮ್ಮ ಕುಲವೂ ನಾಶವಾಗುವುದು, ಶಾಂತಿಪ್ರಿಯ ಪ್ರಜೆಗಳೂ ಸಹ ಉಳಿಯಲಾರರು. ಭೀಷ್ಮಪಿತಾಮಹ, ದ್ರೋಣಾಚಾರ್ಯ ಮತ್ತು ವಿದುರ ಇವರೆಲ್ಲರೂ ನಿಮ್ಮ ಮಗನನ್ನು ಬಹಳವಾಗಿ ತಡೆದರೂ ಆ ನಿರ್ಲಜ್ಜನು ಪಾಂಡವರ ಪ್ರಿಯ ಪತ್ನೀ ಧರ್ಮಪರಾಯಣಳಾದ ದ್ರೌಪದಿಯನ್ನು ಸಭೆಗೆ ಕರೆದು ಅಪಮಾನಗೊಳಿಸಿದನು.

ವಿನಾಶಕಾಲ ಸಮೀಪಕ್ಕೆ ಬಂದಾಗ ಬುದ್ಧಿ ಮಲಿನವಾಗಿ ಬಿಡುತ್ತದೆ. ಅನ್ಯಾಯವೂ ನ್ಯಾಯದಂತೆ ಕಾಣುತ್ತದೆ. ನಿಮ್ಮ ಮಗನು - ಅಯೋನಿಜೆ,

ಪತಿಪರಾಯಣೆ, ಅಗ್ನಿವೇದಿಯಿಂದ ಉತ್ಪನ್ನಳಾದ ಸುಂದರಿ ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಅಪಮಾನಗೊಳಿಸಿ ಭಯಂಕರ ಯುದ್ಧಕ್ಕೆ ಕರೆಕೊಟ್ಟಿದ್ದಾನೆ. ಇಂತಹ ನಿಂದನೀಯ ಕೆಲಸವನ್ನು ದುಷ್ಟ ದುರ್ಯೋಧನನ ಹೊರತು ಬೇರೆ ಯಾರೂ ಮಾಡಲಾರನು. ಯಾವ ಮಂತ್ರಿಯು ರಾಜನ ಮುಂದೆ ಯುವರಾಜನ ಬಗ್ಗೆ ಇಷ್ಟು ಹೆಚ್ಚಾಗಿ ಅತ್ಯಂತ ನಿರ್ಭಯವಾಗಿ ಆದರೆ ಸತ್ಯವಾದ ಮಾತನ್ನು ಹೇಳಬಲ್ಲನು? ಶಾಸ್ತ್ರದಲ್ಲಿಯೂ ಹೇಳಲ್ಪಟ್ಟಿದೆ - **'ಅಪ್ರಿಯಸ್ಯ ಚ ಪಥ್ಯಸ್ಯ ಶ್ರೋತಾ ವಕ್ತಾ ಚ ದುರ್ಲಭಃ'** ಧೃತರಾಷ್ಟ್ರನು ಸಂಜಯನ ಮಾತನ್ನು ಅನುಮೋದಿಸುತ್ತಾ ತನ್ನ ದೌರ್ಬಲ್ಯವನ್ನು ಒಪ್ಪಿಕೊಂಡನು. ಆ ಕಾರಣದಿಂದ ಆತನಿಂದ ದುರ್ಯೋಧನನ ಅತ್ಯಾಚಾರವನ್ನು ತಡೆಗಟ್ಟಲಾಗಲಿಲ್ಲ.

ಸಂಜಯನು ಸಾಮ-ನೀತಿಯ ಪಕ್ಷಪಾತಿಯಾಗಿದ್ದನು. ಈತನು ಯುದ್ಧವನ್ನು ತಡೆಯಲು ಬಹಳ ಪ್ರಯತ್ನಪಟ್ಟನು ಮತ್ತು ಎರಡು ಪಕ್ಷದವರಿಗೂ ಯುದ್ಧದಿಂದಾಗುವ ಅನಾಹುತಗಳನ್ನು ತಿಳಿಸಿ, ಪರಸ್ಪರ ಕಲಹದ ದುಷ್ಪರಿಣಾಮದ ಕಡೆಗೆ ಅವರ ಗಮನ ಸೆಳೆಯುತ್ತಾ ಬಹುವಾಗಿ ತಿಳಿಸಿದನು. ಪಾಂಡವರೇನೋ ಇವನ ಮಾತನ್ನು ಒಪ್ಪಿಕೊಂಡರು, ಆದರೆ ದುರ್ಯೋಧನನು ಈತನ ಸಂಧಿಯ ಪ್ರಸ್ತಾಪವನ್ನು ತಿರಸ್ಕಾರದಿಂದ ತಳ್ಳಿಹಾಕಿದನು. ಅದರಿಂದ ಯುದ್ಧವು ಅನಿವಾರ್ಯವಾಯಿತು. ದೈವ-ನಿಯಾಮಕವೂ ಹಾಗೆಯೇ ಇದ್ದಿತು. ಕೌರವರ ಪಕ್ಷದಲ್ಲಿ ಭೀಷ್ಮ, ದ್ರೋಣ, ವಿದುರ ಮತ್ತು ಸಂಜಯ ಇವರ ಅಭಿಪ್ರಾಯ ಬಹುಶಃ ಒಂದೇ ಆಗಿರುತ್ತಿತ್ತು. ಏಕೆಂದರೆ ಈ ನಾಲ್ವರೂ ಧರ್ಮದ ಪಕ್ಷಪಾತಿಗಳಾಗಿದ್ದರು, ಹೃತ್ಪೂರ್ವಕವಾಗಿ ಪಾಂಡವರ ಬಗ್ಗೆ ಸಹಾನುಭೂತಿಯನ್ನಿಟ್ಟುಕೊಂಡಿದ್ದರು. ಈ ನಾಲ್ವರೂ ರಾಜಾ ಧೃತರಾಷ್ಟ್ರ ಮತ್ತು ಅವನ ಮಕ್ಕಳ ಅಪ್ರಸನ್ನತೆಯ ಬಗ್ಗೆ ಕಿಂಚಿತ್ತೂ ಗಮನ ಕೊಡದೆ ಅವರಿಗೆ ನಿಜವಾದ ಮಾತನ್ನು ಹೇಳಲು ಎಂದಿಗೂ ಅಂಜಿಕೆಪಟ್ಟುಕೊಳ್ಳುತ್ತಿರಲಿಲ್ಲ ಮತ್ತು ಸತ್ಯದ ನುಡಿ ಬಹುಶಃ ಅಪ್ರಿಯವಾಗಿರುತ್ತದೆ.

ಧೃತರಾಷ್ಟ್ರನು ತನ್ನ ಕಡೆಯಿಂದ ಪಾಂಡವರೊಡನೆ ಮಾತುಕತೆ ನಡೆಸಲು ಉಪಪ್ಲಾವ್ಯಕ್ಕೆ ಸಂಜಯನನ್ನು ಕಳುಹಿಸಿದಾಗ, ಸಂಜಯನು ಪಾಂಡವರ ಪ್ರಶಂಸೆ ಮಾಡುತ್ತಾ ಅವರಿಗೆ ಯುದ್ಧದಿಂದ ವಿರಕ್ತರಾಗಿರಲು ಸಲಹೆ ಕೊಟ್ಟನು. ಯುದ್ಧದಿಂದ ಅರ್ಥ ಮತ್ತು ಧರ್ಮ ಕಿಂಚಿತ್ತಾಗಿಯೂ ಕೈಗೂಡುವುದಿಲ್ಲ. ಸಂಧಿಯೇ ಶಾಂತಿಯ ಸರ್ವೋತ್ತಮ ಉಪಾಯ ಮತ್ತು ರಾಜಾ ಧೃತರಾಷ್ಟ್ರನೂ ಕೂಡ ಶಾಂತಿಯನ್ನೇ ಬಯಸುತ್ತಾನೆ, ಯುದ್ಧವನ್ನಲ್ಲ; ಎಂದು ಎಲ್ಲವನ್ನೂ ತಿಳಿಸಿದನು. ಶ್ರೀಕೃಷ್ಣ ಮತ್ತು ಅರ್ಜುನರ ವಿಶೇಷ ಕೃಪಾಪಾತ್ರನಾದ ಸಂಬಂಧದಿಂದ ಇವರು ನನ್ನ ಮಾತನ್ನು ಎಂದಿಗೂ ತಿರಸ್ಕರಿಸಲಾರರೆಂಬ ಪೂರ್ಣನಂಬಿಕೆ ಈತನಿಗಿದ್ದಿತು. ಅರ್ಜುನನ ಸಂಬಂಧದಲ್ಲಿ ಈತನು ಇಷ್ಟೆಲ್ಲಾ ಹೇಳಿಬಿಟ್ಟನು - 'ಅರ್ಜುನನು ನಾನು ಕೇಳಿಕೊಂಡಿದ್ದೇ ಆದರೆ ತನ್ನ ಪ್ರಾಣವನ್ನಾದರೂ ಕೊಟ್ಟುಬಿಡಬಲ್ಲ.' ಇದರಿಂದ ಸಂಜಯನು ಅರ್ಜುನ ಮತ್ತು ಶ್ರೀಕೃಷ್ಣರಿಗೆ ಅನನ್ಯ ಪ್ರೇಮಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಯುಧಿಷ್ಠಿರನು ಬಹು ಪ್ರೇಮದಿಂದ ಸಂಜಯನ ಮಾತುಗಳನ್ನು ಸಮರ್ಥಿಸಿದನು. ಆದರೆ ಆತನು ಸಂಧಿಗೆ ಅವರಿಗೆ ಇಂದ್ರಪ್ರಸ್ಥದ ರಾಜ್ಯವನ್ನು ಹಿಂದಿರುಗಿಸಿಕೊಡಬೇಕೆಂಬ ಶರತ್ತನ್ನಿಟ್ಟನು. ಶ್ರೀಕೃಷ್ಣ ಪರಮಾತ್ಮನೂ ಧರ್ಮರಾಜನನ್ನು ಸಮರ್ಥಿಸಿದನು. ಸಂಜಯನು ಯುಧಿಷ್ಠಿರನ ಸಂದೇಶವನ್ನು ಹೊತ್ತು ಹಿಂದಕ್ಕೆ ಹಸ್ತಿನಾಪುರಕ್ಕೆ ಬಂದನು. ಧೃತರಾಷ್ಟ್ರನ ಬಳಿಗೆ ಹೋಗಿ ಮೊದಲು ಆತನು ಏಕಾಂತವಾಗಿ ಕಂಡು ಅವನನ್ನು ಚೆನ್ನಾಗಿ ಗದರಿಸಿದನು ಮತ್ತು ಅನಂತರ ಎಲ್ಲರ ಮುಂದೆ ಪಾಂಡವರ ಧರ್ಮಯುಕ್ತ ಸಂದೇಶವನ್ನು ತಿಳಿಸಿ ಅವರ ಯುದ್ಧದ ಸಿದ್ಧತೆ ಹಾಗೂ ಪಾಂಡವರ ಪಕ್ಷದ ವೀರರ ಬಲವನ್ನು ವಿಶದವಾಗಿ ವರ್ಣನೆ ಮಾಡಿದನು. ಜೊತೆಗೆ ಈತನು ಅರ್ಜುನ ಮತ್ತು ಶ್ರೀಕೃಷ್ಣರ ಅಭಿನ್ನತೆಯನ್ನು ಸ್ಪಷ್ಟಪಡಿಸುತ್ತಾ ಅವನು ಇಬ್ಬರೂ ಪರಸ್ಪರ ಹೇಗೆ ಮಿಳಿತವಾಗಿದ್ದಾರೆಂಬುದನ್ನು ತಿಳಿಸಿದನು. ಅವನು ಹೇಳಿದನು - 'ನಾನು ಶ್ರೀಕೃಷ್ಣ ಮತ್ತು ಅರ್ಜುನರನ್ನು

ನೋಡಲು ಹೋದಾಗ ಅವರಿಬ್ಬರೂ ಅಂತಃಪುರದಲ್ಲಿದ್ದರು. ಅವರಿದ್ದ ಕೊಠಡಿಗೆ ಅಭಿಮನ್ಯು ಮತ್ತು ನಕುಲ-ಸಹದೇವರಿಗೂ ಕೂಡ ಪ್ರವೇಶವಿರಲಿಲ್ಲ. ಅಲ್ಲಿಗೆ ಹೋದಾಗ ನಾನು ಕಂಡುದೇನು - ಶ್ರೀಕೃಷ್ಣನು ತನ್ನ ಎರಡು ಪಾದಗಳನ್ನು ಅರ್ಜುನನ ತೊಡೆಯ ಮೇಲೆ ಇಟ್ಟುಕೊಂಡಿದ್ದಾನೆ, ಅರ್ಜುನನ ಕಾಲು ದ್ರೌಪದಿಯ ಮತ್ತು ಸತ್ಯಭಾಮೆಯ ತೊಡೆಯಮೇಲಿವೆ.' ಸಂಜಯ ಈ ವರ್ಣನೆಯಿಂದ ಶ್ರೀಕೃಷ್ಣ ಮತ್ತು ಅರ್ಜುನರ ಅಭಿನ್ನತೆಯೇನೋ ಸ್ಪಷ್ಟವಾಗುತ್ತದೆ, ಜೊತೆಗೆ ಸಂಜಯನು ಶ್ರೀಕೃಷ್ಣ ಮತ್ತು ಅರ್ಜುನರ ಅನನ್ಯ ಪ್ರೇಮಿಯಾಗಿದ್ದನೆಂಬುದೂ ಸಹ ಪ್ರಾಮಾಣಿತವಾಗುತ್ತದೆ. ಅಭಿಮನ್ಯು ಮತ್ತು ನಕುಲ-ಸಹದೇವ ಇವರಿಗೂ ಪ್ರವೇಶವಿಲ್ಲದ ಸ್ಥಳಕ್ಕೆ ಮತ್ತು ಶ್ರೀಕೃಷ್ಣ ಹಾಗೂ ಅರ್ಜುನ ತಮ್ಮ ಪಟ್ಟದರಾಣಿಯರೊಡನೆ ಏಕಾಂತದಲ್ಲಿ ಯಾವ ಸಂಕೋಚಭಾವವೂ ಇಲ್ಲದೆ ಕುಳಿತಿರುವಲ್ಲಿಗೆ ಸಂಜಯ ಅಡೆತಡೆಯಿಲ್ಲದೆ ಹೊರಟು ಹೋಗುವುದು, ಅವರುಗಳ ಏಕಾಂತಗೋಷ್ಠಿಯಲ್ಲಿ ಸೇರಿಕೊಳ್ಳುವುದು, ಇದೆಲ್ಲಾ ಇವನಿಗೂ ಶ್ರೀಕೃಷ್ಣ ಮತ್ತು ಅರ್ಜುನರೊಡನೆ ಯಾವ ಮುಚ್ಚು ಮರೆಯಿಲ್ಲದ ವ್ಯವಹಾರವಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಸಂಜಯನು ಭಗವಂತನ ಪ್ರೇಮಿಯಾಗಿದ್ದನು, ಈತನಿಗೆ ಭಗವಂತನ ಸ್ವರೂಪದ ಪೂರ್ಣ ಜ್ಞಾನವೂ ಇತ್ತು. ಈತನು ಮುಂದೆ ಮಹರ್ಷಿ ವೇದವ್ಯಾಸ, ದೇವಿ ಗಾಂಧಾರಿ ಹಾಗೂ ಮಹಾತ್ಮ ವಿದುರ ಇವರ ಎದುರಿಗೆ ರಾಜಾ ಧೃತರಾಷ್ಟ್ರನಿಗೆ ಶ್ರೀಕೃಷ್ಣನ ಮಹಿಮೆಯನ್ನು ತಿಳಿಸಿ ಆತನು ಇಡೀ ಜಗತ್ತಿನ ಒಡೆಯನೆಂಬುದನ್ನು ಹೇಳಿದನು. ಅದಕ್ಕೆ ಧೃತರಾಷ್ಟ್ರನು ಅವನನ್ನು ಕೇಳಿದನು - 'ಶ್ರೀಕೃಷ್ಣನು ಸಾಕ್ಷಾತ್ ಈಶ್ವರನೆಂಬ ವಿಚಾರವನ್ನು ನೀನು ಹೇಗೆ ತಿಳಿದುಕೊಂಡೆ ಮತ್ತು ನಾನು ಆತನನ್ನು ಈ ರೂಪಿನಲ್ಲಿ ಏಕೆ ಗುರುತಿಸಲಾಗಲಿಲ್ಲ.' ಇದಕ್ಕೆ ಉತ್ತರವನ್ನು ಸಂಜಯನು ವೇದವ್ಯಾಸರ ಮುಂದೆ ಹೀಗೆ ನಿರೂಪಿಸಿದನು - 'ನಾನು ಜ್ಞಾನದೃಷ್ಟಿಯಿಂದಲೇ ಶ್ರೀಕೃಷ್ಣನನ್ನು ಗುರುತಿಸಿದ್ದೇನೆ, ಜ್ಞಾನವಿಲ್ಲದೆ

ಯಾರೂ ಆತನ ವಾಸ್ತವಿಕ ಸ್ವರೂಪವನ್ನು ತಿಳಿಯಲಾರರು.' ಇಷ್ಟೇ ಅಲ್ಲಾ ಅವನು ಇದನ್ನು ಸಹ ಹೇಳಿಬಿಟ್ಟನು - ನಾನೆಂದಿಗೂ ಕಪಟವನ್ನು ಆಶ್ರಯಿಸುವುದಿಲ್ಲ, ಯಾವ ಮಿಥ್ಯೆಯಾದ ಧರ್ಮವನ್ನೂ ಆಚರಿಸುವುದಿಲ್ಲ ಹಾಗೂ ಧ್ಯಾನಯೋಗದ ಮೂಲಕ ನನ್ನ ಅಂತಃಕರಣ ಶುದ್ಧವಾಗಿ ಹೋಗಿದೆ. ಆದುದರಿಂದ ನನಗೆ ಶ್ರೀಕೃಷ್ಣನ ಸ್ವರೂಪದ ಜ್ಞಾನವುಂಟಾಗಿ ಹೋಗಿದೆ.'

ಅನಂತರ ಸ್ವತಃ ವೇದವ್ಯಾಸರೇ ಸಂಜಯನನ್ನು ಪ್ರಶಂಸೆ ಮಾಡುತ್ತಾ ಧೃತರಾಷ್ಟ್ರನಿಗೆ ಹೇಳಿದರು - 'ಈತನಿಗೆ ಪುರಾಣಪುರುಷ ಶ್ರೀಕೃಷ್ಣನ ಸ್ವರೂಪದ ಪೂರ್ಣಜ್ಞಾನವಿದೆ, ಆದುದರಿಂದ ನೀನು ಈತನ ಮಾತನ್ನು ಕೇಳಿದರೆ ಈತನು ನಿನ್ನನ್ನು ಜನನ-ಮರಣಗಳ ಮಹಾಭಯದಿಂದ ಮುಕ್ತಗೊಳಿಸುವನು.' ಸಂಜಯನು ಜ್ಞಾನಿಯೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ಪ್ರಮಾಣ ಮತ್ತೇನು ಬೇಕಾಗುವುದು? ತದನಂತರ ಧೃತರಾಷ್ಟ್ರನು ಸಂಜಯನನ್ನು ಕೇಳಿದನು - 'ಸಹೋದರ! ನಾನೂ ಸಹ ಶ್ರೀಕೃಷ್ಣ ಪರಮಾತ್ಮನನ್ನು ತಿಳಿದುಕೊಳ್ಳಬಹುದಾದ ಮತ್ತು ಆತನ ಪರಮಪದವನ್ನು ಪಡೆಯಬಹುದಾದ ನಿರ್ಭಯವಾದ ಮಾರ್ಗವನ್ನು ನನಗೂ ತಿಳಿಸಿಕೊಡು.' ಸಂಜಯನು ಅವನಿಗೆ ಈ ರೀತಿ ತಿಳಿಸಿದನು - 'ಇಂದ್ರಿಯಗಳನ್ನು ಜಯಿಸದ ಹೊರತು ಯಾರೂ ಶ್ರೀಕೃಷ್ಣನನ್ನು ಪಡೆಯಲಾರರು ಮತ್ತು ಇಂದ್ರಿಯಗಳು ಭೋಗಗಳ ತ್ಯಾಗದಿಂದಲೇ ಜಯಿಸಲ್ಪಡುತ್ತವೆ. ಪ್ರಮಾದ, ಹಿಂಸೆ ಮತ್ತು ಭೋಗ ಈ ಮೂರರ ತ್ಯಾಗವೇ ಜ್ಞಾನದ ಸಾಧನವಾಗಿದೆ. ಇವುಗಳ ತ್ಯಾಗದಿಂದ ಪರಮಪದ ಪ್ರಾಪ್ತಿಯ ಸಂಭವವುಂಟು.'

ಅಂತ್ಯದಲ್ಲಿ ಸಂಜಯನು ಶ್ರೀಕೃಷ್ಣಪರಮಾತ್ಮನ ಹಲವು ಸುಂದರ ನಾಮಾವಳಿಯ ವ್ಯಾಖ್ಯಾನ ಮಾಡಿ ಧೃತರಾಷ್ಟ್ರನಿಗೆ ತಿಳಿಸಿದನು. ಇದರಿಂದ ಸಂಜಯನು ಶಾಸ್ತ್ರಜ್ಞಾನದ ಪರಿಚಯವೂ ಆಗುತ್ತದೆ.

ಎರಡು ಕಡೆಗಳಿಂದಲೂ ಯುದ್ಧದ ಸಿದ್ಧತೆಗಳು ಪೂರ್ಣಗೊಂಡಾಗ

ಮತ್ತು ಎರಡೂ ಪಕ್ಷಗಳ ಸೈನ್ಯಗಳು ಕುರುಕ್ಷೇತ್ರಕ್ಕೆ ಹೋಗಿ ನಿಂತಾಗ, ಮಹರ್ಷಿ ವೇದವ್ಯಾಸರು ಸಂಜಯನಿಗೆ ದಿವ್ಯದೃಷ್ಟಿಯ ವರದಾನ ಮಾಡುತ್ತಾ ಧೃತರಾಷ್ಟ್ರನಿಗೆ ಹೇಳಿದರು - 'ಮಹಾರಾಜಾ! ಈ ಸಂಜಯನು ಯುದ್ಧದ ವೃತ್ತಾಂತವನ್ನು ತಿಳಿಸುವನು. ಸಂಪೂರ್ಣವಾಗಿ ಕುರುಕ್ಷೇತ್ರದಲ್ಲೆಲ್ಲಿಯೂ ಈತನಿಗೆ ಕಾಣದೆ ಮರೆಯಾಗಿರುವಂತಹ ಯಾವ ವಿಚಾರವೂ ಇರುವುದಿಲ್ಲ. ಇವನು ದಿವ್ಯದೃಷ್ಟಿಯಿಂದ ಸಂಪನ್ನನಾಗಿ ಸರ್ವಜ್ಞನಾಗುವನು. ಎದುರಿನಲ್ಲಿ ಅಥವಾ ಪರೋಕ್ಷದಲ್ಲಿ, ಹಗಲಿನಲ್ಲಿ ಅಥವಾ ರಾತ್ರಿಯಲ್ಲಿ ಜರುಗುವ ಹಾಗೂ ಮನಸ್ಸಿನಲ್ಲಿ ಯೋಚಿಸಿರುವ ಮಾತೂ ಸಹ ಇವನಿಗೆ ಗೊತ್ತಾಗಿ ಹೋಗುವುದು. ಇಷ್ಟೇ ಅಲ್ಲ, ಶಸ್ತ್ರಗಳು ಇವನನ್ನು ಕತ್ತರಿಸಲಾರವು, ಪರಿಶ್ರಮದಿಂದ ಈತನಿಗೆ ಆಯಾಸವೇ ಗೊತ್ತಾಗುವುದಿಲ್ಲ ಮತ್ತು ಯುದ್ಧದಿಂದ ಇವನು ಸುರಕ್ಷಿತವಾಗಿಯೇ ಹೊರಬರುವನು.'

ಸರಿ, ಆ ಕ್ಷಣದಿಂದಲೇ ಭಗವಾನ್ ವೇದವ್ಯಾಸರ ಕೃಪೆಯಿಂದ ಸಂಜಯನಿಗೆ ದಿವ್ಯದೃಷ್ಟಿಯುಂಟಾಯಿತು. ಆತನು ಅಲ್ಲಿಯೇ ಕುಳಿತು ಯುದ್ಧದ ಎಲ್ಲಾ ವಿಷಯಗಳನ್ನೂ ಪ್ರತ್ಯಕ್ಷದಂತೆ ತಿಳಿದುಕೊಳ್ಳುತ್ತಿದ್ದನು, ಅವುಗಳನ್ನು ನಡೆದದ್ದು ನಡೆದಂತೆಯೇ ಚಾಚೂ ತಪ್ಪದೆ ಮಹಾರಾಜ ಧೃತರಾಷ್ಟ್ರನಿಗೆ ಹೇಳುತ್ತಿದ್ದನು. ಅನೇಕ ಹರಿದಾರಿಗಳಷ್ಟು ವಿಸ್ತಾರವಾದ ಕುರುಕ್ಷೇತ್ರದಲ್ಲಿ ಹದಿನೆಂಟು ಅಕ್ಷೌಹಿಣಿ ಸೇನೆಯು ಪರಸ್ಪರ ಯುದ್ಧಮಾಡುತ್ತಿದ್ದವು; ಯಾವ ವೀರನು ಎಲ್ಲಿ ಯಾವ ಸಮಯದಲ್ಲಿ ಯಾರೊಡನೆ ಹೋರಾಡುತ್ತಿದ್ದಾನೆ, ಅವನು ಯಾವಾಗ ಯಾರ ಮೇಲೆ ಎಷ್ಟು ಮತ್ತು ಎಂತೆಂಥಹ ಆಯುಧಗಳ ಪ್ರಯೋಗ ಮಾಡುತ್ತಾನೆ, ಎಷ್ಟು ಸಾರಿ ಎಷ್ಟು ಚಲನೆಗಳನ್ನು ಬದಲಾಯಿಸುತ್ತಾನೆ; ಮತ್ತು ಯಾವ ಪ್ರಕಾರ ಯಾವ ಕೌಶಲ್ಯದಿಂದ ಶತ್ರುವಿನ ಆಕ್ರಮಣವನ್ನು ರಕ್ಷಿಸಿಕೊಳ್ಳುತ್ತಾನೆ; ಅವನ ರೂಪು ಹೇಗಿದೆ ಮತ್ತು ಎಂತಹ ವಾಹನ - ಈ ಎಲ್ಲಾ ವಿಷಯಗಳನ್ನು ಆತನು ಒಂದೇ ಜಾಗದಲ್ಲಿ ಕುಳಿತು ತಿಳಿದುಕೊಳ್ಳುತ್ತಿದ್ದನು.

ಭಗವದ್ಗೀತೆಯ ಉಪದೇಶವನ್ನು ಶ್ರೀಕೃಷ್ಣನು ಅರ್ಜುನನಿಗೆ ಹೇಗೆ ಕೊಟ್ಟನೋ ಅದೆಲ್ಲವನ್ನೂ ಈತನು ತನ್ನ ಕಿವಿಗಳಿಂದ ಕೇಳಿಸಿಕೊಂಡನು (ಗೀತಾ ೧೮/೭೪-೭೫). ಕೇವಲ ಕೇಳಿಸಿ ಕೊಂಡುದೇ ಅಲ್ಲ, ಉಪದೇಶ ಕೊಡುವಾಗ ಶ್ರೀಕೃಷ್ಣನ ಮುಖಮುದ್ರೆ ಹೇಗಿತ್ತು. ಯಾವ ಭಾವ-ಭಂಗಿಯಲ್ಲಿದ್ದಿತು ಹಾಗೂ ಆಗಿನ ಆತನ ರೂಪೂ ಸಹ ಇವನಿಗೆ ಪ್ರತ್ಯಕ್ಷದಂತೆಯೇ ಕಂಡುಬರುತ್ತಿತ್ತು.

ಇಷ್ಟೇ ಅಲ್ಲಾ, ಭಗವಂತನು ಅರ್ಜುನನಿಗೆ ತನ್ನ ವಿಶ್ವರೂಪವನ್ನು ತೋರಿದನು; ಅದನ್ನು ಅರ್ಜುನನಲ್ಲದೆ ಮತ್ತೆ ಯಾರೂ ನೋಡಿರಲಿಲ್ಲ ಮತ್ತು ಅದರ ಸಂಬಂಧದಲ್ಲಿ ಸ್ವತಃ ಭಗವಂತನೇ ಅವನೊಡನೆ ಹೇಳಿದನು - 'ವೇದ ಮತ್ತು ಯಜ್ಞಗಳ ಅಧ್ಯಯನದಿಂದ, ದಾನದಿಂದ, ಕ್ರಿಯೆಗಳಿಂದ ಹಾಗೂ ಉಗ್ರವಾದ ತಪಸ್ಸುಗಳಿಂದಲೂ ಕೂಡ ಬೇರೆ ಯಾರೂ ಈ ರೂಪನ್ನು ದರ್ಶನಮಾಡಲಾರರು' (ಗೀತಾ ೧೧/೪೮). ಆಗ ಆ ರೂಪವನ್ನು ಅರ್ಜುನನು ನೋಡುತ್ತಿದ್ದನೋ ಅದರಂತೆಯೇ ಸಂಜಯನೂ ನೋಡಿದನು. ಇದಾದ ನಂತರ ಭಗವಂತನು ತನ್ನ ವಿಶ್ವರೂಪವನ್ನು ಮುಕ್ತಾಯಗೊಳಿಸಿ ಅರ್ಜುನನಿಗೆ ಚತುರ್ಭುಜ ರೂಪದಿಂದ ದರ್ಶನ ಕೊಟ್ಟನು. ಅದರ ದರ್ಶನವು ದೇವತೆಗಳಿಗೂ ಸಹ ದುರ್ಲಭವೆಂದು ಭಗವಂತನು ತಿಳಿಸಿದನು, ಆ ಸಂಬಂಧದಲ್ಲಿ ತಪಸ್ಸು, ದಾನ ಮತ್ತು ಯಜ್ಞದಿಂದಲೂ ಅದರ ದರ್ಶನ ಪಡೆಯಲಾಗುವುದಿಲ್ಲವೆಂದು ಹೇಳಿದನು (ಗೀತಾ ೧೧/೫೩) ಆಗ ಅದೇ ದಿವ್ಯದೃಶ್ಯವನ್ನು ಮಹಾಭಾಗ್ಯಶಾಲಿ ಸಂಜಯನು ಹಸ್ತಿನಾಪುರದಲ್ಲಿಯೇ ಕುಳಿತು ಅಲ್ಲಿಂದಲೇ ನೋಡಿದನು. ಅದೇ ಪ್ರಸಂಗದಲ್ಲಿ ಕೇವಲ ಅನನ್ಯಭಕ್ತಿಯಿಂದಲೇ ನನ್ನ ಈ ರೂಪವನ್ನು ದರ್ಶನಮಾಡುವ ಸಂಭವವುಂಟೆಂದು ಭಗವಂತನು ಅರ್ಜುನನಿಗೆ ತಿಳಿಸಿದನು (ಗೀತಾ ೧೧/೫೪).

ಇದರಿಂದ ಸಂಜಯನಿಗೂ ಭಗವಂತನ ಆ ಅನನ್ಯಭಕ್ತಿ ಪ್ರಾಪ್ತಿಯಾಗಿತ್ತು ಎಂದು ಸಹಜವಾಗಿಯೇ ಊಹಿಸಲಾಗುತ್ತದೆ, ಆ ಕಾರಣದಿಂದ ಅವನಿಗೆ

ಭಗವಂತನ ದಿವ್ಯ ಸ್ವರೂಪದ ದರ್ಶನ ಸಾಧ್ಯವಾಯಿತು. ಗೀತೆಯನ್ನು ಕೇಳಿಸಿಕೊಂಡು ನಂತರವೂ ಆ ರೂಪಿನ ನೆನಪು ಸಂಜಯನಿಗೆ ಒಂದು ಅಲೌಕಿಕ ಆನಂದದ ವಸ್ತುವಾಗುಳಿಯಿತು. ಅವನು ಸ್ವತಃ ತನ್ನ ಆ ಉಲ್ಲಾಸ ಪೂರ್ಣ ಸ್ಥಿತಿಯ ವರ್ಣನೆ ಮಾಡುತ್ತಾ ಹೇಳಿದ್ದಾನೆ -

ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್ ।
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ॥
ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ ।
ವಿಸ್ಮಯೋ ಮೇ ಮಹಾನ್ ರಾಜನ್ ಹೃಷ್ಯಾಮಿ ಚ ಪುನಃ ಪುನಃ ॥

(ಗೀತಾ - ೧೮/೭೬, ೭೭)

ಅವನಿಗೆ ಶ್ರೀಕೃಷ್ಣ ಮತ್ತು ಅರ್ಜುನರಲ್ಲಿದ್ದ ಶ್ರದ್ಧಾ-ಪ್ರೇಮವು ವಿವೇಕಪೂರ್ವಕವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ; ಏಕೆಂದರೆ ಆತನು ಅವರ ಯಥಾರ್ಥ ಪ್ರಭಾವವನ್ನೂ ತಿಳಿದಿದ್ದನು. ಅವನು ಯುದ್ಧಕ್ಕೆ ಮುಂಚೆಯೇ ಅವರ ವಿಜಯವನ್ನು ಘೋಷಿಸುತ್ತಾ ಹೀಗೆ ಹೇಳಿಬಿಟ್ಟಿದ್ದನು -

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

(ಗೀತಾ ೧೮/೭೮)

ಯುದ್ಧ-ಸಮಾಪ್ತಿಯಾದ ನಂತರ ಸಂಜಯನು ಕೆಲವು ದಿನ ಮಹಾರಾಜ ಯುಧಿಷ್ಠಿರನ ಹತ್ತಿರ ಇದ್ದು ಧೃತರಾಷ್ಟ್ರ-ಗಾಂಧಾರಿ ಇವರು ವಾನಪ್ರಸ್ಥಾಶ್ರಮಕ್ಕೆ ಹೊರಟಾಗ ಅವನೂ ಅವರ ಜೊತೆಗೂಡಿದನು. ಅಲ್ಲಿಯೂ ಈತನು ತನ್ನ ಒಡೆಯನ ಸೇವೆಯನ್ನು ಚೆನ್ನಾಗಿ ಮಾಡಿದನು. ದೇವಿ ಗಾಂಧಾರಿ ಮತ್ತು ಕುಂತೀ ಸಹಿತ ಅವರನ್ನು ದಾವಾಗ್ನಿಯು ಸುತ್ತಿಕೊಂಡಾಗ ಈತನು ಅವರ ಅಪ್ಪಣೆಯಂತೆ ವನವಾಸಿ ಮುನಿಗಳಿಗೆ ಅವರ ಶರೀರತ್ಯಾಗದ ವಿಷಯವನ್ನು

ಹೇಳುವುದಕ್ಕಾಗಿ ಅವರನ್ನು ಬಿಟ್ಟು ಆಶ್ರಮದತ್ತ ಹೊರಟು ಬಂದನು ಮತ್ತು ಅಲ್ಲಿಂದ ಹಿಮಾಲಯದ ಕಡೆಗೆ ಹೊರಟುಹೋದನು. ಈ ಪ್ರಕಾರ ಸಂಜಯನ ಜೀವನವೂ ಒಂದು ಮಹಾನ್ ಜೀವನವಾಗಿತ್ತು. ಅವನ ಜೀವನದಿಂದ ನಮಗೆ ದೊರೆಯುವ ನೀತಿಯೆಂದರೆ - 'ಮನುಷ್ಯ ಯಾವ ವರ್ಣದವನೇ ಆಗಿರಲಿ ಅಥವಾ ಜಾತಿಯವರೇ ಆಗಿರಲಿ, ಭಗವಂತನ ಕೃಪೆಯಿಂದ ಅವನು ಉದ್ಧಾರನಾಗಬಲ್ಲನು.'

❑❑❑

೧೦. ಭಗವಾನ್ ವೇದವ್ಯಾಸ

ಭಗವಾನ್ ವೇದವ್ಯಾಸರು ಮಹರ್ಷಿ ಪರಾಶರರ ಮಗ. ಇವರು ಕೈವರ್ತಕ (ಅಂಬಿಗ) ರಾಜನ ಸಾಕುಮಗಳಾದ ಸತ್ಯವತಿಯ ಗರ್ಭದಲ್ಲಿ ಹುಟ್ಟಿದವರು. ವ್ಯಾಸರು ಒಬ್ಬ ಅಲೌಕಿಕ ಶಕ್ತಿಸಂಪನ್ನ ಮಹಾಪುರುಷರಾಗಿದ್ದರು. ಇವರು ಒಬ್ಬ ಮಹಾನ್‌ಕಾರಕ ಪುರುಷರಾಗಿದ್ದರು. ಇವರು ಜನರ ಸ್ಮರಣಶಕ್ತಿ ಕ್ಷೀಣ ವಾಗುತ್ತಿರುವುದನ್ನು ನೋಡಿ ವೇದವನ್ನು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ - ಎಂದು ನಾಲ್ಕು ವಿಭಾಗ ಮಾಡಿದರು ಮತ್ತು ಒಂದೊಂದು ಸಂಹಿತೆಯನ್ನು ತಮ್ಮ ಒಬ್ಬೊಬ್ಬ ಶಿಷ್ಯನಿಗೂ ಬೋಧಿಸಿದರು. ಒಂದೊಂದು ಸಂಹಿತೆಗೂ ಪುನಃ ಅನೇಕಾನೇಕ ಶಾಖೆ ಉಪಶಾಖೆಗಳಾದವು. ಈ ಪ್ರಕಾರ ಇವರ ಪ್ರಯತ್ನದಿಂದ ವೈದಿಕ ಸಾಹಿತ್ಯವು ಬಹುವಿಧವಾಗಿ ವಿಸ್ತಾರವಾಯಿತು. ವಿಸ್ತಾರವನ್ನು ವ್ಯಾಸ ಎಂದು ಹೇಳುತ್ತಾರೆ; ಏಕೆಂದರೆ ವೇದದ ವಿಸ್ತಾರ ಇವರಿಂದಾಯಿತು. ಆದುದರಿಂದ ಇವರು ವೇದವ್ಯಾಸರೆಂಬ ಹೆಸರಿನಿಂದ ಪ್ರಸಿದ್ಧರಾದರು. ಇವರು ಹುಟ್ಟಿದ್ದು ಒಂದು ದ್ವೀಪದಲ್ಲಿ ಮತ್ತು ಇವರ ಬಣ್ಣ ಶ್ಯಾಮ ವರ್ಣ, ಆದುದರಿಂದ ಇವರನ್ನು ಜನರು ಕೃಷ್ಣದ್ವೈಪಾಯನ ಎಂದೂ ಹೇಳುತ್ತಾರೆ. ಬದರೀವನದಲ್ಲಿದ್ದ ಕಾರಣದಿಂದ ಇವರ ಒಂದು ಹೆಸರು ಬಾದರಾಯಣ ಎಂದೂ ಇದೆ. ಹದಿನೆಂಟು ಪುರಾಣ ಮತ್ತು ಮಹಾಭಾರತದ ರಚನೆಯು ಇವರಿಂದಲೇ ಆಯಿತು. ಇವರು ಸಂಕ್ಷೇಪವಾಗಿ ಉಪನಿಷತ್ತುಗಳ ತತ್ತ್ವವನ್ನು ತಿಳಿಸುವುದಕ್ಕಾಗಿ ಬ್ರಹ್ಮಸೂತ್ರಗಳನ್ನು ನಿರ್ಮಾಣ ಮಾಡಿದರು. ಅವುಗಳ ಮೇಲೆ ಬೇರೆ-ಬೇರೆ ಆಚಾರ್ಯರುಗಳು ಭಿನ್ನ-ಭಿನ್ನ ಭಾಷ್ಯಗಳನ್ನು ರಚಿಸಿ ತಮ್ಮ-ತಮ್ಮ ಮತಗಳನ್ನು ಸ್ಥಾಪಿಸಿದರು. ವ್ಯಾಸಸ್ಮೃತಿ ಎಂಬ ಇವರು ರಚಿಸಿರುವ ಒಂದು ಸ್ಮೃತಿಗ್ರಂಥವೂ ದೊರೆಯುತ್ತದೆ. ಈ ಪ್ರಕಾರ ಭಾರತೀಯ ಸಾಹಿತ್ಯ ಮತ್ತು ಹಿಂದೂ-ಸಂಸ್ಕೃತಿಯ ಮೇಲೆ ವ್ಯಾಸರ ಬಹುದೊಡ್ಡ ಋಣವಿದೆ. ಶ್ರುತಿ-ಸ್ಮೃತಿ ಪುರಾಣೋಕ್ತ ಸನಾತನಧರ್ಮದ

ಒಬ್ಬ ಪ್ರಧಾನ ವ್ಯಾಖ್ಯಾನ ಕಾರರೆಂದು ವ್ಯಾಸರನ್ನು ಹೇಳುತ್ತಾರೆ. ಹಿಂದುಗಳು ಇವರ ಉಪಕಾರದಿಂದ ಎಂದಿಗೂ ಋಣಮುಕ್ತವಾಗಲಾರದು. ಹಿಂದುಗಳು ಮತ್ತು ಭಾರತೀಯ ಸಂಸ್ಕೃತಿಯು ಜೀವಂತವಾಗಿರುವವರೆಗೂ ಇತಿಹಾಸದಲ್ಲಿ ವ್ಯಾಸರ ಹೆಸರು ಅಮರವಾಗಿರುವುದು. ಇವರು ಜಗತ್ತಿನ ಒಬ್ಬ ಮಹಾ ಶ್ರೇಷ್ಠ ಪಥಪ್ರದರ್ಶಕ ಮತ್ತು ಶಿಕ್ಷಕರೆಂದು ಹೇಳಲ್ಪಡುತ್ತಾರೆ. ಆದ್ದರಿಂದಲೇ ಇವರಿಗೆ ಜಗದ್ಗುರು ಎಂಬ ಗೌರವ ದೊರಕಿದೆ. ಗುರುಪೂರ್ಣಿಮೆ (ಆಷಾಢ ಶುಕ್ಲ ಪೂರ್ಣಿಮೆ)ಯ ದಿವಸ ಪ್ರತಿಯೊಬ್ಬ ಆಸ್ತಿಕ ಹಿಂದೂ-ಗೃಹಸ್ಥನು ಇವರ ಪೂಜೆ ಮಾಡುತ್ತಾನೆ. ಇವರೇ ಶ್ರೀಕೃಷ್ಣಪರಮಾತ್ಮನ ಅಮರ ಉಪದೇಶವನ್ನು ತಮ್ಮ ಮಹಾಭಾರತ ಸಂಹಿತೆಯಲ್ಲಿ ಸೇರಿಸಿ ಅದನ್ನು ಜಗತ್ತಿಗೆ ಸುಲಭಮಾಡಿದ್ದಾರೆ.

ಮಹರ್ಷಿ ವೇದವ್ಯಾಸರು ತ್ರಿಕಾಲದರ್ಶಿ ಮತ್ತು ಇಚ್ಛಾಗತಿಯುಳ್ಳವರು. ಅವರು ಪ್ರತಿಯೊಬ್ಬರ ಮನಸ್ಸಿನ ಮಾತನ್ನು ತಿಳಿದುಕೊಳ್ಳುತ್ತಾರೆ ಮತ್ತು ಇಚ್ಛಿಸಿದ ಕೂಡಲೇ ಎಲ್ಲಿಗೆ ಬೇಕಾದರೂ ಹೋಗಿ ಬಿಡುತ್ತಾರೆ. ಇವರು ಹುಟ್ಟಿದ ಕೂಡಲೇ ತಮ್ಮ ತಾಯಿಯ ಆಜ್ಞೆ ಪಡೆದು ತಪಸ್ಸು ಮಾಡಲು ಕಾಡಿಗೆ ಹೊರಟುಹೋದರು. ಹೋಗುವಾಗ ಇವರು ತಾಯಿಯೊಡನೆ ಅಮ್ಮಾ! 'ಯಾವಾಗ ಬೇಕಾದರೂ ಸರಿ ನಿಮಗೆ ನನ್ನ ಅವಶ್ಯಕತೆ ಕಂಡುಬಂದರೆ, ನೀವು ನನ್ನನ್ನು ಜ್ಞಾಪಿಸಿಕೊಳ್ಳಿ. ನಾನು ಆ ಕೂಡಲೇ ನಿಮ್ಮ ಬಳಿಗೆ ಹೊರಟು ಬರುವೆನು' ಎಂದು ಹೇಳಿದರು.

ಪಾಂಡವರು ವಿದುರನು ತಿಳಿಸಿದ ಯುಕ್ತಿಯನ್ನು ಅನುಸರಿಸಿ ಅರಗಿನ ಮನೆಯಿಂದ ಹೊರಬಂದು ಏಕಚಕ್ರ ನಗರಕ್ಕೆ ಹೋಗಿದ್ದರು, ಆ ದಿನಗಳಲ್ಲಿ ವ್ಯಾಸರು ಅವರನ್ನು ಭೇಟಿ ಮಾಡುವುದಕ್ಕಾಗಿ ಅವರ ಬಳಿಗೆ ಬಂದರು ಮತ್ತು ಪ್ರಸಂಗವಶಾತ್ ಅವರು ಪಾಂಡವರಿಗೆ ದ್ರೌಪದಿಯ ಪೂರ್ವಜನ್ಮದ ವೃತ್ತಾಂತವನ್ನು ತಿಳಿಸಿ ಹೀಗೆಂದರು - 'ಈ ಕನ್ಯೆಯು ನಿಮಗಾಗಿಯೇ

ಮೊದಲಿನಿಂದಲೂ ನಿಶ್ಚಿತಳಾಗಿದ್ದಾಳೆ.' ಈ ಮಾತನ್ನು ಕೇಳಿ ಪಾಂಡವರಿಗೆ ಬಹಳ ಸಂತೋಷವಾಯಿತು ಮತ್ತು ಉತ್ಸುಕತೆಯುಂಟಾಯಿತು. ಅವರು ದ್ರುಪದ ಕುಮಾರಿಯ ಸ್ವಯಂವರದಲ್ಲಿ ಭಾಗವಹಿಸಲು ಪಾಂಚಾಲ ನಗರದ ಕಡೆ ಹೊರಟರು. ಅಲ್ಲಿಗೆ ಹೋಗಿ ಅರ್ಜುನನು ಸ್ವಯಂವರದ ನಿಯಮವನ್ನು ಪೂರ್ಣಗೊಳಿಸಿ ದ್ರೌಪದಿಯನ್ನು ಗೆದ್ದುಕೊಂಡನು ಮತ್ತು ತಾಯಿ ಕುಂತಿಯ ಆಜ್ಞೆಯಂತೆ ಐವರು ಸಹೋದರರೂ ಆಕೆಯನ್ನು ವಿವಾಹ ಮಾಡಿಕೊಳ್ಳಲು ಇಚ್ಛಿಸಿದಾಗ ರಾಜಾ ದ್ರುಪದನು ಇವರನ್ನು ಅಡ್ಡಿಪಡಿಸಿದನು. ಆ ಸಮಯದಲ್ಲಿ ವ್ಯಾಸರು ಅಲ್ಲಿಗೆ ಬಂದು ದ್ರುಪದನಿಗೆ ದ್ರೌಪದಿಯ ಪೂರ್ವಜನ್ಮದ ವೃತ್ತಾಂತವನ್ನು ತಿಳಿಸಿ ಐವರು ಸಹೋದರರ ಜೊತೆ ಆತನ ಕನ್ಯೆಯ ವಿವಾಹ ನಡೆಸಲು ಒಪ್ಪಿಸಿದರು.

ಮಹಾರಾಜ ಯುಧಿಷ್ಠಿರನು ಇಂದ್ರಪ್ರಸ್ಥದಲ್ಲಿ ರಾಜಸೂಯ ಯಜ್ಞ ಮಾಡಿದ ಸಮಯದಲ್ಲಿಯೂ ವೇದವ್ಯಾಸರು ಯಜ್ಞದಲ್ಲಿ ಭಾಗವಹಿಸಲು ತಮ್ಮ ಶಿಷ್ಯ ವೃಂದದೊಡನೆ ದಯಮಾಡಿಸಿದ್ದರು. ಯಜ್ಞ ಮುಗಿದ ನಂತರ ಅವರು ಬೀಳ್ಕೊಳ್ಳಲು ಯುಧಿಷ್ಠಿರನ ಬಳಿಗೆ ಬಂದರು, ಮಾತನಾಡುತ್ತಾ ಮಾತನಾಡುತ್ತಾ ಅವರು ಹೀಗೆ ಹೇಳಿದರು - 'ಇಂದಿನಿಂದ ಹದಿಮೂರು ವರ್ಷಗಳ ನಂತರ ಕ್ಷತ್ರಿಯರ ಮಹಾಸಂಹಾರವಾಗುವುದು, ಅದರಲ್ಲಿ ದುರ್ಯೋಧನನ ಅಪರಾಧದಿಂದ ನೀನೇ ನಿಮಿತ್ತನಾಗುವೆ.

ಪಾಂಡವರ ಸರ್ವಸ್ವವನ್ನೂ ಕಿತ್ತುಕೊಂಡು, ಅವರನ್ನು ಹನ್ನೆರಡು ವರ್ಷಗಳ ದೀರ್ಘಾವಧಿ ಕಾಡಿಗೆ ಕಳುಹಿಸಿಯೂ ದುರ್ಯೋಧನನಿಗೆ ಸಂತೋಷವಾಗಲಿಲ್ಲ. ಅವನು ಪಾಂಡವರನ್ನು ಕಾಡಿನಲ್ಲಿಯೇ ಕೊಂದು ಹಾಕುವ ವಿಚಾರವನ್ನು ಯೋಚಿಸಿದ. ತನ್ನ ಮಾವ ಶಕುನಿ, ಕರ್ಣ ಹಾಗೂ ದುಃಶಾಸನರೊಡನೆ ಸಮಾಲೋಚಿಸಿ ಅವರ ಸಲಹೆ ಪಡೆದು ಅವನು ಗೋಪ್ಯವಾಗಿ ಪಾಂಡವರ ಮೇಲೆ ಆಕ್ರಮಣ ಮಾಡಲು ನಿಶ್ಚಯಿಸಿಕೊಂಡನು ಮತ್ತು

ಎಲ್ಲರೂ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ರಥಗಳನ್ನೇರಿ ಕಾಡಿನ ಕಡೆಗೆ ಹೊರಟರು. ವ್ಯಾಸರಿಗೆ ತಮ್ಮ ದಿವ್ಯದೃಷ್ಟಿಯಿಂದ ಅವರ ಈ ದುಷ್ಟ ಷಡ್ಯಂತ್ರ ಗೊತ್ತಾಗಿಹೋಯಿತು. ಅವರು ತಕ್ಷಣ ಅವರ ಬಳಿ ಬಂದು ಅವರನ್ನು ಈ ಘೋರ ದುಷ್ಕರ್ಮದಿಂದ ನಿವೃತ್ತಿ ಗೊಳಿಸಿದರು. ಅನಂತರ ಅವರು ಧೃತರಾಷ್ಟ್ರನ ಹತ್ತಿರಹೋಗಿ ಆತನಿಗೆ ಹೇಳಿದರು - 'ನೀನು ದ್ಯೂತದಲ್ಲಿ ಸೋಲಿಸಿ ಪಾಂಡವರನ್ನು ಕಾಡಿಗೆ ಕಳುಹಿಸಿದೆ, ಇದು ಒಳ್ಳೆಯ ಕೆಲಸವಲ್ಲ. ಇದರ ಪರಿಣಾಮ ಒಳ್ಳೆಯದಾಗುವುದಿಲ್ಲ. ನೀನು ನಿನ್ನ ಹಾಗೂ ನಿನ್ನ ಮಕ್ಕಳ ಹಿತವನ್ನು ಬಯಸುವುದಾದರೆ ಈಗಲೂ ಸಹ ಸರಿಪಡಿಸಿಕೋ. ದುರಾತ್ಮಾ ದುರ್ಯೋಧನನು ರಾಜ್ಯದ ಲೋಭದಿಂದ ಪಾಂಡವರನ್ನು ಕೊಂದು ಹಾಕಲು ಇಚ್ಛಿಸುತ್ತಾನೆ ಇದೆಂತಹ ವಿಚಾರ? ನಾನು ಹೇಳುತ್ತಿದ್ದೇನೆ - ನಿನ್ನ ಈ ಮುದ್ದು ಮಗನನ್ನು ಈ ಕಾರ್ಯಮಾಡದಂತೆ ತಡೆದುಬಿಡು. ಅವನು ಸುಮ್ಮನೆ ಮನೆಯಲ್ಲಿ ಕುಳಿತಿರಲಿ. ಅವನು ಪಾಂಡವರನ್ನು ಕೊಲ್ಲುವ ಪ್ರಯತ್ನ ಮಾಡಿದರೆ ಅವನು ಸ್ವತಃ ತಾನೇ ಪ್ರಾಣ ತೆರಬೇಕಾಗುವುದು. ನೀನು ನಿನ್ನ ಮಗನ ದ್ವೇಷ ಬುದ್ಧಿಯನ್ನು ಹೋಗಲಾಡಿಸುವ ಪ್ರಯತ್ನ ಮಾಡದೇ ಹೋದರೆ ದೊಡ್ಡ ಅನರ್ಥವಾಗುವುದು. ದುರ್ಯೋಧನನೊಬ್ಬನೇ ಕಾಡಿಗೆ ಹೋಗಿ ಪಾಂಡವರ ಹತ್ತಿರ ಇರಲಿ ಎಂಬುದೇ ನನ್ನ ಅಭಿಪ್ರಾಯ. ಪಾಂಡವರ ಸತ್ಸಂಗದಿಂದ ಅವನ ದ್ವೇಷಭಾವವು ನಾಶವಾಗಿ ಪ್ರೇಮಭಾವವು ಜಾಗೃತಗೊಳ್ಳುವ ಸಂಭವವುಂಟು. ಆದರೆ ಈ ಮಾತು ಬಹಳ ಕಠಿಣ, ಏಕೆಂದರೆ ಜನ್ಮಗತ ಸ್ವಭಾವ ಬದಲಾಯಿಸಿಹೋಗುವುದು ಸಹಜ ವಾದುದಲ್ಲ. ನೀನು ಕುರುವಂಶದವರ ರಕ್ಷಣೆ ಮತ್ತು ಅವರ ಜೀವನವನ್ನು ಬಯಸುವುದಾದರೆ ನಿನ್ನ ಮಕ್ಕಳಿಗೆ ಹೇಳು - 'ಅವರು ಪಾಂಡವರ ಜೊತೆಯಲ್ಲಿ ಕೂಡಿ ಬಾಳಲಿ.' ವ್ಯಾಸರು ಧೃತರಾಷ್ಟ್ರನಿಗೆ ಇದನ್ನೂ ಹೇಳಿದರು - ಸ್ವಲ್ಪ ಹೊತ್ತಿನಲ್ಲಿಯೇ ಮಹರ್ಷಿ ಮೈತ್ರೇಯರು ಇಲ್ಲಿಗೆ ಬರುವವರಿದ್ದಾರೆ. ಅವರು ನಿನ್ನ ಮಕ್ಕಳಿಗೆ ಪಾಂಡವರೊಡನೆ

ಹೊಂದಿಕೊಂಡಿರುವಂತೆ ಉಪದೇಶ ಕೊಡುವರು. ಅವರು ಹೇಳಿದಂತೆ ನೀವುಗಳೆಲ್ಲರೂ ಬೇರೆ ಏನೂ ಯೋಚಿಸದೆ ಅದರಂತೆಯೇ ಮಾಡಬೇಕು. ಅವರ ಮಾತನ್ನು ಒಪ್ಪಿಕೊಳ್ಳದೇ ಹೋದರೆ ಅವರು ಕೋಪಗೊಂಡು ಶಾಪಕೊಡುವರು.' ಆದರೆ ದುಷ್ಟ ದುರ್ಯೋಧನನು ಅವರ ಮಾತನ್ನು ಒಪ್ಪಲಿಲ್ಲ ಮತ್ತು ಫಲತಃ ಅವರು ಮಹರ್ಷಿ ಮೈತ್ರೇಯರ ಕೋಪಕ್ಕೆ ತುತ್ತಾಗಬೇಕಾಯಿತು.

ವ್ಯಾಸರು ತ್ರಿಕಾಲದರ್ಶಿಯಾಗಿದ್ದರು, ಜೊತೆಗೆ ಅವರ ಸಾಮರ್ಥ್ಯವೂ ಸಹ ಅದ್ಭುತವಾಗಿತ್ತು. ಪಾಂಡವರೆಲ್ಲರೂ ಕಾಡಿನಲ್ಲಿರುತ್ತಿದ್ದ ಸಮಯದಲ್ಲಿ ಒಂದು ದಿವಸ ಅವರು ಪಾಂಡವರ ಬಳಿಗೆ ಬಂದು ಯುಧಿಷ್ಠಿರನ ಮೂಲಕ ಅರ್ಜುನನಿಗೆ ಸ್ಮೃತಿ-ವಿದ್ಯೆಯ ಉಪದೇಶವನ್ನು ಕೊಟ್ಟರು. ಅದರಿಂದ ಅವನಿಗೆ ದೇವದರ್ಶನದ ಯೋಗ್ಯತೆ ಬಂದಿತು. ಇಷ್ಟೇ ಅಲ್ಲದೆ ಇವರು ಸಂಜಯನಿಗೆ ದಿವ್ಯದೃಷ್ಟಿಯನ್ನು ಕೊಟ್ಟರು; ಅದರ ಪ್ರಭಾವದಿಂದ ಆತನಿಗೆ ಯುದ್ಧದ ಎಲ್ಲಾ ವಿಷಯಗಳು ತಿಳಿಯುತ್ತಿದ್ದುದೇ ಅಲ್ಲದೆ, ಆತನಲ್ಲಿ ಭಗವಂತನ ವಿಶ್ವರೂಪು ಮತ್ತು ದಿವ್ಯ ಚತುರ್ಭುಜ ರೂಪುಗಳ ದೇವದುರ್ಲಭ ದರ್ಶನದ ಯೋಗ್ಯತೆಯೂ ಉಂಟಾಯಿತು. ಸಾಕ್ಷಾತ್ ಭಗವಂತನ ಮುಖಾರವಿಂದದಿಂದ ಭಗವದ್ಗೀತೆಯ ದಿವ್ಯ ಉಪದೇಶವನ್ನು ಕೇಳಿಸಿಕೊಳ್ಳಲೂ ಆತನಿಗೆ ಸಾಧ್ಯವಾಯಿತು; ಅದನ್ನು ಅರ್ಜುನನಲ್ಲದೆ ಮತ್ತೆ ಯಾರೂ ಸಹ ಕೇಳಿಸಿಕೊಳ್ಳಲಾಗಿರಲಿಲ್ಲ. ಯಾವ ದಿವ್ಯದೃಷ್ಟಿಯ ಪ್ರಭಾವದಿಂದ ಸಂಜಯನಿಗೆ ಇಷ್ಟೊಂದು ಶ್ರೇಷ್ಠ ಯೋಗ್ಯತೆ ಯುಂಟಾಯಿತೋ, ಆ ದಿವ್ಯದೃಷ್ಟಿಯನ್ನು ದಯಪಾಲಿಸಿದ ಮಹರ್ಷಿ ವೇದ ವ್ಯಾಸರಲ್ಲಿ ಎಷ್ಟು ಸಮರ್ಥವಿದ್ದಿರಬಹುದು - ನಾವು ಅದನ್ನು ಸರಿಯಾಗಿ ಊಹಿಸಲೂ ಸಹ ಸಾಧ್ಯವಾಗದು. ಅವರು ಸಾಕ್ಷಾತ್ ಭಗವಾನ್ ನಾರಾಯಣನ ಅಂಶವೆಂದೇ ಸ್ಥಿರಪಟ್ಟರು.

ಧೃತರಾಷ್ಟ್ರ ಮತ್ತು ಗಾಂಧಾರಿ ಕಾಡಿನಲ್ಲಿರುತ್ತಿದ್ದಾಗ ಒಂದು ಸಲ

ಮಹಾರಾಜ ಯುಧಿಷ್ಠಿರನು ತನ್ನ ಪರಿವಾರದೊಡನೆ ಅವರನ್ನು ನೋಡಲು ಹೋಗಿದ್ದನು, ವ್ಯಾಸರೂ ಅಲ್ಲಿಗೆ ಬಂದರು. ಧೃತರಾಷ್ಟ್ರ ಮತ್ತು ಗಾಂಧಾರಿಯ ಪುತ್ರಶೋಕವಿನ್ನೂ ಹೋಗಿಲ್ಲ ಮತ್ತು ಕುಂತಿಯೂ ತನ್ನ ಮಕ್ಕಳ ವಿಯೋಗದಿಂದ ದುಃಖಪಡುತ್ತಿದ್ದಾಳೆ ಎಂಬುದನ್ನು ನೋಡಿ ಧೃತರಾಷ್ಟ್ರನಿಗೆ ವರವನ್ನು ಕೇಳಿಕೊಳ್ಳಲು ತಿಳಿಸಿದರು. ಮಹಾಭಾರತದ ಯುದ್ಧದಲ್ಲಿ ಧೃತರಾಷ್ಟ್ರನ ಕುಟುಂಬದವರು ಮತ್ತು ಮಿತ್ರರ ನಾಶವಾಯಿತು, ಅವರ ಗತಿ ಏನಾಗಿರಬಹುದು ಎಂಬುದನ್ನು ಆತನು ತಿಳಿದುಕೊಳ್ಳಲು ಇಚ್ಛೆಪಟ್ಟನು; ಜೊತೆಗೆ ಆತನು ತನಗೆ ಒಂದು ಸಾರಿ ಅವರನ್ನೆಲ್ಲಾ ತೋರಿಸಿಕೊಡಬೇಕೆಂದು ವ್ಯಾಸರಲ್ಲಿ ಪ್ರಾರ್ಥಿಸಿಕೊಂಡನು. ವ್ಯಾಸರು ಅವನ ಪ್ರಾರ್ಥನೆಯನ್ನು ಸ್ವೀಕರಿಸುತ್ತಾ ಗಾಂಧಾರಿಯೊಡನೆ ಹೇಳಿದರು - 'ಮಲಗಿ ನಿದ್ರಿಸಿದ ನಂತರ ಎದ್ದು ಕುಳಿತ ಮನುಷ್ಯನನ್ನು ನೋಡಿದಂತೆ ನೀವುಗಳೆಲ್ಲರೂ ಇಂದಿನ ರಾತ್ರಿಯಲ್ಲಿಯೇ ನಿಮ್ಮ ಮೃತರಾದ ಬಂಧುಗಳನ್ನು ನೋಡುವಿರಿ!' ಸಾಯಂಕಾಲ ನಿತ್ಯಕರ್ಮಗಳನ್ನು ಮುಗಿಸಿ ವ್ಯಾಸರ ಆಜ್ಞೆಯಂತೆ ಎಲ್ಲರೂ ಗಂಗಾತಟದಲ್ಲಿ ಬಂದು ಸೇರಿದರು.

ವ್ಯಾಸರು ಗಂಗೆಯ ಪವಿತ್ರ ಜಲದಲ್ಲಿ ಪ್ರವೇಶಿಸಿ ಯುದ್ಧದಲ್ಲಿ ಗತಿಸಿಹೋಗಿದ್ದ ಪಾಂಡವರ ಮತ್ತು ಕೌರವರ ಯೋಧರುಗಳನ್ನು ಕೂಗಿ ಕರೆದರು. ಆ ಕೂಡಲೇ ಕೌರವರ ಮತ್ತು ಪಾಂಡವರ ಸೈನ್ಯಗಳು ಸಮಾವೇಶಗೊಂಡಾಗ ಕುರುಕ್ಷೇತ್ರದಲ್ಲಿ ಕೇಳಿ ಬಂದಿದ್ದ ಹಾಗೆಯೇ ಜಲದಲ್ಲಿ ಕೋಲಾಹಲ ಕೇಳಿ ಬಂತು. ಅನಂತರ ಯುದ್ಧದಲ್ಲಿ ವೀರಗತಿಯನ್ನು ಪಡೆದುಕೊಂಡಿದ್ದ ಆ ಎಲ್ಲಾ ರಾಜರು ಮತ್ತು ರಾಜಕುಮಾರರೂ ಭೀಷ್ಮ ಮತ್ತು ದ್ರೋಣರನ್ನು ಮುಂದು ಮಾಡಿಕೊಂಡು ತಕ್ಷಣ ಜಲದಿಂದ ಹೊರಕ್ಕೆ ಬಂದರು. ಯುದ್ಧದ ಸಮಯದಲ್ಲಿ ಯಾವ ವಾಹನವಿದ್ದಿತೋ ಅವುಗಳೆಲ್ಲಾ ಸರಿಯಾಗಿ ಅದರಂತೆಯೇ ಅಲ್ಲಿ ಕಂಡುಬಂದವು. ಅವರು ದಿವ್ಯವಸ್ತ್ರ ಮತ್ತು ದಿವ್ಯಹಾರಗಳನ್ನು ಧರಿಸಿಕೊಂಡಿದ್ದರು. ಎಲ್ಲರೂ ಹೊಳೆಯುತ್ತಿರುವ

ಕುಂಡಲಗಳನ್ನು ಧರಿಸಿಕೊಂಡಿದ್ದರು ಮತ್ತು ಎಲ್ಲರ ಶರೀರವೂ ದಿವ್ಯ ಪ್ರಭಾವದಿಂದ ಕಾಂತಿಯುಕ್ತವಾಗಿದ್ದುವು.

ಪ್ರತಿಯೊಬ್ಬರೂ ನಿರ್ವೈರ, ನಿರಭಿಮಾನ, ಕ್ರೋಧರಹಿತ ಮತ್ತು ದ್ವೇಷ-ಅಸೂಯೆಗಳಿಲ್ಲದಂತೆ ಕಂಡುಬರುತ್ತಿದ್ದರು. ಗಂಧರ್ವರು ಅವರ ಯಶೋಗಾನ ಮಾಡುತ್ತಿದ್ದರು ಮತ್ತು ಹೊಗಳುಭಟ್ಟರು ಸ್ತುತಿಸುತ್ತಾ ಇದ್ದರು. ಆ ಸಮಯದಲ್ಲಿ ವ್ಯಾಸರು ಧೃತರಾಷ್ಟ್ರನಿಗೆ ದಿವ್ಯ ನೇತ್ರಗಳನ್ನು ಕೊಟ್ಟಿದ್ದರು.ಅದರಿಂದ ಅವನು ಆ ಎಲ್ಲಾ ಯೋಧರನ್ನೂ ಚೆನ್ನಾಗಿ ನೋಡಲು ಸಾಧ್ಯವಾಯಿತು.

ಆ ದೃಶ್ಯವು ಅದ್ಭುತ, ಅಚಿಂತ್ಯ ಮತ್ತು ರೋಮಾಂಚಕಾರಿಯಾಗಿತ್ತು. ಎಲ್ಲರೂ ಕಣ್ಣುರೆಪ್ಪೆಯಾಡಿಸದಂತೆ ಆ ದೃಶ್ಯವನ್ನು ನೋಡಿದರು. ತದನಂತಹ ಬಂದಿದ್ದ ಯೋಧರೆಲ್ಲರೂ ತಮ್ಮ-ತಮ್ಮ ಸಂಬಂಧಿಗಳೊಡನೆ ಕ್ರೋಧ ಮತ್ತು ವೈರವನ್ನು ಬಿಟ್ಟು ಪರಸ್ಪರ ಭೇಟಿಯಾದರು. ಈ ಪ್ರಕಾರ ರಾತ್ರಿಯಿಡೀ ಬಂಧುಗಳ ಈ ಸಮಾಗಮ ನಡೆಯುತ್ತಿತ್ತು. ಇಷ್ಟೆಲ್ಲಾ ಮುಗಿದ ನಂತರ ಅವರೆಲ್ಲಾ ಹೇಗೆ ಬಂದರೋ ಹಾಗೆಯೇ ಭಾಗೀರಥಿಯ ಜಲದಲ್ಲಿ ಪ್ರವೇಶಿಸಿ ತಮ್ಮ-ತಮ್ಮ ಲೋಕಗಳಿಗೆ ಹೊರಟುಹೋದರು. ಅದೇ ಸಮಯದಲ್ಲಿ ವೇದವ್ಯಾಸರು ಯಾವ ಸ್ತ್ರೀಯರ ಗಂಡಂದಿರು ವೀರಗತಿಯನ್ನು ಪಡೆದಿದ್ದರೋ, ಅವರನ್ನು ಸಂಬೋಧಿಸಿ ಹೇಳಿದರು - 'ನಿಮ್ಮಲ್ಲಿ ಯಾರಾದರೂ ತಮ್ಮ ಪತಿಯ ಲೋಕಕ್ಕೆ ಹೋಗಲು ಇಚ್ಛಿಸಿದರೆ, ಅವರು ಗಂಗೆಯ ಜಲದಲ್ಲಿ ಮುಳುಗಿಬಿಡಬೇಕು.' ಅವರ ಈ ಮಾತುಗಳನ್ನು ಕೇಳಿ ಬಹಳಷ್ಟು ಸ್ತ್ರೀಯರು ಜಲದಲ್ಲಿ ಪ್ರವೇಶಿಸಿದರು ಮತ್ತು ಮಾನವ ದೇಹವನ್ನು ಬಿಟ್ಟು ತಮ್ಮ ತಮ್ಮ ಪತಿಯ ಲೋಕಕ್ಕೆ ಹೊರಟು ಹೋದರು. ಅವರ ಪತಿ ಯಾವ ಪ್ರಕಾರ ದಿವ್ಯ ವಸ್ತ್ರಾಭೂಷಣಗಳಿಂದ ಸುಸಜ್ಜಿತರಾಗಿ ಬಂದಿದ್ದರೋ, ಅದೇ ಪ್ರಕಾರ ದಿವ್ಯ ವಸ್ತ್ರಾಭೂಷಣಗಳನ್ನು ಧರಿಸಿಕೊಂಡು ವಿಮಾನದಲ್ಲಿ ಕುಳಿತು ಅವರು ತಮ್ಮ-ತಮ್ಮ ಇಚ್ಛಿತ ಸ್ಥಾನಗಳಿಗೆ ಹೋದರು.

ಈ ಕಡೆ ರಾಜಾ ಜನಮೇಜಯನು ವೈಶಂಪಾಯನ ಮುಖದಿಂದ ಈ ಅದ್ಭುತ ವೃತ್ತಾಂತವನ್ನು ಕೇಳಿದಾಗ ಆತನ ಮನಸ್ಸಿನಲ್ಲಿ ಬಹಳ ಕುತೂಹಲ ವುಂಟಾಯಿತು ಮತ್ತು ಆತನೂ ಸ್ವರ್ಗವಾಸಿ ತನ್ನ ತಂದೆ ಮಹಾರಾಜ ಪರೀಕ್ಷಿತನ ದರ್ಶನ ಮಾಡಲು ಇಚ್ಛಿಸಿದನು. ವ್ಯಾಸರು ಅಲ್ಲಿಯೇ ಇದ್ದರು. ಅವರು ರಾಜನ ಇಚ್ಛೆಯನ್ನು ಪೂರೈಸುವುದಕ್ಕಾಗಿ ಅದೇ ಸಮಯದಲ್ಲಿ ರಾಜಾ ಪರೀಕ್ಷಿತನನ್ನು ಅಲ್ಲಿಗೆ ಕರೆದರು. ಜನಮೇಜಯನು ಯಜ್ಞಾಂತ್ಯದ ಸ್ನಾನದ ಸಂದರ್ಭದಲ್ಲಿ ತನ್ನ ಜೊತೆಯಲ್ಲಿ ತನ್ನ ತಂದೆಗೂ ಸ್ನಾನ ಮಾಡಿಸಿದ ನಂತರ ಪರಿಕ್ಷೀತನು ಅಲ್ಲಿಂದ ಹೊರಟು ಹೋದನು. ಈ ಪ್ರಕಾರ ಮಹರ್ಷಿ ವೇದವ್ಯಾಸರು ತಮ್ಮ ಅಲೌಕಿಕ ಸಾಮರ್ಥ್ಯವನ್ನು ತೋರಿಸಿದರು. ಇವರು ನಿಜವಾಗಿಯೂ ಒಬ್ಬ ಅದ್ಭುತ ಶಕ್ತಿಶಾಲೀ ಮಹಾಪುರುಷರಾಗಿದ್ದರು. ಮಹಾಭಾರತದ ರಚನಕಾರರಾದ ಈ ಮಹರ್ಷಿಯ ಪುನೀತಚರಣಗಳಿಗೆ ತಲೆಬಾಗಿ ವಂದಿಸಿ ನಾವು ನಮ್ಮ ಈ ಲೇಖನವನ್ನು ಮುಕ್ತಾಯ ಮಾಡುತ್ತೇವೆ.

❑❑❑

ಮಹಾಭಾರತದ ಪಠನ ಮತ್ತು ಶ್ರವಣದ ಮಾಹಾತ್ಮ್ಯ

ಯಥಾ ಸಮುದ್ರೋ ಭಗವಾನ್ ಯಥಾ ಚ ಹಿಮವಾನ್ ಗಿರಿಃ ।
ಖ್ಯಾತಾವುಭೌ ರತ್ನನಿಧೀ ತಥಾ ಭಾರತಮುಚ್ಯತೇ ॥೬೫॥
ಕಾರ್ಷ್ಣಂ ವೇದಮಿಮಂ ವಿದ್ವಾನ್ ಶ್ರಾವಯಿತ್ವಾರ್ಥಮಶ್ನುತೇ ।
ಇದಂ ಭಾರತಮಾಖ್ಯಾನಂ ಯಃ ಪಠೇತ್ ಸುಸಮಾಹಿತಃ ।
ಸ ಗಚ್ಛೇತ್ ಪರಮಾಂ ಸಿದ್ಧಿಮಿತಿ ಮೇ ನಾಸ್ತಿ ಸಂಶಯಃ ॥೬೬॥
ದ್ವೈಪಾಯನೌಷ್ಠಪುಟನಿಃಸೃತಮಪ್ರಮೇಯಂ
ಪುಣ್ಯಂ ಪವಿತ್ರಮಥ ಪಾಪಹರಂ ಶಿವಂ ಚ ।
ಯೋ ಭಾರತಂ ಸಮಧಿಗಚ್ಛತಿ ವಾಚ್ಯಮಾನಂ
ಕಿಂ ತಸ್ಯ ಪುಷ್ಕರಜಲೈರಭಿಷೇಚನೇನ ॥೬೭॥
ಯೋ ಗೋಶತಂ ಕನಕಶೃಂಗಮಯಂ ದದಾತಿ
ವಿಪ್ರಾಯ ವೇದವಿದುಷೇ ಸುಬಹುಶ್ರುತಾಯ ।
ಪುಣ್ಯಾಂ ಚ ಭಾರತಕಥಾಂ ಸತತಂ ಶೃಣೋತಿ
ತುಲ್ಯಂ ಫಲಂ ಭವತಿ ತಸ್ಯ ಚ ತಸ್ಯ ಚೈವ ॥೬೮॥

(ಮಹಾಭಾರತ, ಸ್ವರ್ಗಾರೋಹಣ ಪರ್ವ ಅಧ್ಯಾಯ ೫)

ಸಮುದ್ರ ಮತ್ತು ಹಿಮಾಲಯ ಪರ್ವತ ಇವೆರಡನ್ನೂ ರತ್ನಗಳ ಗಣಿ ಎಂದು ಹೇಳುತ್ತಾರೆ. ಅದೇ ರೀತಿ ಈ ಮಹಾಭಾರತವೂ ಸಹ (ಗೀತೆಯಂತೆ) ರತ್ನಗಳ ಗಣಿಯೇ ಆಗಿದೆ. ಈ ಭಾರತವು ಮಹರ್ಷಿ ಕೃಷ್ಣದ್ವೈಪಾಯನರು ರಚಿಸಿರುವ ಐದನೆಯ ವೇದ. ಇದನ್ನು ಇತರರಿಗೆ ಶ್ರವಣ ಮಾಡಿಸುವ ವಿದ್ವಾಂಸರಿಗೆ ಎಲ್ಲಾ ಅರ್ಥಗಳೂ ಸಿದ್ಧಿಯಾಗುತ್ತವೆ. ಏಕಾಗ್ರಚಿತ್ತದಿಂದ ಈ ಮಹಾಭಾರತ-ಇತಿಹಾಸದ ಪಾಠ ಮಾಡುವವರಿಗೆ ನಿಃಸಂದೇಹವಾಗಿ ಮೋಕ್ಷರೂಪೀ ಪರಮ ಸಿದ್ಧಿ ಪ್ರಾಪ್ತಿಯಾಗುತ್ತದೆ. ಭಗವಾನ್ ಕೃಷ್ಣದ್ವೈಪಾಯನರ

ಮುಖಾರವಿಂದದಿಂದ ಹೊರಟ ಈ ಮಹಾಭಾರತವು ಅತ್ಯಂತ ಪುಣ್ಯಜನಕ, ಪವಿತ್ರ, ಪಾಪಹಾರೀ ಮತ್ತು ಕಲ್ಯಾಣ ರೂಪಿಯಾಗಿದೆ, ಇದರ ಮಹಿಮೆ ಅಪಾರ, ಈ ಮಹಾಭಾರತದ ಕಥೆಯನ್ನು ಕೇಳಿ ಅದನ್ನು ಹೃದಯಂಗಮ ಮಾಡಿಕೊಳ್ಳುವವರಿಗೆ ಪ್ರಯಾಗದಲ್ಲಿ ತೀರ್ಥಸ್ನಾನ ಮಾಡಬೇಕಾದ ಅಗತ್ಯವಿಲ್ಲ. ತೀರ್ಥಸ್ನಾನದ ಫಲ ಶಾಸ್ತ್ರಗಳಲ್ಲಿ ಏನು ಹೇಳಲ್ಪಟ್ಟಿದೆಯೋ ಅದು ಅವರಿಗೆ ಈ ಕಥಾ-ಶ್ರವಣದಿಂದ ಲಭ್ಯ ವಾಗುತ್ತದೆ. ಒಂದು ಕಡೆ ಒಬ್ಬ ಮನುಷ್ಯನು ವೇದಗಳನ್ನು ಬಲ್ಲವನಾದ ಮತ್ತು ಅನೇಕ ಶಾಸ್ತ್ರಗಳನ್ನು ತಿಳಿದವನಾದ ಬ್ರಾಹ್ಮಣನಿಗೆ ಬಂಗಾರದ ಹೊದಿಕೆಯ ಕೊಂಬುಗಳುಳ್ಳ ನೂರು ಗೋವುಗಳನ್ನು ದಾನ ಮಾಡುತ್ತಾನೋ ಮತ್ತು ಮತ್ತೊಂದು ಕಡೆ ಮತ್ತೊಬ್ಬ ಮನುಷ್ಯನು ದಿನವೂ ಮಹಾಭಾರತದ ಪುಣ್ಯಮಯೀ ಕಥಾಶ್ರವಣ ಮಾಡುತ್ತಾನೋ, ಅವರಿಬ್ಬರಿಗೂ ಸಮಾನವಾದ ಫಲ ಸಿಕ್ಕುತ್ತದೆ.

ಹರಿಃ ಓಂ ತತ್ಸತ್

❑❑❑

ಶ್ರೀದಶಾವತಾರಸ್ತೋತ್ರಮ್

ಪ್ರಳಯಪಯೋಧಿಜಲೇಧೃತವಾನಸಿ ವೇದಂ
ವಿಹಿತವಹಿತ್ರಚರಿತ್ರಮಖೇದಂ
ಕೇಶವ ಧೃತಮೀನಶರೀರಜಯ ಜಗದೀಶ ಹರೇ ॥ ಧ್ರುವಮ್॥೧॥

ಕ್ಷಿತಿರತಿವಿಪುಲತರೇ ತವ ತಿಷ್ಠತಿ ಪೃಷ್ಠೇ
ಧರಣಿಧರಣಕಿಣಚಕ್ರಗರಿಷ್ಠೇ
ಕೇಶವ ಧೃತಕಚ್ಛಪರೂಪ ಜಯ ಜಗದೀಶ ಹರೇ ॥೨॥

ವಸತಿ ದಶನಶಿಖರೇ ಧರಣೀ ತವ ಲಗ್ನಾ
ಶಶಿನಿ ಕಲಂಕಕಲೇವ ನಿಮಗ್ನಾ
ಕೇಶವ ಧೃತಸೂಕರರೂಪ ಜಯ ಜಗದೀಶ ಹರೇ ॥೩॥

ತವ ಕರಕಮಲವರೇ ನಖಮದ್ಭುತಶೃಂಗಂ
ದಲಿತಹಿರಣ್ಯಕಶಿಪುತನಭೃಂಗಂ
ಕೇಶವ ಧೃತನರಹರಿರೂಪ ಜಯ ಜಗದೀಶ ಹರೇ ॥೪॥

ಛಲಯಸಿ ವಿಕ್ರಮಣೇ ಬಲಿಮದ್ಭುತವಾಮನ
ಪದನಖನೀರಜನಿತಜನಪಾವನ
ಕೇಶವ ಧೃತವಾಮನರೂಪ ಜಯ ಜಗದೀಶ ಹರೇ ॥೫॥

ಕ್ಷತ್ರಿಯರುಧಿರಮಯೇ ಜಗದಪಗತಪಾಪಂ
ಸ್ನಪಯಸಿ ಪಯಸಿ ಶಮಿತಭವತಾಪಂ
ಕೇಶವ ಧೃತಭೃಗುಪತಿರೂಪ ಜಯ ಜಗದೀಶ ಹರೇ ॥೬॥

ವಿತರಸಿ ದಿಕ್ಷು ರಣೇ ದಿಕ್ಪತಿ ಕಮನೀಯಂ
ದಶಮುಖಮೌಲಿಬಲಿಂ ರಮಣೀಯಂ
ಕೇಶವ ಧೃತರಾಮಶರೀರ ಜಯ ಜಗದೀಶ ಹರೇ ॥೭॥

ವಹಸಿ ವಪುಷಿ ವಿಶದೇ ವಸನಂ ಜಲದಾಭಂ
ಹಲಹತಿಭೀತಿಮಿಲಿತಯಮುನಾಭಂ
ಕೇಶವ ಧೃತಹಲಧರರೂಪ ಜಯ ಜಗದೀಶ ಹರೇ ॥೮॥

ನಿಂದಸಿ ಯಜ್ಞವಿಧೇರಹಹ ಶ್ರುತಿಜಾತಂ
ಸದಯಹೃದಯದರ್ಶಿತಪಶುಘಾತಂ
ಕೇಶವ ಧೃತಬುದ್ಧಶರೀರ ಜಯ ಜಗದೀಶ ಹರೇ ॥೯॥

ಮ್ಲೇಚ್ಛನಿವಹನಿಧನೇ ಕಲಯತಿ ಕರವಾಲಂ
ಧೂಮಕೇತುಮಿವ ಕಿಮಪಿ ಕರಾಲಂ
ಕೇಶವ ಧೃತಕಲ್ಕಿಶರೀರ ಜಯ ಜಗದೀಶ ಹರೇ ॥೧೦॥

ಶ್ರೀಜಯದೇವಕವೇರಿದಮುದಿತಮುದಾರಂ
ಶೃಣುಶುಭದಂ ಸುಖದಂ ಭವ ಸಾರಂ
ಕೇಶವ ಧೃತದಶವಿಧರೂಪ ಜಯ ಜಗದೀಶ ಹರೇ ॥೧೧॥

ವೇದಾನುದ್ಧರತೇ ಜಗನ್ನಿಮಹತೇ ಭೂಗೋಲಮುದ್ಬಿಭ್ರತೇ
ದೈತ್ಯಾನ್ದಾರಯತೇ ಬಲಿಂ ಛಲಯತೇ ಕ್ಷತ್ರಕ್ಷಯಂ ಕುರ್ವತೇ
ಪೌಲಸ್ತ್ಯಂ ಜಯತೇ ಹಲಂ ಕಲಯತೇ ಕಾರುಣ್ಯಮಾತನ್ವತೇ
ಮ್ಲೇಚ್ಛಾನ್ಮೂರ್ಚ್ಛಯತೇ ದಶಾಕೃತಿಕೃತೇ ಕೃಷ್ಣಾಯ
ತುಭ್ಯಂ ನಮಃ ॥೧೨॥

– ಜಯದೇವ

❑❑❑

ಗೀತಾ ಪ್ರೆಸ್ ಗೋರಖಪುರ (ಉ.ಪ) 273005

(ನಮ್ಮ ಕನ್ನಡ ಪ್ರಕಟನೆಗಳು)

ಪಾರಾಯಣ ಗ್ರಂಥಗಳು

೧ ಶ್ರೀಮದ್ಭಗವದ್ಗೀತೆ (ತತ್ತ್ವವಿವೇಚನೀ ಟೀಕೆ)
೨ ಶ್ರೀಮದ್ಭಗವದ್ಗೀತೆ (ಸಾಧಕ ಸಂಜೀವನೀ ಟೀಕೆ) (ಎರಡು ಭಾಗಗಳಲ್ಲಿ)
೩ ಶ್ರೀಮದ್ಭಗವದ್ಗೀತೆ (ಶ್ಲೋಕ, ಅನ್ವಯ, ಪದಚ್ಛೇದ, ತಾತ್ಪರ್ಯಸಹಿತ)
೪ ಶ್ರೀಮದ್ಭಗವದ್ಗೀತೆ (ಶ್ಲೋಕ, ತಾತ್ಪರ್ಯ ಸಹಿತ)
೫ ಶ್ರೀಮದ್ಭಗವದ್ಗೀತೆ (ಶ್ಲೋಕ, ತಾತ್ಪರ್ಯ ಸಹಿತ-ಪಾಕೆಟ್ ಸೈಜ್)
೬ ಶ್ರೀಮದ್ಭಗವದ್ಗೀತೆ - ವಿಷ್ಣು ಸಹಸ್ರನಾಮ (ಮೂಲ)
೭ ವಿಷ್ಣು ಸಹಸ್ರನಾಮ (ತಾತ್ಪರ್ಯ, ನಾಮಾವಳಿ ಸಹಿತ)
೮ ವಿಷ್ಣು ಸಹಸ್ರನಾಮ ನಾಮಾವಳಿ ಸಹಿತ (ಮೂಲ)
೯ ಹನುಮತ್ ಸ್ತೋತ್ರಾವಳಿ- ಹನುಮಾನ್ ಚಾಲಿಸಾ
೧೦ ನಿತ್ಯ ಸ್ತುತಿ-ಆದಿತ್ಯ ಹೃದಯ
೧೧ ಶ್ರೀದುರ್ಗಾ ಸಪ್ತ ಶತಿ (ಮೂಲ)
೧೨ ಶ್ರೀಲಲಿತಾ ಸಹಸ್ರನಾಮ ಸ್ತೋತ್ರ-ನಾಮಾವಳಿ ಸಹಿತ
೧೩ ರಾಮಚರಿತ ಮಾನಸ ಸುಂದರ ಕಾಂಡ (ಅರ್ಥಸಹಿತ)
೧೪ ಗಜೇಂದ್ರ ಮೋಕ್ಷ
೧೫ ಗೀತಾಮಹಾತ್ಮ್ಯದ ಕಥೆಗಳು
೧೬ ಈಶಾವಾಸ್ಯೋಪನಿಷತ್
೧೭ ವಾಲ್ಮೀಕೀಯ ಸಂಕ್ಷಿಪ್ತ ರಾಮಾಯಣ
೧೮ ರಾಮಚರಿತ ಮಾನಸ (ಮೂಲ ಅರ್ಥ ಸಹಿತ)
೧೯ ಸಾರ್ಥ ಜ್ಞಾನೇಶ್ವರಿ (ಮೂಲ ಅರ್ಥ ಸಹಿತ)

|| ಶ್ರೀ ಹರಿಃ ||

ಮಹಾಭಾರತದ ಕೆಲವು ಆದರ್ಶ ಪಾತ್ರಗಳು

೧. ಮಹಾಭಾರತದಲ್ಲಿ ಶ್ರೀಕೃಷ್ಣ

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

(ಗೀತೆ ಅ. ೪)

ಎಲೈ ಅರ್ಜುನ! ಧರ್ಮಕ್ಕೆ ಚ್ಯುತಿ ಉಂಟಾದಾಗಲೆಲ್ಲಾ ಮತ್ತು ಅಧರ್ಮವು ಹೆಚ್ಚಿದಾಗಲೆಲ್ಲಾ ನಾನು ಸಾಕಾರ ರೂಪದಿಂದ ಅವತರಿಸಿ ಎಲ್ಲರಿಗೂ ಗೋಚರಿಸುತ್ತೇನೆ.

ಸಾಧು ಸತ್ಪುರುಷರನ್ನು ಉದ್ಧಾರ ಮಾಡುವುದಕ್ಕಾಗಿಯೂ, ದುಷ್ಕರ್ಮಿಗಳನ್ನು ನಾಶಮಾಡುವುದಕ್ಕಾಗಿಯೂ ಮತ್ತು ಧರ್ಮವನ್ನು ಸಂಸ್ಥಾಪನೆ ಮಾಡುವುದಕ್ಕಾಗಿಯೂ ಯುಗ-ಯುಗಗಳಲ್ಲಿ ನಾನು ಅವತಾರ ತಾಳುತ್ತೇನೆ.

ಭಗವದ್ಗೀತೆಯಲ್ಲಿ ದೊರೆಯುವ ಶ್ರೀಕೃಷ್ಣನ ಸ್ವರೂಪವು ವಿಶುದ್ಧವಾದ ಜ್ಞಾನ ಸ್ವರೂಪ. ಗೀತೆಯಲ್ಲಿ ಆತನು ತೋರಿಸಿದ ತನ್ನ ಸ್ವರೂಪವೇ ಅವನ ವಾಸ್ತವಿಕ ಸ್ವರೂಪ ಮತ್ತು ಮಹಾಭಾರತದ ವಿಭಿನ್ನ ಸ್ಥಳಗಳಿಂದ ಇದೇ ಮಾತು ಪುಷ್ಟಿಗೊಳ್ಳುತ್ತಿದೆ.

(೧)

ಜಗನ್ನಿಯಂತಾ, ದೇವಾಧಿದೇವ, ಅಖಿಲಲೋಕನಾಯಕ ಭಗವಂತ ನಾರಾಯಣನೇ ವಾಸುದೇವ ಶ್ರೀಕೃಷ್ಣನ ರೂಪದಲ್ಲಿ ಪೃಥ್ವಿಯ ಮೇಲೆ ಅವತರಿಸಿದ್ದನು. ಭಾಗವತದಂತೆ ಮಹಾಭಾರತವೂ ಕೂಡ ಈ ಮಾತನ್ನು